ಬಾ ಮತ್ತು ಬಾಪು 150ನೇ ವರ್ಷಾಚರಣೆ - ಪುಸ್ತಕ ಮಾಲಿಕೆ

ಬಹುರೂಪಿ ಗಾಂಧಿ

ಲೇಖಕರು : ಅನು. ಬಂದ್ಯೋಪಾಧ್ಯಾಯ



ಕನ್ನಡಕ್ಕೆ ಅನುವಾದ : ಎಂ. ಜಯರಾಮ ರೈ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು

ಬಾ ಮತ್ತು ಬಾಪು 150ನೇ



ಜನುಮ ವರ್ಷಾಚರಣೆ ಮಾಲಿಕೆ

ಬಹುರೂಪಿ ಗಾಂಧಿ

ಲೇಖಕರು

ಅನು ಬಂದ್ಯೋಪಾಧ್ಯಾಯ

ಅನುವಾದಕರು

ಎಂ. ಜಯರಾಮ ರೈ

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967

ಬಹುರೂಪಿ ಗಾಂಧಿ ....

BAHUROOPI GANDHI

Written by **Sri Anu Bandhopadhyaya,**

Translated by **Sri M. Jayaram Rai,**

Published by **Karnataka Gandhi Smaraka Nidhi**

Gandhi Bhavana, Kumara Park East, Bengaluru - 560001

Phone : 080-22261967

1st Edition	:	1964
2nd Edition	:	2012
3rd revised Edition	:	2018
Copies	:	10000 Nos.
Pages	:	XVI + 130
Price	:	35/-
Lineart Courtesy	:	R.K. Laxman
Print	:	**CreativeGeekz** Yadhava College Road Madhava Nagara, Bengaluru Ph : 080 40927049

ಬಾ ಮತ್ತು ಬಾಪು 150ನೇ



ಜನುಮ ವರ್ಷಾಚರಣೆ ಮಾಲಿಕೆ

ಬಹುರೂಪಿ ಗಾಂಧಿ

ಲೇಖಕರು

ಅನು ಬಂದ್ಯೋಪಾಧ್ಯಾಯ

ಅನುವಾದಕರು

ಎಂ. ಜಯರಾಮ ರೈ

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967



ಮೊದಲ ಮಾತು

ರಾಷ್ಟ್ರಪಿತ ಮಹಾತ್ಮ ಗಾಂಧೀ ಅವರ ದೈನಂದಿನ ಜೀವನವನ್ನು ನಮ್ಮ ಮುಂದೆ ತೆರೆದಿಡುವ "ಬಹುರೂಪಿ ಗಾಂಧಿ" ಕೃತಿಯು ಆಂಗ್ಲ ಭಾಷೆಯಲ್ಲಿರುವ ಕೃತಿಯಾಗಿದೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಲ್ಲಿ 1964ರಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಆರ್.ಎಸ್. ಹುಕ್ಕೇರಿಕರ ಅವರು ಮತ್ತು ಕಾರ್ಯದರ್ಶಿಗಳಾಗಿದ್ದ ಶ್ರೀ ರಾಮಚಂದ್ರ ವಡವಿ ಅವರು ಮತ್ತು ಸದಸ್ಯರಾದವರೆಲ್ಲರೂ ಆಂಗ್ಲ ಭಾಷೆಯ ಈ ಕೃತಿ ಅತ್ಯಮೂಲ್ಯವಾಗಿರುವುದರಿಂದ ಕನ್ನಡ ಭಾಷೆಯಲ್ಲಿ ಅನುವಾದ ಮಾಡಿಸಿ, ಕನ್ನಡ ಜನರು ಓದುವಂತೆ ಮಾಡಬೇಕೆಂಬ ಮಹತ್ವಾಕಾಂಕ್ಷೆಯಿಂದ, ಶ್ರೀ ಎಂ. ಜಯರಾಮ ರೈ ಅವರಿಂದ ಅನುವಾದ ಮಾಡಿಸಿ ಪ್ರಕಟಣೆಗೊಳಿಸಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮೂಲ ಕೃತಿಕಾರರಾದ ಅನು ಬಂದೋಪಾಧ್ಯಾಯ ಅವರು, ಕೃತಿ ಬರೆಯುವಾಗ ಅವರಿಗಿದ್ದ ಉದ್ದೇಶ. "ಗಾಂಧೀಜಿ ಅವರನ್ನು ಕುರಡರಂತೆ ಆರಾಧಿಸುವವರ ಸಾಲಿನಲ್ಲಿ ಮತ್ತಷ್ಟು ಜನರನ್ನು ಸೇರಿಸಲು ಖಂಡಿತವಾಗಲೂ ನಾನು ಇಚ್ಛಿಸುವುದಿಲ್ಲ. ಗಾಂಧೀಜಿ ಅವರನ್ನು ಕೇವಲ ರಾಷ್ಟ್ರಪಿತ ಅಥವ ಸ್ವಾತಂತ್ರ್ಯ ಶಿಲ್ಪಿ ಮಾತ್ರವಲ್ಲ ಎಂಬುದನ್ನು ಅರಿತ ನಂತರ ಅವರನ್ನು ವಿಮರ್ಶಿಸುವ ಇಂದಿನ ಯುವಜನರನ್ನು ನಾನು ಬಹುವಾಗಿ ಇಷ್ಟಪಡುತ್ತೇನೆ." ಎಂದು ಹೇಳಿದ ಮಾತನ್ನು ಈ ಪುಸ್ತಕವನ್ನು ಓದುವ ಎಲ್ಲರೂ ಅರಿತು ಪಾಲಿಸುವಂಥಹವರಾಗಲಿ ಎಂದೂ ನಾನು ಸಹ ಬಯಸುತ್ತೇನೆ.

ಈ ಕೃತಿಯು ಗಾಂಧಿ ವಿಚಾರಗಳ, ತತ್ವಾದರ್ಶಗಳ ಪರಿಪಾಲನೆಗೆ ಸಂಬಂಧಿಸಿದ ಅಪೂರ್ವವಾದ ಕೃತಿಯಾಗಿದೆ. ಅನು ಬಂದೋಪಾಧ್ಯಾಯ ಅವರು ಬಹು ಸರಳವಾಗಿ ಗಾಂಧೀಜಿ ಅವರ ಸರಳ ಜೀವನ, ಕಾಯಕತತ್ವ, ಆಶ್ರಮ ವಾಸಿತ್ವ, ಸಮಾನತೆಯ ನೀತಿ, ಸಮಯ ಪರಿಪಾಲನೆಯಂಥಹ ಆದರ್ಶಗಳನ್ನು ಅವರ ಜೀವನದ ಅನೇಕ ಘಟನಾವಳಿಗಳ ಮುಖಾಂತರ

ಕಟ್ಟಿಕೊಟ್ಟಿದ್ದಾರೆ. ಪ್ರಾಮಾಣಿಕತೆಯ ಮೂರ್ತ ಸ್ವರೂಪವಾಗಿರುವ ಗಾಂಧಿ ಅವರ ಭಾರತದ ಸಾಮಾಜಿಕ, ರಾಜಕೀಯ ನಾಯಕತ್ವ ಚಿರಸ್ಮರಣೀಯ ಹಾಗೂ ಅನುಕರಣೀಯವಾದುದಾಗಿದೆ. ನಿಸ್ವಾರ್ಥ ಬದುಕಿನ ತ್ಯಾಗ ಜೀವಿಯ ದೈನಂದಿನ ಬದುಕಿನ ಅನುಸಂಧಾನಗಳು ನಿರಂತರ ಆತ್ಮಾವಲೋಕನಗಳನ್ನು ಅನಾವರಣಗೊಳಿಸುವ ಕೃತಿ ಇದಾಗಿದೆ.

ಇಂಥಹ ಅಮೂಲ್ಯ ಕೃತಿಯ ಪರಿಷ್ಕೃತ ಆವೃತ್ತಿಯನ್ನು ಬಾ ಮತ್ತು ಬಾಪು 150ನೇ ಜನುಮ ವರ್ಷಾಚರಣೆಯ ಸಂದರ್ಭದಲ್ಲಿ ಕನ್ನಡ ಜನತೆಯ ಮುಂದಿಡಲು ಸಂತೋಷವಾಗುತ್ತದೆ. ಈ ಕೃತಿಯನ್ನು ಪ್ರಕಟಿಸಲು ಶ್ರಮಿಸಿರುವ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಬರೆದ ಗಾಂಧಿ ಭವನದ ಗೌ॥ ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ಮತ್ತು ಸಂತೋಷದಿಂದ ಅನುಮತಿ ನೀಡುತ್ತಿರುವ ಎಲ್ಲಾ ಸದಸ್ಯರುಗಳಿಗೆ ತುಂಬು ಹೃದಯದ ಧನ್ಯವಾದಗಳು. ಕೃತಿ ಮುದ್ರಣವನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಿರುವ ಕ್ರಿಯೇಟಿವ್ ಗೀಕ್ಸ್‌ನ ಶ್ರೀ ಮಹೇಶ್ ಹಾಗೂ ಎಲ್ಲಾ ಸಂಗಾತಿಗಳಿಗೆ ವಂದನೆಗಳು.

ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಮೊದಲ ಮಾತು

ರಾಷ್ಟ್ರಪಿತ ಮಹಾತ್ಮ ಗಾಂಧೀ ಅವರ ದೈನಂದಿನ ಜೀವನವನ್ನು ನಮ್ಮ ಮುಂದೆ ತೆರೆದಿಡುವ "ಬಹುರೂಪಿ ಗಾಂಧಿ" ಕೃತಿಯು ಆಂಗ್ಲ ಭಾಷೆಯಲ್ಲಿರುವ ಕೃತಿಯಾಗಿದೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಲ್ಲಿ 1964ರಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಆರ್.ಎಸ್. ಹುಕ್ಕೇರಿಕರ ಅವರು ಮತ್ತು ಕಾರ್ಯದರ್ಶಿಗಳಾಗಿದ್ದ ಶ್ರೀ ರಾಮಚಂದ್ರ ವಡವಿ ಅವರು ಮತ್ತು ಸದಸ್ಯರಾದವರೆಲ್ಲರೂ ಆಂಗ್ಲ ಭಾಷೆಯ ಈ ಕೃತಿ ಅತ್ಯಮೂಲ್ಯವಾಗಿರುವುದರಿಂದ ಕನ್ನಡ ಭಾಷೆಯಲ್ಲಿ ಅನುವಾದ ಮಾಡಿಸಿ, ಕನ್ನಡ ಜನರು ಓದುವಂತೆ ಮಾಡಬೇಕೆಂಬ ಮಹತ್ವಾಕಾಂಕ್ಷೆಯಿಂದ, ಶ್ರೀ ಎಂ. ಜಯರಾಮ ರೈ ಅವರಿಂದ ಅನುವಾದ ಮಾಡಿಸಿ ಪ್ರಕಟಣೆಗೊಳಿಸಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮೂಲ ಕೃತಿಕಾರರಾದ ಅನು ಬಂದೋಪಾಧ್ಯಾಯ ಅವರು, ಕೃತಿ ಬರೆಯುವಾಗ ಅವರಿಗಿದ್ದ ಉದ್ದೇಶ. "ಗಾಂಧೀಜಿ ಅವರನ್ನು ಕುರಡರಂತೆ ಆರಾಧಿಸುವವರ ಸಾಲಿನಲ್ಲಿ ಮತ್ತಷ್ಟು ಜನರನ್ನು ಸೇರಿಸಲು ಖಂಡಿತವಾಗಲೂ ನಾನು ಇಚ್ಛಿಸುವುದಿಲ್ಲ. ಗಾಂಧೀಜಿ ಅವರನ್ನು ಕೇವಲ ರಾಷ್ಟ್ರಪಿತ ಅಥವ ಸ್ವಾತಂತ್ರ್ಯ ಶಿಲ್ಪಿ ಮಾತ್ರವಲ್ಲ ಎಂಬುದನ್ನು ಅರಿತ ನಂತರ ಅವರನ್ನು ವಿಮರ್ಶಿಸುವ ಇಂದಿನ ಯುವಜನರನ್ನು ನಾನು ಬಹುವಾಗಿ ಇಷ್ಟಪಡುತ್ತೇನೆ." ಎಂದು ಹೇಳಿದ ಮಾತನ್ನು ಈ ಪುಸ್ತಕವನ್ನು ಓದುವ ಎಲ್ಲರೂ ಅರಿತು ಪಾಲಿಸುವಂಥಹವರಾಗಲಿ ಎಂದೂ ನಾನು ಸಹ ಬಯಸುತ್ತೇನೆ.

ಈ ಕೃತಿಯು ಗಾಂಧಿ ವಿಚಾರಗಳ, ತತ್ವಾದರ್ಶಗಳ ಪರಿಪಾಲನೆಗೆ ಸಂಬಂಧಿಸಿದ ಅಪೂರ್ವವಾದ ಕೃತಿಯಾಗಿದೆ. ಅನು ಬಂದೋಪಾಧ್ಯಾಯ ಅವರು ಬಹು ಸರಳವಾಗಿ ಗಾಂಧೀಜಿ ಅವರ ಸರಳ ಜೀವನ, ಕಾಯಕತತ್ವ, ಆಶ್ರಮ ವಾಸಿತ್ವ, ಸಮಾನತೆಯ ನೀತಿ, ಸಮಯ ಪರಿಪಾಲನೆಯಂಥಹ ಆದರ್ಶಗಳನ್ನು ಅವರ ಜೀವನದ ಅನೇಕ ಘಟನಾವಳಿಗಳ ಮುಖಾಂತರ

ಕಟ್ಟಿಕೊಟ್ಟಿದ್ದಾರೆ. ಪ್ರಾಮಾಣಿಕತೆಯ ಮೂರ್ತ ಸ್ವರೂಪವಾಗಿರುವ ಗಾಂಧಿ ಅವರ ಭಾರತದ ಸಾಮಾಜಿಕ, ರಾಜಕೀಯ ನಾಯಕತ್ವ ಚಿರಸ್ಮರಣೀಯ ಹಾಗೂ ಅನುಕರಣೀಯವಾದುದಾಗಿದೆ. ನಿಸ್ವಾರ್ಥ ಬದುಕಿನ ತ್ಯಾಗ ಜೀವಿಯ ದೈನಂದಿನ ಬದುಕಿನ ಅನುಸಂಧಾನಗಳು ನಿರಂತರ ಆತ್ಮಾವಲೋಕನಗಳನ್ನು ಅನಾವರಣಗೊಳಿಸುವ ಕೃತಿ ಇದಾಗಿದೆ.

ಇಂಥಹ ಅಮೂಲ್ಯ ಕೃತಿಯ ಪರಿಷ್ಕೃತ ಆವೃತ್ತಿಯನ್ನು ಬಾ ಮತ್ತು ಬಾಪು 150ನೇ ಜನುಮ ವರ್ಷಾಚರಣೆಯ ಸಂದರ್ಭದಲ್ಲಿ ಕನ್ನಡ ಜನತೆಯ ಮುಂದಿಡಲು ಸಂತೋಷವಾಗುತ್ತದೆ. ಈ ಕೃತಿಯನ್ನು ಪ್ರಕಟಿಸಲು ಶ್ರಮಿಸಿರುವ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಬರೆದ ಗಾಂಧಿ ಭವನದ ಗೌ॥ ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ಮತ್ತು ಸಂತೋಷದಿಂದ ಅನುಮತಿ ನೀಡುತ್ತಿರುವ ಎಲ್ಲಾ ಸದಸ್ಯರುಗಳಿಗೆ ತುಂಬು ಹೃದಯದ ಧನ್ಯವಾದಗಳು. ಕೃತಿ ಮುದ್ರಣವನ್ನು ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಿರುವ ಕ್ರಿಯೇಟಿವ್ ಗೀಕ್ಸ್‌ನ ಶ್ರೀ ಮಹೇಶ್ ಹಾಗೂ ಎಲ್ಲಾ ಸಂಗಾತಿಗಳಿಗೆ ವಂದನೆಗಳು.

ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಪ್ರಾಸ್ತಾವಿಕ

ಬಾ ಮತ್ತು ಬಾಪು 150ನೇ ವರ್ಷಾಚರಣೆಯ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತಿರುವ ಈ ಕೃತಿಯು ಕನ್ನಡ ಸಾಹಿತ್ಯದಲ್ಲಿನ ಜೀವನ ಚರಿತ್ರೆ – ಆತ್ಮಕಥೆಯ ಪ್ರಕಾರದಲ್ಲಿನ ಅತ್ಯುತ್ತಮ ಕೃತಿಯಾಗಿದೆ. ಮಹಾತ್ಮ ಗಾಂಧೀಜಿ ಅವರು "ನುಡಿದಂತೆ ನಡೆದ, ನಡೆದಂತೆ ನುಡಿದ" ಜಗತ್ತಿನ ಮಹಾನ್ ವ್ಯಕ್ತಿಗಳಲ್ಲೊಬ್ಬರಾಗಿದ್ದಾರೆ. ದೈನಂದಿನ ಜೀವನದ ಪ್ರತಿಯೊಂದು ಕೆಲಸಗಳಲ್ಲಿ ಅವರು ತೋರಿದ ಆಸಕ್ತಿ ಮತ್ತು ಆ ಕೆಲಸ ಮಾಡಲು ಇರುವ ಕಷ್ಟ–ತೊಂದರೆ ಮತ್ತು ಪೂರ್ಣಗೊಂಡಾಗ ಆಗುವ ತೃಪ್ತಿಯ ಅನುಭಾವವನ್ನು ಆಸ್ವಾದಿಸಿ, ಇತರರು ಆ ಕೆಲಸ ಮಾಡಲು ಪ್ರೇರೇಪಣೆ ಮಾಡಿರುವುದರ ಅನುಭವ ಕಥನ ಇದಾಗಿದೆ.

ನಿತ್ಯಜೀವನದಲ್ಲಿ ಊಟ–ಉಪಹಾರ, ಉಡುಪು–ತೊಡಪು, ಶುಭ್ರತೆ–ಸರಳತೆ, ಕಾಯಕ–ವಿಶ್ರಾಂತಿ, ನಡಿಗೆ–ನಿಲುವು, ಮಾತು–ಮೌನ ಮುಂತಾದ ವಿಚಾರಗಳಲ್ಲಿ ಗಾಂಧೀಜಿ ಅವರ ಸ್ಪಷ್ಟ ನೀತಿ ನಿಲುವುಗಳು ಸಕಲರಿಗೂ ಮಾದರಿಯಾಗಿದೆ. ಮನೆಯ ಒಳಗಿನ ಮತ್ತು ದುಡಿಮೆಯ ಹೊರ ಕೆಲಸಗಳ ಹೊಂದಾಣಿಕೆ ಮತ್ತು ಬದುಕಿನ ಪ್ರತಿ ಕ್ಷಣದ ಸದುಪಯೋಗ ಹಾಗೂ ಅಪರಿಗ್ರಹದ ಕಠಿಣ ಆಚರಣೆ, ಆಶ್ರಮ ಜೀವಿಗಳಿಗಿರಲೇಬೇಕಾದ ಮೂಲಭೂತ ಗುಣಗಳನ್ನು ಪ್ರಯೋಗಶೀಲ ಗಾಂಧಿ ಕಲಿತ ಪರಿಪಾಠದ ಕೃತಿ ಇದಾಗಿದೆ. ಬಾಣಸಿಗ, ಅಗಸ, ಕ್ಷೌರಿಕ, ನೇಕಾರ, ಭಂಗಿ, ಚಮ್ಮಾರ, ಮೋಚಿ, ದರ್ಜಿಯ ಕೆಲಸಗಳನ್ನು ಸೆರೆಮನೆಯಲ್ಲಿ, ಮನೆಯಲ್ಲಿ ಮತ್ತು ಆಶ್ರಮದಲ್ಲಿ ಗಾಂಧೀಜಿಯವರೇ ಮಾಡುತ್ತಾ ವೃತ್ತಿ ಸಂಬಂಧಿತ ಜಾತಿ ವರ್ಗೀಕರಣ ಮತ್ತು ಅದಕ್ಕಂಟಿದ ಅಸ್ಪೃಶ್ಯತೆ ಆಚರಣೆ, ಪ್ರತ್ಯೇಕೀಕರಣ ಮತ್ತು ಶೋಷಣಾ ವಿಧಾನವನ್ನು ನಿಷ್ಠೂರವಾಗಿ ಖಂಡಿಸಿದರು ಹಾಗೂ ವೃತ್ತಿಗೂ, ಜಾತಿಗೂ ಅಂಟಿಸಿದ ಸಂಬಂಧವನ್ನು ಕಡಿದು ಹಾಕುತ್ತಾ, ಜಾತಿ ಪದ್ಧತಿಗೆ ಸವಾಲೊಡ್ಡಿದ ಕಥನವಿದು.

ಭಾರತದ ಕಡುಬಡವನ ಜೀವನವನ್ನು ಬದುಕುತ್ತಾ, ಭಾರತೀಯ ಸಮಾನತೆ, ಸ್ವಾತಂತ್ರ್ಯ, ಸಹೋದರತೆಯ ಉದಾತ್ತ ಆಶಯದ ರಾಷ್ಟ್ರ ನಿರ್ಮಾಣದ ರೂವಾರಿಗಳಾದ ಗಾಂಧೀಜಿಯ ಆದರ್ಶ ಮಾರ್ಗದ ಜಾನಪದವಿದು. ಸ್ವತಂತ್ರ ಭಾರತದ ಧ್ಯೇಯದೊಂದಿಗೆ, ಆಶ್ರಮ ಜೀವಿ, ಪತ್ರಕಾರ, ಪ್ರತಿಭಟನಾಕಾರ, ಲೇಖಕ, ಸಂಪಾದಕ, ವೈದ್ಯ, ಅಸಹಕಾರಿ, ಸತ್ಯಾಗ್ರಹಿ ಹೀಗೆ ಬಹುಮುಖಿ ಆಯಾಮದ ಭಾರತ ಭಾಗ್ಯವಿಧಾತನ ಕಥಾನಕ ಇದಾಗಿದೆ. ಈ ಅಮೂಲ್ಯ ಪುಸ್ತಕದ ಮೂಲ ಲೇಖಕರಾದ ಅನು ಬಂದೋಪಾಧ್ಯಾಯರವರಿಗೆ ಮತ್ತು ಅತ್ಯುತ್ತಮ ಅನುವಾದಕರಾದ ಶ್ರೀ ಜಯರಾಮ ರೈ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮೂಲ ಕೃತಿಕಾರರಾದ ಅನು ಬಂದೋಪಾಧ್ಯಾಯ ಅವರ ಮಾತು "ಈ ಪುಸ್ತಕವನ್ನು ನಾನು ಹದಿಹರೆಯದವರಿಗಾಗಿಯೇ ಬರೆದಿದ್ದೇನೆ. ನಮ್ಮ ಯುವಜನರಲ್ಲಿ ಒಬ್ಬರಾದರೂ, ಗಾಂಧೀ ಅವರ ಸಾವಿರಾರು ಕೆಲಸಗಳಲ್ಲಿ ಒಂದನ್ನಾದರೂ, ಆಚರಣೆಗೆ ತರುವಂತಹವರಾದರೆ ನನಗೆ ಸಂತೋಷವಾಗುತ್ತದೆ." ಎಂಬ ಅವರ ನುಡಿ, ಪರಿಷ್ಕೃತ ಆವೃತ್ತಿಗೆ ಪ್ರೇರಣೆಯಾಗಿದೆ.

ಈ ಕೃತಿಯನ್ನು ಪ್ರಕಟಿಸಲು ಸಹಕಾರ ನೀಡಿದ ಗಾಂಧಿ ಭವನದ ಅಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರಿಗೆ ನಮನಗಳು. ಈ ಕೃತಿಯು ಭಾರತದ ಪ್ರಥಮ ಪ್ರಧಾನ ಮಂತ್ರಿಗಳಾದ ಪಂ. ಜವಹರಲಾಲ್ ನೆಹರು ಅವರ ಮುನ್ನುಡಿಯನ್ನು ಹೊತ್ತಿರುವುದು ಸಹ ಕೃತಿಗೆ ಸಂದ ಗೌರವವಾಗಿದೆ. ಈ ಪುಸ್ತಕವನ್ನು ಅಂದವಾಗಿ ವಿನ್ಯಾಸಗಳನ್ನು ಸೃಜಿಸಿ ಮುದ್ರಿಸಿದ ಕ್ರಿಯೇಟಿವ್ ಗೀಕ್ಸ್‌ನ ಶ್ರೀ ಮಹೇಶ್ ಮತ್ತು ಅವರ ಸಂಗಡಿಗರಿಗೆ ಅಭಿನಂದನೆಗಳು ಸಲ್ಲುತ್ತವೆ.


ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಅಧ್ಯಕ್ಷರ ನುಡಿ

(2012)

ಬಹುರೂಪಿ ಗಾಂಧೀ ವೈವಿಧ್ಯಮಯವಾದ ಒಂದು ಪುಸ್ತಕ. ಗಾಂಧೀಜಿಯವರ ಹಲವು ಮುಖಗಳನ್ನು ಕುರಿತು ಬರೆದ ಪುಸ್ತಕ. ಇದು ಓದುವುದಕ್ಕೆ ಮನೋಹರವಾಗಿದೆ. ಮನಸ್ಸಿಗೆ ಆಹ್ಲಾದ ನೀಡುತ್ತದೆ. ಗಾಂಧೀಜಿಯವರ ವ್ಯಕ್ತಿತ್ವದ ನಾನಾ ಮುಖಗಳ ಪರಿಚಯ ಇಲ್ಲಿ ಆಗುತ್ತದೆ. ಈಗಿನ ಯುವಕರಿಗೆ ಗಾಂಧೀಜಿಯ ವೈವಿಧ್ಯಮಯವಾದ ಜೀವನ ಪರಿಚಯವಾಗಲೆಂದು ಕರ್ನಾಟಕ ಗಾಂಧೀ ಸ್ಮಾರಕನಿಧಿ ಪ್ರಕಟಿಸಿದೆ. ಇದರ ಉಪಯೋಗ ಪಡೆಯಬೇಕೆಂದು ನಮ್ಮ ಇಚ್ಛೆ.

ಡಾ॥ ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು ಮತ್ತು ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ



ಮುನ್ನುಡಿ

ಇದೊಂದು ಎಳೆಯರಿಗಾಗಿ ಬರೆದ ಹೊತ್ತಿಗೆ. ಆದರೆ ದೊಡ್ಡವರೂ ಇದನ್ನು ಆನಂದದಿಂದ ಓದಿ ಲಾಭ ಪಡೆಯುವರೆಂದು ನನಗೆ ನಂಬಿಕೆ ಇದೆ.


ಈಗಾಗಲೇ ಗಾಂಧೀಜಿ ಪೌರಾಣಿಕ ವ್ಯಕ್ತಿಯಾಗಿಬಿಟ್ಟಿದ್ದಾರೆ ಅವರನ್ನು ವ್ಯಕ್ತಿಶಃ ನೋಡದವರು, ವಿಶೇಷವಾಗಿ ಮಕ್ಕಳು, ಗಾಂಧೀಜಿಯನ್ನು ಮಹತ್ಕಾರ್ಯಗಳನ್ನು ಮಾಡಿದ ಅತಿಮಾನವ, ವಿಲಕ್ಷಣ ವ್ಯಕ್ತಿಯನ್ನಾಗಿಯೇ ಯೋಚಿಸುತ್ತಾರೆ. ಆದುದರಿಂದ ಅಂಥವರ ಎದುರಿಗೆ ಗಾಂಧೀಜಿಯ ಜೀವನದ ಸಾಮಾನ್ಯ ಅಂಶಗಳನ್ನು ಈ ಕೃತಿಯಲ್ಲಿ ಮಾಡಿದಂತೆ ಇರಿಸುವುದು ಅತ್ಯಂತ ಅಪೇಕ್ಷಣೀಯ.

ಗಾಂಧೀಜಿ ಹೀಗೆ ಅನೇಕ ಸಂಗತಿಗಳಲ್ಲಿ ಆಸಕ್ತಿವಹಿಸಿದರು ಮತ್ತು ಆಸಕ್ತಿವಹಿಸಿದಾಗ ಹೀಗೆ ಪರಿಪೂರ್ಣ ತನ್ಮಯತೆಯಿಂದ ನಿರ್ವಹಿಸಿದರು ಎನ್ನುವುದು ಅಸಾಧಾರಣವಾದುದು. ಪ್ರಾಯಶಃ ಜೀವನದ ಕ್ಷುಲ್ಲಕ ಸಂಗತಿಗಳೆನಿಸಿಕೊಂಡ ವಿಚಾರಗಳಲ್ಲೇ ಅವರು ತೋರಿದ ಪರಿಪೂರ್ಣ ಆಸಕ್ತಿ ಅವರ ಮಾನವೀಯತೆಯನ್ನು ಬೊಟ್ಟುಮಾಡಿ ತೋರಿಸುತ್ತದೆ. ಅವರ ಚಾರಿತ್ರ್ಯದ ಅಡಿಗಲ್ಲೇ ಅದಾಗಿತ್ತು. ರಾಜಕೀಯ ಮತ್ತು ಸಾರ್ವಜನಿಕ ಕ್ಷೇತ್ರದಿಂದ ಹೊರತಾಗಿ, ಗಾಂಧೀಜಿ ಹೇಗೆ ವೈವಿಧ್ಯಪೂರ್ಣ ಚಟುವಟಿಕೆಗಳನ್ನು ನಡೆಸಿದರು ಎನ್ನುವುದನ್ನು ನಮಗೆ ತಿಳಿಸಲು ಈ ಕೃತಿಯನ್ನು ಬರೆಯಲಾಗಿದೆ ಎನ್ನುವುದರಿಂದ ನನಗೆ ಸಂತೋಷವಾಗಿದೆ. ಈ ಕೃತಿ ಗಾಂಧೀಜಿಯ ಬಗ್ಗೆ ನಮಗೆ ಹೆಚ್ಚಿನ ಒಳನೋಟವನ್ನು ನೀಡುವುದು.

ಜವಾಹರಲಾಲ್ ನೆಹರು

ನವದೆಹಲಿ

ಮಾರ್ಚ್ 10, 1964



ಶ್ರೀ ಅನು ಬಂದೋಪಾಧ್ಯಾಯರ ನುಡಿಗಳು

ಈ ಕೃತಿಯ ಹಸ್ತಪ್ರತಿಯು 1949ರಿಂದ ನನ್ನ ಬಳಿಯೇ ಉಳಿದಿತ್ತು. ನಾನು ಬಂಗಾಲದಲ್ಲಿನ ಕಸ್ತೂರ್ ಬಾ ತರಬೇತಿ ಕ್ಯಾಂಪ್‌ನ ಕೆಲಸವನ್ನು 1948ರಲ್ಲಿ ಬಿಟ್ಟ ನಂತರ, ಡಿ.ಜಿ. ತೆಂಡೂಲ್ಕರ್ ಅವರ 'ಮಹಾತ್ಮ'ದ ಹಸ್ತಪ್ರತಿಯನ್ನು ಓದಿದೆ. ನನ್ನ ಸುತ್ತಲಿನ ಗ್ರಾಮಸ್ಥರು ಮತ್ತು ತರಬೇತಿಯಲ್ಲಿದ್ದ ಹೆಣ್ಣುಮಕ್ಕಳು, ಗಾಂಧೀಜಿಯವರ ಬಗ್ಗೆ ಸ್ವಲ್ಪ ಮಟ್ಟಿಗೆ ತಿಳಿದವರಾಗಿದ್ದಾರೆಂದು ನನ್ನ ಗಮನಕ್ಕೆ ಬಂದಿತು. ಅವರು ಗಾಂಧೀ ಜಯಂತಿಯನ್ನು ನಿತ್ಯಾಚರಣೆ ಮತ್ತು ಪ್ರಾರ್ಥನೆ ಎಂದಷ್ಟೇ ಭಾವಿಸಿದ್ದರು. ಕೆಲವರು ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಿ ಜೈಲನ್ನು ಸೇರಿದ್ದರು. ಆದರೆ ಅವರಿಗೆ ಗಾಂಧೀಜಿಯವರ ನಿಜವಾದ ಕೊಡುಗೆ ಏನೆಂಬುದೇ ತಿಳಿದಿರಲಿಲ್ಲ. ನನ್ನ ಗ್ರಹಿಕೆ ತಪ್ಪೇ ಇರಬಹುದು. ಆದರೆ ಇದೇ ನನ್ನ ಅನಿಸಿಕೆ.

ಪ್ರತಿನಿತ್ಯ ನನ್ನ ಸಂಪರ್ಕಕ್ಕೆ ಬರುವ ವ್ಯಕ್ತಿಗಳನ್ನು ಕಂಡಾಗ ಈಗಲೂ ನನಗೆ ಅದೇ ಭಾವನೆ; ಅವರಲ್ಲಿ ಕೆಲವರು ಶಿಕ್ಷಿತರು, ದೈಹಿಕ ದುಡಿತವನ್ನು ದ್ವೇಷಿಸುವವರು ಆಗಿದ್ದರು. ನಾನೇ ಸ್ವತಹ ದುಡಿಮೆಯ ಘನತೆಯ ಬಗ್ಗೆ ನಂಬಿಕೆಯುಳ್ಳವನಲ್ಲ. ಆದರೆ ನಾನು ದೈಹಿಕ ದುಡಿಮೆಯ ಕೀಳರಿಮೆ ಬಲ್ಲವನಾಗಿದ್ದೆ. ಮತ್ತು ಆ ಕಾರಣಕ್ಕಾಗಿಯೇ ನಾನು ನಿತ್ಯ ನೌಕರರೊಂದಿಗೆ ಕೆಲಸದಲ್ಲಿ ಜೊತೆಯಾಗಿರುತ್ತಿದೆ. ಹಾಗೂ ಸ್ವಲ್ಪ ಹಣಕೊಟ್ಟು ನನಗಾಗಿ ಇತರರು ಕೆಲಸ ಮಾಡುವಂತೆ ಮಾಡುವ ಹಕ್ಕನ್ನು ಗೆದ್ದೆನೆಂಬ ಭಾವ ನನ್ನಲ್ಲಿ ಬೆಳೆಯದಿರಲಿ ಎಂದೂ ಸಹ ನಾನು ನೌಕರರೊಂದಿಗೆ ಕೆಲಸಗಳನ್ನು ಹಂಚಿ ಕೊಳ್ಳುತ್ತಿದ್ದೆ.

ಈ ಕೃತಿಯಲ್ಲಿ ಯಾವ ದುಡಿಮೆಯಿಂದ ಇತರರಿಗೆ ಜೀವನ ನಿರ್ವಹಣೆ ಸಾಧ್ಯವಿಲ್ಲವೋ, ಅಂಥಹ ಕೆಲಸದಲ್ಲಿ ಪ್ರೀತಿ ಇಲ್ಲದಿದ್ದರೂ ಅಂಥಹ ಹಲವು ಕೆಲಸಗಳನ್ನು ಇಚ್ಛೆಪಟ್ಟು ಹಂಚಿಕೊಂಡ ಗಾಂಧೀಜಿ ಅವರನ್ನು ಪ್ರಸ್ತುತ ಪಡಿಸಲಿಚ್ಛಿಸಿದ್ದೇನೆ. ಕೆಲವು ಘಟನೆಗಳು ಉದ್ದೇಶಪೂರ್ವಕವಾಗಿ ಪುನರುಕ್ತಗೊಂಡಿವೆ. ಗಾಂಧೀಜಿ ಅವರನ್ನು ಕುರಡರಂತೆ ಆರಾಧಿಸುವವರ ಸಾಲಿನಲ್ಲಿ ಮತ್ತಷ್ಟು ಜನರನ್ನು ಸೇರಿಸಲು ಖಂಡಿತವಾಗಲೂ ನಾನು


ಇಚ್ಛಿಸುವುದಿಲ್ಲ. ಗಾಂಧೀಜಿ ಅವರನ್ನು ಕೇವಲ ರಾಷ್ಟ್ರಪಿತ ಅಥವ ಸ್ವಾತಂತ್ರ್ಯ ಶಿಲ್ಪಿ ಮಾತ್ರವಲ್ಲ ಎಂಬುದನ್ನು ಅರಿತು, ನಂತರ ಅವರನ್ನು ವಿಮರ್ಶಿಸುವ ಇಂದಿನ ಯುವಜನರನ್ನು ನಾನು ಬಹುವಾಗಿ ಇಷ್ಟಪಡುತ್ತೇನೆ.

ಈ ಪುಸ್ತಕದ ಪರಿಕಲ್ಪನೆ ನನ್ನದು ಇದನ್ನು ನಾನು ಹದಿಹರೆಯದವರಿಗಾಗಿ ಬರೆದಿದ್ದೇನೆ. ಇದರ ಬಹಳಷ್ಟು ಎಲ್ಲಾ ಪ್ರಧಾನಾಂಶಗಳನ್ನು ಡಿ.ಜಿ. ತೆಂಡೋಲ್ಕರ್ ಅವರ "ಮಹಾತ್ಮ" ಪುಸ್ತಕದಿಂದ ಆಯ್ಕೆ ಮಾಡಲಾಗಿದೆ. ಈ ಸಣ್ಣ ಪುಸ್ತಕ ಪ್ರಕಟಣೆಗಾಗಿ ಅವರಿಗೆ ನಾನೆಷ್ಟು ಉಪಕೃತ ಎಂಬುದನ್ನು ಹೇಳಲಾಗುತ್ತಿಲ್ಲ. ಈ ಸಣ್ಣ ಪುಸ್ತಕ ಪ್ರಕಟಣೆಯ ವಿಳಂಬಕ್ಕೆ ನನ್ನಲ್ಲಿನ ಅಧೈರ್ಯವೇ ಕಾರಣವಾಗಿದೆ. ಶ್ರೀ ಎನ್.ಜಿ. ಜೋಗ್ ಮತ್ತು ಪ್ರೊ. ಪಿ.ಆರ್. ಸೇನ್ ಅವರು ಹಸ್ತಪ್ರತಿಯನ್ನು ಪರಿಶೀಲಿಸಿ ಉಪಕರಿಸಿದ್ದಾರೆ. ಶ್ರೀ ಚಲಪತಿ ರಾವ್ ಅವರು ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಇದರಲ್ಲಿನ 20 ಕರಡು ಬರೆಹವನ್ನು ಅನುಕ್ರಮವಾಗಿ ಪ್ರಕಟಿಸುವ ಅವಕಾಶ ಮಾಡಿದರು. ನನ್ನ ಈ ಪುಸ್ತಕದ ರೇಖಾಚಿತ್ರಗಳನ್ನು ಮಾಡಿದಂಥಹ ಶ್ರೀ ಆರ್.ಕೆ. ಲಕ್ಷ್ಮಣ್ ಅವರಿಗೆ ಋಣಿಯಾಗಿದ್ದೇನೆ. ಈ ಪುಸ್ತಕದ ಮುನ್ನುಡಿಯನ್ನು ಬರೆದ ಜವಹರಲಾಲ್‌ಜೀ ಅವರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ.


ಈ ಪುಸ್ತಕವನ್ನು ನಾನು ಹದಿಹರೆಯದವರಿಗಾಗಿಯೇ ಬರೆದಿದ್ದೇನೆ. ನಮ್ಮ ಯುವಜನರಲ್ಲಿ ಒಬ್ಬರಾದರೂ, ಗಾಂಧೀ ಅವರ ಸಾವಿರಾರು ಕೆಲಸಗಳಲ್ಲಿ ಒಂದನ್ನಾದರೂ, ಆಚರಣೆಗೆ ತರುವಂತಹವರಾದರೆ ನನಗೆ ಸಂತೋಷವಾಗುತ್ತದೆ.

ಅನು ಬಂದೋಪಾಧ್ಯಾಯ

ಪರಿವಿಡಿ



ಪರಿವಿಡಿ



ಕಾಯಕವೇ ಕೈಲಾಸ

ಬಿಡುವಿಲ್ಲದ ಕೆಲಸವಿದ್ದ ಒಬ್ಬ ಬ್ಯಾರಿಸ್ಟರ್ ತನ್ನ ಕಕ್ಷಿಗಾರರಿಗೆ, ಅವರು ತಮ್ಮ ಸಮಯ ಮತ್ತು ಹಣವನ್ನು ವ್ಯರ್ಥವಾಗಿ ಕೋರ್ಟು ದಾವೆಗಳಲ್ಲಿ ಹಾಳುಮಾಡದೆ ತಮ್ಮ ಕೇಸುಗಳನ್ನು ಕೋರ್ಟಿನ ಹೊರಗಡೆ ಮಾತುಕತೆಗಳ ಮೂಲಕ ತೀರಿಸಿಕೊಳ್ಳುವಂತೆ ಬೋಧಿಸುತ್ತಿದ್ದ. ತನ್ನ ವಿರಾಮದ ವೇಳೆಯಲ್ಲಿ ಹಿಂದೂ, ಇಸ್ಲಾಂ, ಕ್ರೈಸ್ತ, ಪಾರಸಿ ಮತ್ತು ಬೌದ್ಧಮತಗಳನ್ನು ಕುರಿತ ಪುಸ್ತಕಗಳನ್ನು ಓದುತ್ತಿದ್ದ. ಈ ಎಲ್ಲ ಕೃತಿಗಳ ಅಧ್ಯಯನ ಹಾಗೂ ತನ್ನೊಳಗೆ ತಾನೇ ನಡೆಸಿದ ಚಿಂತನೆಯ ಫಲವಾಗಿ, ಪ್ರತಿಯೋರ್ವನೂ, ಪ್ರತಿದಿನವೂ ಸ್ವಲ್ಪವಾದರೂ ಶರೀರಶ್ರಮವನ್ನು ಮಾಡಬೇಕು, ಕೇವಲ ಬೌದ್ಧಿಕ ಕೆಲಸವಷ್ಟೇ ಸಾಲದು ಎನ್ನುವುದು ಅವನಿಗೆ ದೃಢವಾಯಿತು. ಶಿಕ್ಷಿತ ಮತ್ತು ನಿರಕ್ಷರಕುಕ್ಷಿ, ವೈದ್ಯ ಮತ್ತು ನ್ಯಾಯವಾದಿ, ನಾಪಿತ ಮತ್ತು ಭಂಗಿ ಎಲ್ಲರಿಗೂ ಅವರ ಕೆಲಸಕ್ಕೆ ಸಮಾನ ವೇತನ ಸಿಗಬೇಕೆನ್ನುವುದು ಅವನಿಗೆ ತಿಳುವಳಿಕೆಯಾಯಿತು.

ಅವನು ನಿಧಾನವಾಗಿ ತನ್ನ ಜೀವನ ವಿಧಾನವನ್ನು ಬದಲಾಯಿಸಿದ. ಬೇರೆ ಯಾವ ಯಾವುದೋ ಕೆಲಸದಲ್ಲಿ ಪರಿಣತೆ ಪಡೆಯಲಾರಂಭಿಸಿದ. ತನ್ನ ಕುಟುಂಬ ಮತ್ತು ಸ್ನೇಹಿತರೊಡನೆ ಆಶ್ರಮವೊಂದರಲ್ಲಿ ಸರಳ, ಸಾಮೂಹಿಕ ಜೀವನ ನಡೆಸಲು ಆತ ನಿರ್ಧರಿಸಿದ. ಆತನ ಕೆಲ ಯೂರೋಪಿಯನ್ ಮಿತ್ರರೂ ಆಶ್ರಮ ಜೀವನದಲ್ಲಿ ಪಾಲ್ಗೊಳ್ಳಲು ಬಯಸಿದರು. ನೆಲವನ್ನು ಉತ್ತು ಕಷ್ಟಪಟ್ಟು ದುಡಿದು ಹಣ್ಣಿನ ತೋಟವನ್ನು ಬೆಳೆಸುವ ಸ್ವಾವಲಂಬೀ ರೈತರಾಗಿ ಅವರೆಲ್ಲ ಜೀವಿಸಿದರು. ಕೂಲಿಯಾಳುಗಳನ್ನು ಅಲ್ಲಿ ನೇಮಿಸುತ್ತಿರಲಿಲ್ಲ. ಆಶ್ರಮದ ತೋಟದಲ್ಲಿ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು ಮತ್ತು "ಕರಿಯರು" ಎಲ್ಲರೂ ದೊಡ್ಡ ಕುಟುಂಬವೊಂದರ ಸದಸ್ಯರಂತೆ ಬಾಳಿದರು. ಒಂದೇ ಪಾಕಶಾಲೆಯಲ್ಲಿ ತಯಾರಾದ ಅಡುಗೆಯನ್ನು ಅವರು ಒಂದೇ ಭೋಜನಶಾಲೆಯಲ್ಲಿ ಊಟಮಾಡುತ್ತಿದ್ದರು. ಅವರ ಊಟ ಸರಳವಾಗಿತ್ತು. ಒರಟು ಬಟ್ಟೆಗಳನ್ನೇ ಧರಿಸುತ್ತಿದ್ದರು. ಪ್ರತಿ ಸದಸ್ಯನಿಗೂ ತಿಂಗಳ ವೆಚ್ಚಕ್ಕಾಗಿ 40 ರೂ. ದೊರೆಯುತ್ತಿತ್ತು.

ಬ್ಯಾರಿಸ್ಟರ್ ತಾನು ತಿಂಗಳಿಗೆ 4,000 ರೂ. ಸಂಪಾದಿಸುತ್ತಿದ್ದರೂ ಆಶ್ರಮದಿಂದ ಎಲ್ಲರಷ್ಟೇ ಮಾಸಿಕ ಭತ್ಯೆಯನ್ನು ಪಡೆಯುತ್ತಿದ್ದ. ಗಡಿಯಾರದ ಮುಳ್ಳುಗಳಷ್ಟೇ ನಿಖರತೆಯಿಂದ ಅವನು ಕಠಿಣ ಪರಿಶ್ರಮದ ದಿನಚರಿಯನ್ನು ಪಾಲಿಸುತ್ತಿದ್ದ ಮತ್ತು ದಿನಕ್ಕೆ ಆರು ಗಂಟೆ ಮಾತ್ರ ವಿಶ್ರಾಂತಿ ಪಡೆಯುತ್ತಿದ್ದ.

ಆಶ್ರಮ ತೋಟದಲ್ಲಿ ಗುಡಿಸಲೊಂದನ್ನು ನಿರ್ಮಿಸಲು ಪ್ರಾರಂಭಿಸಿದಾಗ, ಎಲ್ಲರಿಗಿಂತ ಮೊದಲು ನಿರ್ಮಾಣ ಕಾರ್ಯಕ್ಕೆ ಸಿದ್ಧವಾಗಿರುತ್ತಿದ್ದ. ಅನೇಕ ಜೇಬುಗಳುಳ್ಳ ಒರಟು ಬಟ್ಟೆಯ ನೀಲಿ ಮೇಲಂಗಿಯೊಂದನ್ನು ಅವನು ಹಾಕಿಕೊಳ್ಳುತ್ತಿದ್ದ. ಜೇಬುಗಳ ಪೈಕಿ ಒಂದರಲ್ಲಿ ಸಣ್ಣ, ದೊಡ್ಡ ತಿರುಗಣೆಗಳು, ಮೊಳೆಗಳು ತುಂಬಿರುತ್ತಿದ್ದವು. ಇನ್ನೊಂದರಿಂದ ಸುತ್ತಿಗೆಯೊಂದು ಇಣುಕುತ್ತಿತ್ತು. ಸಣ್ಣ ಮರ ಕೊಯ್ಯುವ ಗರಗಸ ಹಾಗೂ ರಂಧ್ರ ಕೊರೆಯುವ ಸಾಧನಗಳು ಅವನ ನಡುಪಟ್ಟಿಯಿಂದ ಜೋತಾಡುತ್ತಿದ್ದವು.

ಒಂದು ದಿನ ಊಟದ ನಂತರ ಅವನು ಪುಸ್ತಕಗಳನ್ನಿಡುವ ಒಂದು ಕಪಾಟನ್ನು ತಯಾರಿಸತೊಡಗಿದ. ಏಳುಗಂಟೆಗಳ ಕಾಲ ಕೆಲಸಮಾಡಿ, ಮಾಡಿನ ತನಕವೂ ಮುಟ್ಟುವಷ್ಟು ಎತ್ತರದ ಕಪಾಟಿನ ಕೆಲಸವನ್ನು ಪೂರ್ತಿಗೊಳಿಸಿದ.

ಆಶ್ರಮಕ್ಕೆ ಬರುವ ರಸ್ತೆಯೊಂದಕ್ಕೆ ಡಾಮರು ಹಾಕಿಸಬೇಕಾಗಿತ್ತು. ಆದರೆ ಅದಕ್ಕೆ ಬೇಕಾಗುವಷ್ಟು ಹಣ ಆತನಲ್ಲಿರಲಿಲ್ಲ. ತನ್ನ ಪ್ರತಿನಿತ್ಯದ ನಿಯಮಿತ ಸಂಚಾರ ಮುಗಿಸಿ, ಆಶ್ರಮಕ್ಕೆ ಮರಳುವಾಗ ಸಣ್ಣ ಸಣ್ಣ ಕಲ್ಲುಗಳನ್ನು ಸಂಗ್ರಹಿಸಲು ಆತ ಪ್ರಾರಂಭಿಸಿದ. ಆತನ ಸಹಚರರೂ ಅವನನ್ನೇ ಅನುಸರಿಸಿದರು. ಕೆಲವೇ ದಿನಗಳಲ್ಲಿ ರಸ್ತೆಗೆ ಹಾಸಲು ಬೇಕಾದಷ್ಟು ಕಲ್ಲುಗಳು ಅಂಗಳದಲ್ಲಿ ರಾಶಿ ಬಿದ್ದವು. ಹೀಗೆ ಆತ ಇತರರೂ ಕಾರ್ಯನಿರತರಾಗುವಂತೆ ಮಾಡಿದ.

ಆಶ್ರಮದ ಪುಟ್ಟ ಮಕ್ಕಳೂ ತೋಟಗಾರಿಕೆ, ಅಡುಗೆ, ಗುಡಿಸುವುದು, ಮರಗೆಲಸ, ಚರ್ಮೋದ್ಯೋಗ ಮತ್ತು ಅಚ್ಚಿನ ಮೊಳೆ ಜೋಡಿಸುವುದು ಇತ್ಯಾದಿ ಕೆಲಸಗಳಲ್ಲಿ ಭಾಗವಹಿಸುತ್ತಿದ್ದರು.

ಬೆಳಿಗ್ಗೆ ಎದ್ದೊಡನೆ ಬ್ಯಾರಿಸ್ಟರ್ ಬೀಸುವ ಕಲ್ಲಿನಲ್ಲಿ ಗೋಧಿ ಬೀಸುತ್ತಿದ್ದ. ಅನಂತರ ಪೋಷಾಕು ಧರಿಸಿ ಐದು ಮೈಲು ನಡೆದು ಕಛೇರಿ ತಲುಪುತ್ತಿದ್ದ. ತನ್ನ

ಲೆಗೂದಲನ್ನು ಕ್ಷೌರಿಕನ ನೆರವಿಲ್ಲದೆ ತಾನೇ ಕತ್ತರಿಸಿಕೊಳ್ಳುತ್ತಿದ್ದ. ಮತ್ತು ತನ್ನ ಟ್ಟೆಗಳನ್ನು ತಾನೇ ಒಗೆದು ಇಸ್ತ್ರಿ ಮಾಡಿಕೊಳ್ಳುತ್ತಿದ್ದ. ಪ್ಲೇಗಿನಿಂದ ನರಳುತ್ತಿದ್ದ ಣಿ ಕೆಲಸಗಾರರ ಶುಶ್ರೂಷೆ ಮಾಡುತ್ತಾ ಆತ ಇಡೀ ರಾತ್ರಿ ಎಚ್ಚರವಾಗಿರುತ್ತಿದ್ದ. ಪ್ಠರೋಗಿಯ ಹುಣ್ಣನ್ನು ತೊಳೆಯುತ್ತಿದ್ದ. ಪಾಯಖಾನೆ ಮನೆಯನ್ನು ತೊಳೆದು ಶುಚಿಯಾಗಿರಿಸುವುದರಲ್ಲಿ ಆತನಿಗೆ ಲಜ್ಜೆ ಎನಿಸುತ್ತಿರಲಿಲ್ಲ. ಸೋಮಾರಿತನ, ಭಯ ಅಥವಾ ದ್ವೇಷವೆಂದರೇನೆಂಬುದನ್ನು ಆತ ತಿಳಿದಿರಲಿಲ್ಲ.

ತನ್ನ ನಿಯತಕಾಲಿಕ ಪತ್ರಿಕೆಗಾಗಿ ಲೇಖನಗಳನ್ನು ಬರೆಯುತ್ತಿದ್ದ. ತನ್ನ ಮುದ್ರಣಾಲಯದಲ್ಲಿ ಮೊಳೆ ಜೋಡಿಸುತ್ತಿದ್ದ ಮತ್ತು ಅಗತ್ಯಬಿದ್ದರೆ ಹಸ್ತಚಾಲಿತ ಯಂತ್ರದ ಮುದ್ರಣ ಕೆಲಸಕ್ಕೆ ನೆರವಾಗುತ್ತಲೂ ಇದ್ದ.

ಪುಸ್ತಕಗಳಿಗೆ ಹೊದಿಕೆ ಹಾಕುವುದರಲ್ಲಿ ಪ್ರಾವೀಣ್ಯತೆ ಪಡೆದಿದ್ದ. ಸ್ಫೂರ್ತಿದಾಯಕ ಸಂಪಾದಕೀಯಗಳನ್ನು, ಪತ್ರಗಳನ್ನು ಬರೆಯುತ್ತಿದ್ದ. ಆತನ ಸೃಜನಶೀಲ ಕೈ, ಚರಕದಿಂದ ನೂಲುತ್ತಿತ್ತು. ಮಗ್ಗದಲ್ಲಿ ನೇಯುತ್ತಿತ್ತು; ಹೊಸ ಹೊಸ ರುಚಿಯ ಅಡುಗೆ ಮಾಡುತ್ತಿತ್ತು; ಕೌಶಲ್ಯಪೂರ್ಣ ಕಸೂತಿ ಹೊಲಿಗೆ ಕೆಲಸ ಮಾಡುತ್ತಿತ್ತು ಮತ್ತು ಹಣ್ಣು ತರಕಾರಿಗಳ ತೋಟವನ್ನು ಬೆಳೆಸುತ್ತಿತ್ತು. ಹೊಲ ಉಳುವುದರಲ್ಲೂ, ಬಾವಿಯಿಂದ ನೀರು ಸೇದುವುದರಲ್ಲೂ, ಸೌದೆ ಸೀಳುವುದರಲ್ಲೂ, ಗಾಡಿಯಿಂದ ಸರಕುಗಳನ್ನು ಇಳಿಸುವುದರಲ್ಲೂ ಅವನು ಅಷ್ಟೇ ಪ್ರವೀಣನಾಗಿದ್ದ.

ಜೈಲಿನಲ್ಲಿದ್ದಾಗ ದಿನಕ್ಕೆ ಒಂಭತ್ತು ತಾಸುಗಳ ಕಾಲ ಆತ ಗಟ್ಟಿ ಒಣನೆಲವನ್ನು ಪಿಕಾಸಿನಿಂದ ಆಳಕ್ಕೆ ಅಗೆಯಬೇಕಾಗಿತ್ತು ಅಥವಾ ಹರಿದ ಚಾದರ್ ತುಂಡುಗಳನ್ನು ಸೇರಿಸಿ ಹೊಲಿಯಬೇಕಾಗಿತ್ತು. ತುಂಬ ಬಳಲಿದಾಗ, ಶಕ್ತಿಗಾಗಿ ಆತ ದೇವರನ್ನು ಪ್ರಾರ್ಥಿಸುತ್ತಿದ್ದ. ತನಗೆ ವಹಿಸಿದ ಯಾವುದೇ ಕೆಲಸವನ್ನು ಮಾಡಲು ಅಸಾಧ್ಯ ಎನಿಸುವ ಕಲ್ಪನೆಯೇ ಅವನಿಗೆ ಸಹನವಾಗುತ್ತಿರಲಿಲ್ಲ.

ತನ್ನ ನಡುಪ್ರಾಯದಲ್ಲಿ ಅನೇಕ ಬಾರಿ ಸಮೀಪದ ಪಟ್ಟಣದಿಂದ ಸಾಮಗ್ರಿಗಳನ್ನು ಕೊಳ್ಳುವ ಸಲುವಾಗಿ ಆತ ದಿನಕ್ಕೆ 40 ಮೈಲಿಗಳಷ್ಟು ನಡೆದೇ ಪ್ರಯಾಣ ಮಾಡಿದ. ಒಮ್ಮೆ ಒಂದು ದಿನ 55 ಮೈಲು ಕೂಡ ನಡೆದದ್ದುಂಟು. ಯುದ್ಧದಲ್ಲಿ ಗಾಯಾಳುಗಳನ್ನು ರುಗ್ಣಾಲಯಕ್ಕೊಯ್ಯುವ ಸ್ವಯಂಸೇವಕನಾಗಿ ಅವನು ಒಮ್ಮೆಗೇ

30–40 ಮೈಲುಗಳಷ್ಟು ದೂರ ಗಾಯಾಳು ಸೈನಿಕರನ್ನು ಶಯ್ಯೆಗಳಲ್ಲಿ ಹೊತ್ತು ಸಾಗಿಸಿದ. 78ರ ಹರೆಯದಲ್ಲೂ ಅವನು ದಿನಕ್ಕೆ 18 ತಾಸುಗಳಷ್ಟು ದುಡಿಯುತ್ತಿದ್ದ. ಕೆಲವೊಮ್ಮೆ ಅವನ ದುಡಿತದ ತಾಸುಗಳ ಸಂಖ್ಯೆ 21ನ್ನು ಮುಟ್ಟುತ್ತಿತ್ತು. ಆ ಪ್ರಾಯದಲ್ಲಿ ನೂಲುವ ಹೊರತಾಗಿ ಇತರ ದೇಹಶ್ರಮದ ಕೆಲಸಗಳನ್ನು ಮಾಡಲಾಗುತ್ತಿರಲಿಲ್ಲವಾದರೂ ಚಳಿಯಿಂದ ಕೂಡಿದ ಮುಂಜಾವಿನಲ್ಲೂ ಆತ ಇಬ್ಬನಿಯಿಂದ ತೊಯ್ದ ಕಾಲುದಾರಿಯಲ್ಲಿ ಮೂರರಿಂದ ಐದು ಮೈಲುಗಳಷ್ಟು ದೂರ ಬರಿಗಾಲಲ್ಲಿ ನಡೆದು ಹೋಗುವಷ್ಟು ಸಶಕ್ತನಾಗಿದ್ದ. ಕೆಲಸದ ಮೇಲಣ ಆತನ ಶ್ರದ್ಧೆ ಮತ್ತು ಕಾಯಕ ಸಾಮರ್ಥ್ಯಗಳಿಗಾಗಿ ದಕ್ಷಿಣ ಆಫ್ರಿಕಾದ ಸಹಚರರು ಆತನಿಗೆ "ಕರ್ಮವೀರ" ಎಂಬ ಬಿರುದನ್ನಿತ್ತು ಗೌರವಿಸಿದರು.

ಕರ್ಮವೀರ ಮೋಹನದಾಸ್ ಕರಮಚಂದ ಗಾಂಧೀ 1869ನೇ ಅಕ್ಟೋಬರ್ 2ರಂದು ಜನಿಸಿದರು.

ಬ್ಯಾರಿಸ್ಟರ್

ಗಾಂಧೀಜಿ ತಮ್ಮ 18ನೇ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪಾಸಾದರೂ ಸ್ವಲ್ಪ ಸಮಯದಲ್ಲೇ ಕಾನೂನು ಅಭ್ಯಾಸಕ್ಕಾಗಿ ಲಂಡನ್‌ಗೆ ತೆರಳಿದರು. ವಿದೇಶಕ್ಕೆ ಹೋದ ಪ್ರಥಮ "ಮೋಢ್ ಬನಿಯಾ" ಅವರಾಗಿದ್ದರು. ಅವ್ಯಾಸಂಗಕ್ಕಾಗಿ "ಇನ್ನರ್ ಟೆಂಪಲ್" ಶಿಕ್ಷಣ ಸಂಸ್ಥೆ ಸೇರಿದ ನಂತರ ಕಾನೂನು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವುದು ಸುಲಭವೆಂದು ಅವರಿಗೆ ತಿಳಿಯಿತು. ಒಂದೆರಡು ತಿಂಗಳು ಮಾತ್ರ ಪಠ್ಯಪುಸ್ತಕಗಳ ಟಿಪ್ಪಣಿಗಳನ್ನೋದಿಯೇ ಅನೇಕರು ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಿದ್ದರು. ಟಿಪ್ಪಣಿಗಳನ್ನೋದುವ ಸುಲಭ ಮಾರ್ಗ ಗಾಂಧೀಜಿಗೆ ಮೆಚ್ಚಿಗೆಯಾಗಲಿಲ್ಲ. ವಂಚನೆ ಅವರಿಗೆ ಎಂದೂ ಸಹನವಾಗುತ್ತಿರಲಿಲ್ಲ. ಮೂಲ ಪಠ್ಯಪುಸ್ತಕಗಳನ್ನೇ ಓದಲು ಅವರು ನಿರ್ಧರಿಸಿದರು ಮತ್ತು ಆ ಪುಸ್ತಕಗಳಿಗೂ ಸಾಕಷ್ಟು ವೆಚ್ಚವನ್ನು ಮಾಡಿದರು. "ಕಾಮನ್ ಲಾ" ಬಗೆಗಿನ ಬೃಹತ್ ಗಾತ್ರದ ಪುಸ್ತಕಗಳನ್ನು ಅವರು ಒಂಭತ್ತು ತಿಂಗಳುಗಳ ಕಾಲ ಶ್ರಮವಹಿಸಿ, ಓದಬೇಕಾಯಿತು. ಲ್ಯಾಟಿನ್ ಭಾಷೆ ಕಲಿತು ಅವರು "ರೋಮನ್ ಲಾ" ಪುಸ್ತಕಗಳನ್ನು ಮೂಲದಲ್ಲೇ ವ್ಯಾಸಂಗಮಾಡಿದರು. ಆಗ ಬ್ಯಾರಿಸ್ಟರ್‌ಗಳನ್ನು ಡಿನ್ನರ್ ಬ್ಯಾರಿಸ್ಟರ್‌ಗಳೆಂದು ಕರೆಯಲಾಗುತ್ತಿತ್ತು. ಏಕೆಂದರೆ ಮೂರು ವರ್ಷಗಳಲ್ಲಿ 12 ಟರ್ಮ್‌ಗಳನ್ನು ಅವರು ಪೂರೈಸಬೇಕಾಗಿತ್ತು. ಅಂದರೆ ಒಟ್ಟು 72 ಭೋಜನ ಕೂಟಗಳಿಗೆ ಅವರು ಹಾಜರಾಗಬೇಕಾಗಿತ್ತು. ಭೋಜನ ಕೂಟಗಳ ಮಿತಿಮೀರಿದ ವೆಚ್ಚವನ್ನು ವಿದ್ಯಾರ್ಥಿಗಳೇ ಭರಿಸಬೇಕಾಗಿತ್ತು.

ಅಂತಹ ಸಾಮಾಜಿಕ ಕೂಟಗಳು ಗಾಂಧೀಜಿಗೆ ಅಭ್ಯಾಸವಿರಲಿಲ್ಲ ಮತ್ತು ಭೋಜನಕೂಟದ ಮಾದಕ ಪಾನೀಯ ಸೇವನೆ ಒಳ್ಳೆಯ ಬ್ಯಾರಿಸ್ಟರ್ ಆಗಲು ಹೇಗೆ ಸಹಕಾರಿ ಎನ್ನುವುದು ಅವನಿಗೆ ಬರೆಹರಿಯದ ಸಮಸ್ಯೆಯಾಗಿತ್ತು. ಅವರು ಶಾಖಾಹಾರಿಯಾಗಿದ್ದರು ಮತ್ತು ಮದ್ಯಪಾನ ಮಾಡುತ್ತಿರಲಿಲ್ಲ. ಬಡಿಸಲಾದ ಎಲ್ಲ ಬಗೆಯ ತಿನಿಸುಗಳನ್ನೂ ಅವರು ತಿನ್ನುತ್ತಿರಲಿಲ್ಲವಾದ್ದರಿಂದಲೂ, ಮದ್ಯ ಮುಟ್ಟುತ್ತಿರಲಿಲ್ಲವಾದ್ದರಿಂದಲೂ, ಅನೇಕ ಸಹವಿದ್ಯಾರ್ಥಿಗಳು ಭೋಜನ ಕೂಟದಲ್ಲಿ ಗಾಂಧೀಜಿಯವರ ಜತೆಗಾರರಾಗಲು ಆಸ್ಥೆ ತೋರಿಸುತ್ತಿದ್ದರು.

ತಮ್ಮ ನಾಚಿಕೆ ಸ್ವಭಾವ ಮತ್ತು ಅಂಜುಗುಳಿತನವನ್ನು ಹೋಗಲಾಡಿಸಲು ಈ ಭೋಜನಕೂಟಗಳೂ, ವ್ಯಾಸಂಗಗೋಷ್ಠಿಗಳೂ ಸಹಕಾರಿಯಾಗಲಿಲ್ಲ. ಪುಸ್ತಕದ ಓದನ್ನು, ಮೊಕದ್ದಮೆಯೊಂದರಲ್ಲಿ ವಾದಿಸಲು ಬಳಸುವುದು ಹೇಗೆಂದು ಅವರು ಚರ್ಚಿಸುತ್ತಿದ್ದರು. ಆಂಗ್ಲ ನ್ಯಾಯವಾದಿಯಾಗಲು ಮತ್ತು ತಕ್ಕಮಟ್ಟಿನ ಸಂಪಾದನೆ ಮಾಡಲು ಸಾಕು ಎಂದು ಗಾಂಧೀಜಿಗೆ ಪ್ರೋತ್ಸಾಹ ನೀಡಿದರು. ಕಾನೂನಿನ ಮೂರುನಾಲ್ಕಂಶ ವಾಸ್ತವಾಂಶಗಳೇ. ಈ ವಾಸ್ತವಾಂಶಗಳನ್ನು ಗಂಭೀರವಾಗಿ ಪರಿಗಣಿಸಿದರೆ, ಖಟ್ಲೆಯ ಉಳಿದ ಅಂಶವನ್ನು ಕಾನೂನೇ ನೋಡಿಕೊಳ್ಳುವುದು ಎಂದೂ, ಆಂಗ್ಲ ನ್ಯಾಯವಾದಿ ಗಾಂಧೀಜಿಗೆ ಧೈರ್ಯ ಹೇಳಿ ಇತಿಹಾಸ ಮತ್ತು ಸಾಮಾನ್ಯ ಜ್ಞಾನದ ಪುಸ್ತಕಗಳನ್ನು ಓದುವಂತೆ ಸಲಹೆ ನೀಡಿದರು. ಗಾಂಧೀಜಿ ಆ ಬುದ್ಧಿವಾದವನ್ನು ಅನುಸರಿಸಿದರು.

ಸ್ವಲ್ಪ ಕಾಲ ಗಾಂಧೀಜಿ ಒಬ್ಬ ಚತುರ ಆಂಗ್ಲ ಸಭ್ಯ ಗ್ರಹಸ್ಥನಾಗುವ ಪ್ರಯತ್ನ ನಡೆಸಿದರು. ಆಂಗ್ಲ ಭಾಷೆಯ ಸರಿಯಾದ ಉಚ್ಚಾರ, ಭಾಷಣ ಕಲೆ, ನೃತ್ಯ, ಪಿಟೀಲು ವಾದನ ಇತ್ಯಾದಿಗಳನ್ನು ಕರಗತ ಮಾಡಿಕೊಳ್ಳಲು ಪ್ರಯತ್ನಿಸಿದರು ಮತ್ತು ಸರಿಯಾದ ಫ್ಯಾಷನ್‌ನಲ್ಲಿ ಪೋಷಾಕು ಧರಿಸುವ ಅಭ್ಯಾಸ ಸಹ ಮಾಡಿದರು.

ಅತ್ಯಂತ ನವೀನ ಫ್ಯಾಷನ್ ಅಂಗಡಿಯಿಂದ, ಅತಿ ಬೆಲೆಬಾಳುವ ಉಡುಪು ಖರೀದಿಸಿದರು ಮತ್ತು ಎರಡೆಳೆ ಬಂಗಾರದ ಸರಪಳಿಯ ಕೈಗಡಿಯಾರ ಹಾಕಿಕೊಂಡರು. ಎತ್ತರದ ಶಿರೋಭೂಷಣ ಮತ್ತು ಕಂಠ ಕೌಪೀನಗಳನ್ನು ಧರಿಸಿದರು. ಯುವತಿಯರೊಡನೆ ಸ್ನೇಹ ವ್ಯವಹಾರವನ್ನು ಮಾಡಿದರು. ನಿಧಾನವಾಗಿ ಅವರು ಐಷಾರಾಮದ ಭೋಗ ಜೀವನದ ಕಡೆಗೆ ವಾಲುತ್ತಿದ್ದರು. ಕೆಲವು ತಿಂಗಳುಗಳ ನಂತರ ತಾನೆಂತಹ ಭ್ರಮೆಗೊಳಗಾಗಿದ್ದೇನೆಂದು ಅರಿತುಕೊಂಡರು. ತಮ್ಮ ದುಬಾರಿ ಹವ್ಯಾಸಗಳ ಭಾರ ಹಿರಿಯಣ್ಣನ ಮೇಲೆ ಬೀಳುತ್ತಿತ್ತು. ತಾನು ಇಂಗ್ಲೆಂಡಿಗೆ ಬಂದುದು ಅಭ್ಯಾಸಕ್ಕಾಗಿಯೇ ಹೊರತು ಆಂಗ್ಲೇಯರ ರೀತಿನೀತಿಗಳನ್ನು ಅನುಕರಿಸಲಿಕ್ಕಲ್ಲ ಎಂಬುದನ್ನು ನೆನೆಸಿಕೊಂಡರು. ಅವರು ತಮ್ಮ ಜೀವನ ಶೈಲಿಯನ್ನು ಬದಲಾಯಿಸಲು ನಿರ್ಧರಿಸಿದರು. ಒಂದು ಕಡಿಮೆ ಬಾಡಿಗೆಯ ಕೋಣೆಯನ್ನು ಬಾಡಿಗೆಗೆ ಪಡೆದು, ತನ್ನ ಬೆಳಗಿನ ಉಪಹಾರ ಮತ್ತು ರಾತ್ರಿಯ ಊಟವನ್ನು ತಾವೇ ತಯಾರಿಸಿಕೊಳ್ಳತೊಡಗಿದರು. ಮಧ್ಯಾಹ್ನದ

ಊಟವನ್ನು ಅಗ್ಗದರದ ಶಾಖಾಹಾರೀ ಭೋಜನ ಗೃಹದಲ್ಲಿ ಮಾಡತೊಡಗಿದರು. ಪ್ರಯಾಣಕ್ಕಾಗಿ ವಾಹನಗಳಿಗೆ ವೆಚ್ಚ ಮಾಡುವುದನ್ನು ನಿಲ್ಲಿಸಿದರು. ಪ್ರತಿ ದಿನವೂ 8-10 ಮೈಲುಗಳಷ್ಟು ದೂರ ನಡೆದೇ ಹೋಗುತ್ತಿದ್ದರು.

ಇಂಗ್ಲೆಂಡಿನಲ್ಲಿ 32 ತಿಂಗಳು ವಿದ್ಯಾರ್ಥಿ ಜೀವನ ಕಳೆದ ಬಳಿಕ ಗಾಂಧೀಜಿ ಬ್ಯಾರಿಸ್ಟರ್ ಆಗಿ ನೋಂದಾಯಿಸಲ್ಪಟ್ಟರು. ನಂತರ ಅವರು ಹಡಗಿನಲ್ಲಿ ಮರಳಿ ಭಾರತಕ್ಕೆ ಹೊರಟರು.

ಭಾರತಕ್ಕೆ ತಲುಪಿ, ಅವರು ಮುಂಬಯಿಯಲ್ಲಿ ಮನೆಯೊಂದನ್ನು ಬಾಡಿಗೆಗೆ ಪಡೆದು, ಒಬ್ಬ ಅಡಿಗೆಯವನನ್ನು ನೇಮಿಸಿಕೊಂಡರು. ನಿಯಮಿತವಾಗಿ ಉಚ್ಚ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು. ಯಾವ ರೀತಿ ಮೊಕದ್ದಮೆಗಳು ವ್ಯವಹರಿಸಲ್ಪಡುತ್ತಿದ್ದವೆಂಬುದನ್ನು ಗಮನಿಸುತ್ತಿದ್ದರಲ್ಲದೆ ನ್ಯಾಯವಾದಿಗಳ ಪುಸ್ತಕ ಭಂಡಾರದಲ್ಲಿ ಅನೇಕ ತಾಸುಗಳನ್ನು ಕಳೆಯುತ್ತಿದ್ದರು. ಭಾರತೀಯರ ಶಾಸನದ (India Law)ದ ಬಗೆಗಿನ ಪುಸ್ತಕಗಳನ್ನು ಓದಿದರು.

ಅವರ ಪ್ರಥಮ ಮೊಕದ್ದಮೆ ಸರಳವಾದುದಾಗಿತ್ತು. ಅವರಿಗೆ ರೂ. 30 ಫೀಸು ನಿರ್ಧಾರವಾಗಿತ್ತು. 22ರ ಪ್ರಾಯದ ಆ ಯುವಕ ಬ್ಯಾರಿಸ್ಟರ್ ಮೊಕದ್ದಮೆಯಲ್ಲಿ ವಾದಿಸಲು ನ್ಯಾಯಾಲಯದಲ್ಲಿ ಎದ್ದು ನಿಂತಾಗ ಆತನ ಜಂಘಾಬಲವೇ ಉಡುಗಿಹೋದಂತಾಗಿ ತಲೆ ಬವಳಿ ಬಂದು, ನಾಲಿಗೆ ಒಣಗಿಹೋಯ್ತು. ಲಜ್ಜೆಯಿಂದ ಆತ ನ್ಯಾಯಾಲಯದಿಂದ ಹೊರಬಿದ್ದನು. ಮತ್ತೆಂದೂ ಆತ ಆ ಕೋರ್ಟಿನಲ್ಲಿ ಯಾವ ಮೊಕದ್ದಮೆಯನ್ನೂ ಸ್ವೀಕರಿಸಲಿಲ್ಲ, ಅವರ ಖರ್ಚು ವೆಚ್ಚಗಳು ಹೆಚ್ಚಾದವು. ಆದಾಯ ಹೆಚ್ಚು ಕಡಿಮೆ ಶೂನ್ಯವೇ ಆಗಿತ್ತು. ಅರ್ಜಿಗಳನ್ನು ಬರೆಯುವುದರಲ್ಲೇನೋ ಅವರು ಸಮರ್ಥರೆನಿಸಿಕೊಂಡರು. ಆದರೆ ಅದು ಓರ್ವ ಬ್ಯಾರಿಸ್ಟರ್ ಕೆಲಸವಾಗಿರಲಿಲ್ಲ. ಅದರಿಂದ ಹೆಚ್ಚಿನ ಆದಾಯವೂ ಇರಲಿಲ್ಲ. ಆರು ತಿಂಗಳ ಪ್ರಯತ್ನದ ಬಳಿಕ ಅವರು ರಾಜಕೋಟದಲ್ಲಿದ್ದ ಅಣ್ಣ ಹಾಗೂ ತಮ್ಮ ಕುಟುಂಬದವರನ್ನು ಸೇರಿದರು. ಅಣ್ಣನಿಗಾದರೋ ತಮ್ಮ ಇಂಗ್ಲೆಂಡ್ ರಿಟರ್ನ್ಡ್ ಬ್ಯಾರಿಸ್ಟರ್ ತಮ್ಮನ ಯಶಸ್ಸಿನ ಬಗ್ಗೆ ತುಂಬ ಆಸೆಗಳಿದ್ದುವು. ಆತನಿಗೆ ತುಂಬ ನಿರಾಸೆಯಾಯ್ತು. ಗಾಂಧೀಜಿಗೆ ಕಳವಳವಾಯ್ತು.

ರಾಜಕೋಟದಲ್ಲಿ ಇನ್ನೊಂದು ಸಮಸ್ಯೆ ಎದುರಾಯ್ತು. ಒಂದು ನಿಬಂಧನೆಯಂತೆ ತನಗೆ ಮೊಕದ್ದಮೆಗಳನ್ನು ತಂದ ವಕೀಲರುಗಳಿಗೆ ಅವರು ಒಂದು ನಿರ್ದಿಷ್ಟ ಕಮಿಷನ್ ಕೊಡಬೇಕಾಗಿತ್ತು. ಗಾಂಧೀಜಿ ಕಮಿಷನ್ ಕೊಡಲು ನಿರಾಕರಿಸಿದರು. ಕಮಿಷನ್ ಕೊಡುವುದು ಅವರಿಗೆ ಅನೈತಿಕವಾಗಿ ಕಂಡಿತು. ಅವರ ಅಣ್ಣ ತುಂಬಾ ಕೇಳಿಕೊಂಡ ಮೇಲೆ ಗಾಂಧೀಜಿ ಒಂದು ಒಪ್ಪಂದಕ್ಕೆ ಬಂದರು. ಆಗ ಅವರು ತಿಂಗಳಿಗೆ 300 ರೂ. ಸಂಪಾದಿಸುತ್ತಿದ್ದರು.

ಆ ಕೆಲಸದಿಂದ ಅವರಿಗೇನೂ ತೃಪ್ತಿಯಾಗುತ್ತಿರಲಿಲ್ಲ. ಸುತ್ತಮುತ್ತಲೆಲ್ಲ ತುಂಬಿದ್ದ ಸುಳ್ಳು, ಕಪಟತನಗಳಿಂದಲೂ ಅವರು ರೋಸಿಹೋಗಿದ್ದರು.

ಅದೃಷ್ಟವಶಾತ್ ದಕ್ಷಿಣ ಆಫ್ರಿಕಾದ ಶ್ರೀಮಂತ ಮುಸ್ಲಿಂ ವರ್ತಕರೊಬ್ಬರಿಂದ, ಉದ್ಯೋಗದ ಕೊಡುಗೆ ಗಾಂಧೀಜಿಗೆ ಬಂತು. ಎಲ್ಲ ಸೇರಿ 1572 ರೂ. ಶುಲ್ಕ ಮತ್ತು ಹೋಗಿಬರುವ ಪ್ರಥಮ ದರ್ಜೆಯ ಪ್ರಯಾಣ ವೆಚ್ಚವೂ ಅವರಿಗೆ ಬರುವುದಿತ್ತು.

ಗಾಂಧೀಜಿ ಮೊಕದ್ದಮೆಯನ್ನು ಒಪ್ಪಿಕೊಂಡರು ಮತ್ತು ದೂರದ ದೇಶಕ್ಕೆ ಪ್ರಯಾಣ ಬೆಳೆಸಿದರು. ದಕ್ಷಿಣ ಆಫ್ರಿಕಾದ ಜೀವನ ಸ್ಥಿತಿಗತಿಗಳ ಬಗ್ಗೆ ಅವರಿಗೆ ಯಾವ ತಿಳುವಳಿಕೆಯೂ ಇರಲಿಲ್ಲ.

ಝಾಂಜಿಬಾರ್‌ನಲ್ಲಿ ಹಡಗು ಲಂಗರು ಹಾಕಿದಾಗ ಅಲ್ಲಿನ ನ್ಯಾಯಾಲಯಗಳು ಯಾವ ರೀತಿ ಕಾರ್ಯ ನಿರ್ವಹಿಸುತ್ತವೆಯೆಂದು ನೋಡಿ ತಿಳಿದರು. ಲೆಕ್ಕದ ಪುಸ್ತಕಗಳನ್ನು ಇರಿಸುವುದು ಕುರಿತ ಪ್ರಶ್ನೆಗಳು ಅವರಿಗೆ ಅರ್ಥವಾಗಲಿಲ್ಲ. ಅವರು ದಕ್ಷಿಣ ಆಫ್ರಿಕಾಕ್ಕೆ ಹೋಗುತ್ತಿರುವುದು ವ್ಯಾಪಾರದ ಲೆಕ್ಕಪತ್ರಗಳನ್ನಿಡುವ ಕುರಿತೇ ಆಗಿತ್ತು. ಗಾಂಧೀಜಿ ಲೆಕ್ಕಪತ್ರಗಳನ್ನು ಕುರಿತು ಪುಸ್ತಕವೊಂದನ್ನು ಕೊಂಡು ಕೂಲಂಕಷವಾಗಿ ಎಚ್ಚರದಿಂದ ಓದಿದರು.

ದರ್ಬಾನಿಗೆ ತಲುಪಿದ ಮೂರನೇ ದಿನ, ಗಾಂಧೀಜಿ ನ್ಯಾಯಾಲಯಕ್ಕೆ ಹೋದರು. ನ್ಯಾಯಾಧೀಶರು ಗಾಂಧೀಜಿ ತಲೆಯ ಮೇಲಿನ ಮುಂಡಾಸು ತೆಗೆಯಲು ಆಜ್ಞಾಪಿಸಿದರು. ಗಾಂಧೀಜಿ ಆಜ್ಞೆಯನ್ನು ಪಾಲಿಸಲು ನಿರಾಕರಿಸಿ ಕೋರ್ಟಿನಿಂದ ಹೊರನಡೆದರು. ದಕ್ಷಿಣ ಆಫ್ರಿಕಾದ ನೆಲದಲ್ಲಿ ಕಾಲಿರಿಸಿದಂದಿನಿಂದಲೂ, ಬಿಳಿಯರು

ಭಾರತೀಯರನ್ನು ಯಾವ ರೀತಿ ನಿಕೃಷ್ಟವಾಗಿ ಕಾಣುತ್ತಾರೆನ್ನುವುದನ್ನು ಅವರು ಮನಗಂಡರು. ಅವರೊಬ್ಬ ಅನಪೇಕ್ಷಿತ ಅತಿಥಿಯೆಂದೂ, "ಕೂಲಿ ಬ್ಯಾರಿಸ್ಟರ್" ಎಂದೂ ಗುರುತಿಸಲ್ಪಟ್ಟರು. ಈ ಅಪಮಾನಗಳಿಂದ ಗಾಂಧೀಜಿ ಒಳಗೊಳಗೇ ಕುದಿದರು.

ತನ್ನ ಕಕ್ಷಿಗಾರ ದಾದಾ ಅಬ್ದುಲ್ಲಾರಿಂದ ಅವರು ಮೊಕದ್ದಮೆಯ ಎಲ್ಲಾ ಸಂಗತಿಗಳನ್ನು ತಿಳಿದುಕೊಂಡರು ಮತ್ತು ಖಟ್ಲೆಯನ್ನು ಚೆನ್ನಾಗಿ ಅಭ್ಯಸಿಸಿದರು. ಎರಡೂ ಕಡೆಯ ಕಕ್ಷಿಗಾರರು ದೀರ್ಘ ಕಾಲದವರೆಗೆ ವಕೀಲರಿಗೆ ಖರ್ಚು ಮಾಡಿದರೆ, ಸರ್ವನಾಶವಾಗಿ ಹೋಗುವರೆಂಬುದನ್ನು ಮನಗಂಡರು. ತಮ್ಮ ಕಕ್ಷಿಗಾರರನ್ನು ಶೋಷಿಸಿ, ಹಣ ಅಥವಾ ಸ್ಥಾನವನ್ನು ಗಳಿಸುವುದು ಅವರಿಗೆ ಬೇಕಾಗಿರಲಿಲ್ಲ. ಒಬ್ಬ ಕಾನೂನು ಸಲಹೆಗಾರನಾಗಿ, ಎರಡೂ ಕಡೆಯ ಕಕ್ಷಿಗಾರರನ್ನು ಒಂದುಗೂಡಿಸುವುದೇ ತನ್ನ ಕರ್ತವ್ಯ ಎಂದವರು ನಂಬಿದ್ದರು. ಖಟ್ಲೆಯನ್ನು ಕೋರ್ಟಿನ ಹೊರಗಡೆಯೇ ಇತ್ಯರ್ಥಪಡಿಸುವ ಸಲುವಾಗಿ ಎದುರು ಪಕ್ಷದ ಕಕ್ಷಿಗಾರರನ್ನು ಭೇಟಿಯಾಗಬೇಕೆಂದು ಅವರು ತಮ್ಮ ಕಕ್ಷಿಗಾರರನ್ನು ಒತ್ತಾಯಿಸಿದರು. ದಾದಾ ಅಬ್ದುಲ್ಲಾರವರು ಈ ಸಲಹೆಯಿಂದ ಹಿಂಜರಿದಾಗ ಗಾಂಧೀಜಿ "ನಮ್ಮೊಳಗೆ ನಡೆದ ಈ ಗುಪ್ತ ಸಮಾಲೋಚನೆ ಯಾವುದೇ ಇನ್ನೊಬ್ಬ ವ್ಯಕ್ತಿಗೆ ತಿಳಿಯಲಾರದು. ರಾಜಿಗೆ ಬರುವಂತೆ ಆತನಿಗೆ ನಾನು ಸಲಹೆ ನೀಡುವೆ" ಎಂದರು.

ಗಾಂಧೀಜಿಯವರ ಸಂಧಾನದ ನಂತರವೂ ಮೊಕದ್ದಮೆ ಒಂದು ವರ್ಷದವರೆಗೆ ಮುಂದುವರಿಯಿತು. ಕ್ಲಿಷ್ಟವಾದ ಒಂದು ಮೊಕದ್ದಮೆಯನ್ನು ಶ್ರೇಷ್ಠ ನ್ಯಾಯವಾದಿಗಳೂ, ಕಾನೂನು ಸಲಹೆಗಾರರೂ ಯಾವ ರೀತಿ ವ್ಯವಹರಿಸುವರೆಂಬುದನ್ನು ಅಧ್ಯಯನ ಮಾಡುವ ಒಳ್ಳೆಯ ಅವಕಾಶ ಅವರಿಗೆ ದೊರೆಯಿತು. ಗಾಂಧೀಜಿ ಸಾಕ್ಷಿಗಳನ್ನು ತಯಾರಿಸಿದರು. ಮೊಕದ್ದಮೆ ಎರಡೂ ಪಕ್ಷಗಳಿಗೆ ತೃಪ್ತಿಯಾಗುವಂತೆ ಇತ್ಯರ್ಥವಾಯಿತು. ಆದರೆ ಎರಡೂ ಪಕ್ಷಗಳಿಗೆ ಬೆಂಬಲವಾಗಿ ವಾದಗಳನ್ನೆತ್ತುತ್ತಾ ಹೋಗಿ, ಖಟ್ಲೆಯ ವೆಚ್ಚವನ್ನು ದ್ವಿಗುಣಗೊಳಿಸುವ ತನ್ನ ವೃತ್ತಿಯ ಬಗೆಗೆ ಗಾಂಧೀಜಿಗೆ ಜಿಗುಪ್ಸೆ ಉಂಟಾಯಿತು. ಮುಂದೆ ಗಾಂಧೀಜಿ ಡರ್ಬಾನ್ ನ್ಯಾಯಾಲಯದಲ್ಲಿ ವೃತ್ತಿ ನಡೆಸತೊಡಗಿದ

ಕೆಲವೇ ಸಮಯದಲ್ಲಿ ಮುಂದಿನ ಸಾಲಿನ ಎರಡು ಹಲ್ಲುಗಳು ಮುರಿದಿದ್ದ ಬಾಲಸುಂದರಂ ಎಂಬ ಸಾವಧಿ ಕೂಲಿಯೊಬ್ಬ ಹರಿದ ಬಟ್ಟೆಗಳಲ್ಲಿ ಅವರ ಕಛೇರಿಗೆ ಬಂದ. ಆತನ ಬಿಳಿಯ ಯಜಮಾನ ಅವನನ್ನು ಚೆನ್ನಾಗಿ ಹೊಡೆದಿದ್ದ. ಗಾಂಧೀಜಿ ಅವನನ್ನು ಸಮಾಧಾನಪಡಿಸಿ, ಬಿಳಿಯ ವೈದ್ಯರೊಬ್ಬರಿಂದ ಅವನಿಗೆ ಚಿಕಿತ್ಸೆ ಕೊಡಿಸಿದರಷ್ಟೇ ಅಲ್ಲದೆ ಅವನಿಗಾದ ಗಾಯಗಳ ಗಂಭೀರತೆಯ ಬಗ್ಗೆ ವೈದ್ಯರಿಂದ ಒಂದು ದೃಢತಾಪತ್ರವನ್ನೂ ಪಡೆದುಕೊಂಡರು. ಬಾಲಸುಂದರಂ ಕೇಸನ್ನು ನ್ಯಾಯಾಲಯದಲ್ಲಿ ವಾದಿಸಿ ಗೆದ್ದರು ಮತ್ತು ಆತನಿಗೆ ಬೇರೆ ಒಳ್ಳೆಯ ಯಜಮಾನನನ್ನು ಹುಡುಕಿಕೊಟ್ಟರು. ಈ ಘಟನೆಯಿಂದ ಗಾಂಧೀಜಿಯವರು ಬಡ ಭಾರತೀಯ ಕೂಲಿಗಾರರಿಗೆಲ್ಲ ಅತ್ಯಂತ ಜನಪ್ರಿಯರಾದರು. ಅಸಹಾಯಕರ ರಕ್ಷಕರಾಗಿ ಅವರ ಪ್ರಸಿದ್ಧಿ ಭಾರತವನ್ನೂ ಮುಟ್ಟಿತು. ಅಂದಿನಿಂದ ಅವರು ಅನಾಥರು ಆಪದ್ಬಂಧುವೆಂದು ಪರಿಗಣಿಸಲ್ಪಟ್ಟರು.

ಒಂದು ವರ್ಷದ ದಕ್ಷಿಣ ಆಫ್ರಿಕಾದ ಅನುಭವದ ಗಾಂಧೀಜಿಗೆ ಆತ್ಮವಿಶ್ವಾಸವನ್ನು ತಂದುಕೊಟ್ಟಿತು. ಸ್ವಲ್ಪ ವಾದ-ವಿವಾದಗಳ ಬಳಿಕ ಈ ಕೂಲಿ ಬ್ಯಾರಿಸ್ಟರ್‌ಗೆ ನೇಟಾಲ್ ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾಗಲು ಸನ್ನದು ದೊರೆಯಿತು. ಬಿಳಿಯ ಅಟಾರ್ನಿಗಳು ಅವರಿಗೆ ಖಟ್ಲೆಗಳನ್ನು ಕೊಡುತ್ತಿರಲಿಲ್ಲ. ಅಲ್ಲದೆ ಗಾಂಧೀಜಿ ತಾವೇ ಸ್ವತಃ ಕೆಲವು ತೊಂದರೆಗಳನ್ನು ಸೃಷ್ಟಿಸಿಕೊಂಡರು. ನ್ಯಾಯವಾದಿಯ ವೃತ್ತಿ ಸುಳ್ಳುಗಾರನ ವೃತ್ತಿಯಲ್ಲವೆಂದು ಸಾಬೀತುಪಡಿಸಲು ಅವರು ನಿರ್ಧರಿಸಿದ್ದರು. ಕೇಸನ್ನು ಜಯಿಸುವ ಸಲುವಾಗಿ ಅವರೆಂದೂ ಸುಳ್ಳಾಡಲಿಲ್ಲ ಅಥವಾ ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಲಿಲ್ಲ. ತನ್ನ ಕಕ್ಷಿಗಾರ ಗೆಲ್ಲಲಿ, ಸೋಲಲಿ ಅವರೆಂದೂ ತನ್ನ ನಿಗದಿಯಾದ ದರಕ್ಕಿಂತ ಹೆಚ್ಚು ಸಂಭಾವನೆ ಪಡೆಯುತ್ತಿರಲಿಲ್ಲ. ಕಕ್ಷಿಗಾರರಿಂದ ತನಗೆ ಬರಬೇಕಾದ ಹಣಕ್ಕಾಗಿ ಅವರೆಂದೂ ಜ್ಞಾಪನಾಪತ್ರಗಳನ್ನು ಕಳುಹಿಸುತ್ತಿರಲಿಲ್ಲ ಅಥವಾ ಯಾರಿಂದಲಾಗಲೀ ತನಗೆ ವೈಯಕ್ತಿಕವಾಗಿ ತೊಂದರೆಗಳಾದಾಗ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತಿರಲಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಅವರ ಮೇಲೆ ನಾಲ್ಕು ಬಾರಿ ಹಲ್ಲೆ ನಡೆಸಲಾಯಿತು. ಆದರೆ ಪ್ರತಿ ಬಾರಿಯೂ ಆಕ್ರಮಣಕಾರರನ್ನು ಕೋರ್ಟಿಗೆಳೆಯಲಾಗಲೀ, ಶಿಕ್ಷೆಗೊಳಪಡಿಸಲಾಗಲೀ ಅವರು ನಿರಾಕರಿಸಿದರು. ನ್ಯಾಯವಾದಿಯಾಗಿ ಅವರು ಕೆಲಸ ಮಾಡಿದ 20 ವರ್ಷಗಳ ಅವಧಿಯಲ್ಲಿ

ನೂರಾರು ಕೇಸುಗಳನ್ನು ಕೋರ್ಟಿನ ಹೊರಗಡೆಯೇ ಇತ್ಯರ್ಥಗೊಳಿಸಲು ಸಹಾಯ ಮಾಡಿದರು.

ಒಮ್ಮೆ ಮೊಕದ್ದಮೆಯೊಂದನ್ನು ನಡೆಸುತ್ತಿರುವಾಗ ತನ್ನ ಕಕ್ಷಿಗಾರ ಅಪ್ರಾಮಾಣಿಕನಾಗಿದ್ದಾನೆಂದು ಅವರಿಗೆ ತಿಳಿಯಿತು. ಆತನ ಪರವಾಗಿ ವಾದಿಸುವುದನ್ನು ಬಿಟ್ಟು, ಗಾಂಧೀಜಿಯವರು ಆ ಮೊಕದ್ದಮೆಯನ್ನು ವಜಾ ಮಾಡುವಂತೆ ನ್ಯಾಯಾಧೀಶರನ್ನು ಕೇಳಿಕೊಂಡರು ಮತ್ತು ಸುಳ್ಳು ಕೇಸನ್ನು ತಂದುದಕ್ಕಾಗಿ ತನ್ನ ಕಕ್ಷಿಗಾರನನ್ನೇ ತರಾಟೆಗೆ ತೆಗೆದುಕೊಂಡರು. "ನಾನು ನನ್ನ ವಕೀಲ ವೃತ್ತಿಯನ್ನು ಎರಡನೇ ದರ್ಜೆಯ ನ್ಯಾಯವಾದಿಯಾಗಿಯೇ ಪ್ರಾರಂಭಿಸಿದೆ. ನನ್ನ ಕಾನೂನು ಜ್ಞಾನದಿಂದ ನನ್ನ ಕಕ್ಷಿಗಾರರು ತುಂಬ ಪ್ರಭಾವಿತರೇನೂ ಆಗಲಿಲ್ಲ. ಆದರೆ ಯಾವುದೇ ಪರಿಸ್ಥಿತಿಯಲ್ಲಿ ನಾನು ಸತ್ಯದಿಂದ ದೂರ ಸರಿಯೆನೆಂದು ಅವರಿಗೆ ಮನವರಿಕೆಯಾದಾಗ ಅವರು ನನಗೆ ಬಲವಾಗಿ ಗಂಟುಬಿದ್ದರು" ಎಂದು ಗಾಂಧೀಜಿ ಒಂದೆಡೆ ಹೇಳಿದ್ದಾರೆ. ಅವರ ಕಕ್ಷಿಗಾರರು ಅವರ ಸ್ನೇಹಿತರೂ ಮತ್ತು ಸಹಕಾರ್ಯಕರ್ತರೂ ಆದರು. ಪ್ರಾಮಾಣಿಕತೆಗೆ ಅವರು ಎಷ್ಟು ಹೆಸರಾದರೆಂದರೆ ಒಮ್ಮೆ ಅವರು ತಮ್ಮೊಬ್ಬ ಕಕ್ಷಿಗಾರನನ್ನು ಪ್ರಾಮಾಣಿಕತೆಯ ಬಲದಿಂದಲೇ ಜೈಲಿಗೆ ಹೋಗುವುದರಿಂದ ತಪ್ಪಿಸಿದರು. ಆ ಹಳೆ ಕಕ್ಷಿಗಾರ ಸುಂಕ ತೆರದೆ ಸಾಮಾಗ್ರಿಗಳನ್ನು ಕಳ್ಳಸಾಗಾಟ ಮಾಡಿದ್ದ. ಮರ್ಯಾದೆಯ ಪ್ರಶ್ನೆ ಬಂದಾಗ ಕಕ್ಷಿಗಾರ ಗಾಂಧೀಜಿಯ ಮುಂದೆ ಸತ್ಯವನ್ನೇ ಹೇಳಿದ. ಗಾಂಧೀಜಿ ತಪ್ಪನ್ನೊಪ್ಪಿಕೊಂಡು, ಶಿಕ್ಷೆಯನ್ನು ಸ್ವೀಕರಿಸಲು ಅವನಿಗೆ ಸಲಹೆ ನೀಡಿದರು. ತಾವೇ ಆಟಾರ್ನಿ ಜನರಲ್ ಅವರನ್ನು ಮತ್ತು ಸುಂಕದ ಅಧಿಕಾರಿಯನ್ನು ಭೇಟಿಮಾಡಿ ಪ್ರಕರಣದ ವಿವರಗಳನ್ನು ತಿಳಿಸಿದರು. ಗಾಂಧೀಜಿಯ ವರದಿಯನ್ನು ಅಧಿಕಾರಿಗಳಾರೂ ಪ್ರಶ್ನಿಸಲಿಲ್ಲ ಮತ್ತು ಆ ಕಕ್ಷಿಗಾರನಿಗೆ ಕೇವಲ ದಂಡವನ್ನಷ್ಟೇ ವಿಧಿಸಿ ಬಿಟ್ಟುಬಿಡಲಾಯ್ತು. ತನ್ನ ಕೃತಜ್ಞತೆಯನ್ನು ಸೂಚಿಸುವ ಸಲುವಾಗಿ ಆ ಕಕ್ಷಿಗಾರ ಇಡೀ ಪ್ರಕರಣದ ಸಂಗತಿಗಳನ್ನು ಮುದ್ರಿಸಿ, ಮುದ್ರಿತ ಹಾಳೆಯನ್ನು ತನ್ನ ಕಚೇರಿಯಲ್ಲಿ ಎಲ್ಲರಿಗೂ ಕಾಣುವಂತೆ ತೂಗುಹಾಕಿದ.

ಇನ್ನೊಂದು ಸಂದರ್ಭದಲ್ಲಿ ಅವರ ಕಕ್ಷಿಗಾರನ ದಾಖಲೆಗಳಲ್ಲಿ ಲೆಕ್ಕಗಳನ್ನು ತಪ್ಪಾಗಿ ಬರೆಯಲಾಗಿತ್ತು. ಆ ತಪ್ಪನ್ನು ತಾವೇ ಸ್ವತಃ ಎದುರು ಪಕ್ಷದ ವಕೀಲರಿಗೆ

ತೋರಿಸಿ, ನಂತರ ಗಾಂಧೀಜಿ ಸಮರ್ಥವಾಗಿ ವಾದಿಸಿದರು. ನ್ಯಾಯಾಧೀಶರು ಈ ವಿಪರೀತ ನಡತೆಗಾಗಿ ಗಾಂಧೀಜಿಯವರನ್ನು ಆಪಾದಿಸಿದರೂ, ಇವರ ಕಕ್ಷಿಗಾರನ ಪರವಾಗಿಯೇ ತೀರ್ಪು ನೀಡಿದರು. "ಒಂದು ವೇಳೆ ಗಾಂಧೀಜೀ ತಮ್ಮ ತಪ್ಪನ್ನು ಒಪ್ಪಿಕೊಳ್ಳದೇ ಇದ್ದಿದ್ದರೆ ನೀವೇನು ಮಾಡುತ್ತಿದ್ದಿರಿ?" ಎಂದು ಎದುರು ಪಕ್ಷದ ವಕೀಲರನ್ನು ನ್ಯಾಯಾಧೀಶರು ಪ್ರಶ್ನಿಸಿದರು ಕೂಡ. ಗಾಂಧೀಜಿ ನುರಿತ, ಪಾಟೀಸವಾಲುಗಾರರಾಗಿದ್ದರು. ಎಲ್ಲ ನ್ಯಾಯವಾದಿಗಳೂ, ನ್ಯಾಯಾಧೀಶರೂ ಅವರನ್ನು ಗೌರವಿಸುತ್ತಿದ್ದರು. ಅವರಿಗೆ ಅನೇಕ ಬಿಳಿಯ ಕಕ್ಷಿಗಾರರೂ ಇದ್ದರು. ದಕ್ಷಿಣ ಆಫ್ರಿಕಾ ಮತ್ತು ಭಾರತ ಎರಡೂ ದೇಶಗಳಲ್ಲಿ ಯೂರೋಪಿಯನರಿಗೆ ವಿರುದ್ಧವಾದ ಕೇಸುಗಳಲ್ಲಿ ಭಾರತೀಯರಿಗೆ 100ರಲ್ಲಿ 90ರಷ್ಟು ಅನ್ಯಾಯವಾಗುತ್ತಿತ್ತೆಂದು ಅವರು ಮನಗಂಡರು. ಈ ಕಾರಣಕ್ಕಾಗಿಯೇ ಅವರು "ಭಾರತದಲ್ಲಾಗುವ ಕ್ರೂರ ಕೊಲೆಗಳಿಗಾಗಿ ಒಬ್ಬನೇ ಒಬ್ಬ ಆಂಗ್ಲೇಯನಿಗೆ ಶಾಸನ ರೀತ್ಯಾ ತೀವ್ರ ಶಿಕ್ಷೆ ನೀಡಲಾಗಿದೆಯೆ? ಒಬ್ಬ ಆಂಗ್ಲ ಅಧಿಕಾರಿಯ ವಿಚಾರಣೆಯನ್ನೂ ಮತ್ತು ಉದ್ದೇಶಪೂರ್ವಕವಾಗಿ ನಿರಪರಾಧಿ ನೀಗ್ರೋಗಳ ಮೇಲೆ ಅತ್ಯಾಚಾರ ನಡೆಸಿದ್ದಕ್ಕಾಗಿ ಆತನಿಗಾದ ಕ್ಷುಲ್ಲಕ ಶಿಕ್ಷೆಯನ್ನೂ ನೋಡಿ" ಎಂದು ಹೇಳುವಂತಾಯಿತು.

ಕಠಿಣ ನಿಯಮಗಳನ್ನು ಪಾಲಿಸಿದರೂ, ಕಾನೂನಿನ ಬಗ್ಗೆ ವಿಪರೀತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೂ ಗಾಂಧೀಜಿ ತನ್ನ ವೃತ್ತಿಯಲ್ಲಿ ಮುನ್ನಡೆ ಸಾಧಿಸಿದರು. ಭಾರತದಲ್ಲಿ ಅವರು ಸ್ವಲ್ಪವೇ ಸಮಯ ವಕೀಲ ವೃತ್ತಿ ನಡೆಸಿದರು. ದಕ್ಷಿಣ ಆಫ್ರಿಕಾದಲ್ಲಿ ಅವರ ವೃತ್ತಿಜೀವನ 20 ವರ್ಷಗಳ ಕಾಲ ನಡೆಯಿತು. ಮೊದಲಿಗೆ ಅವರು ಒಳ್ಳೆಯ ಪ್ರದೇಶವೊಂದರಲ್ಲಿ ಮನೆಯೊಂದನ್ನು ಬಾಡಿಗೆಗೆ ಪಡೆದು, ಒಬ್ಬ ವೃತ್ತಿಯಲ್ಲಿ ಮೇಲೇರುತ್ತಿರುವ ಬ್ಯಾರಿಸ್ಟರ್‌ಗೆ ಯೋಗ್ಯವಾದ ರೀತಿಯಲ್ಲಿ ಮನೆಯನ್ನು ಸಜ್ಜುಗೊಳಿಸಿಕೊಂಡರು. ಪೀಠೋಪಕರಣ ಗೃಹಾಲಂಕಾರವೆಲ್ಲ ಯುರೋಪಿಯನ್ ಶೈಲಿಯಲ್ಲೇ ಆಯಿತು. ಆದಿತ್ಯವಾರ ಮತ್ತು ರಜಾದಿನಗಳಲ್ಲಿ ಮನೆಯಲ್ಲಿ ಔತಣ ಕೂಟಗಳು ಏರ್ಪಾಟಾಗುತ್ತಿದ್ದುವು. ತಮ್ಮ ಮನೆಯನ್ನು ಮುಕ್ತವಾಗಿಟ್ಟು ಸಮೀಪದ ಮಿತ್ರರು ಮತ್ತು ತನ್ನ ಕೈಕೆಳಗಿನ ವಕೀಲರು ತನ್ನೊಂದಿಗೆ ಇರುವಂತೆ ಆಹ್ವಾನಿಸುತ್ತಿದ್ದರು.

ಅವರ ಕಚೇರಿ ಮನೆಯಿಂದ ಆರು ಮೈಲುಗಳ ಅಂತರದಲ್ಲಿತ್ತು. ಕೆಲವು ತಿಂಗಳುಗಳ ಕಾಲ ಅಲ್ಲಿಂದಲ್ಲಿಗೆ ಸೈಕಲಿನಲ್ಲಿ ಆಮೇಲೆ ನಡೆದೇ ಹೋಗತೊಡಗಿದರು. ಟ್ರಾಮ್‌ಕಾರುಗಳಲ್ಲಿ ಭಾರತೀಯರಿಗೆ ಮುಂದಿನ ಸಾಲಿನಲ್ಲಿ ಕೂರಲು ಬಿಡುತ್ತಿರಲಿಲ್ಲವಾದ್ದರಿಂದ, ತಮಗೆ ಹಾಗೆ ಪ್ರಯಾಣಿಸಲು ವಿಶೇಷ ಅನುಮತಿ ದೊರೆಯಬಹುದಾಗಿದ್ದರೂ ಅವರು ಪ್ರಯಾಣಿಸುತ್ತಿರಲಿಲ್ಲ. ನಿಧಾನವಾಗಿ ಬಡ ಭಾರತೀಯ ಕೂಲಿಗಾರರೊಡನೆ ತನ್ನನ್ನು ಗುರುತಿಸಿಕೊಳ್ಳಲು ಅವರು ಪ್ರಯತ್ನಿಸಿದರು ಮತ್ತು ಸರಳ ಜೀವನವನ್ನು ಸ್ವೀಕರಿಸಿದರು. ತನ್ನ 40ರ ಹರೆಯದಲ್ಲಿ, ತಿಂಗಳೊಂದಕ್ಕೆ 4000 ರೂ. ಸಂಪಾದಿಸುತ್ತಿದ್ದಾಗ, ಅವರು ತನ್ನ ವೃತ್ತಿಯನ್ನು ತ್ಯಜಿಸಿ ಸಾರ್ವಜನಿಕ ಕೆಲಸಕ್ಕೆ ತನ್ನನ್ನು ಸಮರ್ಪಿಸಿಕೊಂಡರು. ಸಮಾಜಕ್ಕಾಗಿ ತನ್ನದೆಲ್ಲವನ್ನೂ ತ್ಯಜಿಸಿದರು. ತನ್ನ ಕೈಗಳಿಂದ ದುಡಿಯತೊಡಗಿದರು. ಆಶ್ರಮ ತೋಟಗಳಲ್ಲಿ ಜೀವಿಸತೊಡಗಿದರು.

ಅನೇಕ ವರ್ಷಗಳ ನಂತರ ಗಾಂಧೀಜಿ, ತುಂಬ ದುಂದುವೆಚ್ಚದಲ್ಲಿ ನಡೆಯುತ್ತಿದ್ದ ಭಾರತದ ನ್ಯಾಯಾಲಯಗಳಲ್ಲಿ ವಕೀಲರು ಮತ್ತು ಬ್ಯಾರಿಸ್ಟರುಗಳು ಪಡೆಯುತ್ತಿದ್ದ ಮಿತಿಮೀರಿದ ಸಂಭಾವನೆಯನ್ನು ತೀವ್ರವಾಗಿ ಖಂಡಿಸಿದರು. ಆ ಸಂಭಾವನೆಗೂ ಭಾರತದ ಜನತೆಯ ಕಡುಬಡತನಕ್ಕೂ ತಾಳಮೇಳವೇ ಇಲ್ಲವೆಂದರು. ಒಬ್ಬ ವಕೀಲ ತಿಂಗಳೊಂದಕ್ಕೆ 50 ಸಾವಿರದಿಂದ ಒಂದು ಲಕ್ಷ ರೂ.ಗಳವರೆಗೂ ಸಂಪಾದಿಸಬಹುದಗಿತ್ತು. ಗಾಂಧೀಜಿ ಹೇಳಿದರು "ವಕೀಲ ವೃತ್ತಿ, ಲಾಭವೇ ಗುರಿಯಾಗಿರುವ ದಂಧೆಯೇನಲ್ಲ. ವಕೀಲರು ಮತ್ತು ನ್ಯಾಯಾಲಯಗಳ ಮಾಯಾಜಾಲದಲ್ಲಿ ಸಿಲುಕಿಕೊಳ್ಳದೇ ಇದ್ದಿದ್ದರೆ ನಾವು ಹೆಚ್ಚು ಸಂತೋಷದಿಂದ ಜೀವಿಸಬಹುದಾಗಿತ್ತು. ವಕೀಲ ವೃತ್ತಿ ಅನೈತಿಕತೆಯನ್ನು ಬೋಧಿಸುತ್ತದೆ. ಸುಳ್ಳು ಸಾಕ್ಷಿಗಳನ್ನು ಎರಡು ಕಡೆಗಳಲ್ಲೂ ಕೂಡಿಹಾಕಲಾಗುತ್ತದೆ. ಆ ಜನ ಹಣಕ್ಕಾಗಿ ತಮ್ಮ ಆತ್ಮಗಳನ್ನೇ ಮಾರುತ್ತಾರೆ, ಶುದ್ಧನ್ಯಾಯ ಕಡಿಮೆ ವೆಚ್ಚದಲ್ಲಿ ದೊರೆಯುವಂತಾಗಲು ಶಾಸನಯಂತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ಅಗತ್ಯವೆಂಬುದನ್ನು ಗಾಂಧೀಜಿ ಮನಗಂಡರು. ಯಾವ ಸಂಭಾವನೆಯನ್ನೂ ತೆಗೆದುಕೊಳ್ಳದೆ ಬಡಜನರ ಕೇಸುಗಳನ್ನು ತಾವೇ ಸ್ವತಃ ವ್ಯವಹರಿಸತೊಡಗಿದರು. ಕೇಸು ಸಾರ್ವಜನಿಕ ಕೆಲಸಕ್ಕೆ ಸಂಬಂಧಿಸಿದ್ದಾದರೆ ಅದಕ್ಕೆ ಬೇಕಾದ ಅಗತ್ಯದ ವೆಚ್ಚಗಳನ್ನಷ್ಟೇ ಸ್ವೀಕರಿಸುತ್ತಿದ್ದರು.

ಬಡ ಭಾರತೀಯ ವಸಾಹತು ನಿವಾಸಿಗಳನ್ನು ಪುರಸಭೆಯವರು ಕೂಲಿ ವಸತಿ ಪ್ರದೇಶಗಳಿಂದ ಬಲಾತ್ಕಾರವಾಗಿ ಒಕ್ಕಲೆಬ್ಬಿಸಿದಾಗ ಗಾಂಧೀಜಿ ಆ ಕೂಲಿಗಾರರ ಪರ ವಹಿಸಿದರು. ಅವರಿಗಾಗಿ ಕಷ್ಟಪಟ್ಟು ವಾದಿಸಿದರಾದರೂ, ಪ್ರತಿ ಕೇಸಿಗೆ ಕೇವಲ ರೂ.150ರಂತೆ ಸಂಭಾವನೆ ಸ್ವೀಕರಿಸಿದರು. 70 ಕೇಸುಗಳ ಪೈಕಿ ಒಂದರಲ್ಲಿ ಮಾತ್ರ ಸೋಲುಂಟಾಯಿತು. ದೊರೆತ ಸಂಭಾವನೆಯ ಮೊತ್ತದಲ್ಲಿ ಅರ್ಧದಷ್ಟನ್ನು ಒಂದು ಲೋಕೋಪಕಾರಿ ಸಂಸ್ಥೆಯ ನಿರ್ಮಾಣಕ್ಕೆ ದಾನವಾಗಿತ್ತರು.

ತನ್ನ ದೇಶಬಾಂಧವರಿಗೆ ಮಾನವೀಯ ಹಕ್ಕುಗಳನ್ನು ದೊರಕಿಸಿಕೊಡುವ ಸಲುವಾಗಿ, ಅವರು ಸರ್ಕಾರವನ್ನು ವಿರೋಧಿಸಲು ಬೋಧಿಸಿದರು. ಅದಕ್ಕಾಗಿ ದಕ್ಷಿಣ ಆಫ್ರಿಕಾ ಮತ್ತು ಭಾರತ ಎರಡೂ ದೇಶಗಳಲ್ಲಿ ಸೆರೆಮನೆಗಳನ್ನು ಕಂಡರು ಮತ್ತು ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಎದುರಿಸಿದರು. ಅನೇಕ ಬಾರಿ ಅವರಿಗೆ ಸೆರೆವಾಸವಾಯಿತು. ದಕ್ಷಿಣ ಆಫ್ರಿಕಾದಲ್ಲಿ ಯಾವ ನ್ಯಾಯಾಲಯದಲ್ಲಿ ಅವರು 10 ವರ್ಷಗಳ ಕಾಲ ವಕೀಲವೃತ್ತಿ ನಡೆಸಿದರೋ. ಅದೇ ನ್ಯಾಯಾಲಯದ ಕಟಕಟೆಯಲ್ಲಿ ಕೈಕೋಳಗಳೊಂದಿಗೆ ನಿಲ್ಲಬೇಕಾಗಿ ಬಂತು. ಭಾರತದಲ್ಲಿ ಪ್ರಥಮ ಬಾರಿಗೆ ಶಿಕ್ಷೆಯಾದ ನಂತರ ಅವರ ಹೆಸರು ಬ್ಯಾರಿಸ್ಟರ್‌ಗಳ ಪಟ್ಟಿಯಿಂದ ಕಿತ್ತುಹಾಕಲ್ಪಟ್ಟಿತು.

ಗಾಂಧೀಜಿ ಬ್ರಿಟಿಷ್ ರಾಜ್ಯದ ನ್ಯಾಯಾಲಯಗಳೊಂದಿಗೆ ಅಸಹಕಾರ ವ್ಯಕ್ತಪಡಿಸಿ, ಪಂಚಾಯತಿಗಳ ಪುನರುತ್ಥಾನವನ್ನು ಎತ್ತಿಹಿಡಿದರು. ಈ ಕಾನೂನು ಭಂಜಕನ ಕರೆಗೆ ಓಗೊಟ್ಟು ಅನೇಕ ಪ್ರಸಿದ್ಧ ನ್ಯಾಯವಾದಿಗಳು ತಮ್ಮ ವೃತ್ತಿಗೆ ತಿಲಾಂಜಲಿ ಇತ್ತು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ವಕೀಲರ ಸಂಘವೊಂದು ತನಗೆ ನೀಡಿದ ಸನ್ಮಾನಕ್ಕೆ ಉತ್ತರವಾಗಿ ಗಾಂಧೀಜಿ ತಾನು ತನ್ನ ವೃತ್ತಿ ಸಂಸ್ಥೆಯಿಂದಲೇ ಉಚ್ಚಾಟಿತನಾದವನೆಂದೂ, ತಾನೆಂದೂ ಕಾನೂನು ವೃತ್ತಿಯನ್ನು ಮರೆತಿರುವೆನೆಂದೂ ಹೇಳಿದರು. ಕಾನೂನುಗಳ ವಿಶ್ಲೇಷಣೆಗಿಂತ ಹೆಚ್ಚಾಗಿ ಅವರು ಕಾನೂನುಗಳನ್ನು ಮುರಿಯುವುದರಲ್ಲೇ ಹೆಚ್ಚು ಆಸಕ್ತರಾಗಿದ್ದರು.

ಸಿಂಪಿಗ

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಗೆ ಎರಡು ಬಾರಿ ಕಠಿಣ ಶ್ರಮದ (ಸಶ್ರಮ) ಜೈಲುವಾಸ ವಿಧಿಸಲಾಯ್ತು. ಕೆಲವು ವಾರಗಳ ಕಾಲ ದಿನಕ್ಕೆ ಒಂಭತ್ತು ತಾಸುಗಳು ಅವರು ಹರಿದ ಕಂಬಳಿ ತುಂಡುಗಳನ್ನು ಹೊಲಿಯುವ ಮತ್ತು ದಪ್ಪ ಬಟ್ಟೆಗಳಿಂದ ಅಂಗಿ ಜೇಬುಗಳನ್ನು ಕತ್ತರಿಸುವ ಕೆಲಸ ಮಾಡಬೇಕಾಗಿತ್ತು. ತುಂಡುಗಳನ್ನು ಸೇರಿಸಿ ಹೊಲಿಯುವ ಕೆಲಸವನ್ನು ಅವರು ಅವಧಿಗೆ ಮುಂಚಿತವಾಗಿ ಮಾಡಿ ಮುಗಿಸಿ ಇನ್ನೂ ಹೆಚ್ಚು ತುಂಡುಗಳನ್ನು ಕೇಳುತ್ತಿದ್ದರು.

ಭಾರತದ ಸೆರೆಮನೆಯೊಂದರಲ್ಲೂ ಅವರು ಕೆಲವು ದಿನಗಳ ಕಾಲ ಸಿಂಗರ್ ಹೊಲಿಗೆ ಯಂತ್ರವೊಂದರಲ್ಲಿ ಕೆಲಸ ಮಾಡಿದರು. ಅವೆಲ್ಲ ಅವರು ಸ್ವೇಚ್ಛೆಯಿಂದ ಮಾಡಿದ ಸೆರೆಮನೆಯ ಕೆಲಸಗಳು. ಹೊಲಿಗೆ ಯಂತ್ರದ ಕೆಲಸದಲ್ಲಿ ಪ್ರವೀಣರಾಗಲು ಅವರು ಬಯಸಿದರು. ಕೈಗಳ ದುಡಿಮೆಯನ್ನು ಕಸಿದು ಮನುಷ್ಯನನ್ನು ಗುಲಾಮನನ್ನಾಗಿ ಮಾಡುವ, ಬಂಡವಾಳಗಾರರ ಸೊತ್ತಾಗಿರುವ ಬೃಹತ್ ಯಂತ್ರಗಳನ್ನು ಗಾಂಧೀಜಿ ದ್ವೇಷಿಸುತ್ತಿದ್ದರು. ಅತ್ಯಗತ್ಯದ ಶರೀರ ಶ್ರಮದ ಕೆಲಸವನ್ನು ದೂರೀಕರಿಸಲು ಯಂತ್ರಗಳಿಗೆ ಆಸ್ಪದ ಕೊಡಬಾರದೆಂದು ಅವರು ನಂಬಿದ್ದರು. ಭಾರತದ ಸಮಸ್ಯೆ ಕೋಟ್ಯಂತರ ಜನತೆಗೆ ವಿರಾಮವನ್ನೊದಗಿಸುವದಲ್ಲ, ಅವರು ಕೆಲಸವೇ ಇಲ್ಲದ ತಮ್ಮ ಬಿಡುವಿನ ಸಮಯವನ್ನು ಬಳಸುವುದು ಹೇಗೆ ಎಂಬುದೇ ಆಗಿದೆ. ಅವರು ಹೊಲಿಗೆಯ ಯಂತ್ರಕ್ಕೆ ವಿನಾಯತಿ ನೀಡಿದ್ದರು. ಏಕೆಂದರೆ "ಅದು ಇಷ್ಟರವರೆಗೆ ಆವಿಷ್ಕರಿಸಿದ ಅತ್ಯಂತ ಉಪಯೋಗಿ ಯಂತ್ರಗಳಲ್ಲೊಂದಾಗಿದೆ. ಸಿಂಗರ್ ತನ್ನ ಮಡದಿ ತನ್ನ ಕೈಗಳಿಂದ ಹೊಲಿಯುವ ಮತ್ತು ಹೆಣೆಯುವ ತೀರಾ ಪರಿಶ್ರಮದ ಕೆಲಸದಲ್ಲಿ ತೊಡಗಿರುವುದನ್ನು ಕಂಡು ಅವಳ ಮೇಲಿನ ಪ್ರೇಮದಿಂದ ಅವಳ ಶ್ರಮವನ್ನು ತಪ್ಪಿಸುವ ಸಲುವಾಗಿ ಹೊಲಿಯುವ ಯಂತ್ರವನ್ನು ಕಂಡುಹಿಡಿದ. ಆ ಯಂತ್ರದ ಹಿಂದೆ ಪ್ರೇಮವಿದೆ" ಎನ್ನುತ್ತಿದ್ದರು ಗಾಂಧೀಜಿ.

ಗಾಂಧೀಜಿ ಒಮ್ಮೆ ಆಶ್ರಮವಾಸಿ ಮಹಿಳೆಯೊಬ್ಬನಿಗೆ "ನಿನ್ನ ಸೆಲ್ವಾರ್ ಕಮೀಜ್ ಪೋಷಾಕಿನ ಬಗ್ಗೆ ಚಿಂತೆ ಬೇಡ. ಏನೇನು ಉಡುಪು ಬೇಕೋ ಅದನ್ನು ನಾನು ಸಿದ್ಧಪಡಿಸಬಲ್ಲೆ. ಸುಲಭವಾಗಿ ನಾವೊಂದು ಸಿಂಗರ್ ಯಂತ್ರವನ್ನು ಎರವಲು ಪಡೆದು ಕೆಲವೇ ಗಂಟೆಗಳ ಕೆಲಸದಿಂದ ಅಗತ್ಯದ ಉಡುಪುಗಳನ್ನು ತಯಾರಿಸಬಹುದು" ಎಂದು ಬರೆದರು. ಹೊಲಿಗೆಯಲ್ಲಿ ಹೆಮ್ಮೆಪಡಬಹುದಾದಷ್ಟು ಪರಿಣತಿಯನ್ನು ಅವರು ಪಡೆದಿದ್ದರು. ತಮ್ಮ ಮಡದಿಯ ರವಿಕೆಗಳನ್ನು ಅಳತೆಗೆ ಸರಿಯಾಗಿ ಕತ್ತರಿಸಿ ಹೊಲಿಯಬಲ್ಲವರಾಗಿದ್ದರು. ಚರಕದಲ್ಲಿ ನೂತು, ಮಗ್ಗದಲ್ಲಿ ನೇಯ್ದು ತಮ್ಮ ಜುಬ್ಬವನ್ನು ತಾವೇ ಹೊಲಿದುಕೊಳ್ಳುತ್ತಿದ್ದರು. ನುರಿತ ಸಿಂಪಿಗರು ತಮ್ಮ ಚಮ್ಮಾರರು ಗಾಂಧೀಜಿಯ ಆಶ್ರಮವಾಸಿಗಳಿಗೆ ತಮ್ಮ ಉದ್ಯೋಗಗಳಲ್ಲಿ ಉಚಿತ ತರಬೇತಿ ನೀಡುತ್ತಿದ್ದರು.

ನೀಲಿ ತೋಟಗಾರರ ದೌರ್ಜನ್ಯವನ್ನು ಎದುರಿಸುವುದರಲ್ಲಿ ಚಂಪಾರಣ್ಯದ ರೈತರ ಮುಂದಾಳಾಗಿ ಗಾಂಧೀಜಿ ಕೆಲಸಮಾಡುತ್ತಿದ್ದಾಗ, ಬ್ರಿಟಿಷ್ ಪತ್ರಕರ್ತನೊಬ್ಬ ಗಾಂಧೀಜಿಯವರ ಉಡುಪಿನ ಬಗ್ಗೆ ಹೀಯಾಳಿಸಿದ. ಅವನು ಗಾಂಧೀಜಿಯವರು ರೈತರನ್ನು ತನ್ನೆಡೆಗೆ ಒಲಿಸಿಕೊಳ್ಳಲೋಸುಗ ಕೇವಲ ತಾತ್ಕಾಲಿಕವಾಗಿಯಷ್ಟೇ ರಾಷ್ಟ್ರೀಯ ಉಡುಗೆಯನ್ನು ಸ್ವೀಕರಿಸುವರೆಂದು ನಿಂದಿಸಿದ. ಅದಕ್ಕೆ ಉತ್ತರವಾಗಿ ಗಾಂಧೀಜಿ "ಸ್ವದೇಶಿ ಪತ್ರವನ್ನು ಕೈಕೊಂಡವನಾಗಿ ನನ್ನ ಬಟ್ಟೆಗಳು ಈಗ ಸಂಪೂರ್ಣವಾಗಿ ನನ್ನಿಂದ ಅಥವಾ ನನ್ನ ಸಂಗಡಿಗರಿಂದ ಕೈಯಲ್ಲೇ ನೂತವು, ನೇಯ್ದವು ಮತ್ತು ಹೊಲಿಯಲ್ಪಟ್ಟವು" ಎಂದು ಬರೆದರು.

ಮುಂದೆ ಗಾಂಧೀಜಿ ಜುಬ್ಬಾ ಉಪಯೋಗಿಸುವುದನ್ನೇ ಬಿಟ್ಟು ಸೊಂಟಕ್ಕೊಂದು ಪಂಚೆ ಹಾಗೂ ಮೇಲೊಂದು ಅಂಗವಸ್ತ್ರ ಇಷ್ಟನ್ನೇ ಧರಿಸಿದರು. ಆಗಲೂ ಅವರು ತಮ್ಮ ಕರವಸ್ತ್ರ, ಪಂಚೆ ಹಾಗೂ ಅಂಗವಸ್ತ್ರದ ಅಂಚುಗಳನ್ನು ಹೊಲಿದುಕೊಳ್ಳುತ್ತಿದ್ದರು. ಹೊಲಿಗೆಯಲ್ಲಿ ಮಗ್ನರಾಗಿದ್ದಾಗಲೇ ತಮ್ಮ ಕಾರ್ಯದರ್ಶಿಗಳಿಗೆ ಪತ್ರಗಳನ್ನು ಹೇಳಿ ಬರೆಯಿಸುತ್ತಿದ್ದರು. ಆಗಾಖಾನ್ ಅರಮನೆಯಲ್ಲಿ ಬಂಧನದಲ್ಲಿದ್ದಾಗ ಅವರು ಜೈಲು ಸೂಪರಿಂಟೆಂಡೆಂಟರಿಗೆ ಖಾದಿ ಕರವಸ್ತ್ರಗಳನ್ನು ಹುಟ್ಟುಹಬ್ಬದ ಉಡುಗೊರೆಯಾಗಿ ಕೊಡುತ್ತಿದ್ದರು. ಆಗ 74ರ ವಯಸ್ಸಿನಲ್ಲಿದ್ದ ಗಾಂಧೀಜಿ ನೀಡುತ್ತಿದ್ದ ಆ ಕರವಸ್ತ್ರಗಳಲ್ಲಿ ಸೂಪರಿಂಟೆಂಡೆಂಟರ

ಸರಿನ ಮೊದಲ ಅಕ್ಷರಗಳನ್ನು ಮುದ್ದಾಗಿ ಕಸೂತಿ ಕೆಲಸದಿಂದ ೂಲಿದಿರುತ್ತಿದ್ದರು.

ಅವರ ಮಾರ್ಗದರ್ಶನದಲ್ಲಿ ಓರ್ವ ಮಹಿಳೆ ಒಮ್ಮೆ ಗಾಂಧೀಜಿಗೆ ಯವಾದ ಶಾಲೊಂದರ ಮೇಲೆ ಖಾದಿ ಬಟ್ಟೆ ಚೂರುಗಳನ್ನು ಹೊಲಿದು ಸೂತಿ ಹಾಕಿದ್ದರು. ತಮ್ಮ ಬಡ ದೇಶಬಾಂಧವರ ಪ್ರತಿನಿಧಿಯಾಗಿ ಗಾಂಧೀಜಿ ಶಾಲನ್ನು ಹೊದೆದುಕೊಂಡೇ ಚಕ್ರಗೋಷ್ಠಿಯಲ್ಲಿ ಬ್ರಿಟಿಷ್ ಪ್ರಧಾನಿಯ ಕ್ಕದಲ್ಲಿ ಕುಳಿತುಕೊಂಡರು ಮತ್ತು ಬಕಿಂಗ್‌ಹ್ಯಾಂ ಅರಮನೆಯಲ್ಲಿ ನಡೆದ ಚಕ್ರ ೋಷ್ಠಿಯಲ್ಲೂ ಪಾಲ್ಗೊಂಡರು. ಆಡಂಬರಕ್ಕೆ ಅವರೆಂದೂ ಸೊಪ್ಪು ಹಾಕಲಿಲ್ಲ. ದರೆ ಹರಿದ ಕೊಳಕು ಪೋಷಾಕನ್ನು ಸಹಿಸುತ್ತಿರಲಿಲ್ಲ. ಸಭೆಯೊಂದರಲ್ಲಿ ಸಹ ಾರ್ಯಕರ್ತನ ಖಾದಿ ಮೇಲುಹೊದಿಕೆಯಲ್ಲಿ ಒಂದು ತೂತಾಗಿರುವುದನ್ನು ಅವರೊಮ್ಮೆ ಗಮನಿಸಿದರು. ತಕ್ಷಣವೇ ಆ ಕಾರ್ಯಕರ್ತನಿಗೆ ಗಾಂಧೀಜಿ ಹರಿದ ಬಟ್ಟೆಗಳನ್ನುಡುವುದು ಸೋಮಾರಿತನದ ಗುರುತು, ಆದ್ದರಿಂದ ಲಜ್ಜಾಸ್ಪದವಾದುದು. ಆದರೆ ಹರಿದುದನ್ನು ಸೇರಿಸಿ ಹೊಲಿದ ಬಟ್ಟೆಗಳನ್ನು ಧರಿಸುವುದು ಬಡತನವನ್ನು, ವೈರಾಗ್ಯವನ್ನು ಅಥವಾ ಪರಿಶ್ರಮದ ಸ್ವಭಾವವನ್ನು ಸಾರುತ್ತದೆ. ನಿನ್ನ ಚಾದರದ ಮೇಲಿನ ರಂಧ್ರವನ್ನು ನಾನು ಮೆಚ್ಚುವುದಿಲ್ಲ. ಅದು ಬಡತನದ ಅಥವಾ ಸರಳತನದ ಗುರುತಲ್ಲ. ಸೋಮಾರಿತನದ ಗುರುತು" ಎಂದು ಚೀಟಿ ಬರೆದು ಕಳಿಸಿದರು.

ಅಗಸ

ಬ್ಯಾರಿಸ್ಟರ್ ಗಾಂಧಿ ಸ್ವಚ್ಛ ಐರೋಪ್ಯ ಪೋಷಾಕಿನಲ್ಲಿ ನ್ಯಾಯಾಲಯಕ್ಕೆ ಹೋಗುತ್ತಿದ್ದರು. ಪ್ರತಿ ದಿನವೂ ತನ್ನ ಅಂಗಿಗೆ ಹೊಂದಿಕೆಯಾಗುವ ಒಗೆದ ಶುಭ್ರ ಕೊರಳುಪಟ್ಟಿ ಅವರಿಗೆ ಬೇಕಾಗುತ್ತಿತ್ತು. ದಿನ ಬಿಟ್ಟು ದಿನ ಅವರು ಅಂಗಿಯನ್ನು ಬದಲಾಯಿಸುತ್ತಿದ್ದರು. ಅವರ ಅಗಸನ ವೆಚ್ಚವೂ ವಿಪರೀತವಾಗಿತ್ತು. ಅನೇಕ ವೇಳೆ ಅಗಸ ಉಡುಪುಗಳನ್ನು ವಿಳಂಬವಾಗಿಯೇ ಕೊಡುತ್ತಿದ್ದ. ಹೀಗಾಗಿ ಗಾಂಧೀಜಿ ಸಾಕಷ್ಟು ಜತೆ ಉಡುಪುಗಳನ್ನು ಹೊಂದಿಸಿಕೊಳ್ಳಲಿಕ್ಕೆಂದೇ ತುಂಬ ಹಣ ವೆಚ್ಚಮಾಡಬೇಕಾಗುತ್ತಿತ್ತು. ಅಗಸನ ಮನಸ್ವೀ ವರ್ತನೆಯಿಂದಾಗಿ ಗಾಂಧೀಜಿಗೆ ಮೂರು ಡಜನ್ ಅಂಗಿ ಮತ್ತು ಕೊರಳುಪಟ್ಟಿಗಳನ್ನಿರಿಸಿಕೊಂಡರೂ ಸಾಕಾಗುತ್ತಿರಲಿಲ್ಲ.

ಗಾಂಧೀಜಿ ತನ್ನ ವೆಚ್ಚಗಳನ್ನು ಕಡಿಮೆ ಮಾಡಲು ನಿರ್ಧರಿಸಿದರು. ಒಂದು ಬಟ್ಟೆ ಒಗೆಯುವ ಸಲಕರಣೆಗಳ ಪೆಟ್ಟಿಗೆಯನ್ನೇ ಕೊಂಡು ತಂದರು. ಧೋಬಿ ವೃತ್ತಿಯ ವಿವರಗಳ ಒಂದು ಪುಸ್ತಕವನ್ನು ಕೊಂಡು ಜಾತ್ರಗ್ರೆಯಾಗಿ ಅಧ್ಯಯನ ಮಾಡಿದರು. ಚೆನ್ನಾಗಿ ಒಗೆಯುವ ಬಗ್ಗೆ ನಿರ್ದೇಶನಗಳನ್ನು ಪಡೆದ ಮೇಲೆ ತಾನು ಕಲಿತುದನ್ನು ಅನುಷ್ಠಾನಕ್ಕೆ ತರಲು ಪ್ರಾರಂಭಿಸಿದರು. ಬಡ ಕಸ್ತೂರ್‌ಬಾರವರು ಈ ದೃಶ್ಯದ ಮೂಕ ಪ್ರೇಕ್ಷಕರಾಗಿ ಇರುವಂತಿರಲಿಲ್ಲ. ಗಾಂಧೀಜಿ ಆಕೆಗೂ ಬಟ್ಟೆ ಒಗೆಯುವ ಕಲೆಯನ್ನು ಕಲಿಸಿದರು. ಈ ಹೊಸ ಹುಚ್ಚು ಗಾಂಧೀಜಿಯವರ ದಿನಚರಿಗೆ ಇನ್ನೊಂದು ಹೊರೆಯಾಯಿತು. ಆದರೆ ಗಾಂಧೀಜಿ ಸೋಲೊಪ್ಪುವ ಸ್ವಭಾವದವರಾಗಿರಲಿಲ್ಲ. ಧೋಬಿಯ ನಿರಂಕುಶ ವೃತ್ತಿಯಿಂದ ಬಿಡುಗಡೆ ಹೊಂದಿ, ಸ್ವಾವಲಂಬಿಯಾಗಲು ಅವರು ನಿಶ್ಚಯಿಸಿದ್ದರು. ಒಂದು ದಿನ ಅವರು ಕೊರಳಪಟ್ಟಿಯನ್ನು ಒಗೆದು ಅದಕ್ಕೆ ಗಂಜಿ ಹಾಕಿದರು. ಕೆಲಸದಲ್ಲಿ ಸಾಕಷ್ಟು ಅನುಭವವಿಲ್ಲದುದರಿಂದ ಇನ್ನೂ ಚೆನ್ನಾಗಿ ಬಿಸಿಯಾಗದ ಇಸ್ತ್ರಿ ಪೆಟ್ಟಿಗೆಯಿಂದ ಸಾಕಷ್ಟು ಒತ್ತಡ ಹಾಕದೆ ಇಸ್ತ್ರಿ ಮಾಡಿದರು. ಕೊರಳಪಟ್ಟಿ ಸುಟ್ಟುಹೋದೀತೆಂಬ ಭಯವೂ ಇತ್ತು. ಆ ಕೊರಳುಪಟ್ಟಿಯನ್ನೇ ಹಾಕಿಕೊಂಡು ಅವರು ನ್ಯಾಯಾಲಯಕ್ಕೆ ಹೋದರು. ಗಂಜಿ ಹೆಚ್ಚಾದುದರಿಂದ ಅದು ಸೊಟ್ಟಗಾಗಿತ್ತು. ಅವರ ಸ್ನೇಹಿತರು ಅದನ್ನು ನೋಡಿ ತಮ್ಮೊಳಗೇ ನಗಾಡಿಕೊಂಡರು. ಗಾಂಧೀಜಿಗೆ ಇದರಿಂದೇನೂ ಕೆಟ್ಟದೆನಿಸಲಿಲ್ಲ. "ಒಳ್ಳೆಯದು,

ಬಟ್ಟೆ ಒಗೆಯುವುದರಲ್ಲಿ ಇದು ನನ್ನ ಪ್ರಥಮ ಪ್ರಯತ್ನ. ಹೀಗಾಗಿ ಇದಕ್ಕೆ ಗಂಜಿ ಹೆಚ್ಚಾಗಿದೆ. ಆದರೆ ಅದರಿಂದೇನೂ ತೊಂದರೆಯಿಲ್ಲ. ಕನಿಷ್ಠ ಅದು ನಿಮಗಿಷ್ಟು ಮನರಂಜನೆಯನ್ನಾದರೂ ಒದಗಿಸಿತಲ್ಲ" ಎಂದರು ಗಾಂಧೀಜಿ. ಅಷ್ಟರಲ್ಲಿ ಒಬ್ಬ ಮಿತ್ರ "ಇಲ್ಲೇನು ಧೋಬಿಗಳಿಗೆ ಕೊರತೆಯೇ?" ಎಂದು ಕೇಳಿದ. ಗಾಂಧೀಜಿ "ಅಲ್ಲ, ಧೋಬಿಯ ದರ ತುಂಬ ಹೆಚ್ಚು. ಒಂದು ಕೊರಳುಪಟ್ಟಿಯನ್ನು ಒಗೆಯುವದರ ಸರಿ ಸುಮಾರು ಅದರ ಬಲೆಯಷ್ಟೆ ಆಗಿದೆ. ಇಷ್ಟಾಗಿಯೂ, ನಾವು ಎಂದಿನವರೆಗೆ ಧೋಬಿಯ ಮೇಲೆಯೇ ಅವಲಂಬಿಸಿರಬೇಕು? ಬಹುಮಟ್ಟಿಗೆ ನನ್ನ ಬಟ್ಟೆಗಳನ್ನು ನಾನೇ ಒಗೆದುಕೊಳ್ಳುವುದನ್ನು ನಾನು ಇಷ್ಟಪಡುತ್ತೇನೆ" ಎಂದು ಉತ್ತರ ಕೊಟ್ಟರು. ಮುಂದೆ ಗಾಂಧೀಜಿ ನುರಿತ ಧೋಬಿಯೆಂದು ಸಾಬೀತಾದರು.

ತಮ್ಮ ಗುರುವೆಂದು ಗಾಂಧೀಜಿ ಗೌರವಿಸುತ್ತಿದ್ದ ಗೋಪಾಲಕೃಷ್ಣ ಗೋಖಲೆ ಒಮ್ಮೆ ಗಾಂಧೀಜಿಯ ಜತೆಯಲ್ಲಿ ತಂಗಿದ್ದರು. ಗೋಖಲೆಯವರು ದೊಡ್ಡ ಸಮಾರಂಭವೊಂದರಲ್ಲಿ ಪಾಲ್ಗೊಳ್ಳಬೇಕಾಗಿತ್ತು. ಅವರ ಶಾಲು ಮುದುರಿತ್ತು. ಆದರೆ ಧೋಬಿಯಿಂದ ಒಗೆಯಿಸುವಷ್ಟು ಸಮಯವಿರಲಿಲ್ಲ. "ನಾನು ಅದನ್ನು ಚಂದವಾಗಿ ಇಸ್ತ್ರಿ ಮಾಡಿಕೊಡಲೇ?" ಎಂದು ಗಾಂಧೀಜಿ ಕೇಳಿದರು. "ನ್ಯಾಯವಾದಿಯಾಗಿ ನಿಮ್ಮ ಸಾಮರ್ಥ್ಯದ ಮೇಲೆ ನನಗೆ ನಂಬಿಕೆ ಇದೆ. ಆದರೆ ಒಬ್ಬ ಧೋಬಿಯಾಗಲ್ಲ, ನೀವು ನನ್ನ ಶಾಲನ್ನು ಹಾಳು ಮಾಡಿದರೆ?" ಎಂದು ಗೋಖಲೆ ಹೇಳಿದರು. ಗಾಂಧೀಜಿ ಒತ್ತಾಯ ಮಾಡಿ ಶಾಲನ್ನು ಪಡೆದು ಚೆನ್ನಾಗಿ ಇಸ್ತ್ರಿ ಮಾಡಿಕೊಟ್ಟರು. ಗೋಖಲೆಯವರು ಗಾಂಧೀಜಿಯವರ ಕೆಲಸದಿಂದ ಸುಪ್ರೀತರಾದರು. ಗಾಂಧೀಜಿಗೆ ಗೋಖಲೆಯವರ ಮೆಚ್ಚಿಗೆಯಿಂದ ಎಷ್ಟು ಸಂತೋಷವಾಯಿತೆಂದರೆ, "ಇನ್ನು ಇಡೀ ಜಗತ್ತೇ ನನಗೆ ಪ್ರಮಾಣಪತ್ರವೀಯದಿದ್ದರೂ ನಾನದನ್ನು ಗಣನೆಗೆ ತೆಗೆದುಕೊಳ್ಳಲಾರೆ" ಎಂದು ಉದ್ಗರಿಸಿದರು ಗಾಂಧೀಜಿ.

ದಕ್ಷಿಣ ಆಫ್ರಿಕಾದ ಅವರ ಆಶ್ರಮದಲ್ಲಿ ನೀರಿನ ಅಭಾವವಿತ್ತು. ಆಶ್ರಮದ ಹೆಂಗಸರು ದೂರದ ಒರತೆಯೊಂದಕ್ಕೆ ಬಟ್ಟೆಗಳನ್ನು ಒಗೆಯಲು ಹೋಗಬೇಕಾಗುತ್ತಿತ್ತು. ಗಾಂಧೀಜಿ ಅವರಿಗೆ ನೆರವಾಗುತ್ತಿದ್ದರು. ಖಾದಿ ತಯಾರಿಕೆಯ ಪ್ರಾರಂಭದ ದಿನಗಳವು. ಕೈಮಗ್ಗಗಳಲ್ಲಿ ನೇಯ್ದ ಸೀರೆಗಳು ದಪ್ಪವೂ, ಭಾರವಾದವೂ ಆಗಿರುತ್ತಿದ್ದವು. ಅವುಗಳನ್ನು ಉಡಲೇನೋ ಮಹಿಳೆಯರು ಒಪ್ಪಿದರು. ಆದರೆ ಅವುಗಳನ್ನು ಒಗೆಯಬೇಕಾದಾಗ ಗೊಣಗುಟ್ಟತೊಡಗಿದರು.

ಗಾಂಧೀಜಿ ಒಬ್ಬ ಧೋಬಿಯಾಗಿ ತನ್ನ ಸೇವೆ ಸಲ್ಲಿಸಲು ಮುಂದೆ ಬಂದರು. ಇತರರ ಬಟ್ಟೆಗಳನ್ನು ಒಗೆಯಲು ಅವರಿಗೆ ನಾಚಿಕೆ ಎನಿಸುತ್ತಿರಲಿಲ್ಲ. ಅವರೊಮ್ಮೆ ಶ್ರೀಮಂತ ವ್ಯಕ್ತಿಯೊಬ್ಬರ ಅತಿಥಿಯಾಗಿದ್ದರು. ಬಚ್ಚಲ ಮನೆಗೆ ಹೋದಾಗ, ಬೆಲೆಬಾಳುವ ಧೋತಿಯೊಂದು ನೆಲದ ಮೇಲೆ ಬಿದ್ದಿರುವುದನ್ನು ನೋಡಿದರು. ತಮ್ಮ ಸ್ನಾನ ಮುಗಿಸಿ, ತಮ್ಮ ಬಟ್ಟೆಯ ಜೊತೆಯಲ್ಲಿ ಆ ಧೋತಿಯನ್ನೂ ಗಾಂಧೀಜಿ ಒಗೆದು ಬಿಸಿಲಿನಲ್ಲಿ ಒಣಗಿಹಾಕಲು ಒಯ್ದರು. ಸೂರ್ಯನ ಕಿರಣಗಳು ಬಟ್ಟೆಯ ಸೂಕ್ಷ್ಮ ಕ್ರಿಮಿಗಳನ್ನು ನಾಶಪಡಿಸುವುದಷ್ಟೇ ಅಲ್ಲದೆ, ಅವುಗಳನ್ನು ಶುಭ್ರವಾಗಿಸುವುದರಿಂದ, ಬಿಳಿಯ ಬಟ್ಟೆಗಳನ್ನು ಬಿಸಿಲಿನಲ್ಲೇ ಒಣಹಾಕುವುದು ಗಾಂಧೀಜಿಗೆ ಇಷ್ಟವಾಗಿತ್ತು. ಅತಿಥೇಯ ವ್ಯಕ್ತಿ ಗಾಂಧೀಜಿಯ ಕೆಲಸಕ್ಕೆ ಪ್ರತಿರೋಧ ವ್ಯಕ್ತಪಡಿಸಿ "ಬಾಪೂಜಿ ಇದೇನು ಮಾಡುತ್ತಿದ್ದೀರಿ?" ಎಂದರು. ಗಾಂಧೀಜಿಯವರು "ಏಕೆ? ಅದರಲ್ಲೇನು ತಪ್ಪು? ಉತ್ತಮವಾದ ಧೋತಿ ಕೊಳೆಯಾಗಿತ್ತು. ನಾನು ಅದನ್ನು ಒಗೆದೆ. ವಸ್ತುಗಳನ್ನು ಸ್ವಚ್ಛವಾಗಿರಿಸುವ ಸಲುವಾಗಿ ಸ್ವಲ್ಪ ಕೆಲಸ ಮಾಡಲು ನನಗೆ ಲಜ್ಜೆಯೆನಿಸುವುದಿಲ್ಲ" ಎಂದರು. ಗಾಂಧೀಜಿಗೆ ಲಜ್ಜೆಯೆನಿಸಲಿಲ್ಲ ನಿಜ. ಆದರೆ ಅವರ ಅತಿಥೇಯ ವ್ಯಕ್ತಿಗೆ ಲಜ್ಜೆಯೆನಿಸಿತು!

ತನ್ನ ಇಳಿವಯಸ್ಸಿನಲ್ಲೂ ಗಾಂಧೀಜಿ ಸೆರೆಮನೆಯಲ್ಲಿ ಕೆಲವೊಮ್ಮೆ ತನ್ನ ಪಂಚೆ, ಅಂಗವಸ್ತ್ರ ಮತ್ತು ಕರವಸ್ತ್ರಗಳನ್ನು ತಾವೇ ಒಗೆದುಕೊಂಡು, ಸಹ ಕಾರ್ಯಕರ್ತರ ಕೆಲಸದ ಹೊರೆಯನ್ನು ತಗ್ಗಿಸುತ್ತಿದ್ದರು. ಆಗಾಖಾನ್ ಅರಮನೆಯಲ್ಲಿ ಕಸ್ತೂರ್‌ಬಾರವರು ಕೊನೆಯ ಬಾರಿಗೆ ಅಸೌಖ್ಯದಲ್ಲಿದ್ದಾಗ ಅವರು ಬಳಸಿದ ಕರವಸ್ತ್ರಗಳನ್ನು ಗಾಂಧೀಜಿಯವರೇ ಒಗೆದು ಶುಚಿ ಮಾಡುತ್ತಿದ್ದರು.

ತನ್ನ ಜೀವಮಾನವಿಡೀ ಉಡುಪು ತೊಡುಪುಗಳ ಬಗ್ಗೆ ಗಾಂಧೀಜಿ ತುಂಬ ಜಾಗರೂಕರಾಗಿದ್ದರು. ಸಣ್ಣ ಹುಡುಗನಾಗಿದ್ದಾಗ ತನ್ನ ಮಿರುಗುವ ಬಿಳಿ ಮಿಲ್‌ಧೋತಿಯನ್ನು ಇತರ ಹುಡುಗರೊಂದಿಗೆ ಪೈಪೋಟಿಯಿಂದ ಒಗೆದು ಶುಭ್ರವಾಗಿಟ್ಟುಕೊಳ್ಳುತ್ತಿದ್ದರು. ಬಾವಿಯಿಂದ ನೀರು ಸೇದಿ ಬಟ್ಟೆ ಒಗೆದುಕೊಳ್ಳುತ್ತಿದ್ದರು. ಗಾಂಧೀಜಿ ಸರಳ ಅಭ್ಯಾಸಗಳನ್ನು ಮೆಚ್ಚಿಕೊಳ್ಳುತ್ತಿದ್ದರು. ಆದರೆ ಕೊಳಕಾದ, ಹಾಗೂ ಸುಕ್ಕಾದ ಬಟ್ಟೆಗಳನ್ನು ದ್ವೇಷಿಸುತ್ತಿದ್ದರು. ತನ್ನ ಪಂಚೆ, ಮೇಲುಹೊದಿಕೆ ಮತ್ತು ಕರವಸ್ತ್ರಗಳನ್ನು ಸ್ವಚ್ಛವಾಗಿ ಇರಿಸಿಕೊಳ್ಳುತ್ತಿದ್ದರು. ಅವರು ಸ್ವಚ್ಛತೆಯ ಮೂರ್ತಿಯಾಗಿದ್ದರು.

ಕ್ಷೌರಿಕ

ದಕ್ಷಿಣ ಆಫ್ರಿಕಾಕ್ಕೆ ಬಂದ ಒಂದು ವಾರದ ಬಳಿಕ ಗಾಂಧೀಜಿಯವರು ಒಮ್ಮೆ ದೊಡ್ಡ ನಗರವೊಂದರಲ್ಲಿ ತಮ್ಮ ವಕೀಲಿ ಕೆಲಸ ನಿಮಿತ್ತವಾಗಿ ಒಂದು ರಾತ್ರಿ ಉಳಿದುಕೊಳ್ಳಬೇಕಾಯಿತು. ಒಂದು ಟ್ಯಾಕ್ಸಿಯನ್ನು ಗೊತ್ತುಮಾಡಿ, ನಗರದ ಪ್ರಮುಖ ಹೋಟೆಲೊಂದಕ್ಕೆ ತನ್ನನ್ನು ಕರೆದೊಯ್ಯುವಂತೆ ಟ್ಯಾಕ್ಸಿಯವನಿಗೆ ಗಾಂಧೀಜಿ ತಿಳಿಸಿದರು. ಹೋಟೆಲಿನ ಮ್ಯಾನೇಜರನ್ನು ಭೇಟಿಮಾಡಿ ತನಗೊಂದು ಕೊಠಡಿ ಒದಗಿಸಬೇಕೆಂದು ಕೇಳಿಕೊಂಡರು. ಆ ಬಿಳಿಯ ಮ್ಯಾನೇಜರ್, ಗಾಂಧೀಜಿಯವರನ್ನೊಮ್ಮೆ ಅಡಿಯಿಂದ ಮುಡಿಯವರೆಗೆ ನೋಡಿ "ಇಲ್ಲಿ ಎಲ್ಲ ಕೊಠಡಿಗಳೂ ಭರ್ತಿಯಾಗಿದೆ. ಯಾವುದೂ ಖಾಲಿ ಇಲ್ಲ" ಎಂದು ವಿಷಾದ ವ್ಯಕ್ತಪಡಿಸಿದ. ಗಾಂಧೀಜಿಯವರು ಆ ರಾತ್ರಿಯನ್ನು ಭಾರತೀಯ ಮಿತ್ರನೊಬ್ಬನ ಅಂಗಡಿಯಲ್ಲಿ ಕಳೆಯಬೇಕಾಯಿತು. ತನಗಾದ ಅನುಭವವನ್ನು ಮಿತ್ರನೊಡನೆ ಹೇಳಿದಾಗ ಆತ "ಹೋಟೆಲೊಂದರಲ್ಲಿ ಪ್ರವೇಶ ದೊರಕಿಸಲು ನೀವು ನಿರೀಕ್ಷಿಸುವುದಾದರೂ ಹೇಗೆ?" ಎಂದು ಕೇಳಿದರು. ಆಶ್ಚರ್ಯದಿಂದ ಗಾಂಧೀಜಿ ಅದೇಕೆ ನಿರೀಕ್ಷಿಸಬಾರದೆಂದು ಪ್ರಶ್ನಿಸಿದರು. "ಒಳ್ಳೆಯದು, ಕಾಲಕ್ರಮೇಣ ಪ್ರತಿಯೊಂದೂ ನಿಮಗೆ ತಿಳಿಯುವುದು" ಎಂದಷ್ಟೇ ಅವರ ಮಿತ್ರರು ಹೇಳಿದರು. ನಿಜಕ್ಕೂ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ಅನುಭವಿಸುತ್ತಿದ್ದ ಅಪಮಾನಗಳನ್ನು ಗಾಂಧೀಜಿ ಒಂದೊಂದಾಗಿ ಅರಿತರು. ಅವರನ್ನು ಹೊಡೆಯಲಾಯಿತು. ಗುದ್ದಿ ಹಣ್ಣು ಮಾಡಲಾಯಿತು. ಅವರು ಬೂಟುಕಾಲಿನಿಂದ ತುಳಿಯಲ್ಪಟ್ಟರು. ರೈಲು ಗಾಡಿಯಿಂದ ರೈಲುನಿಲ್ದಾಣದ ಜಗಲಿಗೆ ಹೊರಗೆಸೆಯಲ್ಪಟ್ಟರು. ಕಾಲ್ದಾರಿಯಿಂದ ತಳ್ಳಲ್ಪಟ್ಟರು. ಏಕೆಂದರೆ ಅವರೊಬ್ಬ ವರ್ಣೀಯ ಭಾರತೀಯರಾಗಿದ್ದರು. ಎಷ್ಟಾದರೂ ಮನುಷ್ಯರೆಲ್ಲ ಒಬ್ಬನೇ ದೇವನ ಮಕ್ಕಳು ಎಂದೊಪ್ಪುವ ಕ್ರೈಸ್ತಮತ ಪ್ರೇಮದ ಮತವಾಗಿತ್ತು. ಹೀಗಿದ್ದೂ ಬಿಳಿಯರು ಏಕೆ "ಕರಿಯರನ್ನು" ದ್ವೇಷಿಸಿ ಅವರೊಡನೆ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದರೆಂದು ಅವರಿಗೆ ಅರ್ಥವಾಗುತ್ತಿರಲಿಲ್ಲ.

ಒಂದು ದಿನ ಅವರು ಕ್ಷೌರದಂಗಡಿಯೊಂದಕ್ಕೆ ಕ್ಷೌರ ಮಾಡಿಸಿಕೊಳ್ಳಲು ಹೋದರು. "ನಿಮಗೇನು ಬೇಕು?" ಕ್ಷೌರದಂಗಡಿಯವನು ಕೇಳಿದ. "ನನಗೆ ಕ್ಷೌರ ಮಾಡಿಸಿಕೊಳ್ಳಬೇಕಾಗಿದೆ" ಗಾಂಧೀಜಿ ಹೇಳಿದರು. ವಿಷಾದ ವ್ಯಕ್ತಪಡಿಸಿ ಆ ಬಿಳಿಯ ಕ್ಷೌರಿಕ "ನಾನು ನಿಮಗೆ ಕ್ಷೌರ ಮಾಡಿದರೆ, ನನ್ನೆಲ್ಲ ಗಿರಾಕಿಗಳನ್ನು ಕಳೆದುಕೊಳ್ಳಬೇಕಾದೀತು" ಎಂದ. ಈ ಅಪಮಾನ ಗಾಂಧೀಜಿಯ ಮನಸ್ಸಿನಲ್ಲಿ ಆಳವಾಗಿ ನಾಟಿತು. ಅಪಮಾನದ ನೋವನ್ನು ಸಹಿಸುವುದರಿಂದ ಉಪಯೋಗವಿಲ್ಲವೆಂದು ತಿಳಿದು ಗಾಂಧೀಜಿ, ಪತ್ರಿಕೆಗಳಲ್ಲಿ ಈ ಬಗ್ಗೆ ಲೇಖನಗಳನ್ನು ಬರೆದರು. ತಾವು ಸ್ವಾವಲಂಬಿಯಾಗಿ ತನ್ನ ವ್ಯವಹಾರಗಳನ್ನು ತಾವೇ ನಡೆಸಿಕೊಳ್ಳಬೇಕೆಂದು ನಿಶ್ಚಯಿಸಿದರು. ತಕ್ಷಣವೇ ಒಂದು ಜತೆ ಕ್ಷೌರದ ಕತ್ತರಿಗಳನ್ನು ಕೊಂಡುಕೊಂಡು ಮನೆಗೆ ತೆರಳಿದರು. ಕನ್ನಡಿಯ ಮುಂದೆ ನಿಂತುಕೊಂಡು ತನ್ನ ತಲೆಗೂದಲನ್ನು ತಾವೇ ಕತ್ತರಿಸಿಕೊಳ್ಳತೊಡಗಿದರು. ಮುಖ ಕ್ಷೌರವನ್ನು ತಾವೇ ಮಾಡಿಕೊಳ್ಳಬಲ್ಲರಾಗಿದ್ದರೂ ತಲೆಗೂದಲನ್ನು ತಾನೇ ಕತ್ತರಿಸಿಕೊಳ್ಳುವುದು ತುಂಬಾ ಕಠಿಣ ಕೆಲಸವಾಗಿರಲಿಲ್ಲ. ಹೇಗಾದರೂ ಹಿಡಿದ ಕೆಲಸವನ್ನು ಮಾಡಿ ಮುಗಿಸಿದರು. ಆದರೆ ಹಿಂಭಾಗದ ಕೂದಲು ಕಚ್ಚುಕಚ್ಚಾಗಿ ಕತ್ತರಿಸಲ್ಪಟ್ಟಿದ್ದವು. ತಮ್ಮ ಎಂದಿನ ನಿರ್ಲಕ್ಷ್ಯತೆಯಿಂದ ಗಾಂಧೀಜಿ ಮರುದಿನ ನ್ಯಾಯಾಲಯಕ್ಕೆ ಹೋದರು. ವಿದೂಷಕನ ಹಾಗೆ ಕತ್ತರಿಸಲಾಗಿದ್ದ ಗಾಂಧೀಜಿಯವರ ತಲೆಗೂದಲನ್ನು ಕಂಡು ಅವರ ಮಿತ್ರರು ಬಿದ್ದು ಬಿದ್ದು ನಗಲಾರಂಭಿಸಿದರು. ಅವರಲ್ಲೊಬ್ಬ ತಮಾಷೆಯಾಗಿ "ಗಾಂಧೀಯವರೇ ನಿಮ್ಮ ತಲೆಗೂದಲಿಗೇನಾಗಿದೆ? ರಾತ್ರಿ ಇಲಿಗಳೇನಾದರೂ ತಿಂದುಹಾಕಿದವೆ?" ಎಂದು ಕೇಳಿದ. ಗಾಂಧೀಜಿ ಉತ್ತೇಜಿತರಾಗಿ "ಇಲ್ಲ, ಬಿಳಿಯ ನಾಪಿತ ಕರಿಯನೊಬ್ಬನ ಕರಿಗೂದಲನ್ನು ಮುಟ್ಟಲು ನಿರಾಕರಿಸಿದ. ಹಾಗಾಗಿ ನಾನೇ ಅದನ್ನು ಹೇಗಾದರೂ ಕತ್ತರಿಸಿಕೊಳ್ಳಲು ನಿರ್ಧರಿಸಿದೆ" ಎಂದು ಉತ್ತರವಿತ್ತರು.

ಇದು ತಮ್ಮ 28ನೇ ವಯಸ್ಸಿನಲ್ಲಿ ಕ್ಷೌರಕರ್ಮದಲ್ಲಿ ಗಾಂಧೀಜಿಯವರ ಮೊದಲ ಪ್ರಯತ್ನ. ಆಮೇಲೆ ಅವರು ಅನೇಕ ಬಾರಿ ಕತ್ತರಿಗಳನ್ನೂ ಕ್ಷೌರದ ಕತ್ತಿಗಳನ್ನೂ ಉಪಯೋಗಿಸಿದರು. ಅವರ ಆಶ್ರಮದಲ್ಲಿ ಹಣ ತೆತ್ತು ಕ್ಷೌರಿಕರ ಸೇವೆ ಪಡೆಯುವುದನ್ನು ನಿಷೇಧಿಸಲಾಗಿತ್ತು. ಆಶ್ರಮವಾಸಿಗಳೇ ಸರದಿಯಂತೆ ಪರಸ್ಪರರ

ಕ್ಷೌರಿಕ

ದಕ್ಷಿಣ ಆಫ್ರಿಕಾಕ್ಕೆ ಬಂದ ಒಂದು ವಾರದ ಬಳಿಕ ಗಾಂಧೀಜಿಯವರು ಒಮ್ಮೆ ದೊಡ್ಡ ನಗರವೊಂದರಲ್ಲಿ ತಮ್ಮ ವಕೀಲಿ ಕೆಲಸ ನಿಮಿತ್ತವಾಗಿ ಒಂದು ರಾತ್ರಿ ಉಳಿದುಕೊಳ್ಳಬೇಕಾಯಿತು. ಒಂದು ಟ್ಯಾಕ್ಸಿಯನ್ನು ಗೊತ್ತುಮಾಡಿ, ನಗರದ ಪ್ರಮುಖ ಹೋಟೆಲೊಂದಕ್ಕೆ ತನ್ನನ್ನು ಕರೆದೊಯ್ಯುವಂತೆ ಟ್ಯಾಕ್ಸಿಯವನಿಗೆ ಗಾಂಧೀಜಿ ತಿಳಿಸಿದರು. ಹೋಟೆಲಿನ ಮ್ಯಾನೇಜರನ್ನು ಭೇಟಿಮಾಡಿ ತನಗೊಂದು ಕೊಠಡಿ ಒದಗಿಸಬೇಕೆಂದು ಕೇಳಿಕೊಂಡರು. ಆ ಬಿಳಿಯ ಮ್ಯಾನೇಜರ್, ಗಾಂಧೀಜಿಯವರನ್ನೊಮ್ಮೆ ಅಡಿಯಿಂದ ಮುಡಿಯವರೆಗೆ ನೋಡಿ "ಇಲ್ಲಿ ಎಲ್ಲ ಕೊಠಡಿಗಳೂ ಭರ್ತಿಯಾಗಿದೆ. ಯಾವುದೂ ಖಾಲಿ ಇಲ್ಲ" ಎಂದು ವಿಷಾದ ವ್ಯಕ್ತಪಡಿಸಿದ. ಗಾಂಧೀಜಿಯವರು ಆ ರಾತ್ರಿಯನ್ನು ಭಾರತೀಯ ಮಿತ್ರನೊಬ್ಬನ ಅಂಗಡಿಯಲ್ಲಿ ಕಳೆಯಬೇಕಾಯಿತು. ತನಗಾದ ಅನುಭವವನ್ನು ಮಿತ್ರನೊಡನೆ ಹೇಳಿದಾಗ ಆತ "ಹೋಟೆಲೊಂದರಲ್ಲಿ ಪ್ರವೇಶ ದೊರಕಿಸಲು ನೀವು ನಿರೀಕ್ಷಿಸುವುದಾದರೂ ಹೇಗೆ?" ಎಂದು ಕೇಳಿದರು. ಆಶ್ಚರ್ಯದಿಂದ ಗಾಂಧೀಜಿ ಅದೇಕೆ ನಿರೀಕ್ಷಿಸಬಾರದೆಂದು ಪ್ರಶ್ನಿಸಿದರು. "ಒಳ್ಳೆಯದು, ಕಾಲಕ್ರಮೇಣ ಪ್ರತಿಯೊಂದೂ ನಿಮಗೆ ತಿಳಿಯುವುದು" ಎಂದಷ್ಟೇ ಅವರ ಮಿತ್ರರು ಹೇಳಿದರು. ನಿಜಕ್ಕೂ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ಅನುಭವಿಸುತ್ತಿದ್ದ ಅಪಮಾನಗಳನ್ನು ಗಾಂಧೀಜಿ ಒಂದೊಂದಾಗಿ ಅರಿತರು. ಅವರನ್ನು ಹೊಡೆಯಲಾಯಿತು. ಗುದ್ದಿ ಹಣ್ಣು ಮಾಡಲಾಯಿತು. ಅವರು ಬೂಟುಕಾಲಿನಿಂದ ತುಳಿಯಲ್ಪಟ್ಟರು. ರೈಲು ಗಾಡಿಯಿಂದ ರೈಲುನಿಲ್ದಾಣದ ಜಗಲಿಗೆ ಹೊರಗೆಸೆಯಲ್ಪಟ್ಟರು. ಕಾಲ್ದಾರಿಯಿಂದ ತಳ್ಳಲ್ಪಟ್ಟರು. ಏಕೆಂದರೆ ಅವರೊಬ್ಬ ವರ್ಣೀಯ ಭಾರತೀಯರಾಗಿದ್ದರು. ಎಷ್ಟಾದರೂ ಮನುಷ್ಯರೆಲ್ಲ ಒಬ್ಬನೇ ದೇವನ ಮಕ್ಕಳು ಎಂದೊಪ್ಪುವ ಕ್ರೈಸ್ತಮತ ಪ್ರೇಮದ ಮತವಾಗಿತ್ತು. ಹೀಗಿದ್ದೂ ಬಿಳಿಯರು ಏಕೆ "ಕರಿಯರನ್ನು" ದ್ವೇಷಿಸಿ ಅವರೊಡನೆ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದರೆಂದು ಅವರಿಗೆ ಅರ್ಥವಾಗುತ್ತಿರಲಿಲ್ಲ.

ಬಳಕೆಯಲ್ಲಿ ನಿಪುಣರಾಗಿ, ಕನ್ನಡಿ, ಸಾಬೂನು ಅಥವಾ ಬ್ರಶ್ ಯಾವುದೂ ಇಲ್ಲದೆ ಕ್ಷೌರ ಮಾಡಿಕೊಳ್ಳಲು ಕಲಿತರು. ಕ್ಷೌರ ಕರ್ಮದಲ್ಲಿ ಅದೊಂದು ದೊಡ್ಡ ಸಾಧನೆಯೆಂದೇ ಗಾಂಧೀಜಿ ಭಾವಿಸಿರಬೇಕು. ಅವರೊಮ್ಮೆ ಒಬ್ಬ ನಾಪಿತನನ್ನು ಕುರಿತು "ಮುನ್ನೀಲಾಲ್ ನನಗೆ ಕತ್ತಿಯಿಂದ ಚೆನ್ನಾಗಿ ಕ್ಷೌರ ಮಾಡಿದ್ದಾನೆ. ಅವನ ಕ್ಷೌರದ ಕತ್ತಿ ದೇಶಿಯವಾದುದು, ಮತ್ತು ಅವನು ಸಾಬೂನು ಬಳಸದೇ ಕ್ಷೌರ ಮಾಡುತ್ತಾನೆ" ಎಂದು ಹೊಗಳಿದರು. ಅವರ ಕೆಲವು ಅನುಯಾಯಿಗಳು ಈ ಸರಳ ಕ್ಷೌರದ ಹುಚ್ಚನ್ನು ಹಚ್ಚಿಕೊಂಡರು. ದೇಶೀಯ ಕತ್ತಿ ಕ್ಷೌರವನ್ನು ಕಡಿಮೆ ಅಸಹ್ಯಕರವನ್ನಾಗಿ ಮಾಡುತ್ತದೆಂದೂ ಕಂಡುಕೊಂಡರು. ಹಳ್ಳಿಗಳಲ್ಲಿನ ಕ್ಷೌರಿಕರು ತಜ್ಞ ಶಸ್ತ್ರವೈದ್ಯರೂ ಆಗಿದ್ದು, ಶರೀರದಲ್ಲಾದ ಗುಳ್ಳೆಗಳನ್ನು ಒಡೆಯುವುದರಲ್ಲಾಗಲೀ, ಚುಚ್ಚಿದ ಮುಳ್ಳುಗಳನ್ನು ತೆಗೆಯುವುದರಲ್ಲಾಗಲೀ ಪ್ರವೀಣರೆಂದು ಗಾಂಧೀಜಿ ತಿಳಿದಿದ್ದರು. ಆದರೆ ಅವರ ಕೊಳಕಾದ ಉಡುಪುಗಳು ಮತ್ತು ಸಲಕರಣೆಗಳು ಅಸಹ್ಯವನ್ನುಂಟುಮಾಡುತ್ತಿದ್ದವು.

ಸೇವಾಗ್ರಾಮದಲ್ಲೊಮ್ಮೆ ಒಬ್ಬ ಹರಿಜನ ಚಾಕರ ತನಗೆ ವರ್ಧಾಕ್ಕೆ ಹೋಗಬೇಕೆಂದ. ಏಕೆಂದು ಕೇಳಿದಾಗ ಕ್ಷೌರ ಮಾಡಿಸಿಕೊಳ್ಳಲಿಕ್ಕೆಂದ. ಗಾಂಧೀಜಿ "ಈ ಗ್ರಾಮದಲ್ಲೇ ನಿನಗೆ ಕ್ಷೌರ ಮಾಡಿಸಿಕೊಳ್ಳಲು ಸಾಧ್ಯವಿಲ್ಲವೇ?" ಎಂದು ಕೇಳಿದರು. "ಸವರ್ಣ ಕ್ಷೌರಿಕರು ನನಗೆ ಕ್ಷೌರ ಮಾಡುವುದಿಲ್ಲ. ಇಲ್ಲಂತೂ ಹರಿಜನ ನಾಪಿತರಿಲ್ಲ" ಎಂದಾತ ಉತ್ತರವಿತ್ತ. "ಹಾಗಾದರೆ ನಾನಾದರೂ ಆತನ ಕೈಯಲ್ಲಿ ಕ್ಷೌರ ಹೇಗೆ ಮಾಡಿಸಿಕೊಳ್ಳಬಲ್ಲೆ?" ಎಂದು ಹೇಳಿದ ಗಾಂಧೀಜಿ ಆ ಕ್ಷೌರಿಕನಿಂದ ಕ್ಷೌರ ಮಾಡಿಸಿಕೊಳ್ಳುವುದನ್ನೇ ಬಿಟ್ಟರು. ಗ್ರಾಮದಿಂದ ಗ್ರಾಮಕ್ಕೆ ಸಂಚರಿಸುತ್ತಿದ್ದಾಗ ಮುಖ ಕ್ಷೌರ ಮಾಡಿಕೊಳ್ಳಲು ವೇಳೆ ದೊರೆಯುತ್ತಿರಲಿಲ್ಲ. ಅಂತಹ ಸಮಯದಲ್ಲಿ ಮಾತ್ರ ಅವರಿಗೆ ಕ್ಷೌರಿಕನ ಅಗತ್ಯ ಬೀಳುತ್ತಿತ್ತು.

ಖಾದಿ ಪ್ರವಾಸದ ಸಂದರ್ಭದಲ್ಲಿ, ಅವರು ಖಾದಿ ಉಡುಪು ಧರಿಸಿದ ಕ್ಷೌರಿಕನಿಂದಲೇ ಕ್ಷೌರ ಮಾಡಿಸಿಕೊಳ್ಳಲು ಬಯಸುತ್ತಿದ್ದರು. ಅಂತಹವನೊಬ್ಬನನ್ನು ತರಲು ಸ್ವಯಂಸೇವಕರು ಅಲ್ಲಿಂದಿಲ್ಲಿಗೆ ಓಡಾಡಬೇಕಾಗುತ್ತಿತ್ತು. ನಮ್ಮ ಸ್ವದೇಶಿ ವ್ರತದಲ್ಲಿ ಧೋಬಿಗಳನ್ನು ನಾಪಿತರನ್ನೂ ಪಾಲುಗಾರನನ್ನಾಗಿಸಬೇಕು. ನಾಪಿತರು ಸುದ್ದಿಗಳನ್ನು ಹರಡುವುದರಲ್ಲಿ ಗಟ್ಟಿಗರು ಅವರು ಸ್ವದೇಶೀ ಸಂದೇಶವನ್ನು

ಎಲ್ಲೆಡೆ ಹರಡಬಲ್ಲರು" ಎಂದು ಸ್ವಯಂ ಸೇವಕರಿಗೆ ಗಾಂಧೀಜಿ ಹೇಳುತ್ತಿದ್ದರು. ಇನ್ನೊಂದು ಸಂದರ್ಭದಲ್ಲಿ ಗಾಂಧೀಜಿ ಒರಿಸ್ಸಾದಲ್ಲಿ ಕ್ಷೌರಿಕನಿಗಾಗಿ ಕಾಯುತ್ತಿದ್ದರು. ತುಸುಹೊತ್ತಿನಲ್ಲಿ ಕ್ಷೌರದ ಪೆಟ್ಟಿಗೆಯೊಂದಿಗೆ ಸುಸಜ್ಜಿತಳಾಗಿ ಒಬ್ಬ ಹೆಂಸರು ತನ್ನೆಡೆಗೆ ಬರುವುದನ್ನು ಗಾಂಧೀಜಿ ನೋಡಿದರು. ಆಕೆ ಭಾರವಾದ ಕಿವಿಯೋಲೆಗಳು, ಮೂಗಿನ ನತ್ತು, ಕೊರಳ ಸರ, ಕಾಲ್ಗಡಗಗಳು ಮತ್ತು ಕೈಬಳೆಗಳನ್ನು ಧರಿಸಿ ಅಲಂಕೃತಳಾಗಿ ಬಂದಿದ್ದಳು. "ಹಾಗಾದರೆ ನೀನೇ ನನಗೆ ಕ್ಷೌರ ಮಾಡುವಿಯೇನು?" ಎಂದಾಕೆಯನ್ನು ಗಾಂಧೀಜಿ ಪ್ರಶ್ನಿಸಿದರು. ನಸುನಗುತ್ತಾ ಹೌದೆಂದು ಗೋಣು ಅಲ್ಲಾಡಿಸಿ, ಕ್ಷೌರದ ಕತ್ತಿಯನ್ನು ಹರಿತಗೊಳಿಸತೊಡಗಿದಳಾಕೆ. ಗಾಂಧೀಜಿ ಆಕೆಯನ್ನು ನೀನೇಕೆ ಭಾರವಾದ ಆಭರಣಗಳನ್ನು ಧರಿಸಿದ್ದಿ. ಅವು ನಿನ್ನನ್ನು ಸುಂದರಿಯನ್ನಾಗಿ ಮಾಡುತ್ತಿಲ್ಲ, ಅವು ಕೊಳೆಯಿಂದ ತುಂಬಿದ್ದು ವಿಕಾರವಾಗಿವೆ" ಎಂದು ಹೇಳಿದರು. ಕಣ್ಣುಗಳಲ್ಲಿ ನೀರು ತುಂಬಿಕೊಂಡು ಆಕೆ "ಈ ವಿಶೇಷ ಸಂದರ್ಭಕ್ಕೆಂದೇ ನಾನು ಅವುಗಳನ್ನು ಎರವಲಾಗಿ ಪಡೆದುಕೊಂಡೆನೆಂಬುದು ನಿಮಗೆ ಗೊತ್ತೆ? ನಿಮ್ಮಂತಹ ಮಹಾತ್ಮರ ಬಳಿಗೆ ಒಳ್ಳೆಯ ಆಭರಣಗಳಿಲ್ಲದೆ ಹೇಗೆ ಬರಲಿ" ಎಂದಳು. ಗಾಂಧೀಜಿಯ ತಲೆ ಮತ್ತು ಕದಪುಗಳ ಕ್ಷೌರ ಮುಗಿಸಿ ಸಂಭಾವನೆಯನ್ನು ಅವರ ಪಾದಗಳಲ್ಲೇ ಬಿಟ್ಟು, ವಂದಿಸಿ ಹೊರಟುಹೋದಳು.

ಭಂಗಿ

ಗಾಂಧೀಜಿಯ ತಂದೆಯವರಿದ್ದ ರಾಜಕೋಟದ ಮನೆಯಲ್ಲಿ ಮೆಹರ್ ಜಾತಿಗೆ ಸೇರಿದ ಉಕಾ ಎನ್ನುವವನು ಭಂಗಿ ಕೆಲಸವನ್ನು ಮಾಡುತಿದ್ದ. ಗಾಂಧೀಜಿ ಎಲ್ಲಾದರೂ ಉಕಾನನ್ನು ಮುಟ್ಟಿದರೆ ತಾಯಿ ಪುತಲೀಬಾಯಿ ಅವರನ್ನು ಸ್ನಾನ ಮಾಡಲು ಹೇಳುತ್ತಿದ್ದರು. ಬಾಕಿ ವೇಳೆ ವಿಧೇಯ ಮಗನಾಗಿದ್ದ ಗಾಂಧೀಜಿ ಅದನ್ನು ಮೆಚ್ಚುತ್ತಿರಲಿಲ್ಲ. "ಕಶ್ಮಲಗಳನ್ನು ಶುಚಿಗೊಳಿಸುವ ಮೂಲಕ ಉಕಾ ನಮ್ಮ ಸೇವೆ ಮಾಡುತ್ತಾನೆ. ಅವನನ್ನು ಮುಟ್ಟುವುದರಿಂದ ನಾನು ಭ್ರಷ್ಟನಾಗುವುದು ಹೇಗೆ ಸಾಧ್ಯ?" ಎಂದು ವಾದ ಮಾಡುತ್ತಿದ್ದ. "ನಾನು ನಿನ್ನ ಮಾತನ್ನು ಮೀರಲಾರೆ. ಆದರೆ ರಾಮು, ಚಂಡಾಲ ಗುಹನನ್ನು ಆಲಂಗಿಸಿಕೊಂಡನೆಂದು ರಾಮಾಯಣ ಹೇಳುತ್ತದೆ. ರಾಮಾಯಣ ನಮ್ಮನ್ನು ತಪ್ಪು ದಾರಿಗೆ ಎಳೆಯುವುದು ಸಾಧ್ಯವಿಲ್ಲ" ಎಂದು 12 ವರ್ಷದ ಮಗ ತಾಯಿಯೊಡನೆ ವಾದ ಹೂಡುತ್ತಿದ್ದ. ಈ ತರ್ಕಕ್ಕೆ ಸಮಾಧಾನ ಹೇಳುವುದು ಪುತಲೀಬಾಯಿಗೆ ಸಾಧ್ಯವಾಗುತ್ತಿರಲಿಲ್ಲ.

ಭಂಗಿ ಕೆಲಸವನ್ನು ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಕಲಿತರು. ಅವರ ಮಿತ್ರರು ಅವರನ್ನು ಪ್ರೀತಿಯಿಂದ "ಮಹಾಭಂಗಿ" ಎಂದು ಕರೆಯುತ್ತಿದ್ದರು. ಮೂರು ವರ್ಷಗಳ ಕಾಲ ಅಲ್ಲಿದ್ದು ಹೆಂಡತಿ ಮಕ್ಕಳನ್ನು ದಕ್ಷಿಣ ಆಫ್ರಿಕಾಕ್ಕೆ ಕರೆದೊಯ್ಯುವ ಸಲುವಾಗಿ ಗಾಂಧೀಜಿ ಭಾರತಕ್ಕೆ ಬಂದರು. ಬೊಂಬಾಯಿ ಪ್ರಾಂತದಲ್ಲಿ ಆಗ ಪ್ಲೇಗು ರೋಗ ಹರಡಿತ್ತು. ಅದು ರಾಜಕೋಟೆಗೂ ಹಬ್ಬುವ ಭಯವಿತ್ತು. ಗಾಂಧೀಜಿ ಕೂಡಲೇ ರಾಜಕೋಟದ ಸ್ವಾಸ್ಥ್ಯ ನೈರ್ಮಲ್ಯಗಳನ್ನು ಸುಧಾರಿಸಲು ತಮ್ಮ ಸೇವೆ ಸಲ್ಲಿಸಲು ಮುಂದೆ ಬಂದರು. ಪ್ರತಿ ಮನೆಯನ್ನು ಸಂದರ್ಶಿಸಿ, ಶೌಚಗೃಹಗಳನ್ನು ಸ್ವಚ್ಛವಾಗಿರಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಕತ್ತಲೆಯಲ್ಲಿ, ಕೊಳಕು, ದುರ್ಗಂಧ ಬೀರುವ, ರೋಗಾಣುಗಳಿಂದ ತುಂಬಿದ ಮಲದ ಹೊಂಡಗಳನ್ನು ಕಂಡು ಗಾಂಧೀಜಿಗೆ ದಿಗ್ಭ್ರಮೆಯಾಯ್ತು. ಮೇಲ್ತರಗತಿಯ ಕುಟುಂಬಗಳಿಗೆ ಸೇರಿದ ಕೆಲವು ಮನೆಗಳಲ್ಲಂತೂ, ಚರಂಡಿಗಳನ್ನೇ ಪಾಯಿಖಾನೆಗಳನ್ನಾಗಿ ಬಳಸಲಾಗುತ್ತಿದ್ದು, ದುರ್ವಾಸನೆ ಸಹಿಸಲಸಾಧ್ಯವಾಗಿತ್ತು. ಆ ಮನೆಗಳ ನಿವಾಸಿಗಳೊ ಆ ಬಗ್ಗೆ ಅಲಕ್ಷ್ಯದಿಂದಲೇ ಇದ್ದರು. ಬಡ ಅಸ್ಪೃಶ್ಯರು ಅವುಗಳಿಗಿಂತ ಎಷ್ಟೋ

ಪಟ್ಟು ಶುಚಿಯಾದ ಮನೆಗಳಲ್ಲಿ ವಾಸಿಸುತ್ತಿದ್ದರು. ಮತ್ತು ಗಾಂಧೀಜಿಯವರ ಸ್ವಚ್ಛತೆಯ ಕಾರ್ಯಕ್ಕೆ ಬೆಂಬಲವೀಯುತ್ತಿದ್ದರು. ಮಲಮೂತ್ರಗಳಿಗೆ ಬೇರೆ ಬೇರೆ ತೊಟ್ಟಿಗಳನ್ನಿಡಲು ಗಾಂಧೀಜಿ ಸಲಹೆ ನೀಡಿದರು. ಅದು ಸ್ವಚ್ಛತಾ ವ್ಯವಸ್ಥೆಯನ್ನು ಉತ್ತಮಗೊಳಿಸಿತು.

ರಾಜಕೋಟದಲ್ಲಿ ಗಾಂಧೀ ಕುಟುಂಬ ತುಂಬ ಹೆಸರಾಗಿತ್ತು. ಗಾಂಧೀಜಿಯವರ ತಂದೆ, ತಾತಂದಿರು, ರಾಜಕೋಟೆ ಮತ್ತು ನೆರೆಯ ರಾಜ್ಯಗಳಲ್ಲಿ ದೀರ್ಘಕಾಲ ದಿವಾನರಾಗಿ ಸೇವೆ ಸಲ್ಲಿಸಿದ್ದರು. 70 ವರ್ಷಗಳ ಹಿಂದೆ ಪ್ರಧಾನಿಯಾಗಿದ್ದವರ ಬ್ಯಾರಿಸ್ಟರ್ ಮಗನಿಗೆ, ತನ್ನ ಸ್ವಂತ ನಗರದಲ್ಲಿ ಮನೆ ಮನೆಗೆ ತೆರಳಿ ಕೊಳಚೆ ಚರಂಡಿಗಳ ಪರಿಶೀಲನೆ ಮಾಡಬೇಕಾದರೆ ಸಾಕಷ್ಟು ಕೆಚ್ಚೆದೆಯೇ ಬೇಕಾಗಿತ್ತು. ಗಾಂಧೀಜಿ ಅಗತ್ಯಬಿದ್ದಾಗ ತಮ್ಮ ನೈತಿಕ ಸ್ಥೈರ್ಯವನ್ನು ವ್ಯಕ್ತಪಡಿಸುವಲ್ಲಿ ಎಂದೂ ವಿಫಲರಾಗಿಲ್ಲ. ಪಾಶ್ಚಾತ್ಯರ ಅನೇಕ ಪದ್ಧತಿಗಳನ್ನು ಅವರು ಆಗಾಗ ಖಂಡಿಸುತ್ತಿದ್ದರಾದರೂ, ನೈರ್ಮಲ್ಯದ ಪಾಠವನ್ನು ತಾನು ಪಾಶ್ಚಾತ್ಯರಿಂದಲೇ ಕಲಿತುದಾಗಿ ಒಪ್ಪಿಕೊಳ್ಳುತ್ತಿದ್ದರು. ಅಂತಹುದೇ ನೈರ್ಮಲ್ಯ ಪದ್ಧತಿಯನ್ನು ಭಾರತದಲ್ಲಿ ಬೆಳೆಸಲು ಅವರು ಬಯಸಿದ್ದರು.

ದಕ್ಷಿಣ ಆಫ್ರಿಕಾದಿಂದ ಎರಡನೇ ಬಾರಿಗೆ ಭಾರತಕ್ಕೆ ಬಂದಾಗ ಗಾಂಧೀಜಿ ಕಲ್ಕತ್ತಾದ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡರು. ದಕ್ಷಿಣ ಆಫ್ರಿಕಾದಲ್ಲಿ ದೌರ್ಜನ್ಯಕ್ಕೊಳಗಾದ ಭಾರತೀಯರ ಪರವಾಗಿ ಅಧಿವೇಶನದಲ್ಲಿ ವಾದಿಸಲು ಅವರು ಬಂದಿದ್ದರು. ಕಾಂಗ್ರೆಸ್ ಶಿಬಿರದ ನೈರ್ಮಲ್ಯ ವ್ಯವಸ್ಥೆ ಭಯ ಹುಟ್ಟಿಸುವಂತಿತ್ತು. ಕೆಲವು ಪ್ರತಿನಿಧಿಗಳು ತಮ್ಮ ರೂಮುಗಳ ಎದುರಿನ ಜಗಲಿಯನ್ನೇ ಪಾಯಿಖಾನೆಯಾಗಿ ಉಪಯೋಗಿಸುತ್ತಿದ್ದರು. ಬೇರೆಯವರು ಅದನ್ನು ಆಕ್ಷೇಪಿಸುತ್ತಲೂ ಇರಲಿಲ್ಲ. ಗಾಂಧೀಜಿ ಈ ಪರಿಸ್ಥಿತಿಗೆ ತಕ್ಷಣ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಸ್ವಯಂಸೇವಕರೊಡನೆ ಈ ಬಗ್ಗೆ ಅವರು ಮಾತನಾಡಿದಾಗ ಅವರು "ಅದು ನಮ್ಮ ಕೆಲಸವಲ್ಲ. ಝಾಡಮಾಲಿಗಳ ಕೆಲಸ" ಎಂದುಬಿಟ್ಟರು. ಗಾಂಧೀಜಿ ಪೊರಕೆಯೊಂದನ್ನು ಕೇಳಿ ಪಡೆದು ತಾವೇ ಕೊಳೆ ಕಲ್ಮಶಗಳನ್ನು ಗುಡಿಸಿ ಸ್ವಚ್ಛ ಮಾಡಿದರು. ಆಗ ಅವರು ಐರೋಪ್ಯ ಉಡಿಗೆಯಲ್ಲಿದ್ದರು. ಸ್ವಯಂಸೇವಕರು ಗಾಂಧೀಜಿಯ ಕೆಲಸವನ್ನು ಕಂಡು ಆಶ್ಚರ್ಯಚಕಿತರಾದರೂ ಯಾರೊಬ್ಬರೂ ಅವರಿಗೆ ನೆರವು ನೀಡಲು ಮುಂದೆ ಬರಲಿಲ್ಲ.

ಅನೇಕ ವರ್ಷಗಳ ಮೇಲೆ ಗಾಂಧೀಜಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಕರ್ಣಧಾರರಾದಾಗ ಸ್ವಯಂಸೇವಕ ದಳದವರು ಕಾಂಗ್ರೆಸ್ ಶಿಬಿರಗಳಲ್ಲಿ ಭಂಗಿಪಡೆಯೊಂದನ್ನೇ ರಚಿಸಿದರು. ಒಮ್ಮೆ ಕೇವಲ ಬ್ರಾಹ್ಮಣರೇ ಭಂಗಿಗಳಾಗಿ ಕೆಲಸ ನಿರ್ವಹಿಸಿದರು. ಹರಿಪುರ ಕಾಂಗ್ರೆಸ್ ಸಮ್ಮೇಳನದಲ್ಲಿ ಭಂಗಿ ಕೆಲಸಕ್ಕಾಗಿ 2000 ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ವಿಶೇಷ ತರಬೇತಿ ಪಡೆದರು. ಕೊಳೆಯನ್ನು ತೆಗೆಯಲಿಕ್ಕೆಂದೇ ಕೆಲವು ನಿರ್ದಿಷ್ಟ ಜನರನ್ನು ಇರಿಸುವ ಕಲ್ಪನೆಯೇ ಗಾಂಧೀಜಿಗೆ ಸಹನವಾಗುತ್ತಿರಲಿಲ್ಲ. ಭಾರತದಿಂದ ಅಸ್ಪೃಶ್ಯತೆಯನ್ನು ತೊಲಗಿಸಿಬಿಡಲು ಅವರು ಬಯಸಿದ್ದರು.

ಭಾರತೀಯರ ಕೊಳಕು ಅಭ್ಯಾಸಗಳಿಗಾಗಿ ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು ಅವರನ್ನು ಜಿಗುಪ್ಸೆಯಿಂದ ದೂರವಿಡುತ್ತಿದ್ದರು. ಗಾಂಧೀಜಿ ಅವರ ಮನೆಗಳಿಗೆ ಭೇಟಿ ನೀಡಿ, ಪರಿಶೀಲಿಸಿ ಮನೆ, ವಠಾರಗಳನ್ನು ಶುಚಿಯಾಗಿರಿಸುವಂತೆ ಹೇಳುತ್ತಿದ್ದರು. ಆ ಬಗ್ಗೆ ಸಾರ್ವಜನಿಕ ಸಭೆಗಳಲ್ಲಿ ಮಾತನಾಡುತ್ತಿದ್ದರು ಮತ್ತು ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ದರ್ಬಾನಿನಲ್ಲಿನ ಗಾಂಧೀಜಿಯವರ ಮನೆ ವಿದೇಶೀ ಮಾದರಿಯದಾಗಿತ್ತು. ಬಚ್ಚಲ ಮನೆಯಲ್ಲಿ ನೀರು ಹರಿದು ಹೋಗಲು ಮಾರ್ಗವಿರಲಿಲ್ಲ. ತೊಟ್ಟಿಗಳನ್ನೂ ಶೌಚದ ಬಟ್ಟಲುಗಳನ್ನೂ ಬಳಸಲಾಗುತ್ತಿತ್ತು. ತನ್ನೊಡನೆ ವಾಸಿಸುತ್ತಿದ್ದ ಗುಮಾಸ್ತರು ಬಳಸಿದ ಶೌಚದ ಬಟ್ಟಲುಗಳನ್ನು, ಗಾಂಧೀಜಿ ಕೆಲವೊಮ್ಮೆ ತಾವೇ ತೊಳೆದು ಶುಚಿ ಮಾಡುತ್ತಿದ್ದರು. ತಮ್ಮ ಪತ್ನಿ ಕಸ್ತೂರಬಾ ಸಹ ಅದೇ ರೀತಿ ಮಾಡುವಂತೆ ಬಲವಂತ ಮಾಡುತ್ತಿದ್ದರು. ತನ್ನ ಎಳೆ ಪ್ರಾಯದ ಮಕ್ಕಳಿಗೂ ಅವರು ಇದರ ಅಭ್ಯಾಸ ಮಾಡಿಸಿದರು. ಒಮ್ಮೆ ಕಸ್ತೂರಬಾ ಹರಿಜನ ಗುಮಾಸ್ತನೊಬ್ಬ ಬಳಸಿದ ಶೌಚದ ಬಟ್ಟಲನ್ನು ಒಯ್ಯುತ್ತಿದ್ದಾಗ ಹೇಸಿಗೆಯಿಂದ ಮುಖ ಕಿವಿಚಿಕೊಂಡಾಗ ಗಾಂಧೀಜಿ ಆಕೆಯನ್ನು ಗದರಿಸಿಕೊಂಡರು ಮತ್ತು ಆಕೆ ಏನಾದರೂ ಜಾತಿ ನೀತಿಯ ಭೇದವೆಣಿಸುವುದಾದರೆ ಮನೆಯನ್ನೇ ತೊರೆದು ಹೋಗಬೇಕೆಂದು ಹೆದರಿಸಿದರು. ಸಾಬರಮತಿ ಆಶ್ರಮದಲ್ಲಿ ಅಸ್ಪೃಶ್ಯ ದಂಪತಿಗಳನ್ನು ಸೇರಿಸಿಕೊಂಡ ತಪ್ಪಿಗಾಗಿ ಅವರೊಮ್ಮೆ ತಮ್ಮ ಸ್ವಜಾತಿ ಬಾಂಧವರಿಂದ ಬಹಿಷ್ಕಾರಕ್ಕೆ ಒಳಗಾದರು.

ದಕ್ಷಿಣ ಆಫ್ರಿಕಾದ ಸೆರೆಮನೆಯೊಂದರಲ್ಲಿ ಗಾಂಧೀಜಿ ಒಮ್ಮೆ ಕಕ್ಕಸ್ಸು ಶುಚಿ ಮಾಡುವ ಕೆಲಸವನ್ನು ಸ್ವೇಚ್ಛೆಯಿಂದ ಕೈಕೊಂಡರು. ಮುಂದಿನ ಸಲ ಸೆರೆಮನೆ ಅಧಿಕಾರಿಗಳು ಅವರಿಗೆ ಝಾಡಮಾಲಿಯ ಕೆಲಸ ಒಪ್ಪಿಸಿದರು.

ಆ ದೂರ ದೇಶದಲ್ಲಿ 20 ವರ್ಷಗಳ ಕಾಲ ಕಳೆದ ಬಳಿಕ ತನ್ನ 46ನೇ ವರ್ಷದ ಪ್ರಾಯದಲ್ಲಿ ಗಾಂಧೀಜಿ ತನ್ನ ಪರಿವಾರದೊಂದಿಗೆ ಕೊನೆಗೊಮ್ಮೆ ಭಾರತಕ್ಕೆ ಮರಳಿದರು. ಅದೇ ವರ್ಷ ಹರಿದ್ವಾರದಲ್ಲಿ ನಡೆದ ಕುಂಭಮೇಳದಲ್ಲಿ ಅವರು ತಮ್ಮ ಫೀನಿಕ್ಸ್ ಗೆಳೆಯರೊಂದಿಗೆ ಭಂಗಿಯಾಗಿ ಸೇವೆ ಸಲ್ಲಿಸಿದರು. ಅದೇ ವರ್ಷ ಅವರು ಪುಣೆಯಲ್ಲಿನ ಭಾರತ ಸೇವಕ ಸಮಾಜದ ವಸತಿ ಗೃಹಗಳಿಗೆ ಭೇಟಿ ಇತ್ತರು. ಆ ಪುಟ್ಟ ಕಾಲೋನಿಯ ಸದಸ್ಯರು ಗಾಂಧೀಜಿ ತಮ್ಮ ಕಕ್ಕಸ್ಸುಗಳನ್ನು ಶುಚಿ ಮಾಡುತ್ತಿರುವುದನ್ನು ನೋಡಿದರು. ಅವರದನ್ನು ಇಷ್ಟಪಡಲಿಲ್ಲ. ಆದರೆ ಗಾಂಧೀಜಿ, ಆ ತೆರನಾದ ಕೆಲಸಗಳೇ ನಮ್ಮನ್ನು ಸ್ವರಾಜ್ಯಕ್ಕೆ ಅರ್ಹರನ್ನಾಗಿ ಮಾಡುವುದೆಂದು ನಂಬಿದ್ದರು.

ಅನೇಕ ಬಾರಿ ಅವರು ಭಾರತ ಪ್ರವಾಸ ಕೈಕೊಂಡರು. ಎಲ್ಲಿ ಹೋದರೂ, ಒಂದಲ್ಲ ಒಂದು ರೀತಿಯ ಅನೈರ್ಮಲ್ಯ ಅವರಿಗೆ ಕಂಡುಬರುತ್ತಿತ್ತು. ರೈಲು ನಿಲ್ದಾಣಗಳು ಮತ್ತು ಧರ್ಮಛತ್ರಗಳಲ್ಲಿನ ಸಾರ್ವಜನಿಕ ಮೂತ್ರಗಳು, ಕಕ್ಕಸುಗಳು ಕೊಳೆತು ಗಬ್ಬುನಾರುವ ಪರಿಸ್ಥಿತಿ ಭಯಂಕರವಾಗಿತ್ತು. ಬಡಹಳ್ಳಿಗರು ಮತ್ತು ಅವರ ಗಾಡಿ ಎತ್ತುಗಳು ಬಳಸುವ ರಸ್ತೆಗಳು ಯಾವಾಗಲೂ ದುಃಸ್ಥಿತಿಯಲ್ಲೇ ಇರುತ್ತಿದ್ದುವು.

ಪವಿತ್ರ ತೀರ್ಥಗಳಲ್ಲಿನ ನೀರು ಹಾಗೂ ಸ್ನಾನಘಟ್ಟಗಳು ಎಷ್ಟು ಕೊಳಕಾಗಿವೆ ಎನ್ನುವುದರ ಪರಿವೆಯೇ ಇಲ್ಲದೆ ಮುಳುಗು ಹಾಕುವ ಜನರನ್ನು ಗಾಂಧೀಜಿ ನೋಡಿದರು. ಆ ಜನರೇ ನದಿ ತೀರಗಳನ್ನು ಕೊಳಕು ಮಾಡುತ್ತಿದ್ದರು. ಕೊಳೆ ತುಂಬಿಕೊಳ್ಳುತ್ತಿದ್ದ, ಬೆಳ್ಳಿಯ ನಾಣ್ಯಗಳನ್ನು ಅಲ್ಲಲ್ಲಿ ಹುದುಗಿಸಲಾದ, ಚಂದ್ರಕಾಂತ ಶಿಲೆಯಿಂದ ನಿರ್ಮಿಸಲಾದ ನೆಲವನ್ನು ಕಾಶೀ ವಿಶ್ವನಾಥನ ಮಂದಿರದಲ್ಲಿ ಕಂಡಾಗ ಗಾಂಧೀಜಿಗೆ ದುಃಖವಾಯಿತು. ದೇವಮಂದಿರಗಳಿಗೆ ಹೋಗುವ ದಾರಿ ಅಗಲ ಕಿರಿದಾದ ಜಾರುವ ಓಣಿಗಳ ಮೂಲಕವೇ ಏಕೆ ಸಾಗಿದೆ ಎಂದು ಅವರು ಚಿಂತಾಕುಲರಾದರು. ರೈಲು ಬೋಗಿಗಳನ್ನು ಉಗಿದು ಕೊಳಕು ಮಾಡುವ ಪ್ರಯಾಣಿಕರ ಕೆಟ್ಟ ಅಭ್ಯಾಸವನ್ನು ಗಾಂಧೀಜಿ ಖಂಡಿಸಿದರು. ಭಾರತದಲ್ಲಿ ಕೆಲವೇ ಜನರು ಪಾದರಕ್ಷೆಗಳನ್ನು ಬಳಸುವರಾದರೂ, ಪಾದರಕ್ಷೆ ಇಲ್ಲದೆ ಈ ದೇಶದಲ್ಲಿ ಜನ ಓಡಾಡುವುದನ್ನು ಕಲ್ಪಿಸುವುದೂ ಭಯಂಕರ ಎಂದು ಅವರು ಹೇಳಿದರು. ಮುಂಬಯಿಯಂತಹ ನಗರಗಳಲ್ಲೂ, ಜನರು ನಡೆಯುವಾಗ ಅಕ್ಕ

ಪಕ್ಕದ ಮನೆಯವರು ತಮ್ಮ ಮೇಲೆ ಉಗುಳಿಬಿಡುವರೋ ಎಂಬ ಭಯದಿಂದಲೇ ನಡೆಯುತ್ತಾರೆಂದು ಹೇಳಿದರು.

ತನಗೆ ನೀಡಲಾದ ನಾಗರಿಕ ಸನ್ಮಾನಗಳಿಗೆ ಉತ್ತರವಾಗಿ ಗಾಂಧೀಜಿ "ನಿಮ್ಮ ನಗರದ ವಿಶಾಲ ರಸ್ತೆಗಳಿಗೆ ಭವ್ಯ ಬೆಳಕಿನ ವ್ಯವಸ್ಥೆಗಾಗಿ ಮತ್ತು ಸುಂದರವಾದ ಉದ್ಯಾನವನಗಳಿಗಾಗಿ ನಿಮ್ಮನ್ನು ನಾನು ಅಭಿನಂದಿಸುತ್ತೇನೆ. ಆದರೆ ಒಳ್ಳೆಯ ಶೌಚಾಲಯಗಳನ್ನು ಹೊಂದದ, ದಿನದ ಎಲ್ಲ ಸಮಯಗಳಲ್ಲೂ ರಸ್ತೆಗಳನ್ನು ಸ್ವಚ್ಛವಾಗಿರಿಸಿಕೊಳ್ಳದ ನಗರಸಭೆಗೆ, ಅಸ್ತಿತ್ವದಲ್ಲಿರುವ ಹಕ್ಕೇ ಇಲ್ಲ. ಹೆಚ್ಚಿನ ಪುರಸಭೆಗಳು ಎದುರಿಸಬೇಕಾದ ಅತಿ ದೊಡ್ಡ ಸಮಸ್ಯೆ, ನಗರದ ನೈರ್ಮಲ್ಯವೇ ಆಗಿದೆ. ನಿಮ್ಮ ಝಾಡಮಾಲಿಗಳು ಎಂತಹ ಸ್ಥಿತಿಯಲ್ಲಿ ಜೀವಿಸುತ್ತಿರುವರೆಂಬುದನ್ನು ನೀವೆಂದಾದರೂ ಯೋಚಿಸಿದ್ದೀರಾ?" ಎಂದು ಪ್ರಶ್ನಿಸುತ್ತಿದ್ದರು.

ಜನರನ್ನುದ್ದೇಶಿಸಿ ಮಾತನಾಡುತ್ತಾ ಗಾಂಧೀಜಿ "ಪೊರಕೆಗಳನ್ನೂ ಬಕೀಟುಗಳನ್ನೂ, ನೀವು ಕೈಗೆ ತೆಗೆದುಕೊಳ್ಳದೇ ಹೋದರೆ, ನೀವು ನಿಮ್ಮ ಪಟ್ಟಣಗಳನ್ನೂ, ನಗರಗಳನ್ನೂ, ಚೊಕ್ಕಟವಾಗಿರಿಸಿಕೊಳ್ಳಲಾರಿರಿ" ಎನ್ನುತ್ತಿದ್ದರು. ಮಾದರಿ ಶಾಲೆಯೊಂದಕ್ಕೆ ಭೇಟಿ ನೀಡಿದಾಗ ಅಧ್ಯಾಪಕರನ್ನುದ್ದೇಶಿಸಿ, "ವಿದ್ಯಾರ್ಥಿಗಳಿಗೆ ಓದು ಬರಹದ ವಿದ್ಯೆಯಷ್ಟೇ ಅಲ್ಲದೆ ಅವರನ್ನು ನುರಿತ ಅಡಿಗೆಯವರನ್ನಾಗಿಯೂ, ಝಾಡಮಾಲಿಗಳನ್ನಾಗಿಯೂ ತರಬೇತುಗೊಳಿಸುವ ವಿದ್ಯೆಯನ್ನು ನೀಡಿದಾಗಲೇ ನೀವು ನಿಮ್ಮ ಸಂಸ್ಥೆಯನ್ನು ಮಾದರಿ ಸಂಸ್ಥೆಯನ್ನಾಗಿ ಮಾಡುವಿರಿ" ಎಂದರು. "ನೀವೇ ನಿಮ್ಮ ಭಂಗಿಗಳಾದಾಗ ನೀವು ನಿಮ್ಮ ಸುತ್ತಮುತ್ತಲನ್ನು ಸ್ವಚ್ಛವಾಗಿಡುವಿರಿ. ಒಬ್ಬ ನುರಿತ ಭಂಗಿಯಾಗಲು ವಿಕ್ಟೋರಿಯಾ ಕ್ರಾಸ್ ಪದಕವನ್ನು ಪಡೆಯಬೇಕಾದಷ್ಟೇ ಕಾರ್ಯಸಾಹಸಗಳು ಬೇಕು" ಎಂದೂ ಹೇಳುತ್ತಿದ್ದರು.

ಗಾಂಧೀಜಿಯ ಆಶ್ರಮದ ಸುತ್ತುಮುತ್ತಲ ಗ್ರಾಮಸ್ಥರು ಬಹಿರ್ದೆಶೆಗೆ ತೆರಳಿದ ಮೇಲೆ ಮಲವನ್ನು ಮಣ್ಣಿನಿಂದ ಮುಚ್ಚುತ್ತಿರಲಿಲ್ಲ. ಅದು ನಿಶ್ಚಯವಾಗಿಯೂ ಭಂಗಿಯ ಕೆಲಸ. ಮಲವನ್ನು ಕಣ್ಣಿನಿಂದ ನೋಡುವುದೂ ಪಾಪ, ಅದರ ಮೇಲೆ ಮಣ್ಣು ಹಾಕುವುದು ಇನ್ನಷ್ಟೂ ಕೆಟ್ಟುದ್ದು ಎಂದವರು ಎಣಿಸುತ್ತಿದ್ದರು. ಗಾಂಧೀಜಿ ತಾವೇ ಸ್ವತಃ ಆ ಗ್ರಾಮಗಳಲ್ಲಿ ಭಂಗಿ ಕೆಲಸದ ಮೇಲ್ವಿಚಾರಣೆ ನಡೆಸಿದರು.

ಅವರಿಗೆ ಒಂದು ಉದಾಹರಣೆಯಾಗಿ, ಕೆಲವು ತಿಂಗಳುಗಳ ಕಾಲ ತಾವೇ ಕೈಯಲ್ಲಿ ಪೊರಕೆ, ಬಾಲ್ದಿಗಳನ್ನು ಹಿಡಿದುಕೊಂಡು ಗ್ರಾಮಗಳಿಗೆ ತೆರಳುತ್ತಿದ್ದರು. ಮಿತ್ರರೂ, ಆಶ್ರಮದ ಅತಿಥಿಗಳೂ ಅವರೊಂದಿಗೆ ತೆರಳಿ ಕೆಲಸ ಮಾಡುತ್ತಿದ್ದರು. ಬಾಲ್ದಿಗಳ ತುಂಬಾ ಕೊಳೆ, ಮಲಗಳನ್ನು ತುಂಬಿಕೊಂಡು ಹೊಂಡದಲ್ಲಿ ಹಾಕಿ ಮಣ್ಣು ಮುಚ್ಚುತ್ತಿದ್ದರು.

ಅವರ ಆಶ್ರಮದಲ್ಲಿ ಭಂಗಿ ಕೆಲಸವನ್ನು ಆಶ್ರಮವಾಸಿಗಳೇ ಮಾಡುತ್ತಿದ್ದರು. ಗಾಂಧೀಜಿ ಸೂಕ್ತ ಮಾರ್ಗದರ್ಶನವೀಯುತ್ತಿದ್ದರು. ಬೇರೆ ಬೇರೆ ಜನಾಂಗ, ಮತ, ವರ್ಣಗಳ ಜನರು ಅಲ್ಲಿ ವಾಸಿಸುತ್ತಿದ್ದರು. ಆಶ್ರಮದ ವಠಾರದಲ್ಲೆಲ್ಲಿಯೂ ಯಾವುದೇ ಕೊಳೆ ಕಶ್ಮಲವಿರುತ್ತಿರಲಿಲ್ಲ. ಎಲ್ಲ ಕೊಳೆ ಕಶ್ಮಲಗಳನ್ನು ಹೊಂಡದಲ್ಲಿ ಹಾಕಿ ಮುಚ್ಚಲಾಗುತ್ತಿತ್ತು. ತರಕಾರಿ ಸಿಪ್ಪೆ ಹಾಗೂ ಆಹಾರದ ಅವಶೇಷಗಳನ್ನು ಬೇರೆಯೇ ಗೊಬ್ಬರದ ತಿಪ್ಪೆಗೆ ಹಾಕಲಾಗುತ್ತಿತ್ತು. ಮಲವನ್ನು ಅದಕ್ಕೆಂದೇ ನಿರ್ಮಿಸಲಾಗಿದ್ದ ಗುಂಡಿಗೆ ಹಾಕಿ ಒಳ್ಳೆಯ ಗೊಬ್ಬರ ತಯಾರಿಸಲಾಗುತ್ತಿತ್ತು. ಬಚ್ಚಲು ನೀರನ್ನು ತೋಟಗಾರಿಕೆಗೆ ಬಳಸಲಾಗುತ್ತಿತ್ತು. ಒಳಚರಂಡಿ ಯೋಜನೆ ಇಲ್ಲದೆ ಇದ್ದರೂ ಆಶ್ರಮದ ತೋಟದಲ್ಲಿ ದುರ್ವಾಸನೆಯಾಗಲೀ, ಸೊಳ್ಳೆಗಳಾಗಲೀ ಇರಲಿಲ್ಲ. ಗಾಂಧೀಜಿ ಮತ್ತವರ ಸಂಗಡಿಗರು ಸರದಿಯಲ್ಲಿ ಝಾಡಮಾಲಿ ಕೆಲಸವನ್ನು ನಿಭಾಯಿಸುತ್ತಿದ್ದರು. ಗಾಂಧೀಜಿ ತಮ್ಮ ಆಶ್ರಮದಲ್ಲಿ ಬಕೀಟು ಕಕ್ಕಸ್ಸುಗಳನ್ನೂ, ದ್ವಿರಂಧ್ರ ಕಣಿವೆ ಕಕ್ಕಸುಗಳನ್ನೂ ಪ್ರಾರಂಭಿಸಿದರು. ಆಶ್ರಮಕ್ಕೆ ಬರುವ ಎಲ್ಲ ಸಂದರ್ಶಕರಿಗೂ ತಮ್ಮ ಈ ಹೊಸ ಆವಿಷ್ಕಾರಗಳನ್ನವರು ಹೆಮ್ಮೆಯಿಂದ ತೋರಿಸುತ್ತಿದ್ದರು. ಬಡವರು ಮತ್ತು ಶ್ರೀಮಂತರು, ನಾಯಕರು ಮತ್ತು ಕಾರ್ಯಕರ್ತರು, ಭಾರತೀಯರು ಮತ್ತು ವಿದೇಶಿಯರು ಎಲ್ಲರೂ ಈ ಕಕ್ಕಸುಗಳನ್ನೇ ಬಳಸುತ್ತಿದ್ದರು. ಈ ಪ್ರಯೋಗ ಕ್ರಮೇಣ, ಸಂಪ್ರದಾಯ ಮನೋಭಾವದ ಕಾರ್ಯಕರ್ತರು ಮತ್ತು ಆಶ್ರಮದ ಮಹಿಳೆಯರಿಗೆ ಭಂಗಿ ಕೆಲಸದ ಮೇಲಿದ್ದ ಹೇಸಿಗೆ ಪ್ರವೃತ್ತಿಯನ್ನು ತೊಲಗಿಸಿತು.

ಗಾಂಧೀಜಿಗೆ ಎಂದಾದರೂ ಸಣ್ಣಪುಟ್ಟ ನೈರ್ಮಲ್ಯ ಮತ್ತು ಸ್ವಚ್ಛತಾ ಕೆಲಸ ದೊರೆತಾಗ ಆನಂದವಾಗುತ್ತಿತ್ತು. ಜನರ ನೈರ್ಮಲ್ಯ ಪ್ರಜ್ಞೆಯ ಪರೀಕ್ಷೆಗೆ ಅವರ ಮನೆಯ ಕಕ್ಕಸುಗಳ ಸ್ಥಿತಿಯೇ ಸಾಕ್ಷಿ ಎಂದು ಅವರು ತಿಳಿದಿದ್ದರು. 76ನೇ ವಯಸ್ಸಿನಲ್ಲಿ ಅವರು ಹೆಮ್ಮೆಯಿಂದ "ನನ್ನ ಬಿಳಿ ಉಡುಪು ಯಾವುದೇ ಕೊಳೆ ಇಲ್ಲದೆ

ಶುಭ್ರವಾಗಿದೆ. ಅದನ್ನು ನಾನೇ ಒಗೆದುಕೊಳ್ಳುತ್ತೇನೆ" ಎಂದು ಹೇಳಿಕೊಂಡರು. ಅನೇಕ ವೇಳೆ ತಾನೋರ್ವ ಭಂಗಿಯೆಂದೂ, ಝಾಡಮಾಲಿಯಾಗಿಯೇ ಸಾಯುವುದರಲ್ಲಿ ನನಗೆ ತೃಪ್ತಿಯೆಂದೂ ಅವರು ಹೇಳುತ್ತಿದ್ದರು. ತನಗೂ ಅಸ್ಪೃಶ್ಯರ ಜತೆಯಲ್ಲೇ ಬಹಿಷ್ಕಾರ ಹಾಕಲು ಅವರು ಸಂಪ್ರದಾಯವಾದೀ ಹಿಂದೂಗಳನ್ನು ಕೇಳಿಕೊಳ್ಳುತ್ತಿದ್ದರು.

ಆಗಾಗ ಗಾಂಧೀಜಿ ಭಂಗಿಗಳ ಕಾಲೋನಿಗೆ ಭೇಟಿ ನೀಡುತ್ತಿದ್ದರು ಮತ್ತು ಭಂಗಿಗಳು ತಮ್ಮೆಲ್ಲ ದುಃಖದ ನೋವಿನ ಕತೆಗಳನ್ನು ಅವರಿಗೆ ಹೇಳುತ್ತಿದ್ದರು. ಗಾಂಧೀಜಿ ಅವರಿಗೆ, ಅವರ ಭಂಗಿ ಕೆಲಸ ಎಷ್ಟು ಮಾತ್ರಕ್ಕೂ ಅವಮಾನಕರವಾದುದಲ್ಲವೆಂದು ಧೈರ್ಯ ಹೇಳಿ, ಮದ್ಯಪಾನ ಮತ್ತು ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನು ಬಿಡುವಂತೆ ಮನವೊಲಿಸುತ್ತಿದ್ದರು. ಝಾಡಮಾಲಿಗಳ ಮುಷ್ಕರವನ್ನು, ಅವರೆಂದೂ ಬೆಂಬಲಿಸುತ್ತಿರಲಿಲ್ಲ. ಭಂಗಿ ತನ್ನ ಕೆಲಸವನ್ನು ಒಂದು ದಿನವೂ ಬಿಡಬಾರದೆನ್ನುತ್ತಿದ್ದರು.

ಒಬ್ಬ ಆದರ್ಶ ಭಂಗಿ ಹೇಗಿರಬೇಕೆಂದು ಅವರು ಹರಿಜನ ಪತ್ರಿಕೆಯಲ್ಲಿ ಹೀಗೆ ಬರೆದರು. "ಸರಿಯಾದ ರೀತಿಯಲ್ಲಿ ಕಕ್ಕಸುಗಳನ್ನು ರಚಿಸುವ ಹಾಗೂ ಅವುಗಳನ್ನು ಸರಿಯಾಗಿ ಶುಚಿಗೊಳಿಸುವ ರೀತಿ ಅವನಿಗೆ ತಿಳಿದಿರಬೇಕು. ಮಲದ ದುರ್ವಾಸನೆಯನ್ನು ಹೋಗಲಾಡಿಸುವ ಮತ್ತು ಕ್ರಿಮಿನಾಶಕಗಳನ್ನು ಬಳಸಿ ಮಲದಿಂದ ರೋಗಾಣುಗಳು ಉಂಟಾಗದಂತೆ ಮಾಡುವ ವಿಧಾನ ತಿಳಿದಿರಬೇಕು. ಮಲ ಮೂತ್ರಗಳನ್ನು ಗೊಬ್ಬರವಾಗಿ ಪರಿವರ್ತಿಸುವ ಕ್ರಮವನ್ನೂ ಅರಿತಿರಬೇಕು." ಭಂಗಿ ಕೆಲಸವನ್ನು ಬಲಾತ್ಕಾರದ ದುಡಿಮೆಯನ್ನಾಗಿಸುವ ಬದಲಿಗೆ, ಅದನ್ನೊಂದು ಅನಿವಾರ್ಯ ಸಾಮಾಜಿಕ ಸೇವೆಯ ಮಟ್ಟಕ್ಕೇರಿಸಲು ಗಾಂಧೀಜಿ ಬಯಸಿದರು. ತಮ್ಮ ಖಾದಿ ಸಂಚಾರವೊಂದರ ಸಂದರ್ಭದಲ್ಲಿ ಗಾಂಧೀಜಿ ಮಾತನಾಡಲಿದ್ದ ಸಾರ್ವಜನಿಕ ಸಭೆಗೆ ಹಾಜರಾಗಲು ಭಂಗಿಗಳಿಗೆ ಅನುಮತಿ ನಿರಾಕರಿಸಲಾಗಿತ್ತು. ಗಾಂಧೀಜಿಗೆ ಇದು ಗೊತ್ತಾದಾಗ ಸಮಾರಂಭದ ಸಂಯೋಜಕರಿಗೆ "ನಿಮ್ಮ ಸಭೆ ಭಾಷಣಗಳು, ನೀವು ನನಗೆ ನೀಡಬೇಕೆಂದಿರುವ ನಿಧಿ ಎಲ್ಲ ನಿಮ್ಮಲ್ಲೇ ಇರಲಿ. ನಾನಂತೂ ಆ ಅಸ್ಪೃಶ್ಯರ ನಡುವೆಯೇ ಸಭೆ ನಡೆಸಲು ಹೋಗುವೆ. ಯಾರಿಗೆಲ್ಲ ಇಷ್ಟವಿದೆಯೋ ಅವರೆಲ್ಲ ಅಲ್ಲಿಗೇ ಬರಲಿ" ಎಂದು ತಿಳಿಸಿದರು. ತಮ್ಮ ದೇಹಾಂತವಾಗುವ ಎರಡು ವರ್ಷ ಮೊದಲು ಗಾಂಧೀಜಿ ಮುಂಬಯಿ ಮತ್ತು

ಹಲಿಗಳ ಭಂಗಿ ಕಾಲೋನಿಯಲ್ಲಿ ಕೆಲ ದಿನಗಳ ಕಾಲ ತಂಗಿದ್ದರು. ಭಂಗಿಗಳು ವಾಸಿಸುವಂತಹುದೇ ಮನೆಯಲ್ಲಿ, ಅವರು ಸೇವಿಸುವ ಆಹಾರವನ್ನುಂಡೇ ಬದುಕುವ ಇಚ್ಛೆ ಅವರದಾಗಿತ್ತು. ಆದರೆ ಅಂತಹ ಪ್ರಯೋಗಗಳಿಗೆ ಮೀರಿದ ವಯಸ್ಸು ಆಗ ಗಾಂಧೀಜಿಯದಾಗಿತ್ತು. ಅಲ್ಲದೆ ಮಹಾತ್ಮರಾಗಿ ಅವರ ಮೇಲೆ ಹಲವು ವಿಶೇಷ ಸೌಲಭ್ಯಗಳನ್ನು ಹೇರಲಾಗಿತ್ತು.

ಗಾಂಧೀಜಿ ಒಮ್ಮೆ ವೈಸರಾಯರೊಂದಿಗೆ ಅಗತ್ಯದ ಭೇಟಿಗಾಗಿ ಸಿಮ್ಲಾಕ್ಕೆ ಹೋದರು. ಆಗ ತಮ್ಮ ಪ್ರಮುಖ ಸಹಚರರೊಬ್ಬರನ್ನು ಅಲ್ಲಿನ ಭಂಗಿಗಳ ವಸತಿಗಳನ್ನು ನೋಡಿಬರಲು ಕಳುಹಿಸಿದರು. ಆ ಮನೆಗಳು ಪ್ರಾಣಿಗಳು ವಾಸಿಸಲೂ ಅರ್ಹವಾಗಿಲ್ಲವೆಂದು ಅವರಿಗೆ ತಿಳಿದುಬಂದಾಗ ಉದ್ವಿಗ್ನರಾದ ಗಾಂಧೀಜಿ "ಇವತ್ತು ನಾವು ಭಂಗಿಗಳನ್ನು ಮೃಗಗಳಿಗಿಂತಲೂ ಕೀಳಾದ ಸ್ಥಿತಿಗೆ ತಂದಿದ್ದೇವೆ. ಅವರು ಕೆಲವು ಕಾಸುಗಳನ್ನು ಸಂಪಾದಿಸುತ್ತಾರೆ. ಆದರೆ ಅದಕ್ಕಾಗಿ ತಮ್ಮ ಮನುಷ್ಯತ್ವದ ಗೌರವವನ್ನೇ ಕಳೆದುಕೊಳ್ಳುತ್ತಿದ್ದಾರೆ. ದುರ್ಗಂಧದಿಂದ ತುಂಬಿರುವ ಪಾಯಖಾನೆಯ ಗೋಡೆಗಳ ನೆರಳಿನಲ್ಲೇ ಕುಳಿತು ಊಟಮಾಡುವ ಭಂಗಿಯನ್ನು ನೋಡಿ. ಹೃದಯ ಭೇದಿಸಲು ಆ ದೃಶ್ಯ ಸಾಕು" ಎಂದರು. ತಲೆಯ ಮೇಲೆ ಮಲ ಹೊತ್ತು ಸಾಗುವ ಭಂಗಿಯ ದೃಶ್ಯದಿಂದ ಗಾಂಧೀಜಿ ಅಸ್ವಸ್ಥರಾಗುತ್ತಿದ್ದರು. ಸರಿಯಾದ ಸಲಕರಣೆಗಳಿಂದ ಪಾಯಖಾನೆಗಳನ್ನು ಸ್ವಚ್ಛವಾಗಿರಿಸುವುದು ಹೇಗೆಂದು ಅವರು ವಿವರಿಸುತ್ತಿದ್ದರು. ಭಂಗಿ ತನ್ನನ್ನು ತಾನೇ ಕೊಳಕು ಮಾಡಿಕೊಳ್ಳದೆ ಈ ಕೆಲಸವನ್ನು ಕಲಾಪೂರ್ಣವಾಗಿ ನಿರ್ವಹಿಸುವುದನ್ನು ಸ್ವತಃ ಮಾಡಿ ತೋರಿಸುತ್ತಿದ್ದರು.

ಒಂದು ದಿನದ ಮಟ್ಟಿಗೆ ನೀವು ಭಾರತದ ವೈಸ್‌ರಾಯ್ ಆದರೆ ನೀವೇನು ಮಾಡುವಿರಿ" ಎಂದು ಗಾಂಧೀಜಿಯವರನ್ನೊಬ್ಬ ವಿದೇಶೀಯ ಪ್ರಶ್ನಿಸಿದ. ಗಾಂಧೀಜಿ "ವೈಸ್‌ರಾಯರ ಬಂಗಲೆಯ ಸಮೀಪವಿರುವ ನರಕಸದೃಶವಾದ ಭಂಗಿಗಳ ಲಾಯವನ್ನು ಶುಚಿಗೊಳಿಸುವೆ" ಎಂದು ಥಟ್ಟನೆ ಉತ್ತರಿಸಿದರು. "ನಿಮ್ಮ ಅಧಿಕಾರಾವಧಿಯನ್ನು ಇನ್ನೊಂದು ದಿನಕ್ಕೆ ವಿಸ್ತರಿಸಿದರೆ ಆಗ?" ಎಂದು ಕೇಳಿದ ಆತ, "ಮರುದಿನವೂ ನಾನು ಅದೇ ಕೆಲಸವನ್ನು ಮಾಡುವೆ" ಎಂಬುದೇ ಗಾಂಧೀಜಿ ಅವರ ಉತ್ತರವಾಗಿತ್ತು.

ಮೋಚಿ

ತಮ್ಮ 63ನೇ ವಯಸ್ಸಿನಲ್ಲಿ ಗಾಂಧೀಜಿ ವಲ್ಲಭಭಾಯಿ ಪಟೇಲರ ಜತೆ ಎರವಾಡ ಸೆರೆಮನೆಯಲ್ಲಿದ್ದರು. ಪಟೇಲರಿಗೆ ಒಂದು ಜತೆ ಚಪ್ಪಲಿಗಳ ಅಗತ್ಯವಿತ್ತು. ಆದರೆ ಸೆರೆಮನೆಯಲ್ಲಿ ಒಳ್ಳೆಯ ಮೋಚಿ ಇರಲಿಲ್ಲ. ಗಾಂಧೀಜಿ "ನನಗೆ ಒಳ್ಳೆಯ ಚರ್ಮ ದೊರೆತರೆ ನಾನು ನಿನಗೆ ಒಂದು ಜತೆ ಒಳ್ಳೆಯ ಪಾದರಕ್ಷೆಗಳನ್ನು ಮಾಡಬಲ್ಲೆ. ಬಹುಕಾಲದ ಹಿಂದೆ ನಾನು ಕಲಿತ ವಿದ್ಯೆ ಈಗ ನೆನಪಿಗೆ ಬರುವುದೋ ನೋಡೋಣ, ನಾನೊಬ್ಬ ಉತ್ತಮ ಮೋಚಿಯಾಗಿದ್ದೆ. ಸೋದೇಪುರದ ಖಾದಿ ಪ್ರತಿಷ್ಠಾನ ವಸ್ತುಸಂಗ್ರಹಾಲಯದಲ್ಲಿ ನನ್ನ ಈ ಕೆಲಸದ ಮಾದರಿಯನ್ನು ಕಾಣಬಹುದು. ಅವರಿಗೊಂದು ಜತೆ ಪಾದರಕ್ಷೆಗಳನ್ನು ಕಳುಹಿಸಿದ್ದೆ" ಎಂದರು. ಪಟೇಲರಾದರೋ ತಾವು ಆ ಪಾದರಕ್ಷೆಗಳನ್ನು ಕಾಲಿಗೆ ಬಳಸಲಾರದೆಂದೂ, ತಮ್ಮ ತಲೆಗೆ ಅಲಂಕಾರವೆಂದಷ್ಟೇ ಉಪಯೋಗಿಸುವರೆಂದೂ ತಿಳಿಸಿದರು. ಟಾಲ್‌ಸ್ಟಾಯ್ ಆಶ್ರಮದಲ್ಲಿ ತಾನು ಅನೇಕ ಜೊತೆ ಚಪ್ಪಲಿಗಳನ್ನು ತಯಾರಿಸಿದ್ದುದನ್ನೂ ಗಾಂಧೀಜಿ ತಿಳಿಸಿದರು.

ಗಾಂಧೀಜಿ ಮೋಚಿ ಕೆಲಸವನ್ನು ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಜರ್ಮನ್ ಸ್ನೇಹಿತ ಕಾಲೆನ್ ಬಾಕ್‌ರಿಂದ ಕಲಿತರು. ಗಾಂಧೀಜಿ ಈ ವಿದ್ಯೆಯನ್ನು ಇತರ ಅನೇಕರಿಗೆ ಕಲಿಸಿದರು. ಅವರ ಶಿಷ್ಯರನೇಕರು ಸಮಗಾರ ವೃತ್ತಿಯಲ್ಲಿ ಗುರುವನ್ನೇ ಮೀರಿಸಿದರು. ಆಶ್ರಮದ ಹೊರಗಡೆ ಈ ಚಪ್ಪಲಿಗಳನ್ನು ಮಾರಲಾಗುತ್ತಿತ್ತು. ಆ ಸಮಯದಲ್ಲಿ ಷರಾಯಿಗಳ ಜತೆ ಬೂಟುಗಳ ಬದಲು ಚಪ್ಪಲಿಗಳನ್ನು ಧರಿಸುವ ಹೊಸ ಫ್ಯಾಷನ್ ಗಾಂಧೀಜಿಯಿಂದ ಪ್ರಾರಂಭಗೊಂಡಿತು. ಉಷ್ಣಪ್ರದೇಶದಲ್ಲಿ ಪಾದ ಮುಚ್ಚುವ ಬೂಟುಗಳಿಗಿಂತ, ಚಪ್ಪಲಿಗಳೇ ಹೆಚ್ಚು ಅನುಕೂಲವಾಗಿತ್ತು ಮತ್ತು ಚಳಿಗಾಲದಲ್ಲಿ ಕಾಲ್ಚೀಲಗಳನ್ನು ಧರಿಸಿಯೂ ಚಪ್ಪಲಿಗಳನ್ನು ಬಳಸಬಹುದಾಗಿತ್ತು.

ಗಾಂಧೀಜಿಯವರ ಸಲಹೆ ಪಡೆಯುವುದಕ್ಕೆಂದು, ಸರ್ದಾರ್ ಪಟೇಲ್ ನೆಹರೂ ಮತ್ತಿತರ ಕೆಲವರು ಒಮ್ಮೆ ಸೇವಾಗ್ರಾಮಕ್ಕೆ ಹೋದರು. ತರಬೇತಿ ತಂಡವೊಂದಕ್ಕೆ ಗಾಂಧೀಜಿ ಮಾರ್ಗದರ್ಶನವೀಯುತ್ತಿದ್ದರು.

"ಈ ಚರ್ಮದ ಹಾಳೆಗಳು ಇಲ್ಲಿರಬೇಕು, ಈ ಹೊಲಿಗೆಗಳು ಇಲ್ಲಿ ಈ ತೆರನಾಗಿರಬೇಕು ಮತ್ತು ಹೆಚ್ಚು ಒತ್ತಡ ಬೀಳುವ ಹಿಮ್ಮಡಿಯಲ್ಲಿ ಚರ್ಮ ಅಡ್ಡಚೂರುಗಳಿರಬೇಕು." ತಂಡದ ಸದಸ್ಯರು ತಮ್ಮ ತಪ್ಪುಗಳನ್ನು ಗಾಂಧೀಜಿಯಿಂದ ಸರಿಪಡಿಸಿಕೊಳ್ಳುತ್ತಿದ್ದರು. ಭೇಟಿಗೆಂದು ಹೋದ ನಾಯಕರು ಈ ತರಬೇತಿ ತಂಡದವರು ತಮ್ಮ ಸಮಯವನ್ನು ಕಸಿದುಕೊಳ್ಳುತ್ತಿದ್ದಾರೆಂದು ದೂರಿದರು. ಗಾಂಧೀಜಿ ಒಡನೆ "ಅವರು ಕಲಿಯುತ್ತಿರುವ ಪಾಠದ ಬಗ್ಗೆ ಗೊಣಗಿಕೊಳ್ಳಬೇಡಿ, ಬೇಕಾದರೆ ನೀವೂ ನೋಡಿ, ಒಳ್ಳೆಯ ಚಪ್ಪಲಿ ಮಾಡುವುದು ಹೇಗೆಂದು ಕಲಿತುಕೊಳ್ಳಿ" ಎಂದು ಸಲಹೆ ಮಾಡಿದರು.

ಇನ್ನೊಂದು ದಿನ ಗಾಂಧೀಜಿ ಕೆಲವು ಸಹಕಾರ್ಯಕರ್ತರೊಡನೆ ಹಳ್ಳಿಯ ಸಮಗಾರರು ಸತ್ತ ಗೂಳಿಯ ಚರ್ಮ ಸುಲಿಯುವ ವಿಧಾನವನ್ನು ಪೂರ್ಣವಾಗಿ ವೀಕ್ಷಿಸಿದರು. ಆ ಹಳ್ಳಿಯ ಚರ್ಮ ಸುಲಿಯುವ ವಿಧಾನವನ್ನು ಪೂರ್ಣವಾಗಿ ವೀಕ್ಷಿಸಿದರು. ಆ ಹಳ್ಳಿಯ ಮಾದಿಗರು, ನಾಡಕತ್ತಿಯಿಂದ ಚರ್ಮದ ಗುಣಮಟ್ಟ ಸ್ವಲ್ಪವೂ ಕೆಡದಂತೆ ಚರ್ಮ ಸುಲಿಯುವ ರೀತಿಯಿಂದ ಗಾಂಧೀಜಿ ಪ್ರಭಾವಿತರಾದರು. ಗಾಂಧೀಜಿಯ ಮಟ್ಟಿಗೆ ಮನುಷ್ಯ ಶರೀರದ ಚರ್ಮ ಸುಲಿಯುವ, ಅಂಗಾಂಗಗಳನ್ನು ಕೊಲ್ಲುವ ಪ್ರತಿ ವೈದ್ಯಕೀಯ ವಿದ್ಯಾರ್ಥಿಯೂ ಮಾದಿಗನೇ ಆಗಿದ್ದ. ಅಂತಹ ಒಬ್ಬ ವೈದ್ಯನ ವೃತ್ತಿ ಗೌರವಾನಿತ್ವವಾದುದಾಗಿತ್ತು. ಆದರೆ ಭಂಗಿ ಅಥವಾ ಮಾದಿಗನ ವೃತ್ತಿ ತುಚ್ಛವೆಂದು ಎಣಿಸಲಾಗುತ್ತಿತ್ತು. ಅವರು ಹಿಂದೂಗಳ ಪಾಲಿಗೆ ಅಸ್ಪೃಶ್ಯರಾಗಿದ್ದರು.

ಗಾಂಧೀಜಿ ಪಾದರಕ್ಷೆಗಳನ್ನು ತಯಾರಿಸುವುದರಲ್ಲೇ ತೃಪ್ತರಾಗಲಿಲ್ಲ. ಚರ್ಮ ಸುಲಿಯುವ ಸಮಗಾರ ವೃತ್ತಿಯಲ್ಲೂ ನಿಪುಣರಾಗಲು ಬಯಸಿದರು. ಅವರು ಇನ್ನೇನು ಮಾಡಲು ತಾನೇ ಸಾಧ್ಯ? ಜಗತ್ತಿನಾದ್ಯಂತ ಅಷ್ಟೊಂದು ಜನ ಚರ್ಮದ ಪಾದರಕ್ಷೆಗಳನ್ನು ಬಳಸುತ್ತಾರೆ ಮತ್ತು ಅದಕ್ಕಾಗಿ ಬಹುಪಾಲು ಚರ್ಮ ಜೀವಂತ ದನ, ಎತ್ತು, ಕುರಿ ಮತ್ತು ಆಡುಗಳನ್ನು ಕೊಲ್ಲುವ ಮೂಲಕವೇ ಸಂಗ್ರಹಿಸಲ್ಪಡುತ್ತದೆ. ಗಾಂಧೀಜಿ ಅಹಿಂಸೆಯಲ್ಲಿ ನಂಬಿಕೆ ಇರಿಸಿದ್ದರು. ಸಾಯುತ್ತಿರುವ ಪತ್ನಿ, ಕಾಯಿಲೆ ಇದ್ದ ಮಗನಿಗೂ ಗೋಮಾಂಸದ ಕಷಾಯ ಅಥವಾ ಮೊಟ್ಟೆಯನ್ನು ಕೊಡಲು ನಿರಾಕರಿಸಿದ ಮನುಷ್ಯ, ಕಾಲಿಗೆ ಹೊಳೆಯುವ ಚಪ್ಪಲಿಗಳನ್ನು ತಯಾರಿಸಲು ಜೀವಂತ ಪ್ರಾಣಿಗಳನ್ನು ವಧಿಸಲು ಒಪ್ಪುವುದು ದೂರದ ಮಾತೇ ಆಗಿತ್ತು. ಆದರೆ ಅವರಿಗೆ ಚರ್ಮ ಬೇಕಾಗಿತ್ತು.

ಸ್ವಾಭಾವಿಕವಾಗಿ ಸತ್ತ ಪ್ರಾಣಿಗಳ ಚರ್ಮವನ್ನೇ ಬಳಸಲು ಅವರು ನಿರ್ಧರಿಸಿದರು. ಅಂತಹ ಚರ್ಮದಿಂದ ತಯಾರಿಸಿದ ಚಪ್ಪಲಿಗಳು, ಷೂಗಳು, ಅಹಿಂಸಕ ಪಾದರಕ್ಷೆಗಳೆಂದೇ ಹೆಸರಾದುವು. ವಧಿಸಲ್ಪಟ್ಟ ಪ್ರಾಣಿಗಳ ಚರ್ಮವನ್ನು ಸುಲಭವಾಗಿ ಹದಗೊಳಿಸಲು ಬರುತ್ತಿದ್ದುದರಿಂದಲೂ, ಚರ್ಮಾಗಾರಗಳು ಅಹಿಂಸಕ ಚರ್ಮವನ್ನು ಸರಬರಾಜು ಮಾಡುತ್ತಿರಲಿಲ್ಲವಾದ್ದರಿಂದಲೂ ಗಾಂಧೀಜಿಗೆ ತಾವೇ ಚರ್ಮ ಸುಲಿಯುವ ಸಮಗಾರ ವೃತ್ತಿಯನ್ನು ಕಲಿಯುವುದು ಅನಿವಾರ್ಯವಾಯಿತು.

ಭಾರತದಿಂದ ಪ್ರತಿ ವರ್ಷವೂ ಒಂಭತ್ತುಕೋಟಿ ರೂಪಾಯಿ ಮೌಲ್ಯದ ಕಚ್ಚಾ ಚರ್ಮ ರಫ್ತಾಗುತ್ತಿದ್ದುದನ್ನು ಗಾಂಧೀಜಿ ಗಮನಿಸಿದರು. ಅಲ್ಲಿ ವೈಜ್ಞಾನಿಕವಾಗಿ ಸಂಹರಿಸಲ್ಪಟ್ಟು ಕೋಟ್ಯಾಂತರ ರೂಪಾಯಿ ಬೆಲೆಯ ಚರ್ಮದ ಸಿದ್ಧವಸ್ತುಗಳಾಗಿ ಪರಿವರ್ತನೆ ಹೊಂದಿ ಮತ್ತೆ ಭಾರತಕ್ಕೆ ಆಮದಾಗುತ್ತಿತ್ತು. ಇದರಿಂದ ದೇಶಕ್ಕೆ ಆರ್ಥಿಕವಾಗಿ ನಷ್ಟವಾಗುವುದಲ್ಲದೆ, ಕಚ್ಚಾ ಚರ್ಮವನ್ನು ಸಂಸ್ಕರಿಸಿ, ಒಳ್ಳೆಯ ಚರ್ಮದ ಸಿದ್ಧವಸ್ತುಗಳನ್ನಾಗಿ ಮಾರ್ಪಡಿಸುವ ಬುದ್ಧಿಕೌಶಲ್ಯವನ್ನು ಬೆಳೆಸುವ ಅವಕಾಶವೂ ಭಾರತೀಯರಿಗೆ ನಷ್ಟವಾಗುತ್ತಿತ್ತು. ನೂಲುವವರು ಮತ್ತು ನೇಕಾರರಿಗಾದಂತೆ, ನೂರಾರು ಚಮ್ಮಾರರು ಮತ್ತು ಮೋಚಿಗರು ತಮ್ಮ ದೈನಂದಿನ ಗಳಿಕೆಗೆ ಎರವಾದರು. ಚಮ್ಮಾರ ವೃತ್ತಿ ಎಂದಿನಿಂದ ಈ ದೇಶದಲ್ಲಿ ನಿಕೃಷ್ಟವೆಂದು ತಿಳಿಯಲ್ಪಟ್ಟಿತೆಂದು ಗಾಂಧೀಜಿ ಚಿಂತಿಸಿದರು. ಪ್ರಾಚೀನ ಕಾಲದಲ್ಲಿ ಹೀಗಿದ್ದಿರಲು ಸಾಧ್ಯವಿಲ್ಲ. ಇವತ್ತಾದರೋ ಸುಮಾರು ಒಂದು ಮಿಲಿಯ ಜನ ಈ ವೃತ್ತಿಯಲ್ಲಿ ತೊಡಗಿದ್ದಾರೆ. ಅವರೆಲ್ಲ ತಲೆಮಾರುಗಳಿಂದ ಅಸ್ಪೃಶ್ಯರೆನಿಸಿಕೊಂಡಿದ್ದಾರೆ. ಮೇಲ್ಜಾತಿಯ ಜನ ಅವರನ್ನು ಕೀಳಾಗಿ ಕಾಣುತ್ತಿದ್ದಾರೆ. ಅವರು ಕಲೆ, ಶಿಕ್ಷಣ, ಸ್ವಚ್ಛತೆ ಮತ್ತು ಆತ್ಮಗೌರವಗಳಿಗೆ ಎರವಾದ, ನಿಕೃಷ್ಟ ಬದುಕನ್ನು ಬಾಳುತ್ತಿದ್ದಾರೆ. ಚರ್ಮ ಹದಮಾಡುವ ಚಮ್ಮಾರರು, ಭಂಗಿಗಳು ಮತ್ತು ಮೋಚಿಗಳು ಸಮಾಜದ ಸೇವೆಯಲ್ಲಿ ತೊಡಗಿದ್ದಾರೆ ಮತ್ತು ಪ್ರಯೋಜನಕರವಾದ ಕೆಲಸದಲ್ಲಿ ನಿರತರಾಗಿದ್ದಾರೆ. ಆದರೂ ಜಾತಿ ಪದ್ಧತಿಯ ಕ್ರೂರ ಅನುಷ್ಠಾನ ಸಮಾಜದ ಒಂದು ಅಂಗವಾದ ಅವರು ದಯನೀಯ ಬದುಕನ್ನು ಬಾಳುವಂತೆ ಬಲಾತ್ಕರಿಸಿದೆ. ಇತರ ದೇಶಗಳಲ್ಲಿ ಒಬ್ಬ ಮನುಷ್ಯ ಚಮ್ಮಾರನ ವೃತ್ತಿಯನ್ನೋ, ಮೋಚಿ ಕೆಲಸವನ್ನೋ ಕೈಗೊಂಡರೆ, ಅವನು ಅಸ್ಪೃಶ್ಯನಾಗಬೇಕೆಂದೇನೂ ಇಲ್ಲ.

ಈ ಗ್ರಾಮ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ಗಾಂಧೀಜಿ ಸಾರ್ವಜನಿಕ ವಿನಂತಿಗಳನ್ನು ಮಾಡತೊಡಗಿದರು. ಹಳ್ಳಿಗಳಲ್ಲಿ ನಶಿಸಿ ಹೋಗುತ್ತಿರುವ ಚರ್ಮಸಂಸ್ಕರಣಾ ಕೈಗಾರಿಕೆಯನ್ನು ಮತ್ತು ಊರ್ಜಿತಗೊಳಿಸಲು, ತಜ್ಞರ ನೆರವನ್ನು ಯಾಚಿಸಿದರು. ಚರ್ಮ ಸಂಸ್ಕರಣ ಪದ್ಧತಿಯ ಸುಧಾರಣೆಯಿಂದ ಸತ್ತ ಪ್ರಾಣಿಗಳ ಮಾಂಸ ತಿನ್ನುವ ಅಸಹ್ಯ ಪದ್ಧತಿಯೂ ತೊಲಗಿಹೋದೀತೆಂದು ಅವರು ನಂಬಿದ್ದರು. ಆ ದಿನಗಳಲ್ಲಿ ಸತ್ತ ದನವೊಂದರ ಹೆಣವನ್ನು ಒಬ್ಬ ಚಮ್ಮಾರನ ಮನೆಗೆ ತಂದಿತೆಂದರೆ ಇಡಿಯ ಕುಟುಂಬಕ್ಕೆ ಹಬ್ಬ. ಏಕೆಂದರೆ ಇಡೀ ದಿನ ಸತ್ತ ಹಸುವಿನ ಮಾಂಸದ ಹಬ್ಬದ ಊಟವಾಗುತ್ತಿತ್ತು. ಮಕ್ಕಳು ದನದ ಹೆಣದ ಸುತ್ತ ಮುಕುರಿ ಕುಣಿಯುತ್ತಿದ್ದವು. ಮತ್ತು ದನದ ಮೈಯ ಮಾಂಸ ಕೊಯ್ಯಲು ಪ್ರಾರಂಭಿಸುತ್ತಿದ್ದಂತೆ ಎಲುಬಿನ ತುಂಡುಗಳನ್ನು ಮಾಂಸದ ಚೂರುಗಳನ್ನು ಕೈಗೆತ್ತಿಕೊಂಡು, ಒಬ್ಬರಿನ್ನೊಬ್ಬರ ಮೇಲೆ ಎಸೆದು ಸಂತೋಷಪಡುತ್ತಿದ್ದರು. ಈ ದೃಶ್ಯ ಗಾಂಧೀಜಿಗೆ ವಾಕರಿಕೆ ಬರಿಸುತ್ತಿತ್ತು.

ಹರಿಜನ ಚಮ್ಮಾರರಿಗೆ ಗಾಂಧೀಜಿ "ಪ್ರಾಣಿಯ ಹೆಣದ ಮಾಂಸ ತಿನ್ನುವುದನ್ನು ನೀವು ಬಿಡಲು ಆಗುವುದಿಲ್ಲವೆ? ನೀವು ಬಿಟ್ಟುಬಿಡದಿದ್ದರೂ ನಾನೇನೋ ನಿಮ್ಮನ್ನು ಮುಟ್ಟಬಹುದು ಆದರೆ ಸಾಂಪ್ರದಾಯಿಕ ಮಂದಿ ನಿಮ್ಮ ಸಂಗದಿಂದ ದೂರ ಸರಿಯುವರು. ಅದೊಂದು ಕೊಳಕು ಅಭ್ಯಾಸ" ಎಂದು ಹೇಳುತ್ತಿದ್ದರು. ಅದಕ್ಕೆ ಚಮ್ಮಾರರು "ಸತ್ತ ಪ್ರಾಣಿಗಳನ್ನು ಒಯ್ಯುವ ಮತ್ತು ಅವುಗಳ ಚರ್ಮ ಸುಲಿಯುವ ಕಾಯಕ ನಾವೇ ಮಾಡಬೇಕಾದರೆ ನೀವು ನಮ್ಮನ್ನು ಅವುಗಳ ಮಾಂಸ ತಿನ್ನುವುದರಿಂದ ತಪ್ಪಿಸಲಾರಿರಿ" ಎಂದು ಉತ್ತರಿಸಿದರು. ಗಾಂಧೀಜಿ "ಯಾಕಾಗಬಾರದು?" ಚರ್ಮೋದ್ಯೋಗದ ಕೆಸಲದಲ್ಲಿ ನಾನು ತೊಡಗಿರುವುದನ್ನು ಒಂದು ದಿನ ನೀವು ಕಾಣುವಿರಿ. ಆದರೆ ನಾನು ಸತ್ತ ಪ್ರಾಣಿಗಳ ಮಾಂಸ ತಿನ್ನುವುದನ್ನು ನೋಡಲಾರಿರಿ. ಭಂಗಿ ಕೆಲಸ ಮತ್ತು ಸತ್ತ ಪ್ರಾಣಿಗಳ ಚರ್ಮ ಸುಲಿಯುವ ಕಾಯಕ ಇವೆರಡನ್ನೂ ಸಂಪೂರ್ಣ ಆರೋಗ್ಯಕರ ಮತ್ತು ಪರಿಶುದ್ಧ ರೀತಿಯಿಂದ ಮಾಡಲು ಸಾಧ್ಯವೆಂದು ನನ್ನ ಅನುಭವದಿಂದ ಹೇಳಬಲ್ಲೆ" ಎಂದು ವಾದಿಸಿದರು.

ಸಾಬರ್ಮತಿ ಮತ್ತು ವಾರ್ಧಾದ ಆಶ್ರಮಗಳಲ್ಲಿ ಒಂದೊಂದು ಚರ್ಮೋದ್ಯೋಗದ ವಿಭಾಗವನ್ನು ಗಾಂಧೀಜಿ ತೆರೆದರು. ಮೊದಲಿಗೆ ಸಣ್ಣ

ಪ್ರಮಾಣದಲ್ಲಿ ಪ್ರಾರಂಭಗೊಂಡರೂ, ನಂತರ ಕಚ್ಚಾ ಚರ್ಮವನ್ನು ಶೇಖರಿಸುವ ಪಕ್ಕಾ ಕಟ್ಟಡವೊಂದು ಸಿದ್ಧವಾಯಿತು. ನುರಿತ ಸಮಗಾರರ ನೆರವಿನಿಂದ ಆಶ್ರಮದ ಹುಡುಗರು ಚರ್ಮ ಹದಮಾಡುತ್ತಿದ್ದರು. ಆ ಚರ್ಮೋದ್ಯೋಗ ಭವನಕ್ಕಾಗಿ ಗಾಂಧೀಜಿ ರೂ. 50,000 ಸಂಗ್ರಹಿಸಿದ್ದರು. ಅಲ್ಲಿ ತಯಾರಾದ ಚರ್ಮ ಸಾಮಾಗ್ರಿಗಳು ಬಹಿರಂಗ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದ್ದವು. ತಾನಾಗಿ ಸತ್ತ ಪ್ರಾಣಿಗಳ ಚರ್ಮವನ್ನಷ್ಟೇ ಉಪಯೋಗಿಸಲಾಗುತ್ತಿತ್ತು ಆ ಕೇಂದ್ರದಲ್ಲಿ. ಕಲ್ಕತ್ತಾದ ರಾಷ್ಟ್ರೀಯ ಚರ್ಮ ಸಂಸ್ಕರಣಾ ಕೇಂದ್ರಕ್ಕೆ ಭೇಟಿ ನೀಡಿ ಗಾಂಧೀಜಿ ಕ್ರೋಮ್ ಚರ್ಮ ತಯಾರಿಕೆಯ ರೀತಿಯನ್ನು ಆಸಕ್ತಿಯಿಂದ ಪರಿಶೀಲಿಸಿದರು. ಉಪ್ಪಿನಿಂದ ಸಂಸ್ಕರಿಸಲ್ಪಟ್ಟ ದನದ ಚರ್ಮದಿಂದ ರೋಮಗಳನ್ನು ಬೇರ್ಪಡಿಸಲು ಸುಣ್ಣವನ್ನು ಹೇಗೆ ಬೆರಸಲಾಗುತ್ತದೆ ಎಂದೂ, ಚರ್ಮಕ್ಕೆ ಬಣ್ಣ ಹಾಕುವ ಬಗೆಯನ್ನೂ ಅವರು ತಿಳಿದುಕೊಂಡರು. ಹಳ್ಳಿಗಳಲ್ಲಿ ಚರ್ಮೋದ್ಯೋಗವನ್ನು ಸುಧಾರಿಸುವ ದೃಷ್ಟಿಯಿಂದ ಟಾಗೋರರ ಶಾಂತಿ ನಿಕೇತನದಲ್ಲಿ ನಡೆಯುತ್ತಿದ್ದ ಸಂಶೋಧನೆಗಳನ್ನು ನೋಡಿ ತಿಳಿದುಕೊಂಡರು. ಗ್ರಾಮಗಳಲ್ಲಿನ ಪ್ರಾಚೀನ ಚರ್ಮೋದ್ಯೋಗವನ್ನು ನಿಲ್ಲಿಸಿಬಿಡಲಾಗಲೀ, ಹಳ್ಳಿಗಳಿಂದ ಅಂತಹ ಕೈಗಾರಿಕೆಗಳನ್ನು ನಗರಗಳಿಗೆ ಒಯ್ಯಲಾಗಲೀ ಗಾಂಧೀಜಿ ಸಿದ್ಧರಿರಲಿಲ್ಲ. ಅದರಿಂದ ಗ್ರಾಮಗಳ ನಾಶ ಖಂಡಿತವೆಂದು ಅವರು ನಂಬಿದ್ದರು. ಅದರಿಂದ ಹಳ್ಳಿಗರಿಗೆ ತಮ್ಮ ಕೈಗಳನ್ನೂ ಬುದ್ಧಿಶಕ್ತಿಯನ್ನೂ ಬಳಸುವ ಅಷ್ಟಿಷ್ಟು ಅವಕಾಶಗಳೂ ತಪ್ಪಿಹೋಗುವುದೆಂದು ಅವರು ತಿಳಿದಿದ್ದರು. ಹಳ್ಳಿಯ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸತ್ತ ಪ್ರಾಣಿಗಳನ್ನು ಒಯ್ಯುವ ಸುಲಭ ಶಾಸ್ತ್ರೀಯ ಉಪಾಯವೊಂದನ್ನು ಅವರು ಬಯಸುತ್ತಿದ್ದರು. ಹಳ್ಳಿಯ ಚಮ್ಮಾರ ಸತ್ತ ಪ್ರಾಣಿಯನ್ನು ಎತ್ತಿ, ಕುಕ್ಕಿ ದರದರನೇ ಎಳೆದು ಅದರ ಚರ್ಮಕ್ಕೆ ಹಾನಿ ಮಾಡುವುದರ ಮೂಲಕ ಚರ್ಮದ ಬೆಲೆಯನ್ನು ಕಡಿಮೆ ಮಾಡುತ್ತಾನೆ. ಅವನಿಗೆ ಪ್ರಾಣಿಗಳ ಮೂಳೆಯ ಉಪಯೋಗವೂ ತಿಳಿದಿಲ್ಲ. ಮೂಳೆಗಳನ್ನು ನಾಯಿಗಳಿಗೆಸೆದು ನಷ್ಟವನ್ನನುಭವಿಸುತ್ತಾನೆ. ಮೂಳೆಗಳಿಂದ ತಯಾರಾದ ಹಿಡಿಕೆಗಳು, ಗುಂಡಿಗಳು ತಮ್ಮ ದೇಶಕ್ಕೆ ವಿದೇಶಗಳಿಂದ ಆಮದಾಗುತ್ತವೆ. ಮೂಳೆಯ ಪುಡಿ ಒಳ್ಳೆಯ ಗೊಬ್ಬರ ಕೂಡಾ.

ಗಾಂಧೀಜಿ ಚಮ್ಮಾರರ ಗುಡಿಸಲುಗಳಿಗೆ ಹೋಗಿ ಅವರೊಡನೆ ಕಲೆತು ಬೆರೆತು ಮಾತನಾಡುತ್ತಿದ್ದರು. ಅವರು ಕೂಡಾ ಗಾಂಧೀಜಿಯನ್ನು ತಮ್ಮ ಸ್ಥಿತಿಗತಿಗಳ ಸುಧಾರಣೆಗೆ ಕಟಿಬದ್ಧನಾದ ಮಿತ್ರನೆಂಬಂತೆ ಕಂಡು ಅವರ ಮೇಲೆ ವಿಶ್ವಾಸ ಇರಿಸುತ್ತಿದ್ದರು. ಅವರ ಕಾಲೋನಿಗಳಿಗೆ ಗಾಂಧೀಜಿ ಭೇಟಿ ನೀಡಿದಾಗ ತಮಗೆ ಕುಡಿಯುವ ನೀರಿನ ಸೌಲಭ್ಯವಿಲ್ಲವೆಂದು ದೂರು ಹೇಳುತ್ತಿದ್ದರು. ಸಾರ್ವಜನಿಕ ಬಾವಿಯಿಂದ ತಮಗೆ ನೀರು ಸೇದಲು ಬಿಡುತ್ತಿಲ್ಲವೆಂದೂ, ಗ್ರಾಮದ ದೇವಾಲಯಕ್ಕೆ ತಮಗೆ ಪ್ರವೇಶ ನಿರಾಕರಿಸಲಾಗುತ್ತಿದೆಯೆಂದೂ, ಉಚ್ಚಜಾತಿಯ ಜನರು ತಮ್ಮನ್ನು ದೂರವಿಟ್ಟು ಅನಿವಾರ್ಯವಾಗಿ ತಾವು ಹಳ್ಳಿ, ಪಟ್ಟಣಗಳ ಹೊರವಲಯದಲ್ಲಿ ಬೇರೆಯಾಗಿ ವಾಸಿಸುವಂತೆ ಮಾಡಲಾಗಿದೆ ಎಂದೂ ಅಹವಾಲುಗಳನ್ನು ಹೇಳಿಕೊಳ್ಳುತ್ತಿದ್ದರು. ಗಾಂಧೀಜಿಗೆ ಈ ಸಂಗತಿಗಳನ್ನು ತಿಳಿದು ತುಂಬ ನೋವುಂಟಾಗುತ್ತಿತ್ತು ಮತ್ತು ನಾಚಿಕೆ ಎನಿಸುತ್ತಿತ್ತು. ಅವರಿಗೆ ಬೇರೆಯವರು ಉಪಕಾರ ಮಾಡಬೇಕೆಂದೇನೂ ಗಾಂಧೀಜಿ ಬಯಸಲಿಲ್ಲ. ಆದರೆ ಅವರು ತಮ್ಮ ಕಾಲುಗಳ ಮೇಲೆ ತಾವೇ ನಿಲ್ಲಬೇಕೆಂದು ಬಯಸಿದರು. ಎಂದಿನಿಂದ ದೇಹ ಶ್ರಮದ ಕೆಲಸವನ್ನು ಕೀಳಾಗಿ ಕಾಣುವ ಪ್ರವೃತ್ತಿ ಈ ದೇಶದಲ್ಲಿ ಕಂಡುಬಂತೋ, ಅಂದೇ ದೇಶಕ್ಕೆ ದುರ್ದೆಸೆ ಪ್ರಾರಂಭವಾಯಿತೆಂದು ಟಾಗೋರರಂತೆ, ಗಾಂಧೀಜಿಯೂ ತಿಳಿದಿದ್ದರು. ಮತ್ತು ಮುಂದೊಂದು ದಿನ ಈ ತಮ್ಮ ಸೋದರರಿಗೆ ಮಾನವೀಯ ಹಕ್ಕುಗಳನ್ನು ನಿರಾಕರಿಸಿದವರು ತಮ್ಮ ಅನ್ಯಾಯದ, ದಯಾಹೀನ ಕೃತ್ಯಗಳಿಗೆ ಉತ್ತರಿಸಬೇಕಾಗಬಹುದೆಂದೂ ಗಾಂಧೀಜಿ ಭವಿಷ್ಯ ನುಡಿದರು.

ಚಮ್ಮಾರರಿಗೆ ನ್ಯಾಯಸಮ್ಮತ ವೇತನ, ಒಳ್ಳೆಯ ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಸವಲತ್ತು ದೊರೆಯುವಂತೆ ನೋಡಿಕೊಳ್ಳಲು ಸಮರ್ಪಣೆ ಭಾವದಿಂದ ದುಡಿಯುವ ಕಾರ್ಯಕರ್ತರ ಅವಶ್ಯಕತೆಯನ್ನು ಗಾಂಧೀಜಿ ಮನಗಂಡರು. ಈ ಕಾರ್ಯಕರ್ತರು ಹರಿಜನ ಮಕ್ಕಳಿಗಾಗಿ ರಾತ್ರಿ ಶಾಲೆಗಳನ್ನು ನಡೆಸುವರು, ಆ ಮಕ್ಕಳನ್ನು ಚಿಕ್ಕ ಪುಟ್ಟ, ಪ್ರವಾಸಗಳಿಗೆ, ಪ್ರೇಕ್ಷಣೀಯ ಸ್ಥಳಗಳ ಸಂದರ್ಶನಕ್ಕೆ ಕರೆದೊಯ್ಯುವರು. ಗಾಂಧೀಜಿ ಸ್ವತಃ ಚಮ್ಮಾರ ಕೇರಿಗಳಲ್ಲಿ ರಾತ್ರಿ ಶಾಲೆಗಳನ್ನು ತೆರೆದರು. ಅವುಗಳನ್ನೇ ಕೇಂದ್ರವಾಗಿಟ್ಟು ತಮ್ಮ ಹರಿಜನ ಸೇವಾ ಚಟುವಟಿಕೆಗಳನ್ನು ನಡೆಸಿದರು.

ಚಮ್ಮಾರರು ಗಾಂಧೀಜಿ ಅವರ ಕರೆಗೆ ಓಗೊಟ್ಟರು. ಅವರಲ್ಲನೇಕರು, ಸತ್ತ ಪ್ರಾಣಿಗಳ ಚರ್ಮವನ್ನಷ್ಟೇ ಉಪಯೋಗಿಸುವ ವಚನವಿತ್ತರು. ಇನ್ನೂ ಕೆಲವರು ಕುಡಿಯುವ ಮತ್ತು ಸತ್ತ ಪ್ರಾಣಿಗಳ ಮಾಂಸ ತಿನ್ನುವ ಚಟವನ್ನು ಬಿಡುವುದಾಗಿ ಪಣತೊಟ್ಟರು. ಗಾಂಧೀಜಿ ಒಮ್ಮೆ ಹರಿದ ಚಪ್ಪಲಿಗಳನ್ನು ಹಾಕಿಕೊಂಡು ಚಮ್ಮಾರರ ಸಭೆಯೊಂದಕ್ಕೆ ಹೋದರು. ಅವರು ಆಗ ಪ್ರವಾಸದಲ್ಲಿದ್ದುದರಿಂದ ಬೇರೆ ಹೊಸ ಚಪ್ಪಲಿಗಳಿರಲಿಲ್ಲ. ಚಮ್ಮಾರರು ಅದನ್ನು ಗಮನಿಸಿದರು. ಅವರಲ್ಲಿ ಒಬ್ಬರು ಒಂದು ಜೊತೆ ಅಹಿಂಸಕ ಚಪ್ಪಲಿಗಳನ್ನು ತಯಾರಿಸಿ ಗಾಂಧೀಜಿಗೆ ಕಾಣಿಕೆಯಾಗಿ ನೀಡಿದರು.

ದಕ್ಷಿಣ ಆಫ್ರಿಕಾದಲ್ಲಿ ತಮ್ಮನ್ನು ಸೆರೆಯಲ್ಲಿಟ್ಟ ಜನರಲ್ ಸ್ಮಟ್ಸನಿಗೆ ಗಾಂಧೀಜಿ ತಾವೇ ಸ್ವತಃ ಒಂದು ಜೊತೆ ಚಪ್ಪಲಿ ತಯಾರಿಸಿ ಕೊಡುಗೆಯಾಗಿ ನೀಡಿದರು. ಗಾಂಧೀಜಿಯ 70ನೇ ಹುಟ್ಟುಹಬ್ಬದ ವೇಳೆ ಜನರಲ್ ಸ್ಮಟ್ಸ್ ಈ ರೀತಿ ಬರೆದರು "ಜೈಲಿನಲ್ಲಿ ಆತ ನನಗಾಗಿ ಒಂದು ಜೊತೆ ಪಾದರಕ್ಷೆಗಳನ್ನು ತಯಾರಿಸಿದರು. ಹಲವು ಬೇಸಿಗೆಗಳಲ್ಲಿ ನಾನವುಗಳನ್ನು ಧರಿಸಿದೆನಾದರೂ, ಅಂತ ಮಹಾತ್ಮ ಅನುಗ್ರಹಿಸಿದ ಪಾದರಕ್ಷೆಗಳನ್ನು ಧರಿಸಲು ನಾನು ಯೋಗ್ಯನಲ್ಲವೆಂದು ನನಗೆ ಭಾಸವಾಗುತ್ತಿತ್ತು."

ಸೇವಕ

ಸಾಮಾನ್ಯವಾಗಿ ಕೂಲಿ ಕೆಲಸಗಾರರು ಮಾಡುವ ಬೇರೆ ಬೇರೆ ಕೆಲಸಗಳನ್ನು ಗಾಂಧೀಜಿ ತಮ್ಮ ಆಶ್ರಮ ಜೀವನದಲ್ಲಿ ಮಾಡುತ್ತಿದ್ದರು. ಅದಕ್ಕೂ ಮೊದಲು ನ್ಯಾಯವಾದಿ ತಾವು ತಿಂಗಳೊಂದರ ಸಾವಿರಾರು ರೂಪಾಯಿಗಳನ್ನು ಸಂಪಾದಿಸುತ್ತಿದ್ದಾಗಲೂ ಪ್ರತಿದಿನ ಬೆಳಿಗ್ಗೆ ನಿಯಮಿತವಾಗಿ ಗೋಧಿ ಬೀಸುವ ಕಾಯಕ ಮಾಡುತ್ತಿದ್ದರು. ಮಡದಿ ಕಸ್ತೂರಬಾ ಮತ್ತು ಮಕ್ಕಳು ಅವರ ಜತೆ ಗೋಧಿ ಬೀಸಲು ಸೇರುತ್ತಿದ್ದರು. ಅದರಿಂದ ಕುಟುಂಬಕ್ಕೆ ಚಪಾತಿಗೆ ಬೇಕಾದ ಹಿಟ್ಟು ದೊರೆಯುತ್ತಿತ್ತು. ಈ ಪರಿಪಾಠವನ್ನು ಗಾಂಧೀಜಿ ಸಾಬರ್ಮತಿ ಆಶ್ರಮದಲ್ಲೂ ಮುಂದುವರಿಸಿದರು. ಬೀಸುವ ಕಲ್ಲನ್ನು ಸರಿ ಮಾಡುವುದರಲ್ಲಿ ಗಾಂಧೀಜಿ ಗಂಟೆಗಟ್ಟಲೆ ಕಾಲ ಕಳೆಯುತ್ತಿದ್ದರು. ಒಮ್ಮೆ ಕಾರ್ಯಕರ್ತನೊಬ್ಬ ಆಶ್ರಮದಲ್ಲಿ ಗೋಧಿ ಹಿಟ್ಟಿನ ಕೊರತೆಯಾಗಿದೆ ಎಂದು ತಿಳಿಸಿದೊಡನೆಯೇ ಗಾಂಧೀಜಿ ಗೋಧಿ ಬೀಸುವುದರಲ್ಲಿ ನೆರವಾಗಲು ಸಿದ್ಧರಾದರು.

ಬೀಸುವುದಕ್ಕೆ ಮೊದಲು ಗೋಧಿಯನ್ನು ಗಾಳಿಸಿ ಸ್ವಚ್ಛಗೊಳಿಸುವುದನ್ನು ಅವರೆಂದೂ ಮರೆಯುತ್ತಿರಲಿಲ್ಲ. ಅನೇಕ ವೇಳೆ ಸಂದರ್ಶಕರು ಈ ಮಹಾತ್ಮರು ತುಂಡುಬಟ್ಟೆ ಉಟ್ಟುಕೊಂಡು ಗೋಧಿಯಿಂದ ಕಲ್ಲುಗಳನ್ನು ಹೆಕ್ಕಿ ಸ್ವಚ್ಛಗೊಳಿಸುತ್ತಿರುವುದನ್ನು ಕಾಣುತ್ತಿದ್ದರು. ಹೊರಗಿನವರ ಎದುರು ದೇಹ ಶ್ರಮದ ಕೆಲಸಗಳನ್ನು ಮಾಡುವುದರಲ್ಲಿ ಅವರಿಗೆ ಲಜ್ಜೆಯೆನಿಸುತ್ತಿರಲಿಲ್ಲ. ಒಮ್ಮೆ ಕಾಲೇಜು ಕಲಿತ ತರುಣ, ತನ್ನ ಇಂಗ್ಲಿಷ್ ಕಲಿಕೆಯ ಹೆಮ್ಮೆಯಿಂದ ಗಾಂಧೀಜಿಯ ದರ್ಶನಕ್ಕಾಗಿ ಬಂದ, ಸಂದರ್ಶನವಾದ ನಂತರ ಆತ ಗಾಂಧೀಜಿಗೆ "ಬಾಪೂ, ನನ್ನಿಂದ ನಿಮಗೇನಾದರೂ ಕೆಲಸವಾಗಬೇಕಾಗಿದ್ದಲ್ಲಿ ನನಗೆ ತಿಳಿಸಿರಿ" ಎಂದ. ತನಗೇನಾದರೂ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲಸ ಸಿಗಬಹುದೆಂದು ಆತ ನಿರೀಕ್ಷಿಸಿದ್ದ. ಆದರೆ ಆತನ ಮನಸ್ಸನ್ನರಿತಿದ್ದ ಗಾಂಧೀಜಿ ಹೇಳಿದರು. "ಒಳ್ಳೇದು ನಿನಗೆ ಸಮಯವಿದ್ದರೆ, ಈ ಕುಕ್ಕೆಯಲ್ಲಿರುವ ಗೋಧಿಯನ್ನು ಸ್ವಚ್ಛಗೊಳಿಸು" ಎಂದರು. ಆ ತರುಣ ಇಕ್ಕಟ್ಟಿನಲ್ಲಿ ಸಿಕ್ಕು ಹಾಗೂ ಹೀಗೂ ಒಂದು ಗಂಟೆ ಕಾಲ ಗೋಧಿ ಹೆಕ್ಕಿದ ಶಾಸ್ತ್ರಮಾಡಿ ಬಸವಳಿದು, ಗಾಂಧೀಜಿಗೆ ವಿದಾಯ ಹೇಳಿ ಹೋದ.

ಸ್ವಲ್ಪ ಕಾಲ ಗಾಂಧೀಜಿ ಆಶ್ರಮದಲ್ಲಿ ಒಬ್ಬ ಸಹಾಯಕ ಉಗ್ರಾಣಾಧಿಕಾರಿಯಾಗಿ ಕೆಲಸ ಮಾಡಿದರು. ಬೆಳಗಿನ ಪ್ರಾರ್ಥನೆಯ ನಂತರ ಅವರು ತರಕಾರಿ ಹೆಚ್ಚಲು ಅಡಿಗೆ ಕೋಣೆಗೆ ಹೋಗುತ್ತಿದ್ದರು. ಅಡಿಗೆಮನೆ ಅಥವಾ ಉಗ್ರಾಣದ ಯಾವುದೇ ಮೂಲೆಯಲ್ಲಿ ಕಸ ಇಲ್ಲವೇ ಜೇಡನ ಬಲೆಗಳನ್ನು ಕಂಡರೆ ತನ್ನ ಸಹ ಕಾರ್ಯಕರ್ತರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ತರಕಾರಿ, ಹಣ್ಣುಹಂಪಲು ಮತ್ತು ಧಾನ್ಯಗಳ ಪೋಷಣಾಂಶಗಳ ಬಗ್ಗೆ ಅವರಿಗೆ ಚೆನ್ನಾಗಿ ತಿಳುವಳಿಕೆ ಇತ್ತು. ಒಮ್ಮೆ ಆಶ್ರಮವಾಸಿಯೊಬ್ಬರು ತೊಳೆಯದೆ ಆಲೂಗಡ್ಡೆ ಕತ್ತರಿಸಿದ್ದರು. ಗಾಂಧೀಜಿ, ಆಲೂಗಡ್ಡೆ ಮತ್ತು ನಿಂಬೆಹಣ್ಣುಗಳನ್ನು ಕತ್ತರಿಸುವ ಮೊದಲು ಯಾವಾಗಲೂ ತೊಳೆದುಕೊಳ್ಳಬೇಕಾಗ ಅಗತ್ಯವನ್ನು ವಿವರಿಸಿದರು. ಇನ್ನೊಮ್ಮೆ ಆಶ್ರಮವಾಸಿಯೊಬ್ಬರಿಗೆ ಗಾಂಧೀಜಿ ಸಿಪ್ಪೆ ಅಲ್ಲಲ್ಲಿ ಕಪ್ಪಗಾಗುವಷ್ಟು ಕಳಿತ ಬಾಳೆಹಣ್ಣನ್ನು ಕೊಟ್ಟಾಗ ಆತ ತನಗೆ ಅವಮಾನವಾಯಿತೆಂದುಕೊಂಡರು. ಆದರೆ ಗಾಂಧೀಜಿ ಆ ಹಣ್ಣು ಅವರ ಜೀರ್ಣಾಂಗಗಳ ಶಕ್ತಿಗೆ ಅನುಕೂಲವಾಗಿದೆ ಎಂದೇ ಅದನ್ನು ಅವರಿಗೆ ನೀಡಲಾಯಿತೆಂದು ಸಮಾಧಾನಪಡಿಸಿದರು. ಗಾಂಧೀಜಿ ಆಗಾಗ ಆಶ್ರಮವಾಸಿಗಳಿಗೆ ಹಣ್ಣುಗಳನ್ನು ಹಂಚುತ್ತಿದ್ದರು. ಅವರಾರಿಗೂ ಆಶ್ರಮದ ಅರೆಬೆಂದ ಆಹಾರದ ಬಗ್ಗೆ ದೂರಿಕೊಳ್ಳಲು ಅವಕಾಶವೇ ಸಿಗುತ್ತಿರಲಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಸೆರೆಮನೆಯಲ್ಲಿ ತನ್ನ ಸಹ ಕೈದಿಗಳಿಗೆ ದಿನವೂ ಎರಡು ಹೊತ್ತು ಆಹಾರ ಬಡಿಸುವ ಹೊಣೆ ಗಾಂಧೀಜಿಯದಾಗಿತ್ತು.

ಪ್ರತಿಯೊಬ್ಬರೂ ತಮ್ಮ ಪಾತ್ರೆಗಳನ್ನು ತಾವೇ ತೊಳೆದುಕೊಳ್ಳಬೇಕೆನ್ನುವುದು ಆಶ್ರಮದ ನಿಯಮವಾಗಿತ್ತು. ಅಡುಗೆಯ ಪಾತ್ರೆಗಳನ್ನು ಬೇರೆಬೇರೆ ಗುಂಪುಗಳು ಸರದಿಯಂತೆ ತೊಳೆಯುತ್ತಿದ್ದವು. ಒಂದು ದಿನ ಗಾಂಧೀಜಿ, ಮಸಿ ಹಿಡಿದುಕೊಂಡಿದ್ದ ಅಡುಗೆಯ ದೊಡ್ಡ ಬಾಣಲೆಯೊಂದನ್ನು ಸ್ವಚ್ಛಗೊಳಿಸಲು ಪ್ರಾರಂಭಿಸಿದರು. ಕೈಗಳಲ್ಲಿ ಬೂದಿ ಬಳಿದುಕೊಂಡು ಗಾಂಧೀಜಿ ಬಾಣಲೆಯನ್ನು ಉಜ್ಜತೊಡಗಿದರು. ಅಕಸ್ಮಾತ್ತಾಗಿ ಕಸ್ತೂರಬಾ ಆ ಕಡೆ ಕಾಣಿಸಿಕೊಂಡರು. ಬಾಣಲೆಯನ್ನು ಹಿಡಿದುಕೊಂಡು ಕಸ್ತೂರಬಾ "ಇದು ನಿಮ್ಮ ಕೆಲಸವಲ್ಲ. ಈ ಕೆಲಸಕ್ಕೆ ಬೇರೆ ಜನರಿದ್ದಾರೆ" ಎಂದರು. ಗಾಂಧೀಜಿ ಕಸ್ತೂರಬಾರವರಿಗೆ ಸೋಲೊಪ್ಪಿಕೊಳ್ಳುವುದೇ ಜಾಣತನವೆಂದುಕೊಂಡು ಆ ಕೆಲಸವನ್ನು ಕಸ್ತೂರಬಾರವರೇ ಪೂರ್ತಿಗೊಳಿಸಲು

ಟ್ಟುಕೊಟ್ಟರು. ಲೋಹದ ಪಾತ್ರೆಗಳು ಥಳಥಳ ಹೊಳೆಯುವ ತನಕ ಅವರಿಗೆ ತೃಪ್ತಿಯೆನಿಸುತ್ತಿರಲಿಲ್ಲ. ಜೈಲಿನಲ್ಲೊಮ್ಮೆ ಸಹಾಯಕರೊಬ್ಬರ ಕೆಲಸದಿಂದ ಬೇಸರಗೊಂಡ ಗಾಂಧೀಜಿ, ಕಬ್ಬಿಣದ ಪಾತ್ರೆಗಳನ್ನು ತಾನು ಬೆಳ್ಳಿಯಂತೆ ಹೊಳೆಯುವ ಹಾಗೆ ಮಾಡಬಲ್ಲೆನೆಂದು ಹೇಳಿಕೊಂಡರು.

ಆಶ್ರಮ ನಿರ್ಮಾಣಗೊಳ್ಳುತ್ತಿದ್ದಾಗ ಕೆಲವರು ಅತಿಥಿಗಳು ಡೇರೆಗಳಲ್ಲಿ ಮಲಗಬೇಕಾಯಿತು. ಹೊಸದಾಗಿ ಬಂದವರೊಬ್ಬರಿಗೆ ತಮ್ಮ ಹಾಸಿಗೆಯನ್ನು ಎಲ್ಲಿಡಬೇಕೆಂದು ತಿಳಿಯದೇ, ಹಾಗೆಯೇ ಸುರುಳಿ ಸುತ್ತಿ ಇಟ್ಟು ವಿಚಾರಿಸಲು ತೆರಳಿದರು. ಮರಳಿ ಬಂದಾಗ ಅವರು ತಮ್ಮ ಹಾಸಿಗೆಯನ್ನು ಗಾಂಧೀಜಿ ಹೆಗಲ ಮೇಲೆ ಎತ್ತಿಕೊಂಡು ಹೋಗುತ್ತಿರುವುದನ್ನು ಕಂಡರು.

ಆಶ್ರಮದ ಹೊರಗಡೆ ಬಾವಿಯಿಂದ ನೀರು ಸೇದುವುದು ದಿನಚರಿಯ ಕೆಲಸದಲ್ಲೊಂದಾಗಿತ್ತು. ಒಮ್ಮೆ ಗಾಂಧೀಜಿಗೆ ಮೈ ಸರಿಯಿರಲಿಲ್ಲ. ಆದರೂ ಧಾನ್ಯ ಬೀಸುವ ಕಾಯಕದಲ್ಲಿ ಪಾಲ್ಗೊಂಡಿದ್ದರು. ಸಹಕಾರ್ಯಕರ್ತರೊಬ್ಬರು ಗಾಂಧೀಜಿ ಇನ್ನೂ ಹೆಚ್ಚಿನ ದೇಹಶ್ರಮ ಮಾಡುವುದನ್ನು ತಪ್ಪಿಸಬೇಕೆಂದು ಬಯಸಿ, ಇತರ ಆಶ್ರಮವಾಸಿಗಳ ನೆರವಿನಿಂದ ಆಶ್ರಮದ ಸಣ್ಣ, ದೊಡ್ಡ ಪಾತ್ರೆಗಳೆಲ್ಲದರಲ್ಲೂ ನೀರು ತುಂಬಿಸಿಬಿಟ್ಟರು. ಗಾಂಧೀಜಿಗೆ ಇದು ಸರಿಯೆನಿಸಲಿಲ್ಲ. ಮಗುವಿನ ಸ್ನಾನದ ತೊಟ್ಟಿಯೊಂದನ್ನು ತೆಗೆದುಕೊಂಡು, ನೀರು ತುಂಬಿಸಿ ತಲೆ ಮೇಲೆ ಹೊತ್ತುಕೊಂಡು ಬಂದರು. ಗಾಂಧೀಜಿಯ ಶ್ರಮವನ್ನುಳಿಸಲು ಹೋದ ಕಾರ್ಯಕರ್ತರು ತಮ್ಮ ಮೂರ್ಖತನವನ್ನು ಹಳಿದುಕೊಂಡರು. ತಾನೊಬ್ಬ ಮಹಾತ್ಮ ಅಥವಾ ಮುದುಕನೆನ್ನುವುದಕ್ಕಾಗಿ, ತನ್ನ ದೈನಂದಿನ ಕೆಲಸಗಳನ್ನು, ಯಾವ ಕೆಲಸವನ್ನೂ ಶಾರೀರಿಕವಾಗಿ ಮಾಡಲು ಅಸಾಧ್ಯವೆನಿಸಿದ ಹೊರತು, ತಪ್ಪಿಸಿಕೊಳ್ಳುವುದನ್ನು ಗಾಂಧೀಜಿ ಎಂದೂ ಮೆಚ್ಚುತ್ತಿರಲಿಲ್ಲ. ಯಾವುದೇ ತರದ ಕೆಲಸವನ್ನು ಮಾಡಲು ಬೇಕಾದ ಮನೋಬಲ ಮತ್ತು ದೇಹಶಕ್ತಿ ಅವರಲ್ಲಿತ್ತು. ಆಯಾಸವೆಂದರೇನೆಂದೇ ಅವರಿಗೆ ತಿಳಿಯದು. ಬೋಅರ್ ಯುದ್ಧದ ಸಂದರ್ಭದಲ್ಲಿ ಗಾಯಾಳುಗಳನ್ನೊಯ್ಯುವ ರುಗ್ಣಶಯ್ಯೆಗಳ ವಾಹಕನಾಗಿ ದಿನವೊಂದಕ್ಕೆ 25 ಮೈಲುಗಳಷ್ಟು ನಡೆದು ಹೋಗುತ್ತಿದ್ದರು. ಮನೆಯಲ್ಲೇ ತಯಾರಾದ ತಿಂಡಿತಿನಿಸುಗಳೊಂದಿಗೆ ಬೆಳಗ್ಗೆ 12 ಗಂಟೆಗೆ ಹೊರಡುತ್ತಿದ್ದರು. ವ್ಯಾಪಾರ ಮುಗಿಸಿಕೊಂಡು ಸಂಜೆಗೆ ಮರಳುತ್ತಿದ್ದರು.

ಇತರ ಸಹೋದ್ಯೋಗಿಗಳೂ ಗಾಂಧೀಜಿಯ ಉದಾಹರಣೆಯನ್ನು ಉತ್ಸಾಹದಿಂದ ಅನುಕರಿಸುತ್ತಿದ್ದರು. ಗಾಂಧೀಜಿಯ ಸಹಕಾರ್ಯಕರ್ತರು ಒಮ್ಮೆ ಕೆರೆಯೊಂದನ್ನು ಮುಚ್ಚುವ ಕೆಲಸದಲ್ಲಿ ತೊಡಗಿದ್ದರು. ಒಂದು ದಿನ ಬೆಳಗಿನ ಕೆಲಸದ ಬಳಿಕ ಬಂದಾಗ ಬೆಳಗಿನ ಉಪಾಹಾರವನ್ನು ಬೇರೆ ಬೇರೆ ಬಟ್ಟಲುಗಳಲ್ಲಿ ತಮಗಾಗಿ ಗಾಂಧೀಜಿಯವರ ಅಣಿಮಾಡಿ ಇರಿಸಿರುವುದನ್ನು ಕಂಡರು. ಅವರಲ್ಲೊಬ್ಬರು ಗಾಂಧೀಜಿಯನ್ನು "ನಮಗೋಸ್ಕರ ನೀವೇಕೆ ಇಷ್ಟು ತ್ರಾಸ ತೆಗೆದುಕೊಂಡಿರಿ? ನಿಮ್ಮಿಂದ ಸೇವೆ ಪಡೆಯುವ ಅರ್ಹತೆ ನಮಗಿದೆಯೇ?" ಎಂದು ಕೇಳಿದರು. ಗಾಂಧೀಜಿ ಮುಗುಳ್ನಗುತ್ತಾ "ಖಂಡಿತವಾಗಿ ನೀವು ಬಳಲಿ ಬರುವಿರೆಂದು ನನಗೆ ಗೊತ್ತು. ನಿಮ್ಮ ಉಪಾಹಾರವನ್ನು ತಯಾರಿಸಲು ನನಗೆ ವೇಳೆಯೂ ಇತ್ತು" ಎಂದಷ್ಟೇ ಉತ್ತರ ಕೊಟ್ಟರು.

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಹೆಸರಾಂತ ನಾಯಕನಾಗಿ ಗಾಂಧೀಜಿ ಒಮ್ಮೆ ಭಾರತೀಯ ವಲಸೆಗಾರರ ಪರವಾಗಿ ವಾದಿಸಲು ಲಂಡನ್ನಿಗೆ ತೆರಳಿದರು. ಅಲ್ಲಿನ ಭಾರತೀಯ ವಿದ್ಯಾರ್ಥಿಗಳು ಸಸ್ಯಾಹಾರಿ ಭೋಜನಕೂಟವೊಂದನ್ನು ಏರ್ಪಡಿಸಿ ಗಾಂಧೀಜಿಯನ್ನು ಆಹ್ವಾನಿಸಿದರು. ವಿದ್ಯಾರ್ಥಿಗಳು ಅಡುಗೆಯನ್ನು ತಾವೇ ತಯಾರಿಸಲು ನಿರ್ಧರಿಸಿದರು. ಅಪರಾಹ್ನ 2 ಗಂಟೆಗೆ ತೆಳ್ಳನೆಯ ನೀಳ ವ್ಯಕ್ತಿಯೊಬ್ಬರು ವಿದ್ಯಾರ್ಥಿಗಳನ್ನು ಅಡುಗೆ ಕೋಣೆಯಲ್ಲಿ ಸೇರಿಸಿಕೊಂಡರು. ಮತ್ತು ಪಾತ್ರೆ ತೊಳೆಯುವುದು, ತರಕಾರಿ ಹೆಚ್ಚುವುದು ಇತ್ಯಾದಿ ಕೆಲಸಗಳಲ್ಲಿ ನೆರವಾದರು. ಆಮೇಲೆ ವಿದ್ಯಾರ್ಥಿಗಳ ನಾಯಕ ಅಲ್ಲಿ ಬಂದಾಗ ಆ ವ್ಯಕ್ತಿ ತಮ್ಮ ಅಂದಿನ ಸಮಾರಂಭದ ಗೌರವಾನ್ವಿತ ಅತಿಥಿ ಗಾಂಧೀಜಿಯಲ್ಲದೆ ಬೇರಾರೂ ಅಲ್ಲ ಎಂದು ತಿಳಿದು ಚಕಿತರಾದರು.

ಗಾಂಧೀಜಿ ಇತರರಿಂದ ಚೆನ್ನಾಗಿ ಕೆಲಸ ತೆಗೆದುಕೊಳ್ಳುತ್ತಿದ್ದರು. ಆದರೆ, ಇನ್ನೊಬ್ಬರು ತನಗಾಗಿ ಕೆಲಸ ಮಾಡಬೇಕೆಂದು ಬಯಸುತ್ತಿರಲಿಲ್ಲ. ರಾಜಕೀಯ ಸಮ್ಮೇಳನವೊಂದರ ಅಂತ್ಯದಲ್ಲಿ ಮಲಗಲು ತೆರಳುವ ಮುನ್ನ ಗಾಂಧೀಜಿ ನೆಲವನ್ನು ಗುಡಿಸಿ ಸ್ವಚ್ಛಮಾಡಿಕೊಳ್ಳುವುದು ಕಂಡುಬಂತು. ಒಬ್ಬ ಅನುಯಾಯಿ ಗಾಂಧೀಜಿಯ ನೆರವಿಗೆ ಧಾವಿಸಿದರು. ಗಾಂಧೀಜಿ ನಕ್ಕು ಆತನ ಸೇವೆಯನ್ನು ಸ್ವೀಕರಿಸಿದರು. ಗ್ರಾಮದಲ್ಲಿ ಸಂಚರಿಸುವಾಗ ಲಾಟೀನಿನ ಎಣ್ಣೆ ಮುಗಿದುಹೋದರೆ,

ಳಲಿ ಮಲಗಿರುವ ಸಂಗಡಿಗರನ್ನು ಎಚ್ಚರಿಸುವ ಬದಲು ತಿಂಗಳ ಬೆಳಕಿನಲ್ಲೇ ಪತ್ರಗಳನ್ನು ಬರೆಯುವ ಕೆಲಸ ಮುಂದುವರಿಸುತ್ತಿದ್ದರು. ತಮ್ಮ ನೌಖಾಲಿಯ ಪಾದಯಾತ್ರೆಯ ವೇಳೆ ಅವರ ಶಿಬಿರದಲ್ಲಿ ಇಬ್ಬರೇ ಸಹಚರರು ಇದ್ದರು. ಖಾಖ್ರಾ ತನಿಸು ತಯಾರಿಸುವ ವಿಧಾನ ಅವರಿಗೆ ಬರುತ್ತಿರಲಿಲ್ಲ. ಗಾಂಧೀಜಿ ಅದನ್ನು ಅವರಿಗೆ ಕಲಿಸಿದರು. ಆಗ ಅವರಿಗೆ 78 ವರ್ಷ ಪ್ರಾಯ.

ಮಕ್ಕಳೆಂದರೆ ಅವರಿಗೆ ಬಲು ಅಕ್ಕರೆ. ಮಕ್ಕಳು ಹುಟ್ಟಿದ ಎರಡು ತಿಂಗಳ ನಂತರ ಅವರು ತಮ್ಮ ಪುತ್ರರಲ್ಲಿ ಯಾರನ್ನೂ ದಾದಿ ಅಥವಾ ಆಯಾಗಳ ಆರೈಕೆಯಲ್ಲಿ ಬಿಡಲಿಲ್ಲ. ಮಗುವಿನ ಬೆಳವಣಿಗೆಗೆ ತಾಯ್ತಂದೆಯರ ಪ್ರೀತಿ ಮತ್ತು ಗಮನ ಅವಶ್ಯಕವೆಂದು ಅವರು ನಂಬಿದ್ದರು. ತಾಯಿಯಂತೆ ಅವರು ಮಗುವಿಗೆ ಉಣಿಸಿ, ಲಾಲಿಸಿ ಸಾಕಬಲ್ಲವರಾಗಿದ್ದರು. ದಕ್ಷಿಣ ಆಫ್ರಿಕಾದ ಜೈಲಿನಿಂದ ಬಿಡುಗಡೆಯಾಗಿ ಮನೆಗೆ ಬಂದಾಗ, ತಮ್ಮ ಸ್ನೇಹಿತ ಪೋಲಕರ ಹೆಂಡತಿ ತುಂಬ ಕ್ಷೀಣಕಾಯಳಾಗಿ ಬಳಲಿರುವುದನ್ನು ಕಂಡರು. ಆಕೆ ತನ್ನ ಮಗುವನ್ನು ಸ್ತನ್ಯಪಾನದಿಂದ ದೂರವಿರಿಸಲು ಹೆಣಗುತ್ತಿದ್ದಳು. ಮಗು ಅವಳಿಗೆ ವಿರಾಮವನ್ನು ಕೊಡದೆ, ಅತ್ತು ರಾತ್ರಿ ಇಡೀ ನಿದ್ರೆಗೆಡಿಸುತ್ತಿತ್ತು. ರಾತ್ರಿ ಗಾಂಧೀಜಿ ಮಗುವಿನ ಉಸ್ತುವಾರಿ ವಹಿಸಿಕೊಂಡರು. ದಿನವಿಡೀ ಕಠಿಣ ಪರಿಶ್ರಮದ ಕೆಲಸ ಮಾಡಿ, ಸಾರ್ವಜನಿಕ ಸಭೆಗಳಲ್ಲಿ ಭಾಷಣಗಳನ್ನಿತ್ತು ನಾಲ್ಕು ಮೈಲಿಗಳಷ್ಟು ನಡೆದು ಗಾಂಧೀಜಿ ಕೆಲವೊಮ್ಮೆ ರಾತ್ರಿ ಒಂದು ಗಂಟೆಗೆ ಮನೆ ಸೇರುತ್ತಿದ್ದರು. ಮಗುವನ್ನು ತಾಯಿಯ ಪಕ್ಕದಿಂದ ಎತ್ತಿ ತನ್ನ ಹಾಸಿಗೆಯಲ್ಲೇ ಮಲಗಿಸಿಕೊಳ್ಳುತ್ತಿದ್ದರು. ಮಗುವಿಗೆ ನೀರು ಕುಡಿಸಲು, ತಮ್ಮ ಪಕ್ಕದಲ್ಲೇ ನೀರಿನ ತಂಬಿಗೆಯೊಂದನ್ನಿಟ್ಟು ಕೊಂಡಿರುತ್ತಿದ್ದರು. ಆದರೆ ಅದರ ಅಗತ್ಯ ಬೀಳುತ್ತಿರಲಿಲ್ಲ. ಮಗು ಅಳದೆ ಶಾಂತವಾಗಿ ಮಲಗಿರುತ್ತಿತ್ತು. ಹದಿನೈದು ದಿನಗಳಲ್ಲಿ ಮಗು ಮೊಲೆಯುಣ್ಣುವ ಅಭ್ಯಾಸವನ್ನು ಬಿಟ್ಟುಬಿಟ್ಟಿತು.

ಹಿರಿಯರ ಬಗ್ಗೆ ಗಾಂಧೀಜಿಗೆ ಅಪಾರ ಕಾಳಜಿ ಇತ್ತು. ಗೋಖಲೆ ಗಾಂಧೀಜಿಯ ಜತೆ ತಂಗಿದ್ದಾಗ ಗೋಖಲೆಯವರ ಶಾಲನ್ನು ಇಸ್ತ್ರಿ ಮಾಡಿದರು. ಅವರ ಹಾಸಿಗೆ ಸಿದ್ಧಪಡಿಸಿದರು, ಊಟ ಬಡಿಸಿದರು ಮತ್ತು ಅವರ ಕಾಲುಗಳನ್ನೊತ್ತಲೂ ತಯಾರಾದರು. ಗೋಖಲೆಯವರು ಅಡ್ಡಿಪಡಿಸಿದರೂ ಕೇಳಲಿಲ್ಲ. ತಾವು

ಮಹಾತ್ಮರಾಗುವ ಮೊದಲು ಅವರೊಮ್ಮೆ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದು ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡರು. ಅಲ್ಲಿ ಅವರು ಕೊಳಕಾದ ಕಕ್ಕಸುಗಳನ್ನು ಶುಚಿಗೊಳಿಸಿದರು.

ಒಬ್ಬ ಕಾಂಗ್ರೆಸ್ ಧುರೀಣರನ್ನು ಗಾಂಧೀಜಿ ತಾನೇನು ಕೆಲಸ ಮಾಡಲಿ ಎಂದು ಕೇಳಿದರು. "ಉತ್ತರ ಬರೆಯದ ಪತ್ರಗಳು ರಾಶಿರಾಶಿಯಾಗಿ ಬಿದ್ದಿವೆ. ಈ ಕೆಲಸಕ್ಕಾಗಿ ನನ್ನ ಬಳಿ ಗುಮಾಸ್ತರಿಲ್ಲ. ನೀವಿದನ್ನು ಮಾಡಲು ಬಯಸುವಿರಾ?" ಎಂದು ಆ ಧುರೀಣರು ಗಾಂಧೀಜಿಯನ್ನು ಪ್ರಶ್ನಿಸಿದರು. ಗಾಂಧೀಜಿ "ಅಗತ್ಯವಾಗಿ, ನನ್ನ ಸಾಮರ್ಥ್ಯಕ್ಕೆ ಮೀರದಿರುವ ಯಾವುದನ್ನಾದರೂ ಮಾಡಲೂ ನಾನು ಸಿದ್ಧ" ಎಂದು ಹೇಳಿ ಸ್ವಲ್ಪ ಸಮಯದಲ್ಲೇ ಆ ಕೆಲಸವನ್ನು ಮುಗಿಸಿ, ಆ ಮುಖಂಡರ ಅಂಗಿಯ ಹರಿದುಹೋದ ಗುಂಡಿಯನ್ನು ಹೊಲಿದು ಕೊಡುವ ಮತ್ತಿತರ ಅವಶ್ಯಕತೆಗಳನ್ನು ಪೂರೈಸುವ ಕೆಲಸಕ್ಕೆ ಮುಂದಾದರು. ಅಸ್ಪೃಶ್ಯತೆಯ ಬೇಡಿಕೆಗಳನ್ನು ಕಡಿದೊಗೆಯುವ ಸಲುವಾಗಿ, ಆಶ್ರಮದಲ್ಲಿ ಅನುಭವೀ ಸಹಾಯಕರ ಅಗತ್ಯವಿದ್ದಾಗಲೆಲ್ಲ ಗಾಂಧೀಜಿ ಹರಿಜನ ಸೇವಕರನ್ನೇ ನೇಮಿಸಲು ಒತ್ತಾಯಿಸುತ್ತಿದ್ದರು. ಆಶ್ರಮದ ಸೇವಕರನ್ನು ಸಂಬಳದ ಕೆಲಸಗಾರರೆಂದು ಪರಿಗಣಿಸದೆ, ನಮ್ಮ ಸೋದರರರೆಂದೇ ಪರಿಗಣಿಸಬೇಕೆಂದು ಆಶ್ರಮವಾಸಿಗಳಿಗೆ ತಿಳಿಸಲಾಗಿತ್ತು. "ಸ್ವಲ್ಪ ತೊಂದರೆಗಳಾಗಬಹುದು, ಕೆಲವು ಕಳ್ಳತನಗಳು ನಡೆದಾವು, ಹೆಚ್ಚು ವೆಚ್ಚವೆನಿಸಬಹುದು. ಆದರೂ ಪ್ರಯತ್ನ ವಿಫಲವಾಗಲಾರದು" ಎನ್ನುತ್ತಿದ್ದರು ಗಾಂಧೀಜಿ.

ಯಾರನ್ನಾದರೂ ತನ್ನ ಸೇವಕನಾಗಿ ಇರಿಸಿಕೊಳ್ಳುವುದು ಹೇಗೆಂದು ಅವರಿಗೆ ತಿಳಿದಿರಲೇ ಇಲ್ಲ. ಆದರೆ ಭಾರತೀಯ ಸೆರೆಮನೆಯೊಂದರಲ್ಲಿ ಅವರೊಮ್ಮೆ ತಮ್ಮ ಜತೆ ಕೈದಿಗಳ ಸೇವೆಯನ್ನು ಸ್ವೀಕರಿಸಿದರು. ಒಬ್ಬನು ಅವರಿಗಾಗಿ ಹಣ್ಣುಗಳನ್ನು ಸ್ವಚ್ಛಗೊಳಿಸಿದರು. ಇನ್ನೊಬ್ಬರು ಆಡಿನ ಹಾಲನ್ನು ಕರೆದರು. ಮೂರನೆಯವರ ಆಪ್ತಸೇಕವನಾಗಿ ಕೆಲಸ ಮಾಡಿದರು. ನಾಲ್ಕನೆಯವರು ಅವರ ಬಟ್ಟೆಗಳನ್ನು ಒಗೆದನು. ಒಬ್ಬ ಬ್ರಾಹ್ಮಣ ಗಾಂಧೀಜಿ ಪಾತ್ರೆಗಳನ್ನು ತೊಳೆದರು ಮತ್ತು ಇಬ್ಬರು ಯೂರೋಪಿಯನ್ನರು ದಿನವೂ ಗಾಂಧೀಜಿಯ ಹಾಸಿಗೆ ಸಿದ್ಧಗೊಳಿಸುತ್ತಿದ್ದರು.

ಇಂಗ್ಲೆಂಡಿನ ಸದ್ಗೃಹಸ್ಥರ ಮನೆಗಳಲ್ಲಿ, ಮನೆಯವರು ಮತ್ತು ಸೇವಕರ ನಡುವೆ ಇರುವ ಒಂದು ಕೌಟುಂಬಿಕ ಬಾಂಧವ್ಯವನ್ನು ನೋಡಿ ಗಾಂಧೀಜಿಗೆ ಹರ್ಷವಾಗಿತ್ತು. ಅಲ್ಲಿನ ಒಬ್ಬ ಅತಿಥೇಯರ ಮನೆಗೆ ಸಂದರ್ಶನವಿತ್ತಾಗ, ಅಲ್ಲಿಂದ ತೆರಳುವ ಮುನ್ನ ಗಾಂಧೀಜಿಯವರಿಗೆ ಮನೆಗೆ ಸೇವಕರನ್ನು, ಅವರೂ ಕುಟುಂಬದ ಸದಸ್ಯರೇ ಎಂಬಂತೆ ಪ್ರೀತಿಯಿಂದ ಪರಿಚಯಿಸಲಾಯಿತು.

ದೀರ್ಘಕಾಲದ ವಾಸ್ತವ್ಯದ ನಂತರ ಭಾರತೀಯ ಅತಿಥೇಯರ ಮನೆಯೊಂದರಿಂದ ತೆರಳುವಾಗ ಗಾಂಧೀಜಿ ಅಲ್ಲಿನ ಸೇವಕರಿಗೆ ವಿದಾಯ ಹೇಳುತ್ತಾ "ನಾವು ನಿಮಗೆಷ್ಟು ಋಣಿ ಎಂದು ಶಬ್ದಗಳಲ್ಲಿ ಹೇಳಲಾರೆ. ನನ್ನ ಜೀವನದಲ್ಲಿ ಯಾರನ್ನೂ ನಾನೆಂದೂ ಸೇವಕರೆಂದು ತಿಳಿಯಲಿಲ್ಲ. ಸೋದರರೆಂದೇ ಭಾವಿಸಿದ್ದೇನೆ. ನೀವು ಅದಕ್ಕಿಂತ ಇನಿತೂ ಕಡಿಮೆಯಾಗಿರಲಿಲ್ಲ. ನಿಮ್ಮ ಸೇವೆ ಪಡೆಯುವ ಶಕ್ತಿ ನನಗಿಲ್ಲ. ಭಗವಂತ ನಿಮ್ಮ ಅಪಾರ ಸೇವೆ ಪಡೆಯಬಲ್ಲ" ಎಂದರು.

ಅಡುಗೆ ಭಟ್ಟ

ಮಹಾದೇವ ದೇಸಾಯಿ ಒಮ್ಮೆ ಗಾಂಧೀಜಿಯನ್ನು "ಬಾಪೂಜಿ ಫೀನಿಕ್ಸ್ ಆಶ್ರಮವನ್ನು ಸೇರುವ ಮೊದಲು, ನಿಮ್ಮೊಡನೆ ಅಡುಗೆಯವರಿದ್ದರೇನು? ಎಂದು ಕೇಳಿದರು. ಗಾಂಧೀಜಿ "ಇಲ್ಲ, ಅಡುಗೆಯವನನ್ನು ಮೊದಲೇ ಮನೆಗೆ ಕಳುಹಿಸಿಬಿಟ್ಟಿದ್ದೆ. ನಮ್ಮಲ್ಲೊಬ್ಬ ಒಳ್ಳೆಯ ಅಡುಗೆಯವನಿದ್ದ. ಆದರೆ ಮಸಾಲೆ ಮತ್ತು ಸಂಬಾರಗಳಿಲ್ಲದೆ ತನಗೆ ಅಡುಗೆ ಮಾಡಲು ಅಸಾಧ್ಯ ಎಂದ. ತಕ್ಷಣ ನಾನವನನ್ನು ಬಿಡುಗಡೆ ಮಾಡಿದೆ. ಮತ್ತೆ ಯಾವ ಅಡುಗೆಯವನನ್ನೂ ನೇಮಿಸಿಕೊಳ್ಳಲಿಲ್ಲ" ಎಂದುತ್ತರಿಸಿದರು.

ಗಾಂಧೀಜಿ 35 ವರ್ಷ ಪ್ರಾಯವಾಗಿದ್ದಾಗ ಈ ಘಟನೆ ಸಂಭವಿಸಿತು. ತನ್ನ 18ನೇ ವಯಸ್ಸಿನಲ್ಲಿ ಇಂಗ್ಲೆಂಡಿನಲ್ಲಿದ್ದಾಗ ಅವರು ಸ್ವಂತ ಅಡುಗೆ ಮಾಡುವ ಪ್ರಯತ್ನ ನಡೆಸಿದರು. ಗಾಂಧೀಜಿ ಕಟ್ಟಾ ಶಾಖಾಹಾರಿಯಾಗಿದ್ದರು. ಶಾಖಾಹಾರ ಚಳುವಳಿಯನ್ನೂ ಇಂಗ್ಲೆಂಡಿನಲ್ಲಿ ಪ್ರಾರಂಭಿಕ ಹಂತದಲ್ಲಿತ್ತು. ಸಾಮಾನ್ಯವಾಗಿ ಗಾಂಧೀಜಿಯ ಊಟಕ್ಕೆ ಬೆಣ್ಣೆ, ಸಕ್ಕರೆ ಪಾಕದೊಂದಿಗೆ ಬ್ರೆಡ್ಡು ಮತ್ತು ಮಸಾಲೆ ಸೇರಿಸದೆ ಬೇಯಿಸಿದ ತರಕಾರಿ ದೊರೆಯುತ್ತಿತ್ತು. ತನ್ನ ತಾಯಿ ತಯಾರಿಸಿ ಮಸಾಲೆ ಸೇರಿಸಿದ ರುಚಿರುಚಿಯಾದ ತಿಂಡಿಗಳಿಗೆ ಒಗ್ಗಿದ್ದ ಗಾಂಧೀಜಿ ಅವರಿಗೆ ಊಟವೆಲ್ಲ ಹಸಿಹಸಿಯಾಗಿ ತೋರುತ್ತಿತ್ತು.

ಕೆಲವು ತಿಂಗಳ ಕಾಲ ಶಾಖಾಹಾರಿ ಹೋಟೆಲುಗಳಲ್ಲಿ ಊಟ ಮಾಡಿದ ಬಳಿಕ ಗಾಂಧೀಜಿ ಮಿತವ್ಯಯದಿಂದ ಜೀವಿಸಲು ನಿರ್ಧರಿಸಿದರು. ಒಂದು ಕೋಣೆಯನ್ನು ಬಾಡಿಗೆಗೆ ಹಿಡಿದು, ಸ್ಟೌ ಮೇಲೆ ತನ್ನ ಬೆಳಗಿನ ಉಪಹಾರ ಹಾಗೂ ಊಟವನ್ನು ತಯಾರಿಸತೊಡಗಿದರು. ತನ್ನ ಆಹಾರವನ್ನು ತಯಾರಿಸಲು ಅವರಿಗೆ 20 ನಿಮಿಷಗಳಿಗಿಂತ ಹೆಚ್ಚು ಸಮಯ ಬೇಕಾಗುತ್ತಿರಲಿಲ್ಲ ಮತ್ತು ದಿನಕ್ಕೆ 12 ಅಣೆಗಳಷ್ಟೇ ವೆಚ್ಚವಾಗುತ್ತಿತ್ತು. ಶ್ರೀ ಸಾಲ್ಟ್ ಅವರ "ಶಾಖಾಹಾರಿಗಳಾಗಲು ವಿನಂತಿ" ಎಂಬ ಪುಸ್ತಕವನ್ನು ಓದಿದ ನಂತರ ಮತ್ತು ಲಂಡನ್ ಶಾಖಾಹಾರಿ ಸಂಘದ ಸಂಪರ್ಕಕ್ಕೆ ಬಂದ ಬಳಿಕ ಗಾಂಧೀಜಿ ತಮ್ಮ ಆಹಾರದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದರು.

ಬ್ಯಾರಿಸ್ಟರ್ ಆಗಿ ದಾಖಲಾತಿ ಮಾಡಿಕೊಂಡು ಭಾರತಕ್ಕೆ ಮರಳಿದಾಗ, ಗಾಂಧೀಜಿ ಮುಂಬಯಿಯಲ್ಲಿ ಸಣ್ಣ ಫ್ಲಾಟ್ ಒಂದನ್ನು ಬಾಡಿಗೆಗೆ ಪಡೆದು ಒಬ್ಬ ಬ್ರಾಹ್ಮಣ ಅಡುಗೆಯವನನ್ನು ಗೊತ್ತುಮಾಡಿದರು. ಆತನಿಗೆ ಕೆಲವು ಇಂಗ್ಲಿಷ್ ಸಸ್ಯಾಹಾರಿ ತಿನಿಸುಗಳನ್ನು ತಯಾರಿಸುವುದನ್ನು ಕಲಿಸಿದರು. ಗಾಂಧೀಜಿ ಅಡುಗೆ ಕೋಣೆಯಲ್ಲಿ ಮುಖ್ಯವಾಗಿ ಓರಣಕ್ಕೆ ಮತ್ತು ಸ್ವಚ್ಛತೆಗೆ ಎಲ್ಲಿಲ್ಲದ ಮಹತ್ವ ಕೊಡುತ್ತಿದ್ದರು. ತಮ್ಮ ಅಡುಗೆಯವನಿಗೆ ಶುಚಿತ್ವದ ಬಗ್ಗೆ ಹಾಗೂ ತನ್ನ ಬಟ್ಟೆಬರೆಗಳನ್ನು ಒಗೆದುಕೊಂಡು ಸ್ನಾನ ಮಾಡಿ ಶುಚಿಯಾಗಿರಲು ಕಲಿಸಿಕೊಟ್ಟರು.

ದಕ್ಷಿಣ ಆಫ್ರಿಕಾದಲ್ಲಾಗಲೀ, ಭಾರತದಲ್ಲಾಗಲೀ ಗಾಂಧೀಜಿ ಸಂಬಳದ ಅಡುಗೆಯವನನ್ನು ನೇಮಿಸಲಿಲ್ಲ. ಒಂದು ಊಟಕ್ಕಾಗಿ ಅನೇಕ ಬಗೆಯ ತಿನಿಸುಗಳನ್ನೂ ವ್ಯಂಜನಗಳನ್ನೂ ತಯಾರಿಸುವುದು ಸಮಯದ ಮತ್ತು ಹಣದ ಅಪವ್ಯಯವೆಂದು ಅವರು ತಿಳಿದಿದ್ದರು.

ಆಶ್ರಮದ ಬೇರೆ ಬೇರೆ ಜನರ ಬೇರೆ ಬೇರೆ ರುಚಿಗಳಿಗನುಸರಿಸಿ ಆಹಾರ ನೀಡಲು ಅವರು ಸಿದ್ಧರಿರಲಿಲ್ಲ. ಎಲ್ಲರಿಗೂ ಯೋಗ್ಯವಾದ ಸರಳ ಆಹಾರ ಪದ್ಧತಿಯನ್ನು ಅವರು ಸಿದ್ಧಗೊಳಿಸಿದರು. ಆಹಾರವನ್ನು ಸಾಮೂಹಿಕ ಅಡುಗೆ ಮನೆಯಲ್ಲಿ ಸಿದ್ಧಪಡಿಸಲಾಗುತ್ತಿತ್ತು.

ತುಂಬ ಕ್ಲಿಷ್ಟಕರವಾದ ಅಡುಗೆಯ ಕಲೆಯನ್ನು ಅವರು ಸರಳಗೊಳಿಸಿದರು. ಗಾಂಧೀಜಿಯ ಆಶ್ರಮದಲ್ಲಿ ಅಕ್ಕಿಯ ಗಂಜಿ, ಬ್ರೆಡ್ಡು, ಹಸಿ ತರಕಾರಿಗಳ ಸಲಾಡ್, ಮಸಾಲೆ ಸೇರಿಸದೆ ಬೇಯಿಸಿದ ತರಕಾರಿ, ಹಣ್ಣು ಮತ್ತು ಹಾಲು ಅಥವಾ ಮೊಸರುಗಳನ್ನೇ ಬಡಿಸಲಾಗುತ್ತಿತ್ತು. ಸಿಹಿತಿಂಡಿಗಳು ಮತ್ತು ಹಾಲಿನ ಪದಾರ್ಥಗಳ ಬದಲು ಹೊಸ ಬೆಲ್ಲ ಮತ್ತು ಜೇನನ್ನು ಬಳಸಲಾಗುತ್ತಿತ್ತು.

ನಾಲಿಗೆಯ ರುಚಿಗಾಗಿ ತಿನ್ನದೆ ಶರೀರವನ್ನು ಸುಯೋಗ್ಯ ಸ್ಥಿತಿಯಲ್ಲಿರಿಸುವುದಕ್ಕಾಗಿ ತಿನ್ನಬೇಕೆಂದು ಗಾಂಧೀಜಿಗೆ, ಶ್ರೀ ಜಸ್ಟ್ ಅವರ "ಮರಳಿ ನಿಸರ್ಗಕ್ಕೆ" ಎನ್ನುವ ಪುಸ್ತಕವನ್ನು ಓದಿದ ಬಳಿಕ ಮನದಟ್ಟಾಯಿತು. ಅವರು ಆಹಾರದಲ್ಲಿ ಪ್ರಯೋಗಗಳನ್ನಾರಂಭಿಸಿದರು. ಅದು ಅವರ ಜೀವಮಾನದ ಹವ್ಯಾಸವಾಯಿತು. ಕೆಲವು ಪ್ರಯೋಗಗಳಿಗೆ ಅಡುಗೆಯ ಅವಶ್ಯಕತೆಯೇ ಇರಲಿಲ್ಲ. ಇನ್ನು ಕೆಲವು ಗಾಂಧೀಜಿಯನ್ನು ತೊಂದರೆಗೆ ಸಿಲುಕಿದವು. ಐದು ವರ್ಷಗಳವರೆಗೆ

ಗಾಂಧೀಜಿ ಹಣ್ಣುಹಂಪಲುಗಳನ್ನೇ ಸೇವಿಸುತ್ತಾ ಜೀವಿಸಿದರು. ನಾಲ್ಕು ತಿಂಗಳು ಹಸಿ ಆಹಾರ ಮತ್ತು ಮೊಳಕೆ ಒಡೆದ ಕಾಳುಗಳನ್ನು ತಿನ್ನುತ್ತ ಬಂದರು. ಅದರ ಫಲವಾಗಿ ಆಮಶಂಕೆಯಿಂದ ನರಳಿದರು.

ಫೀನಿಕ್ಸ್ ಆಶ್ರಮದ ಕಾಲೋನಿಯಲ್ಲಿ ಅವರು ಅಲ್ಲಿನ ಶಾಲೆಯ ಮುಖ್ಯೋಪಾಧ್ಯಾಯರಾಗಿ ಮತ್ತು ಆಶ್ರಮದ ಪ್ರಧಾನ ಅಡುಗೆಯವರಾಗಿ ಕಾರ್ಯ ನಿರ್ವಹಿಸಿದರು. ದಕ್ಷಿಣ ಆಫ್ರಿಕಾದ ಭಾರತೀಯರು ಯೂರೋಪಿಯನರಿಗೆ ನೀಡಿದ ಔತಣಕೂಟವೊಂದರಲ್ಲಿ ಪಾಲ್ಗೊಂಡರು.

ಫೀನಿಕ್ಸ್ ಆಶ್ರಮದಲ್ಲಿ ಪ್ರಥಮ ಸತ್ಯಾಗ್ರಹಿಗಳ ತಂಡ ತೆರಳಿದಾಗ ಅವರಿಗೆ ಗಾಂಧೀಜಿ ಪ್ರೀತಿಯ ಭೋಜನವೊಂದನ್ನು ಏರ್ಪಡಿಸಿದರು. ಅದಕ್ಕಾಗಿ ಒಂದು ರಾಶಿ ಚಪಾತಿ, ಟೊಮ್ಯಾಟೋ ಚಟ್ನಿ, ಅನ್ನ ಪಲ್ಯ, ಖರ್ಜೂರದ ಸಿಹಿತಿಂಡಿ ಎಲ್ಲವನ್ನೂ ಸಿದ್ಧಗೊಳಿಸಿದರು. ಕೈತುಂಬ ಅಡುಗೆ ಕೆಲಸವಿದ್ದಾಗಲೂ, ಸತ್ಯಾಗ್ರಹಿಗಳಿಗೆ, ಸತ್ಯಾಗ್ರಹದ ಬಗ್ಗೆ ನಿರ್ದೇಶನವೀಯುತ್ತಲೂ, ಜೈಲಿನಲ್ಲಿ ಯಾವ ರೀತಿ ಇರಬೇಕೆಂದು ವಿವರಿಸುತ್ತಲೂ ಇದ್ದರು. ಸತ್ಯಾಗ್ರಹಿಗಳ ಸಂಖ್ಯೆ 2500ಕ್ಕೆ ಮುಟ್ಟಿದಾಗ, ಗಾಂಧೀಜಿಯೇ ಅವರ ಮುಂದಾಳಾಗಿ ಸತ್ಯಾಗ್ರಹ ನಡೆಸಿದರು. ಅಡುಗೆಯವನಾಗಿಯೂ ಕಾರ್ಯ ನಿರ್ವಹಿಸಿದರು. ಒಂದು ದಿನ ಬೇಳೆ ಸಾರು ತುಂಬಾ ನೀರಾಯಿತು. ಇನ್ನೊಮ್ಮೆ ಅನ್ನ ಅರೆಬೆಂದಿತು. ಆ ಸತ್ಯಾಗ್ರಹಿಗಳಾದರೋ ತನ್ನ ಗಾಂಧೀ ಅಣ್ಣನನ್ನು ಎಷ್ಟೊಂದು ಆರಾಧಿಸುತ್ತಿದ್ದರೆಂದರೆ, ಸ್ವಲ್ಪವೂ ಗೊಣಗದೆ ಆ ಅನ್ನವನ್ನೇ ನುಂಗಿದರು. ದಕ್ಷಿಣ ಆಫ್ರಿಕಾದ ಜೈಲಿನಲ್ಲಿ ಗಾಂಧೀಜಿ ತನ್ನ ಸಂಗಡಿಗರೊಡನೆ ಅಡುಗೆಯಲ್ಲಿ ಸಹಕರಿಸಿದರು. ಅಡಿಗೆ ಶಿಕ್ಷಣದ ಒಂದು ಅತ್ಯಾವಶ್ಯಕ ಭಾಗವೆಂದು ಅವರು ನಂಬಿದ್ದರು. ಟಾಲ್‌ಸ್ಟಾಯ್ ಆಶ್ರಮದ ಹೆಚ್ಚು ಕಡಿಮೆ ಎಲ್ಲ ಯುವಕರಿಗೂ ಅಡುಗೆ ಮಾಡಲು ಬರುತ್ತಿತ್ತೆಂದು ಅವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ದ. ಆಫ್ರಿಕಾದಿಂದ ಭಾರತಕ್ಕೆ ಮರಳಿದ ತರುಣದಲ್ಲೇ ಅವರು ತಮ್ಮ ಅಡುಗೆಯ ಹುಚ್ಚನ್ನು ಶಾಂತಿನಿಕೇತನದ ವಿದ್ಯಾರ್ಥಿಗಳಿಗೂ ಅಂಟಿಸಿದರು. ಅವರು ಸಾಮೂಹಿಕ ಪಾಕಶಾಲೆಯ ಕಲ್ಪನೆಯನ್ನು ಮೆಚ್ಚಿಕೊಂಡು ತಮ್ಮ ಆಹಾರವನ್ನು ಸರದಿಯಂತೆ ತಾವೇ ತಯಾರಿಸಿಕೊಳ್ಳಲು ಒಪ್ಪಿದರು. ಠಾಗೋರರು ಇದರ ಯಶಸ್ಸನ್ನು ಶಂಕಿಸಿದರಾದರೂ, ಪ್ರಯತ್ನವನ್ನು ಆಶೀರ್ವದಿಸಿದರು.

ಮದ್ರಾಸಿನ ವಿದ್ಯಾರ್ಥಿ ನಿಲಯವೊಂದರಲ್ಲಿ ಪಾಕಶಾಲೆಗಳಲ್ಲಿ ಬೇರೆ ಬೇರೆ ಜಾತಿಗಳಿಗೆ ಬೇರೆ ಬೇರೆಯಾಗಿ ಅಡುಗೆ ಮಾಡುವುದಷ್ಟೇ ಅಲ್ಲದೆ, ವಿವಿಧ ಗುಂಪುಗಳ ರುಚಿಗನುಸರಿಸಿ ವಿವಿಧ ರೀತಿಯ ಮಸಾಲೆಗಳನ್ನು ಉಪಯೋಗಿಸುವುದನ್ನು ಕಂಡು ಆಶ್ಚರ್ಯಪಟ್ಟರು. ಬಂಗಾಳಿ ಅತಿಥೇಯರ ಮನೆಯಲ್ಲಿ ತಮಗೆ ಅನೇಕ ಬಗೆಯ ತಿಂಡಿತಿನಿಸುಗಳನ್ನು ಬಡಿಸಿದಾಗಲೂ ಅಷ್ಟೇ ತಳವಳಪಟ್ಟರು. ಆಗಿನಿಂದ ದಿನಕ್ಕೆ ಐದು ಬಗೆಯ ಆಹಾರ ಪದಾರ್ಥಗಳಿಗಿಂತ ಹೆಚ್ಚನ್ನು ಬಳಸದಿರುವ ವ್ರತ ತೊಟ್ಟರು.

ಚಂಪಾರಣ್ಯ ವಿಚಾರಣೆಯ ವೇಳೆ ತನಗೆ ನೆರವೀಯುತ್ತಿದ್ದ ಎಲ್ಲ ವಕೀಲರುಗಳೂ ಒಂದೇ ಅಡುಗೆಮನೆಯಲ್ಲಿ ತಯಾರಾದ ಊಟವನ್ನು ಉಣ್ಣುವಂತೆ ಮಾಡಿ, ಗಾಂಧೀಜಿ ಬಿಹಾರದಲ್ಲಿ ಶತಮಾನಗಳಿಂದ ನಡೆದು ಬಂದ ಅಸ್ಪೃಶ್ಯತೆಯ ಪದ್ಧತಿಯನ್ನು ಮುರಿದರು. ಆಹಾರವನ್ನು ಇನ್ನಷ್ಟು ಸಂಸ್ಕರಿಸಿ, ರುಚಿಗೆ ಒತ್ತುಕೊಡುವ ಬದಲು, ಆರೋಗ್ಯಕ್ಕೆ ಅನುಕೂಲವಾಗುವಂತೆ ಸಿದ್ಧಪಡಿಸುವುದನ್ನು ಗಾಂಧೀಜಿ ಬಯಸಿದ್ದರು.

ಗಾಂಧೀಜಿಯ ಆಹಾರದ ಕೆಲವು ವಿಚಿತ್ರ ಪದಾರ್ಥಗಳಲ್ಲಿ ಕಹಿಯಾದ ಬೇವಿನ ಎಲೆಯ ಚಟ್ನಿ, ಕೈಗಾಣದಲ್ಲಿ ದೊರೆಯುವ ಎಣ್ಣೆಯ ಹಿಂಡಿ ಮತ್ತು ಮೊಸರು. ಹುಣಸೆಹಣ್ಣು ಮತ್ತು ಬೆಲ್ಲ ಸೇರಿಸಿ ಮಾಡಿದ ಶರಬತ್ತು, ಮಸಾಲೆ ಹಾಕದೆ ಬೇಯಿಸಿದ ಸೋಯಾಬೀನ್ಸ್, ಹಸಿರುಸೊಪ್ಪುಗಳಿಂದ ಮಾಡಿದ ಸಲಾಡ್, ಹುರಿದ ಗೋಧಿತರಿಯ ಉಪ್ಪಿಟ್ಟು, ಹುರಿದ ಗೋಧಿಹಿಟ್ಟಿನ ಕಾಫಿ ಇತ್ಯಾದಿಗಳು ಸೇರಿದ್ದವು.

ಹಿಟ್ಟಿನ ರೊಟ್ಟಿ, ಅನ್ನ, ಬೇಳೆ ತರಕಾರಿ ಬೇಯಿಸಿದ ಕಾಯಿಪಲ್ಲೆಗಳು, ಕಿತ್ತಲೆ ಹಣ್ಣು ಮತ್ತು ಅದರ ಸಿಪ್ಪೆಗಳ ಕಷಾಯ, ಈಸ್ಟ್ ಅಥವಾ ಅಡುಗೆ ಸೋಡ ಬಳಸದ ಬ್ರೆಡ್ಡು, ಒಳ್ಳೆಯ ಚಪಾತಿಗಳು, ಮತ್ತು ಉತ್ತಮ ಖಾಖ್ರಾ ಇವೆಲ್ಲವನ್ನು ಗಾಂಧೀಜಿ ತಯಾರಿಸಬಲ್ಲವರಾಗಿದ್ದರು. ಆಶ್ರಮದ ಅಡಿಗೆ ಮನೆಯಲ್ಲಿ ಬ್ರೆಡ್, ಬಿಸ್ಕೆಟ್ ತಯಾರಿಸುವುದನ್ನು ಅವರು ಪ್ರಾರಂಭಿಸಿದರು. ನೂರಾರು ಜನರಿಗೆ ಸಾಕಾಗುವಷ್ಟು ಅನ್ನ, ಬ್ರೆಡ್ಡುಗಳನ್ನು ತಯಾರಿಸಲು ಮತ್ತು ತರಕಾರಿಗಳನ್ನು

ಬೇಯಿಸಲು ಸೇವಾಗ್ರಾಮದಲ್ಲಿ ಒಂದು ವಿಶಿಷ್ಟ ರೀತಿಯ ಸರಳವಾದ ಒಲೆಯನ್ನು ಬಳಸಲಾಗುತ್ತಿತ್ತು.

ಅವರ ಸಂಗಡಿಗರೊಬ್ಬರು "ಹುಲ್ಲು ಅತ್ಯಧಿಕ ಪ್ರಮಾಣದಲ್ಲಿ ವಿಟಮಿನ್ನುಗಳನ್ನು ಹೊಂದಿದೆ ಎಂದು ಇತ್ತೀಚೆಗೆ ತಿಳಿದುಬಂದಿದೆ. ಸುದೈವದಿಂದ ಈ ಹೊಸ ಶೋಧ ಗಾಂಧೀಜಿ ಆಶ್ರಮದಲ್ಲಿದ್ದಾಗ ಆಗಲಿಲ್ಲ. ಹಾಗೇನಾದರೂ ಆಗಿದ್ದರೆ ಅವರು ಆಶ್ರಮದ ಅಡುಗೆಮನೆಯನ್ನು ಮುಚ್ಚಿ ನಮಗೆ ಹೊರಗಿನ ಹುಲ್ಲುಗಾವಲಲ್ಲಿ ಮೇಯುವಂತೆ ಹೇಳುತ್ತಿದ್ದರು" ಎಂದು ಉದ್ಗರಿಸಿದ್ದಾರೆ. ಒಮ್ಮೆ ಗಾಂಧೀಜಿ ಮಾದರಿ ವಸತಿಶಾಲೆಯೊಂದಕ್ಕೆ ಭೇಟಿ ನೀಡಿದರು. ಅಲ್ಲಿನ ಅಡುಗೆ ವ್ಯವಸ್ಥೆಯನ್ನು ಮೆಚ್ಚದ ಗಾಂಧೀಜಿ ಅಧ್ಯಾಪಕರಿಗೆ ಮಕ್ಕಳಿಗೆ ಅಕ್ಷರ ಜ್ಞಾನದ ಶಿಕ್ಷಣ ನೀಡುವ ಜೊತೆಗೆ, ನೀವು ಅವರನ್ನು ನುರಿತ ಅಡುಗೆಯವರನ್ನಾಗಿ ಮತ್ತು ಭಂಗಿಗಳನ್ನಾಗಿ ಮಾಡಿದರೆ ನೀವು ನಿಮ್ಮ ಶಾಲೆಯನ್ನು ಮಾದರಿ ಸಂಸ್ಥೆಯನ್ನಾಗಿ ರೂಪಿಸಿದಂತಾದೀತು" ಎಂದು ತಿಳಿಸಿದರು.

ರೈತ

ರೈತನನ್ನು ಲೋಕದ ತಂದೆ ಎಂದು ವರ್ಣಿಸುವ ಪದ್ಯವೊಂದನ್ನು ಗಾಂಧೀಜಿ ಓದಿದರು. ಭಗವಂತ ಜಗತ್ತಿನ ದಾತ, ಕೃಷಿಕ ಭಗವಂತನ ಕೈ ಎಂದು ಆ ಕವನದಲ್ಲಿ ವರ್ಣಿಸಲಾಗಿತ್ತು. ಬಡತನ ಮತ್ತು ಅಜ್ಞಾನಗಳಿಂದ ರೈತರ ಬಿಡುಗಡೆಯಾದಾಗಲೇ ಭಾರತಕ್ಕೆ ಮುಕ್ತಿ ಎಂದು ಗಾಂಧೀಜಿ ಸಾರಿದರು. "ಎಪ್ಪತ್ತೈದು ಪ್ರತಿಶತಕ್ಕಿಂತಲೂ ಹೆಚ್ಚಿನ ಜನರು ಕೃಷಿಕರು. ರೈತನೇ ಭೂಮಿಯ ಸತ್ವ ಆ ಭೂಮಿ ಅವನಿಗೇ ಸೇರಬೇಕೇ ಹೊರತು ಹೊಲದಿಂದ ದೂರವಿದ್ದು ಬದುಕುವ ಭೂಮಾಲೀಕನಿಗಲ್ಲ. ಸಬ್ಬೈ ಭೂಮಿ ಗೋಪಾಲಕೀ (ಭೂಮಿ ಎಲ್ಲ ಭಗವಂತನದು) ರೈತರಿಂದ ಅವರ ದುಡಿಮೆಯ ಫಲವೆಲ್ಲವನ್ನೂ ನಾವು ತೆಗೆದುಕೊಂಡರೆ, ಸ್ವಯಮಾಧಿಕಾರದ ಮಾತಿಗೇನೂ ಬೆಲೆಯಿರಲಾರದು. ನಮ್ಮ ಮುಕ್ತಿಯೇನಿದ್ದರೂ ರೈತನಿಂದಲೇ ಬರಬೇಕು. ವಕೀಲರಾಗಲೀ, ಡಾಕ್ಟರರಾಗಲೀ ಅಥವಾ ಶ್ರೀಮಂತ ಭೂ ಮಾಲೀಕರಾಗಲೀ ದೇಶದ ಬಿಡುಗಡೆಯನ್ನು ಸಾಧಿಸಲಾರರು" ಎಂದು ಗಾಂಧೀಜಿ ಹೇಳಿದರು.

ರಾಷ್ಟ್ರದ ಒಟ್ಟು ತೆರಿಗೆಯ 25 ಪ್ರತಿಶತ ರೈತಾಪಿ ಜನರಿಂದಲೇ ಸಂಗ್ರಹಿಸಲಾಗುತ್ತಿತ್ತು. ಭೂಕಂದಾಯ ಹೊರೆ ಹೆಚ್ಚೇ ಆಗಿತ್ತು. ಭಾರತದ ಯಾವುದೇ ನಗರದಲ್ಲಿ ಹೊಸತಾಗಿ ಭಾರೀ ಗಾತ್ರದ ಬಂಗಲೆಯೊಂದು ಮೇಲೇಳುವಾಗ ಗಾಂಧೀಜಿ ಖಿನ್ನರಾಗಿ "ಅಯ್ಯೋ ಬಡ ಕೃಷಿಕರಿಂದ ಬಂದ ಹಣದಿಂದ ಈ ಕಟ್ಟಡ ನಿರ್ಮಿಸಲಾಗುತ್ತಿದೆ" ಎಂದು ನೊಂದು ನುಡಿಯುತ್ತಿದ್ದರು.

ಗಾಂಧೀಜಿ ಹುಟ್ಟನಿಂದ ರೈತನಾಗಿರಲಿಲ್ಲ. ಆದರೆ ಒಬ್ಬ ರೈತನಾಗಲು ಎಲ್ಲ ರೀತಿಯಿಂದ ಪ್ರಯತ್ನಿಸಿದರು. ಹುಡುಗನಾಗಿದ್ದಾಗಿನಿಂದಲೂ, ಹಣ್ಣಿನ ಗಿಡಗಳನ್ನು ಬೆಳೆಯುವುದರಲ್ಲಿ ಅವರಿಗೆ ಆಸಕ್ತಿ. ಪ್ರತಿ ಸಂಜೆಯೂ ಶಾಲೆಯಿಂದ ಮರಳಿದ ಬಳಿಕ ಗಿಡಗಳಿಗೆ ನೀರೆರೆಯುತ್ತಿದ್ದರು. ತಮಗೆ 35 ವರ್ಷವಾಗಿದ್ದಾಗ ಗಾಂಧೀಜಿ, ಆಶ್ರಮದ ತೋಟದಲ್ಲಿ ರೈತನ ಬಾಳನ್ನು ಬಾಳಲು ತೆರಳಿದರು. ಅವರು ಆಶ್ರಮವೊಂದರ ನಿರ್ಮಾಣಕ್ಕಾಗಿ ಸ್ಥಳದ ಶೋಧನದಲ್ಲಿದ್ದಾಗ ಕೆಲವು ಹಣ್ಣಿನ ಗಿಡಗಳಿದ್ದ ಒಂದು ಎಕರೆ ಜಾಗ ಗಾಂಧೀಜಿಯನ್ನು ಆಕರ್ಷಿಸಿತು. ಅದನ್ನು ಕ್ರಯಕ್ಕೆ

ಪಡೆದು ಅವರು ತಮ್ಮ ಕುಟುಂಬ ಮತ್ತು ಮಿತ್ರರೊಂದಿಗೆ ಅದರಲ್ಲಿ ನೆಲೆಸಿದರು. ಮೆಲ್ಲಮೆಲ್ಲನೆ ಅವರು ವ್ಯವಸಾಯ ಪ್ರಾರಂಭಿಸಿದರು. ಮತ್ತು ತಮ್ಮ ಕಾನೂನು ತಜ್ಞನ ವೃತ್ತಿಗೆ ತಿಲಾಂಜಲಿ ಇತ್ತರು. ಆಶ್ರಮದ ನಿವಾಸಿಗಳೇ ವಾಸಿಸಲು ಗುಡಿಸಲುಗಳನ್ನು ನಿರ್ಮಿಸಿಕೊಂಡರು. ಗಾಂಧೀಜಿ ಭೂಮಿಯನ್ನು ಉತ್ತರು, ಬಾವಿಯಿಂದ ನೀರು ಸೇದಿದರು, ತರಕಾರಿ ಹಣ್ಣು ಹಂಪಲು ಬೆಳೆದರು ಮತ್ತು ಮರ ಕಡಿಯುವ, ಸೌದೆ ಒಡೆಯುವ ಕೆಲಸ ಮಾಡಿದರು. ಅನತಿ ಕಾಲದಲ್ಲೇ ಆ ಭೂಮಿಯನ್ನು ಗಾಂಧೀಜಿ ಒಳ್ಳೆಯ ಹಣ್ಣಿನ ತೋಟವನ್ನಾಗಿ ಪರಿವರ್ತಿಸಿದರು. ದಕ್ಷಿಣ ಆಫ್ರಿಕಾದ 10 ವರ್ಷಗಳ ಆಶ್ರಮ ಜೀವನ ಅವರಿಗೆ ತೋಟಗಾರಿಕೆಯ ಬಗ್ಗೆ ಒಳ್ಳೆಯ ಅನುಭವ ಮತ್ತು ತಿಳುವಳಿಕೆಗಳನ್ನು ನೀಡಿತು. ಜೇನುಹುಟ್ಟುಗಳಿಗಾಗಲೀ ನೊಣಗಳಿಗಾಗಲೀ ಅಪಾಯವಾಗದಂತಹ ವೈಜ್ಞಾನಿಕ ಜೇನುನೊಣಗಳಿಂದಾಗಿ ಹೊಲಗದ್ದೆಗಳು ಅಥವಾ ಹಣ್ಣಿನ ತೋಟಗಳು ಹೇಗೆ ಅಧಿಕ ಬೆಳೆಕೊಡಬಲ್ಲವು ಎಂದು ಅವರು ವಿವರಿಸುತ್ತಿದ್ದರು. ಜೇನುನೊಣಗಳು, ಮಧುವನ್ನು ಸಂಗ್ರಹಿಸುವುದರ ಜೊತೆಗೆ ಪರಾಗಸ್ಪರ್ಶ ಕ್ರಿಯೆಯನ್ನು ಚುರುಕುಗೊಳಿಸಿ ತರಕಾರಿಗಳ ಅಥವಾ ಹಣ್ಣುಹಂಪಲುಗಳ ಗಿಡಗಳಲ್ಲಿ ಹೆಚ್ಚಿನ ಫಲೀಕರಣಕ್ಕೆ ಕಾರಣವಾಗುತ್ತದೆ ಎಂದವರು ವಿವರಿಸುತ್ತಿದ್ದರು.

ಭೂಮಿ ಫಲವತ್ತಾಗಿಲ್ಲ, ಸಲಕರಣೆಗಳ ಕೊರತೆ ಅಥವಾ ಸಾಕಷ್ಟು ನೀರಿನ ಆಶ್ರಯವಿಲ್ಲ ಎನ್ನುವ ದೂರುಗಳನ್ನು ಗಾಂಧೀಜಿ ತಳ್ಳಿಹಾಕಿಬಿಡುತ್ತಿದ್ದರು. ಕೃಷಿಕನ ಪ್ರಧಾನ ಸಂಪತ್ತೆಂದರೆ, ತನ್ನ ಶ್ರಮವನ್ನು ಬುದ್ಧಿವಂತಿಕೆಯಿಂದ ಬಳಸುವುದೇ ಆಗಿದೆ ಎಂದು ಅವರು ಹೇಳುತ್ತಿದ್ದರು. ಕೃಷಿಕನು ಚೈತನ್ಯಶೀಲ ಬುದ್ಧಿಶಾಲಿ ಮತ್ತು ಸ್ವಾವಲಂಬಿಯಾಗಿರಬೇಕು. ನಯೀತಾಲೀಮ್ ಶಿಕ್ಷಣ ಪದ್ಧತಿಯ ಸಂಯೋಜಕರೊಬ್ಬರು ಒಮ್ಮೆ ತಮ್ಮ ವಶಕ್ಕೆ ನೀಡಲಾಗಿದ್ದ ಭೂಮಿ ಕೃಷಿಗೆ ಯೋಗ್ಯವಾಗಿಲ್ಲವೆಂದು ದೂರಿಕೊಂಡಾಗ ಗಾಂಧೀಜಿ, ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭದಲ್ಲಿ "ನಮಗೆಂತಹ ಭೂಮಿ ದೊರಕಿತ್ತು ಎನ್ನುವುದು ನಿನಗೆ ತಿಳಿಯದು. ನಿನ್ನ ಸ್ಥಾನದಲ್ಲಿ ನಾನಿದ್ದಿದ್ದರೆ ಶುರುವಿಗೇ ನೇಗಿಲನ್ನು ಬಳಸಲಾರೆ. ಮಕ್ಕಳಿಗೆ ಸಲಿಕೆಗಳನ್ನಿತ್ತು ಅವುಗಳ ಬಳಕೆಯನ್ನು ಕಲಿಸುತ್ತಿದ್ದೆ. ಅದೊಂದು ಕಲೆ. ಎತ್ತುಗಳ ಉಪಯೋಗ ಆಮೇಲೆ ಮಾಡಬಹುದು. ಕೆಸರುಮಣ್ಣು ಅಥವಾ ಕಾಂಪೋಸ್ಟ್ ಗೊಬ್ಬರದ ತೆಳ್ಳಗಿನ ಮೇಲ್ಪದರವನ್ನು ಉಪಯೋಗಿಸಿ ನಾವು ಅನೇಕ ತರಕಾರಿಗಳನ್ನು ಚಟ್ಟಿಗಳಲ್ಲಿ ಬೆಳೆಯುವ ಗಿಡಗಳನ್ನು ಬೆಳೆಯಬಲ್ಲೆವು. ಮಲವನ್ನು

ಡಿಮೆ ಆಳದ ಗುಂಡಿಗಳಲ್ಲಿ ಗೊಬ್ಬರವಾಗಿ ಪರಿವರ್ತಿಸಲು ದಿನಗಳಿಗಿಂತ ಹೆಚ್ಚು ಮಯ ತಗಲುವುದಿಲ್ಲ. ನಮ್ಮ ಮಕ್ಕಳಿಗೆ ಕೃಷಿ ಗೌರವಾರ್ಹವಾದ ವೃತ್ತಿಯೊಂದು ನ್ನಿಸುವಂತಹ ಶಿಕ್ಷಣವೀಯಬೇಕು. ಅದು ಕೀಳ್ಮಟ್ಟದ ಕೆಲಸವಲ್ಲ. ಅದೊಂದು ಉದಾತ್ತವಾದ ಉದ್ಯೋಗ" ಎಂದರು. ಮೂಲಶಿಕ್ಷಣ ಪದ್ಧತಿಯಲ್ಲಿ ಕೃಷಿ ಕೆಲಸ ಮುಖ್ಯಪಾತ್ರವನ್ನು ವಹಿಸಬಲ್ಲದು ಎಂದು ಗಾಂಧೀಜಿ ಯೋಚಿಸಿದರು.

ಭಾರತದ ವಿಭಜನೆಯ ತುಸುವೇ ಮೊದಲು ನೌಖಾಲಿಯ ಹಿಂದೂಗಳು ಗಾಂಧೀಜಿಗೆ "ನಾವಿಲ್ಲಿ ಹೇಗೆ ಜೀವಿಸುವೆವು? ನಾವೇನನ್ನು ತಿಂದು ಬದುಕುವೆವು? ಮುಸ್ಲಿಂ ರೈತರು ನಮ್ಮೊಂದಿಗೆ ಅಸಹಕಾರ ಧೋರಣೆ ತಾಳಿದ್ದಾರೆ. ಅವರು ನಮಗೆ ಎತ್ತುಗಳನ್ನಾಗಲೀ ನೇಗಿಲುಗಳನ್ನಾಗಲೀ ಒದಗಿಸುತ್ತಿಲ್ಲ" ಎಂದು ದೂರಿತ್ತರು. ಗಾಂಧೀಜಿ "ಪಿಕಾಸಿಗಳನ್ನು ತೆಗೆದುಕೊಂಡು ಭೂಮಿಯನ್ನು ಅಗಿಯತೊಡಗಿರಿ. ಪಿಕಾಸಿಯಿಂದ ಅಗೆದು ಮಾಡಿದ ಬೇಸಾಯದಿಂದ ಬರಲಾರದು" ಎಂದುತ್ತರಿಸಿದರು.

1945ರಲ್ಲಿ ಗಾಂಧೀಜಿ ಸೆರೆಮನೆಯಲ್ಲಿದ್ದಾಗ ಬಂಗಾಲದಲ್ಲಿ ಹಸಿವೆಯಿಂದ ಲಕ್ಷಾಂತರ ಮಂದಿ ಸತ್ತರು. ಆ ದಾರುಣ ಘಟನೆ ಜನರು ಮತ್ತು ಸರಕಾರಿ ಅಧಿಕಾರಿಗಳ ಮನಸ್ಸಿನಲ್ಲಿ ಇನ್ನೂ ಹಸಿಯಾಗಿತ್ತು. 1947ರಲ್ಲಿ ಮತ್ತೊಮ್ಮೆ ಕ್ಷಾಮದ ಭೀತಿ ತಲೆದೋರಿದಾಗ, ವೈಸರಾಯರು ಸ್ವಲ್ಪವೂ ತಡಮಾಡದೆ ತನ್ನ ಆಪ್ತ ಕಾರ್ಯದರ್ಶಿಯನ್ನು ವಿಮಾನದಲ್ಲಿ ಸೇವಾಗ್ರಾಮಕ್ಕೆ ಕಳುಹಿಸಿ ಗಾಂಧೀಜಿಯ ಸಲಹೆ ಕೇಳಿದರು.

ಗಾಂಧೀಜಿ ಸ್ವಲ್ಪವೂ ವಿಚಲಿತರಾಗದೆ, ಸಮೀಪಿಸುತ್ತಿರುವ ಕ್ಷಾಮಕ್ಕೆ ಹೆದರದಿರಲು ಜನತೆಯನ್ನು ಕೇಳಿಕೊಂಡರು. "ಬೇಕಾದಷ್ಟು ಫಲವತ್ತಾದ ಭೂಮಿ ಇದೆ, ಸಾಕಷ್ಟು ನೀರಿದೆ, ಮನುಷ್ಯ ಶಕ್ತಿಗೇನೂ ಬರವಿಲ್ಲ. ಹೀಗಿರುವಾಗ ಆಹಾರದ ಕೊರತೆ ಏಕಿರಬೇಕು? ಜನರಿಗೆ ಸ್ವಾವಲಂಬಿಗಳಾಗಲು ಕಲಿಸಬೇಕು. ಎರಡು ಕಾಳು ತಿನ್ನುವವನು ನಾಲ್ಕು ಕಾಳುಗಳನ್ನು ಉತ್ಪಾದಿಸಬೇಕು. ತನ್ನ ಸ್ವಂತ ಬಳಕೆಗಾಗಿ ಪ್ರತಿಯೊಬ್ಬನೂ ಸ್ವಲ್ಪವಾದರೂ ಉತ್ಪಾದಿಸಬೇಕು. ಇದನ್ನು ಮಾಡುವ ಸುಲಭೋಪಾಯವೆಂದರೆ, ಒಳ್ಳೆಯ ಮಣ್ಣನ್ನು ಸ್ವಲ್ಪ ಸಂಪಾದಿಸಿ ಸಾವಯವ ಗೊಬ್ಬರದೊಡನೆ ಮಿಶ್ರಣಗೊಳಿಸುವುದು. ಹಸುವಿನ ಒಣಗಿದ ಸೆಗಣಿಯು ಒಳ್ಳೆಯ ಸಾವಯುವ ಗೊಬ್ಬರ. ಅದನ್ನು ಮಣ್ಣಿನ ಮಡಿಕೆ ಅಥವಾ ಟಿನ್ನಿನಲ್ಲಿ ಹಾಕಿ ಕೆಲವು

ಬೀಜಗಳನ್ನು ಬಿತ್ತುವುದು ಮತ್ತು ದಿನವು ನೀರೆರೆಯುವುದು. ಎಲ್ಲ ದುಂದುವೆಚ್ಚದ ಸಮಾರಂಭಗಳನ್ನು ನಿಲ್ಲಿಸಿಬಿಡಬೇಕು. ಮೂಲಂಗಿ, ಆಲೂಗಡ್ಡೆ, ಬಾಳೆಕಾಯಿ ಇತ್ಯಾದಿಗಳಿಂದ ಶರ್ಕರಪಿಷ್ಟದ ಅಂಶವನ್ನು ಪಡೆದುಕೊಳ್ಳಬಹುದು. ಇದರ ಉದ್ದೇಶ ಪ್ರಚಲಿತ ಆಹಾರಪದ್ಧತಿಯಿಂದ ಧಾನ್ಯ, ಬೇಳೆಗಳನ್ನು ಹೊರತುಪಡಿಸಿ ಆಪತ್ಕಾಲೀನ ಸಂಗ್ರಹಕ್ಕಾಗಿ ಉಳಿಸುವುದಾಗಿತ್ತು.

ಆಹಾರದಲ್ಲಿ ಸ್ವಾವಲಂಬನೆಗಾಗಿ ಗಾಂಧೀಜಿ ನೀಡಿದ ಕರೆಯಲ್ಲಿ, ಮನಃಪೂರ್ವಕವಾದ ಶಿಸ್ತು ಮತ್ತು ಸರಳ ಜೀವನದ ಅನುಷ್ಠಾನ, ಹೊಸ ಬಗೆಯ ಆಹಾರಪದ್ಧತಿಗೆ ಹೊಂದಿಕೊಳ್ಳುವುದು ಮತ್ತು ವಿದೇಶದಿಂದ ಆಹಾರ ವಸ್ತುಗಳನ್ನು ಆಮದು ಮಾಡದಿರುವುದು ಇವೆಲ್ಲವೂ ಒಳಗೊಂಡಿದ್ದವು.

ಬಟ್ಟೆ ಮತ್ತು ಆಹಾರ ವಸ್ತುಗಳ ಮೇಲೆ ಸರ್ಕಾರಿ ನಿಯಂತ್ರಣವಿದ್ದ ಅವಧಿಯಲ್ಲಿ ಗಾಂಧೀಜಿ ಸರ್ಕಾರಿ ರೇಷನ್ನಿಗೆ ಕೈಚಾಚಲಿಲ್ಲ. ಅಕ್ಕಿ, ಬ್ರೆಡ್ಡು ಮತ್ತು ಬೇಳೆಗಳಿಲ್ಲದೆ ಅವರು ತಮ್ಮ ವ್ಯವಸ್ಥೆ ತಾವೇ ಮಾಡಿಕೊಂಡರು. ಸಕ್ಕರೆಯನ್ನು ಉಪಯೋಗಿಸಲೇ ಇಲ್ಲ. ತಮ್ಮ ಬಟ್ಟೆಯನ್ನು ತಾವೇ ತಯಾರಿಸಿಕೊಂಡರು.

ಏನೇನೂ ಬೆಲೆಯಿಲ್ಲದೆ, ಸುಲಭವಾಗಿ ದೊರೆಯುವಂತಹ ದನದ ಸಗಣಿ, ಗಂಜಲ, ಮಲ, ಮೂತ್ರ, ತರಕಾರಿ ಸಿಪ್ಪೆ ಮತ್ತು ಪಾಚಿಯಂತಹ ವಸ್ತುಗಳಿಂದ ಉತ್ತಮ ಮಿಶ್ರಗೊಬ್ಬರ ತಯಾರಿಸುವ ವಿಧಾನದ ಬಗ್ಗೆ ಗಾಂಧೀಜಿ ತಮ್ಮ ಹರಿಜನ, ಪತ್ರಿಕೆಯಲ್ಲಿ ವಿವರವಾಗಿ ನಿರ್ದೇಶನಗಳನ್ನೀಯುತ್ತಿದ್ದರು. ಶ್ರಮನಿಷ್ಠ ಪ್ರಯತ್ನಗಳಿಂದ ಯಾವ ವೆಚ್ಚವೂ ಇಲ್ಲದೆ ಮಿಶ್ರಗೊಬ್ಬರ ತಯಾರಿಸಬಹುದು. ಗಾಂಧೀಜಿಯ ಆಶ್ರಮಗಳಲ್ಲಿ ಮಲ ಮತ್ತು ಮೂತ್ರಗಳನ್ನು ಮಡಿಕೆಗಳಲ್ಲಿ ಸಂಗ್ರಹಿಸಲಾಗುತ್ತಿತ್ತು. ಕೆಲವೇ ದಿನಗಳಲ್ಲಿ ಅದು ಒಳ್ಳೆಯ ಗೊಬ್ಬರವಾಗಿ ಪರಿವರ್ತನೆಯಾಗುತ್ತಿತ್ತು. ಈ ರೀತಿ ಭಂಗಿ ಮತ್ತು ರೈತನ ಕೆಲಸ ಸಂಪ್ರದಾಯವಾದೀ ರೈತರಿಗೆ ರುಚಿಸಲಿಲ್ಲ. ಗಾಂಧೀಜಿ ಕೃತಕ ರಾಸಾಯನಿಕ ಗೊಬ್ಬರಕ್ಕಿಂತ ಸಾವಯವ ಗೊಬ್ಬರವನ್ನೇ ಮೆಚ್ಚುತ್ತಿದ್ದರು. ಶೀಘ್ರವಾಗಿ ಅಧಿಕ ಇಳುವರಿಗಾಗಿ ರಾಸಾಯನಿಕ ಗೊಬ್ಬರ ಬಳಸಿ ಭೂಮಿಯ ಫಲವತ್ತತೆಯನ್ನು ತಾತ್ಕಾಲಿಕವಾಗಿ ಹೆಚ್ಚಿಸುವುದು ಅಪಾಯಕಾರಿ ಎಂದು ಅವರು ಭಾವಿಸಿದ್ದರು. ನಾಟಕೀಯವಾದ ರೀತಿಯ ಶೀಘ್ರ ಫಲವನ್ನು ಕೊಟ್ಟಾಗ್ಯೂ ಅದರಿಂದ ಮಣ್ಣಿನ ಸಾರವಂತಿಕೆ ಶಾಶ್ವತವಾಗಿ ಕುಂದಿಹೋಗಬಹುದೆಂದು ಅವರು ಶಂಕಿಸಿದ್ದರು.

ಎತ್ತುಗಳನ್ನುಪಯೋಗಿಸಿ ನೇಗಿಲುಗಳಿಂದ ಉಳುವ ಬದಲಿಗೆ ಟ್ರಾಕ್ಟರ್ ಯಂತ್ರಗಳ ಬಳಕೆಯನ್ನು ಗಾಂಧೀಜಿ ಅನುಮೋದಿಸಲಿಲ್ಲ. ಸಾಬರ್ಮತಿ ಆಶ್ರಮದಲ್ಲಿ ಅವರು ಎಲ್ಲ ರೀತಿಯ ಸುಧಾರಿತ ನೇಗಿಲುಗಳನ್ನು ಬಳಸಿದರು. ಆದರೆ ಅವೆಲ್ಲಕ್ಕಿಂತಲೂ, ಹಳೆಯ ಕಾಲದ ನೇಗಿಲಿನಿಂದ ಉಳುವುದೇ ಹೆಚ್ಚು ಸೂಕ್ತವೆಂದು ಅವರಿಗೆ ತಿಳಿದುಬಂತು. ಆ ನೇಗಿಲು ಚೆನ್ನಾಗಿ ಬೆಳೆ ತೆಗೆಯಲು ಎಷ್ಟು ಬೇಕೋ ಅಷ್ಟೇ ಆಳಕ್ಕೆ ಭೂಮಿಯನ್ನು ಉಳುತ್ತಿತ್ತು. ಅದಕ್ಕಿಂತ ಹೆಚ್ಚು ಆಳಕ್ಕೆ ಮತ್ತು ಭೂಮಿಗೆ ಹಾನಿ ಉಂಟುಮಾಡುತ್ತಿರಲಿಲ್ಲ. ಅಲ್ಲದೇ ನೂರಾರು ಜನರ ದೇಹ ಶ್ರಮದ ಕಾಯಕವನ್ನು ಅವರ ಕೈಯಿಂದ ಕಸಿದು ಟ್ರಾಕ್ಟರುಗಳಿಗೆ ಕೊಡುವುದನ್ನು ಅವರು ವಿರೋಧಿಸಿದರು. ಜನರು ಸಾರ್ಥಕವಾದ ಉತ್ಪಾದನಕಾರೀ ಕೆಲಸಗಳಲ್ಲಿ ತೊಡಗಬೇಕೆಂದು ಗಾಂಧೀಜಿ ಬಯಸಿದರು. ರೈತರ ಸೃಜನಾತ್ಮಕ ಶಕ್ತಿಯನ್ನು ಯಂತ್ರ ಕುಂಠಿತಗೊಳಿಸೀತೆನ್ನುವ ಭೀತಿ ಅವರಿಗಿತ್ತು. ಸಣ್ಣ ಸಣ್ಣ ಒಡುವಳಿಗಳನ್ನು ರೈತರು ಬೇರೆ ಬೇರೆಯಾಗಿ ಬೇಸಾಯ ಮಾಡುವ ಪುರಾತನ ಪದ್ಧತಿಗೆ ಗಾಂಧೀಜಿಯ ಸಹಮತವಿರಲಿಲ್ಲ. ಏಕೆಂದರೆ 100 ಕುಟುಂಬಗಳು ತಮ್ಮ ಹೊಲಗಳನ್ನು ಒಟ್ಟಾಗಿ ದುಡಿದು, ಬೆಳೆದ ಪೈರನ್ನು ಹಂಚಿಕೊಳ್ಳುವುದು 100 ಕುಟುಂಬಗಳು ತಮ್ಮ ಹೊಲಗಳನ್ನು ಬಿಡಿಬಿಡಿಯಾಗಿ ಬೇಸಾಯ ಮಾಡುವುದಕ್ಕಿಂತ ಹೆಚ್ಚು ಪ್ರಯೋಜನಕಾರಿ ಎಂದು ಅವರ ಅಭಿಪ್ರಾಯವಾಗಿತ್ತು. ಗ್ರಾಮದ ಪ್ರತಿಯೊಬ್ಬನೂ ಎತ್ತುಗಳನ್ನೂ, ಎತ್ತಿನ ಗಾಡಿಗಳನ್ನೂ ಇಟ್ಟುಕೊಳ್ಳುವುದು ವ್ಯರ್ಥ ವೆಚ್ಚವಾಗಿ ಅವರಿಗೆ ಕಾಣುತ್ತಿತ್ತು. ಸಾಮೂಹಿಕ ಪಶುಸಂಗೋಪನೆಗೆ ಅವರು ಒತ್ತು ನೀಡುತ್ತಿದ್ದರು. ಸಾಮೂಹಿಕ ಪಶುಸಂಗೋಪನೆಯಿಂದ ದನಕರುಗಳಿಗೆ ಒಳ್ಳೆಯ ಆರೈಕೆ. ಏಕರೂಪದ ಸೌಲಭ್ಯ ಹಾಗೂ ಎಲ್ಲ ದನಗಳಿಗೂ ಉತ್ತಮ ತಳಿಯ ಗೂಳಿಗಳ ಸೌಲಭ್ಯ ಇವೆಲ್ಲವೂ ಸಾಧ್ಯ. ಸಾಮಾನ್ಯ ರೈತನೊಬ್ಬನಿಗೆ ಈ ಎಲ್ಲ ಸೌಲಭ್ಯಗಳನ್ನು ಹೊಂದಲು ಸಾಧ್ಯವಿಲ್ಲ. ಅನೇಕ ವೇಳೆ ತನ್ನ ದನಕರುಗಳಿಂದ ತನಗೆ ದೊರೆಯುವ ಪ್ರಯೋಜನಕ್ಕಿಂತ ಹೆಚ್ಚಿನ ವೆಚ್ಚ, ಅವುಗಳ ಮೇವಿಗೇ ಬೇಕಾಗುತ್ತವೆ. ತನ್ನ ಗೋವುಗಳ ಸಂಖ್ಯೆ ಹೆಚ್ಚಿದಂತೆ ಅವನು ಬಡತನದ ಒತ್ತಡಕ್ಕೆ ಮಣಿದು ಕರುಗಳನ್ನು ಮಾರುತ್ತಾನೆ. ಗಂಡು ಕರುಗಳನ್ನು ಒಂದೋ ಕೊಲ್ಲುತ್ತಾರೆ ಇಲ್ಲವೆ ಹಸಿವಿನಿಂದ ಸಾಯಲು ಬಿಡುತ್ತಾನೆ. ದನಕರುಗಳನ್ನು ಸರಿಯಾಗಿ ಪೋಷಿಸಲಾಗದಿದ್ದರೂ ಅವುಗಳಿಂದ ಕ್ರೂರವಾಗಿ ದುಡಿಸಿಕೊಳ್ಳುತ್ತಾನೆ.

ಗಾಂಧೀಜಿ ಗೋರಕ್ಷಣೆಗೆ ವಿಶೇಷ ಪ್ರಾಧಾನ್ಯವಿತ್ತರು. ಕೃಷಿ ಆರ್ಥಿಕತೆಯಲ್ಲಿ ಗೋವಿನ ಪ್ರಾಧಾನ್ಯತೆಯನ್ನು ಅವರು ಚೆನ್ನಾಗಿ ಮನಗಂಡಿದ್ದರು. ಭಾರತದಾದ್ಯಂತ ತಮ್ಮ ಪ್ರವಾಸಗಳ ವೇಳೆ ರೈತರ ಪ್ರಕಾಶಹೀನ ಕಣ್ಣುಗಳನ್ನೂ ಗೋವುಗಳ ದಯನೀಯ ಸ್ಥಿತಿಯನ್ನೂ ಕಂಡು ಕ್ಷೋಭೆಗೊಳಗಾಗುತ್ತಿದ್ದರು. "ಗೋವನ್ನು ಗೌರವದ ಸ್ಥಾನದಲ್ಲಿಟ್ಟಿರುವ ಭಾರತದಲ್ಲಿ ಗೋವನ್ನು ನಡೆಸಿಕೊಳ್ಳುವ ನಿಕೃಷ್ಟ ರೀತಿಯಲ್ಲಿ ಜಗತ್ತಿನ ಬೇರೆ ಯಾವ ದೇಶದಲ್ಲೂ ನಡೆಸಿಕೊಳ್ಳುತ್ತಿಲ್ಲ. ಗೋವಿಗೆ ಕೊಡುವ ಗೌರವವೆಂದರೆ ಈಗ ಗೋಹತ್ಯೆ ಬಗ್ಗೆ ಮುಸ್ಲಿಮರೊಂದಿಗೆ ಜಗಳ ಮತ್ತು ಗೋಮಾತೆಯ ಪವಿತ್ರಸ್ಪರ್ಶದಿಂದ ತಮ್ಮನ್ನು ಪುನೀತರಾಗಿಸಿಕೊಳ್ಳುವುದು ಇಷ್ಟೇ ಆಗಿದೆ. ಅನೇಕ ಪಿಂಜರಾ ಪೋಲುಗಳು ಮತ್ತು ಗೋಶಾಲೆಗಳು ಹಿಂಸಾ ಕೂಪಗಳೇ ಆಗಿವೆ" ಎಂದು ಗಾಂಧೀಜಿ ನೊಂದು ನುಡಿದರು. ಪಿಂಜರಾಪೋಲುಗಳ ಬರಡು, ದುರ್ಬಲ ಗೋವುಗಳನ್ನು ರಕ್ಷಿಸಿ, ಗೋಪಾಲನೆಯ ಬಗ್ಗೆ ತಜ್ಞ ಸಲಹೆಗಳನ್ನು ಕೊಡಬೇಕೆಂದು ಗಾಂಧೀಜಿ ಬಯಸಿದ್ದರು. ಎಮ್ಮೆಗಿಂತ ದನದ ಹಾಲು ಮತ್ತು ಬೆಣ್ಣೆಗಳನ್ನು ಅವುಗಳ ಗುಣಮಟ್ಟಕ್ಕಾಗಿ ಅವರು ಮೆಚ್ಚುತ್ತಿದ್ದರು. ಅಲ್ಲದೆ ಸತ್ತ ನಂತರವೂ ದನದ ಚರ್ಮ, ಎಲುಬು, ಕೊಂಬು ಇತ್ಯಾದಿಗಳು ಉಪಯೋಗಿಯಾಗಿರುತ್ತವೆಂಬುದನ್ನು ತೋರಿಸಿಕೊಟ್ಟರು. ಅವರ ಆಶ್ರಮದ ಗೋಶಾಲೆಯಲ್ಲಿ ಒಳ್ಳೆಯ ಬೀಜದ ಹೋರಿಗಳು ಮತ್ತು ಕಡಿಮೆ ವೆಚ್ಚದ ದನದ ಕೊಟ್ಟಿಗೆಗಳು ಇರುತ್ತಿದ್ದವು. ಗೋಶಾಲೆಯ ಎಲ್ಲ ಸಣ್ಣಪುಟ್ಟ ಸಂಗತಿಗಳಲ್ಲೂ ಗಾಂಧೀಜಿ ಪ್ರೇಮದಿಂದ ಕೈಹಾಕುತ್ತಿದ್ದರು. ಒಂದು ಕರು ಒಮ್ಮೆ ವಾಸಿಯಾಗದ ಕಾಯಿಲೆಯಿಂದ ನರಳುತ್ತಿತ್ತು. ಯಾವ ಚಿಕಿತ್ಸೆಯಿಂದಲೂ ಪ್ರಯೋಜನವಾಗಲಿಲ್ಲ. ಅದನ್ನು ನೋವಿನಿಂದ ಮುಕ್ತಗೊಳಿಸಲು ಅದರ ಜೀವವನ್ನೇ ಮುಗಿಸಲು ಗಾಂಧೀಜಿ ನಿರ್ಧರಿಸಿದರು. ನೋವಿನಿಂದ ನರಳುವ ಕರುವಿಗೆ ಶಾಶ್ವತ ನಿದ್ರೆ ಬರಿಸುವ ಔಷಧವನ್ನು ವೈದ್ಯರು ಹಾಕುವಾಗ ಸ್ವತಃ ಗಾಂಧೀಜಿಯೇ ಬಾಯಿ ಬಿಡಿಸಿದರು. ಅಹಿಂಸೆಯ ಶ್ರೇಷ್ಠ ಪೂಜಾರಿ ಈ ಹಿಂಸಾಕೃತ್ಯ ನಡೆಸಿದಾಗ ಪ್ರತಿಭಟನೆಯ ದೊಡ್ಡ ಗುಲ್ಲು ಎದ್ದಿತು, ಆದರೆ ಗಾಂಧೀಜಿ ಎಲ್ಲರ ಆಕ್ರೋಶವನ್ನೂ ಸಮಾಧಾನದಿಂದ ಶಾಂತವಾಗಿ ಎದುರಿಸಿದರು. ಆಶ್ರಮದಲ್ಲಿ ಬೆಳೆದ ಬೆಳೆಗಳು, ಹಣ್ಣುಗಳು ಮತ್ತು ತರಕಾರಿಗಳನ್ನು ನಾಶಮಾಡುವ ಮಂಗಗಳನ್ನು ಕೊಲ್ಲುವ ಯೋಜನೆಯನ್ನು ಮುಂದಿರಿಸಿ, ಗಾಂಧೀಜಿ ಮತ್ತೊಮ್ಮೆ ಅಹಿಂಸೆಯ ಕಟ್ಟುನಿಟ್ಟಿನ ಪ್ರತಿಪಾದಕರನ್ನು ದಂಗುಬಡಿಸಿದರು. ಅವರು "ನಾನು ಸ್ವತಃ ಒಬ್ಬ ರೈತನಾಗಿ

ನಿಷ್ಠ ಪ್ರಮಾಣದ ಹಿಂಸೆಯಿಂದ ಬೆಳೆಗಳನ್ನು ಸಂರಕ್ಷಿಸುವ ಉಪಾಯವನ್ನು ಂಡುಕೊಳ್ಳಬೇಕಾಗಿದೆ. ಮಂಗಗಳ ಕಾಟ ತೀವ್ರವಾಗಿದೆ. ಗುಂಡಿನ ಶಬ್ದಕ್ಕೆ ಅವು ೆದರುತ್ತಿಲ್ಲ. ಗುಂಡು ಹಾರಿಸಿದಾಗ ಸುಮ್ಮನೆ ಹಲ್ಲು ಕಿರಿಯುತ್ತವೆ, ಬೊಬ್ಬಿಡುತ್ತವೆ" ಅನಿವಾರ್ಯವಾದರೆ ಅವುಗಳನ್ನು ಕೊಲ್ಲುವ ಬಗ್ಗೆ ನಾನು ಗಂಭೀರವಾಗಿ ಯೋಚಿಸುತ್ತಿದ್ದೇನೆ." ಇಷ್ಟಾದರೂ, ಆಶ್ರಮದಲ್ಲಿ ಬಾಣಗಳ ಮೂಲಕವಾಗಲೀ, ಇತರ ರೀತಿಯಿಂದಾಗಲೀ ಮಂಗಗಳು ಎಂದೂ ಕೊಲ್ಲಲ್ಪಡಲಿಲ್ಲ. ಬಡರೈತರ ಆದಾಯವನ್ನು ಹೆಚ್ಚಿಸುವುದು ಹೇಗೆಂದು ಗಾಂಧೀಜಿ ಸದಾ ಚಿಂತಿಸುತ್ತಿದ್ದರು. ವರ್ಷದಲ್ಲಿ ನಾಲ್ಕರಿಂದ ಆರು ತಿಂಗಳುಗಳು ಕಾಲ ಅವರಿಗೆ ಕೆಲಸವಿರುತ್ತಿರಲಿಲ್ಲ. ಕೇವಲ ಕೃಷಿಯಲ್ಲಿ ಅವರ ಜೀವನ ಸಾಗುತ್ತಿರಲಿಲ್ಲ. ದೇಶದ 30 ಕೋಟಿ ರೈತರ ಬಿಡುವಿನ ವೇಳೆಯ ಸದುಪಯೋಗಕ್ಕಾಗಿ ಗಾಂಧೀಜಿ, ಮಹಿಳೆಯರಿಗೆ ತಕಲಿ, ಚರಕಗಳಿಂದ ನೂಲುವುದನ್ನೂ, ಪುರುಷರಿಗೆ ಕೈಮಗ್ಗಗಳಲ್ಲಿ ನೇಯುವುದನ್ನೂ ಸೂಚಿಸಿದರು. ಈ ಅರೆಬೆತ್ತಲೆ, ಅರೆ ಹೊಟ್ಟೆಯ, ಅಶಿಕ್ಷಿತ ರೈತರ ಆರ್ಥಿಕ ಮಟ್ಟವನ್ನು, ಅವರಿಗೆ ಸಮತೂಕದ ಆಹಾರದ, ಮೈಮುಚ್ಚುವ ಬಟ್ಟೆ ಮತ್ತು ವಾಸಯೋಗ್ಯವಾದ ಮನೆ ಮತ್ತು ಒಳ್ಳೆಯ ವಿದ್ಯಾಭ್ಯಾಸ ಇವಿಷ್ಟನ್ನಾದರೂ ಪಡೆಯುವಷ್ಟರ ಮಟ್ಟಕ್ಕೆ ಏರಿಸಲು ಅವರು ಬಯಸಿದರು. ಅವರಲ್ಲಿ ಪ್ರತಿಭಟಿಸುವ ಮನೋಬಲವನ್ನು ಬೆಳೆಸಬಯಸಿದರು. ರೈತ ಕೂಲಿಗಾರರ ಪ್ರಜಾರಾಜ್ಯವನ್ನು ಬಯಸಿದ ಗಾಂಧೀಜಿ ಈ ರೀತಿಯ ಎಚ್ಚರಿಕೆ ನೀಡಿದರು. "ತನ್ನ ಸ್ಥಿತಿಯ ಅರಿವಿಗೆ ರೈತ ಪೂರ್ಣವಾಗಿ ಎಚ್ಚೆತ್ತಾಗ ಮತ್ತು ತನ್ನ ಅಸಹಾಯಕ ಸ್ಥಿತಿಗೆ ತನ್ನ ಅದೃಷ್ಟ ಕಾರಣವನ್ನು ಎಂದು ಅರಿತಾಗ ಅವನು ತನ್ನ ಸ್ಥಿತಿ ಸುಧಾರಣೆಗೆ ತೊಡಕಾಗುವ ಎಲ್ಲ ಸಂವಿಧಾನಾತ್ಮಕ, ಅಸಂವಿಧಾನಾತ್ಮಕ ಅಡಚಣೆಗಳನ್ನು ಕಿತ್ತೊಗೆಯಬಲ್ಲ. ಸ್ವರಾಜ್ಯವೆಂದರೇನೆಂದು ಭಾರತೀಯ ರೈತವರ್ಗಕ್ಕೆ ತಿಳಿದಾಗ ಅವರು ಸ್ವರಾಜ್ಯ ಪಡೆಯುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ" ಎಂದರು.

ಗಾಂಧೀಜಿಯ ನಾಯಕತ್ವದಲ್ಲಿ ರೈತರು ಚಳುವಳಿಯಲ್ಲಿ ಪಾಲ್ಗೊಂಡು ಅಧಿಕಾರಿಗಳ ನಿರ್ಬಂಧವನ್ನು ಕಡೆಗಣಿಸಿ ಉಪ್ಪನ್ನು ತಯಾರಿಸಿದರು. ಸಾರ್ವಜನಿಕ ಸಭೆಗಳಲ್ಲಿ ಸ್ವಾತಂತ್ರ್ಯದ ಪಣತೊಟ್ಟರು. ಕರನಿರಾಕರಣ ಚಳುವಳಿಯ ವೇಳೆ ಅವರ ಭೂಮಿ ಆಸ್ತಿಗಳು ಮುಟ್ಟುಗೋಲಾದವು. ಆರ್ಥಿಕವಾಗಿ ಅವರು ಕಂಗಾಲಾದರು. ಆದರೆ ಅವರ ನೈತಿಕ ಸ್ಥೈರ್ಯ ಉನ್ನತ ಸ್ಥಾನಕ್ಕೇರಿತು.

ನೂಲುವವ

ಗಿರಣಿಗಳಿಂದ ಒದಗಿಸಲಾಗುತ್ತಿದ್ದ ನೂಲಿನಿಂದ ಕೈಮಗ್ಗದಲ್ಲಿ ನೇಯುವುದನ್ನು ಗಾಂಧೀಜಿ ಕಲಿತುಕೊಂಡರು. ಆದರೆ ಆ ರೀತಿಯ ನೇಯ್ಗೆ ಸ್ವಯಂಪೂರ್ಣವಲ್ಲವಾದ್ದರಿಂದ ಗಾಂಧೀಜಿಗೆ ತೃಪ್ತಿಯೆನಿಸಲಿಲ್ಲ. ವಸ್ತ್ರ ತಯಾರಿಕೆಯ ಇಡೀ ಪದ್ಧತಿಯನ್ನೇ–(ಹತ್ತಿ ಬೆಳೆಯುವುದು, ಅರಳೆ ಹಿಂಜುವುದು, ನೂಲಿನ ವರ್ಗೀಕರಣ ಇತ್ಯಾದಿಗಳಿಂದ ಮೊದಲ್ಗೊಂಡು) ತಮ್ಮ ಹಿಡಿತಕ್ಕೆ ತಂದುಕೊಳ್ಳಲು ಗಾಂಧೀಜಿ ಬಯಸಿದರು. ಹಳ್ಳಿಯ ಪ್ರತಿ ಮನೆಯಲ್ಲೂ ಒಂದು ಕಾಲದಲ್ಲಿ ಝೇಂಕರಿಸುತ್ತಿದ್ದ ಚರಕಗಳ ಮರು ಶೋಧನೆಗೆ ಗಾಂಧೀಜಿ ತೊಡಗಿದರು. ಒಬ್ಬ ಮಹಿಳಾ ಕಾರ್ಯಕರ್ತೆ ಒಂದು ಗ್ರಾಮದಲ್ಲಿ ಚರಕವನ್ನು ಪತ್ತೆ ಹಚ್ಚಿ ಗಾಂಧೀಜಿಗೆ ಸುದ್ದಿ ಮುಟ್ಟಿಸಿದರು. ಗಾಂಧೀಜಿ ತನ್ನ ಆಶ್ರಮವಾಸಿಗಳಿಗೆ ನೂಲುವುದನ್ನು ಕಲಿಸಲು ಒಬ್ಬ ನುರಿತ ನೂಲುವ ಶಿಕ್ಷಕನನ್ನು ನಿಯೋಜಿಸಿದರು. ಅಸೌಖ್ಯದಿಂದ ಚೇತರಿಸಿಕೊಳ್ಳುತ್ತಿದ್ದಾಗ, ಗಾಂಧೀಜಿಗೆ ಚರಕದಿಂದ ನೂಲುವಾಗ ಹೊರಡುವ ಸಂಗೀತದಿಂದ ತುಂಬ ಹಾಯೆನಿಸುತ್ತಿತ್ತು. ತುಸು ಸಮಯದಲ್ಲೇ ಅವರು ಚರಕದಿಂದ ನೂಲಲು ಕಲಿತುಕೊಂಡರು. ಪ್ರತಿ ದಿನವೂ ಅರ್ಧ ಗಂಟೆ ನೂತಹೊರತು ಊಟ ಮಾಡದಿರುವ ವ್ರತವನ್ನು ಗಾಂಧೀಜಿ ಕೈಗೊಂಡರು. ನೂಲುವುದು ಅವರಿಗೊಂದು ಪವಿತ್ರ ಯಜ್ಞಕಾರ್ಯವಾಗಿತ್ತು. ಮೂವತ್ತು ವರ್ಷಗಳ ಕಾಲ ತಮ್ಮ ಜೀವಿತದ ಕೊನೆಯವರೆಗೂ ಗಾಂಧೀಜಿ ಈ ವ್ರತವನ್ನು ಪಾಲಿಸಿದರು. ಪ್ರಯಾಣದಲ್ಲಿ ಚಲಿಸುವ ರೈಲುಬಂಡಿ ಅಥವಾ ಓಲಾಡುತ್ತಿರುವ ಹಡಗಿನಲ್ಲೂ ಗಾಂಧೀಜಿ ನೂಲುತ್ತಿದ್ದರು. ಇಡೀ ದಿನ ಜನರನ್ನು ಭೇಟಿಮಾಡುವುದರಲ್ಲಿ, ಪ್ರಮುಖ ವಿಚಾರಗಳ ಮಾತುಕತೆಯಲ್ಲಿ ಅಥವಾ ಬಹಿರಂಗ ಸಭೆಗಳಲ್ಲಿ ಕಳೆದುಹೋದರೆ, ಗಾಂಧೀಜಿ ತಮ್ಮ ನಿತ್ಯದ ನೂಲುವಿಕೆಯನ್ನು ಮಧ್ಯರಾತ್ರಿಯಲ್ಲಾದರೂ ಮಾಡಿಯೇ ತೀರುತ್ತಿದ್ದರು. ಒಮ್ಮೆ ಅನೇಕ ತಿಂಗಳುಗಳ ಕಾಲ ಗಾಂಧೀಜಿಗೆ ಬಲತೋಳಿನಲ್ಲಿ ನೋವು ಇತ್ತು. ಆದರೆ ಆಗಲೂ ಗಾಂಧೀಜಿ ಎಡಗೈಯಲ್ಲೇ ನೂಲುತ್ತಿದ್ದರು.

ಬಹಿರಂಗ ಸಭೆಯಲ್ಲಿ ವೇದಿಕೆಯ ಮೇಲೆ ಕೂತೇ ಗಾಂಧೀಜಿ ನೂಲುತ್ತಿದ್ದರು. ಠಾಗೋರರು ಒಮ್ಮೆ ಗಾಂಧೀಜಿಯೊಡನೆ ಭೇಟಿಮಾಡಿ ಸಂಭಾಷಣೆ ನಡೆಸಿದ

ಮೇಲೆ ತಾನು ಗಾಂಧೀಜಿಯ ಸಮಯವನ್ನು ಹಾಳುಮಾಡಿದೆನೇನೋ ಎಂದರು. ಗಾಂಧೀಜಿ "ಇಲ್ಲ, ಸಂಭಾಷಣೆಯಲ್ಲಿದ್ದಂತೆಯೇ ನಾನು ನೂಲುತ್ತಿದ್ದೆ. ನೂಲುತ್ತಿರುವ ಪ್ರತಿ ನಿಮಿಷವೂ ನಾನು ದೇಶದ ಸಂಪತ್ತನ್ನು ಹೆಚ್ಚಿಸುತ್ತಿದ್ದೇನೆ ಎನ್ನುವ ಅನುಭವ ನನಗಾಗುತ್ತಿದೆ. ದೇಶದಲ್ಲಿ ಒಂದು ಕೋಟಿ ಜನರು ಪ್ರತಿದಿನವೂ ಒಂದು ಗಂಟೆ ನೂಲು ತೆಗೆದರೆ ನಾವು ಪ್ರತಿದಿನವೂ ದೇಶದ ಬೊಕ್ಕಸಕ್ಕೆ ರೂ.50,000 ಸೇರಿಸಿದಂತೆ. ನೂಲುವ ಚರಕ, ಒಬ್ಬನೇ ಒಬ್ಬ ಪುರುಷನನ್ನಾಗಲೀ, ಸ್ತ್ರೀಯರನ್ನಾಗಲೀ ಅವರವರ ಉದ್ಯೋಗದಿಂದ ಹೊರಗೆಸೆಯಲಾರದು" ಎಂದು ಉತ್ತರ ಹೇಳಿದರು.

ಬಡವರು ತಾವೇ ತಯಾರಿಸಿದ ನೂಲಿನಿಂದ ತಯಾರಾದ ಬಟ್ಟೆಯನ್ನು ಧರಿಸಿ ಸ್ವಯಂಪೂರ್ಣರಾಗಬೇಕೆಂದೂ, ಶ್ರೀಮಂತರು ಧಾರ್ಮಿಕ ಕ್ರಿಯೆಯಾಗಿ ನೂಲುವುದನ್ನು ಕೈಗೊಂಡು ತಾವು ತಯಾರಿಸಿದ ನೂಲನ್ನು ಬಡವರಿಗೆ ದಾನ ನೀಡಬೇಕೆಂದೂ ಗಾಂಧೀಜಿ ಆಶಿಸಿದ್ದರು. ವರ್ತಮಾನ ಯುಗದ ಈ ಕರ್ಮ ಯಜ್ಞದಿಂದ ಯಾವುದೇ ಭಾರತೀಯನನ್ನು ಹೊರತುಪಡಿಸಲು ಗಾಂಧೀಜಿ ಇಷ್ಟಪಡಲಿಲ್ಲ. ಸಿ. ವಿ. ರಾಮನ್ ಮತ್ತು ಠಾಗೋರರಂತಹ ಮೇಧಾವಿಗಳೂ ಸಾಂಕೇತಿಕವಾಗಿ ನೂಲಬೇಕೆಂದು ಗಾಂಧೀಜಿ ಇಚ್ಛೆಪಟ್ಟರು. ರಾಜಕುಮಾರನಾಗಲೀ, ರೈತನಾಗಲೀ ಇಬ್ಬರಿಗೂ ಆಹಾರ ಮತ್ತು ಬಟ್ಟೆ ಅವಶ್ಯಕವಿರುವುದರಿಂದ ಇಬ್ಬರೂ ಶ್ರಮಪಡಬೇಕೆನ್ನುವುದು ಅವರ ಅಭಿಪ್ರಾಯ. "ನಾನು ತೆಗೆಯುವ ನೂಲಿನ ಪ್ರತಿ ಎಳೆಯಿಂದಲೂ, ನಾನು ಭಾರತದ ಭವಿಷ್ಯ ನಿರ್ಮಾಣದ ದಾರವನ್ನೇ ತಯಾರಿಸುತ್ತಿದ್ದೇನೆಂದು ನನ್ನ ಅಭಿಮತ. ನಮ್ಮ ದೇಶಕ್ಕೆ ನೂಲು ತೆಗೆದ ಹೊರತು ಮುಕ್ತಿಯೇ ಇಲ್ಲ" ಎಂದರು ಗಾಂಧೀಜಿ. ವಿದ್ಯಾರ್ಥಿಗಳಿಗೆ ನೀವು ಉಡುವ ಖಾದಿಯ ಪ್ರತಿ ಗಜಕ್ಕೂ ಕೆಲವು ಕಾಸುಗಳು ಈ ದೇಶದ ಬಡಜನರ ಜೇಬಿಗೆ ಸೇರುತ್ತವೆ. ಕೈಯಿಂದ ನೂತ ನೂಲಿನ ದಾರದಿಂದಾದ ಖಾದಿ ಸರಳತನದ ಸಂಕೇತ, ಖಾದಿಗೊಂದು ಆತ್ಮವಿದೆ" ಎಂದರು. ಖಾದಿ ತಯಾರಕರು ಗಿರಾಕಿಗಳ ತುಚ್ಛ ಅಭಿರುಚಿಗಳಿಗೆ ತಕ್ಕಂತೆ ಖಾದಿಯ ಗುಣಮಟ್ಟವನ್ನು ಕಡಿಮೆ ಮಾಡುವುದನ್ನಾಗಲೀ, ಬದಲಾಯಿಸುವುದನ್ನಾಗಲೀ ಗಾಂಧೀಜಿ ಪ್ರೋತ್ಸಾಹಿಸಲಿಲ್ಲ. ಖಾದಿಯನ್ನು ಬೆಳ್ಳಿ ಚೆಲುವೆ ಮಾಡುವುದನ್ನು ಅವರು ಮೆಚ್ಚಲಿಲ್ಲ. ಜನರ ಅಗ್ಗದ ಒಲವುಗಳನ್ನು ಇನ್ನಷ್ಟು ಕೆರಳಿಸುವ ಜನರಲ್ಲಿ ಹೊಸ ಅಭಿರುಚಿಗಳನ್ನು ಹುಟ್ಟಿಸುವಂತೆ ಗಾಂಧೀಜಿ ಖಾದಿ ಭಂಡಾರಗಳಿಗೆ ಹೇಳಿದರು.

ವರ್ಷದಲ್ಲಿ ನಾಲ್ಕರಿಂದ ಆರು ತಿಂಗಳ ಕಾಲ ನಿರುದ್ಯೋಗಿಗಳಾಗಿರುವ ಹಳ್ಳಿಯ ಜನರು ಚರಕ ತಿರುಗಿಸಬೇಕೆಂದು ಗಾಂಧೀಜಿ ಬಯಸಿದರು. ಈ ಯಂತ್ರಯುಗದಲ್ಲೂ, ಪ್ರಾಚೀನ ಚರಕ ವೃತ್ತಿಯನ್ನು ಪುನರುಜ್ಜೀವಿಸುವ ಗಾಂಧೀಜಿಯ ಪ್ರಯತ್ನವನ್ನು ನೇಕಾರರು ಹಾಸ್ಯಮಾಡಿದರು. ಗಾಂಧೀಜಿ ಅವರೊಡನೆ "ಹೊಲಿಗೆ ಯಂತ್ರ ಬಂದಿತೆಂದು, ಸೂಜಿ ಏನೂ ಮೂಲೆಗುಂಪಾಗಲಿಲ್ಲ. ಬೆರಳಚ್ಚು ಯಂತ್ರ ಬಂದಿತೆಂದು, ಬರವಣಿಗೆಯ ಕೆಲಸ ನಿಲ್ಲಲಿಲ್ಲ. ನೂಲುವ ಗಿರಣಿಗಳೂ, ನೂಲುವ ಚರಕಗಳೂ ಸಹಬಾಳ್ವೆ ನಡೆಸಲು ಸಾಧ್ಯ. ನೂಲುವ ಚರಕಗಳನ್ನು ಸಾರ್ವತ್ರಿಕ ಉಪಯೋಗಕ್ಕೆ ಬಳಸಬಲ್ಲೆವು. ಅವು ದೇಶದ ಚರಕಗಳನ್ನು ಸಾರ್ವತ್ರಿಕ ಉಪಯೋಗಕ್ಕೆ ಬಳಸಬಲ್ಲೆವು. ಅವು ದೇಶದ ಕುಗ್ರಾಮಗಳನ್ನು ತಲುಪಬಲ್ಲವು. ಆದರೆ ಗಿರಣಿಗಳು ದೇಶದ ಜನಸಂಖ್ಯೆಯ ಒಂದು ಸಣ್ಣ ಭಾಗಕ್ಕೂ ತಲುಪುವುದು ಅಸಂಭವ" ಎಂದು ವಾದಿಸಿದರು.

ಸಾವಿರದ ಒಂಬೈನೂರ ಇಪ್ಪತ್ತೊಂದನೆಯ ಇಸವಿಯಲ್ಲಿ ಅಸಹಕಾರ ಚಳುವಳಿಯನ್ನು ಪ್ರಾರಂಭಿಸುವ ತುಸುವೇ ಮೊದಲು ಪ್ರತಿದಿನವೂ ನೂಲುವ ಕುರಿತೇ ಮಾತನಾಡಿದರು, ಬರೆದರು ಮತ್ತು ಇಡೀ ದೇಶವನ್ನೇ ನೂಲುವ ಸ್ಫೂರ್ತಿಯಿಂದ ತುಂಬಿದರು. ಮೋತಿಲಾಲ್ ನೆಹ್ರೂ ವಿದೇಶಿ ವಸ್ತ್ರಗಳನ್ನು ಸುಟ್ಟು, ಖಾದಿ ಧರಿಸಲು ತೊಡಗಿದರು ಮತ್ತು ಒಮ್ಮೆ ಖಾದಿ ಹೊತ್ತು ಅಲಹಾಬಾದದ ಬೀದಿಗಳಲ್ಲಿ ಮಾರಿದರು ಕೂಡ. ಸಾವಿರಾರು ಮಂದಿ ಅವರನ್ನನುಸರಿಸಿದರು.

ಸಾವಿರದ ಒಂಭೈನೂರ ಇಪ್ಪತ್ತೊಂದರಲ್ಲಿ ಚರಕ ಸಂಘ ಸ್ಥಾಪನೆಯಾಯಿತು. 50,000 ಚರಕಗಳು ಕೆಲಸ ಮಾಡಲು ತೊಡಗಿದವು. ನೇಕಾರರು, ಬಣ್ಣ ಹಾಕುವವರು ಮತ್ತು ದರ್ಜಿಗಳಲ್ಲದೆ 50,000 ನೂಲುವವರಿಗೆ ಉದ್ಯೋಗ ದೊರೆಯಿತು. ತಕಲಿ ಮತ್ತು ಚರಕ ತಯಾರಿಕೆಯಿಂದಾಗಿ ಹಳ್ಳಿಯ ಬಡಗಿಗಳಿಗೂ, ಕಮ್ಮಾರರಿಗೂ ಕೆಲಸ ದೊರೆಯಿತು. ಮತ್ತೊಮ್ಮೆ ಭಾರತದ ಜನತೆಗೆ ಚರಕ ಕಲ್ಪವೃಕ್ಷವಾಗಿ ಮಹಿಳೆಯರ ಮಾನರಕ್ಷಕವಾಗಿ, ಹಸಿದ ಬಾಯಿಗಳಿಗೆ ತುತ್ತೊದಗಿಸುವ ಅನ್ನದಾತನಾಗಿ ಬಂತು.

ಮುಂದಿನ ಐದು ವರ್ಷಗಳ ಅವಧಿಯಲ್ಲಿ ಖಾದಿಯ ಮಾರಾಟ ಹೆಚ್ಚಾಯಿತು. ಒಂದು ಲಕ್ಷಕ್ಕಿಂತಲೂ ಹೆಚ್ಚು ಮಂದಿ ನೂಲುವವರಾದರು. ಖಾದಿ ತಯಾರಿಕೆಯ ಎಲ್ಲ ಹಂತಗಳಲ್ಲೂ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಯಿತು.

"ಜಗತ್ತಿನಲ್ಲೆಲ್ಲೂ ಈ ಪುಟ್ಟ ಗಿರಣಿಗೆ ಸಾಟಿಯಾದಂಥದನ್ನು ನಾನು ಕಾಣೆ. ಚರಕ ಸಂಘ 18 ವರ್ಷಗಳಲ್ಲಿ ಲಕ್ಷಾಂತರ ಮಂದಿ ಬಡವರಿಗೆ ನಾಲ್ಕು ಕೋಟಿ ರೂ.ಗಳನ್ನು ಕೊಡಲು ಸಾಧ್ಯವಾದಂತಹ ಉದಾಹರಣೆಯನ್ನು, ಅಷ್ಟೇ ಬಂಡವಾಳದಲ್ಲಿ ಬೇರೆ ಯಾವುದೇ ಉದ್ದಿಮೆ ಅಥವಾ ಔದ್ಯೋಗಿಕ ಮಂಡಳಿಯಲ್ಲಿ ತೋರಿಸಿರಿ!" ಎಂದು ಗಾಂಧೀಜಿ ಸವಾಲೆಸೆದರು. ಹತ್ತಿಗಾಗಿ ಕೆಲವೇ ಪೈಸೆ ತೊಡಗಿಸಿ ನೂಲುವುದನ್ನು ಪ್ರಾರಂಭಿಸಿದ ಕುಟುಂಬಗಳೂ ಇದ್ದವು. ಈ ಹಣ ಮರುದಿನ ನೂಲಿನ ಮಾರಾಟದಿಂದ ದ್ವಿಗುಣಗೊಳ್ಳುತ್ತಿತ್ತು. ಹೀಗೆ ನಿಧಾನವಾಗಿ ನೂಲುಗಾರರು ತಮ್ಮ ಬಟ್ಟೆಯನ್ನು ಖರ್ಚಿಲ್ಲದೇ ಒದಗಿಸಿಕೊಳ್ಳಲು ಶಕ್ತರಾಗುತ್ತಿದ್ದರು.

ಕಡಿಮೆ ವೆಚ್ಚದಲ್ಲಿ ಒಳ್ಳೆಯ ನೂಲನ್ನು ತಯಾರಿಸಬಲ್ಲ ಚರಕ ಸಂಶೋಧನೆಗೆ ಒಂದು ಲಕ್ಷ ರೂ.ಗಳ ಬಹುಮಾನ ಘೋಷಿಸಲಾಯಿತು. ಎರವಾಡ ಸೆರೆಮನೆಯಲ್ಲಿ ಗಾಂಧೀಜಿ, ಪೆಟ್ಟಿಗೆ ಮಾದರಿಯ ಚರಕಕ್ಕೆ ಸರಿಯಾದ ರೂಪ ಕೊಟ್ಟರು. ಮುಂದೆ ಅದು "ಎರವಡಾ ಚರಕಾ" ಎಂದೇ ಪ್ರಸಿದ್ಧವಾಯಿತು. ಬಳಿಕ ಗಾಂಧೀಜಿ ಅಗ್ಗದ ಹಾಗೂ ಸರಳವಾದ ನೂಲುವ ಸಾಧನವಾದ "ಧನುಷ್ ತಕಲಿ"ಯನ್ನು ಜನಪ್ರಿಯಗೊಳಿಸಿದರು. ಚರಕದಷ್ಟೇ ವೇಗದಿಂದ ಅಷ್ಟೇ ಉತ್ತಮವಾದ ನೂಲನ್ನು ತಾವು ತಕಲಿಯಲ್ಲೂ ತೆಗೆಯಬಹುದೆಂದು ಗಾಂಧೀಜಿಗೆ ಗೊತ್ತಾಯಿತು. ತಕಲಿಯಿಂದಲೂ ಗಾಂಧೀಜಿ ನೂಲು ತೆಗೆಯುತ್ತಿದ್ದರು. ಆದರೆ ದಾರ ಚೆನ್ನಾಗಿ ಬರುತ್ತಿರಲಿಲ್ಲ. ಅಂತಹ ದಾರದಿಂದಲೇ ಸೀರೆಗಳನ್ನು ನೇಯ್ದು, ಗಾಂಧೀಜಿ ಕಸ್ತೂರ್‌ಬಾಗೆ ಬಹುಮಾನವಾಗಿ ಕೊಡುತ್ತಿದ್ದರು. ಕಸ್ತೂರ್‌ಬಾರವರೂ ನಿಯಮಿತವಾಗಿ ನೂಲುತ್ತಿದ್ದರು. ನೂಲುಗಾರನ ಆದಾಯಕ್ಕೆ ನೂಲುವಿಕೆಯಿಂದ ದಿನಕ್ಕೆ ಒಂದರೆಡು ಆಣೆಗಳಷ್ಟೇ ಸೇರುತ್ತವೆ ಎಂದು ಯಾರೋ ಹೇಳಿದಾಗ ಗಾಂಧೀಜಿ "ಭಾರತದ ಸಾಮಾನ್ಯ ಪ್ರಜೆಯ ಸರಾಸರಿ ಆದಾಯ ದಿನಕ್ಕೆ ಅಬ್ಬಬ್ಬಾ ಎಂದರೆ ಮೂರು ಕಾಸುಗಳು ಮಾತ್ರ. ಈ ಆದಾಯಕ್ಕೆ ಚರಕದ ನೆರವಿನಿಂದ ಮತ್ತೆ ಮೂರು ಕಾಸುಗಳನ್ನಾದರೂ ಸೇರಿಸಬಲ್ಲೆನಾದರೆ, ಚರಕವನ್ನು ನನ್ನ ಪಾಲಿನ ಕಾಮಧೇನು ಎಂದು ಕರೆದರೆ ತಪ್ಪಲ್ಲವಷ್ಟೇ?" ಎಂದರು.

ಚರಕಾ ಸಂಘದಲ್ಲಿ ನೂಲುಗಾರರಿಗೆ ಜೀವನಾವಶ್ಯಕ ವೇತನವನ್ನು ನೀಡಬೇಕೆಂದು ಗಾಂಧೀಜಿ ಒತ್ತಾಯಿಸುತ್ತಿದ್ದರು. ದಿನಕ್ಕೆ ಮೂರು ಆಣೆಗಳ ಕನಿಷ್ಠ ವೇತನವನ್ನು ನಿಗದಿಗೊಳಿಸಲಾಯಿತು.

ಚರಕದ ಯೋಗ್ಯತೆಯನ್ನು ಕೇವಲ ಹಣದ ಪ್ರಮಾಣದಿಂದಷ್ಟೇ ಅಳೆಯದೆ ಅದು ಜನತೆಯಲ್ಲಿ ಉತ್ಪಾದಿಸಬಲ್ಲ ಶಕ್ತಿಯಿಂದ ಅಳೆದರು. ಗಾಂಧೀಜಿ "ಚರಕಾ ಸಂಘಶಕ್ತಿಯನ್ನು ಬೆಳೆಸಿ ಅದರ ಕೆಲಸಗಾರರು ಪರಸ್ಪರ ಸಂಬಂಧಿಗಳು ಎಂಬ ಭಾವನೆಯನ್ನು ತಂದುಕೊಡುತ್ತದೆ. ಚರಕ ದುಡಿಮೆಯ ಮಹತ್ತನ್ನು ಗುರುತಿಸುತ್ತದೆಯಲ್ಲದೆ ಅಹಿಂಸೆ, ವಿನಯ, ಸ್ವಾತಂತ್ರ್ಯ ಮತ್ತು ಸೇವಾಗುಣಗಳ ಸಂಕೇತ. ಅತಿ ಕಡಿಮೆ ಬೆಲೆಯ ಸರಳ ಸಾಮಗ್ರಿಯಿಂದ ಅದನ್ನು ರಚಿಸಲಾಗಿದೆ ಮತ್ತು ಸುಲಭವಾಗಿ ನಮಗೆ ಬೇಕಾದಾಗ ಬಳಸಿಕೊಳ್ಳಬಹುದು" ಎನ್ನುತ್ತಿದ್ದರು.

ಮೂಲಭೂತ ವೃತ್ತಿಯಾದ ಕೃಷಿಗೆ, ನಮ್ಮ ಕರಕೌಶಲ್ಯವನ್ನು ಇನ್ನಷ್ಟು ಬೆಳೆಸುವ ಸಾಮರ್ಥ್ಯ ಇಲ್ಲ. ಆದರೆ ಚರಕದಲ್ಲಿ ಕರಕೌಶಲ್ಯವನ್ನು ಮೆರೆಸುವ ವಿಪುಲ ಅವಕಾಶಗಳಿವೆ. ಇದಕ್ಕೆ ಯಾವ ತಜ್ಞರೂ ಬೇಕಾಗಿಲ್ಲ. ದುರ್ಬಲರೂ, ಮುದುಕರೂ, ಬಾಲಕ ಬಾಲಕಿಯರೂ ತಮ್ಮ ಗುಡಿಸಲುಗಳಲ್ಲಿ ಇದ್ದುಕೊಂಡೇ ಚರಕದಲ್ಲಿ ನೂತು ಹಣ ಗಳಿಸಬಲ್ಲರು.

ಯಾವ ಯಂತ್ರವೂ ತಯಾರಿಸಲಾರದ ಅತಿಶ್ರೇಷ್ಠ ದರ್ಜೆಯ ನೂಲನ್ನು ನೂತು, ನಮ್ಮ ದೇಶಕ್ಕಷ್ಟೇ ಅಲ್ಲದೆ ದೂರದ ದೇಶಗಳ ಅಗತ್ಯಕ್ಕೆ ಸಾಲುವಷ್ಟು ನೂಲುವ ಭಾರತೀಯರು ಏಕೆ ಬಡವರಾಗಿ, ದಾಸ್ಯದಲ್ಲಿ ನರಳುತ್ತಿರುವರೆಂದು ಒಮ್ಮೆ ಗಾಂಧೀಜಿಯ ಟೀಕಾಕಾರರೊಬ್ಬರು ಪ್ರಶ್ನಿಸಿದರು. ಗಾಂಧೀಜಿ ಪುರಾತನ ಕಾಲದಲ್ಲಿ ದೇಶದ ಸ್ವಾತಂತ್ರ್ಯಕ್ಕೂ ಚರಕಕ್ಕೂ ಸಂಬಂಧವಿರಲಿಲ್ಲ. ಅದಕ್ಕೆ ಗುಲಾಮಗಿರಿಯ ಹಿನ್ನೆಲೆ ಇತ್ತು. ಆ ದಿನಗಳ ಸರ್ಕಾರಗಳು ಎಸೆಯುತ್ತಿದ್ದ ತುಣುಕು ರೊಟ್ಟಿ ಮತ್ತು ಒಂದೆರಡು ಕಾಸಿಗಾಗಿ ಬಡ ಮಹಿಳೆಯರು ನೂಲುತ್ತಿದ್ದರು. ಇಂದು ತುಂಬ ಬುದ್ಧಿವಂತಿಕೆಯಿಂದ ನೂಲು ಮತ್ತು ನೂಲು ತಯಾರಿಕೆಗೆ ಸಂಬಂಧಿಸಿದ ಎಲ್ಲ ವಿಚಾರಗಳ ವೈಜ್ಞಾನಿಕ ಅಧ್ಯಯನ ಮಾಡಬೇಕು.

ಅನೇಕ ಗೃಹಕೈಗಾರಿಕೆಗಳಿಗೆ, ಚರಕ ಸೂರ್ಯನಂತೆ ಎಂದರು ಗಾಂಧೀಜಿ. ದಾರದ ಸುತ್ತುಗಳನ್ನು ಎಣಿಸುವಾಗ ವಿದ್ಯಾರ್ಥಿ ಹೇಗೆ ಅಂಕಗಣಿತವನ್ನು ಕಲಿಯಬಲ್ಲನೆಂದೂ, ಹತ್ತಿಯನ್ನು ಹೇಗೆ ಮತ್ತು ಯಾವ ಋತುವಿನಲ್ಲಿ ಬೆಳೆಯಲಾಗುತ್ತದೆ, ಹತ್ತಿ ಬೆಳೆಯಲು ಬೇಕಾಗುವ ಮಣ್ಣಿನ ಗುಣ ಮತ್ತು ವಿವಿಧ ದೇಶಗಳಲ್ಲಿ ಹತ್ತಿ ವ್ಯಾಪಾರ ಬೆಳೆದು ಬಂದ ಬಗೆ ಇವುಗಳ ಅಧ್ಯಯನದಿಂದ ವಿದ್ಯಾರ್ಥಿಗೆ ಭೂಗೋಳ, ಚರಿತ್ರೆ ಮತ್ತು ವಾಣಿಜ್ಯಗಳ ಪಾತಗಳನ್ನು

ಲಿಸಬಹುದೆಂದೂ ಗಾಂಧೀಜಿ ವಿವರಿಸಿದರು. ತಕಲಿಯನ್ನು, ಉಕ್ಕಿನ ತಿರುಗಣೆ ಮತ್ತು ನಿರ್ದಿಷ್ಟವಾದ ಅಳತೆಯ ಕಂಚಿನ ಬಿಲ್ಲೆಗಳಿಂದಲೇ ಏಕೆ ತಯಾರಿಸಬೇಕು ಇತ್ಯಾದಿ ವಿಷಯಗಳಿಂದ ಆ ಕುರಿತ ಲೆಕ್ಕಾಚಾರವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಬಹುದು. ಚರಕ ಜಯಂತಿಯನ್ನು ತಮ್ಮ ಜನ್ಮದಿನದೊಂದಿಗೆ ಸೇರಿಸಲು ಸಮ್ಮತಿಸಿದಾಗಲೇ ಗಾಂಧೀಜಿ ತಮ್ಮ ಜನ್ಮ ದಿನಾಚರಣೆಗೆ ಒಪ್ಪಿಗೆ ಇತ್ತರು. ಖಾದಿ ಮತ್ತು ಸ್ವಂತ ನೂಲುವಿಕೆಗಳನ್ನು ಜನಪ್ರಿಯಗೊಳಿಸಲು ದೊರೆತ ಯಾವ ಅವಕಾಶವನ್ನೂ ಗಾಂಧೀಜಿ ಬಳಸದಿರಲಿಲ್ಲ. ತಾವು ಕಾಂಗ್ರೆಸ್ ಅಧ್ಯಕ್ಷರಾದಾಗ, ಕಾಂಗ್ರೆಸ್ ಸದಸ್ಯರಾಗಲು, ನಾಲ್ಕಾಣೆ ಶುಲ್ಕದ ಬದಲು ಕೈನೂಲಿನ ರೂಪದಲ್ಲಿ ಸದಸ್ಯತ್ವ ಶುಲ್ಕ ಕೊಡುವ ಪದ್ಧತಿಯನ್ನು ಚಲಾವಣೆಗೆ ತಂದರು. ಪ್ರತಿಯೊಬ್ಬ ಸದಸ್ಯನೂ ಪ್ರತಿ ದಿನವೂ ಅರ್ಧ ಘಂಟೆಯ ಕಾಲ ನೂತು ನಿಗದಿಯಾದ ಪ್ರಮಾಣದ ನೂಲನ್ನು ಖಾದಿ ಮಂಡಲಿಗೆ ಪ್ರತಿ ತಿಂಗಳೂ ಕಳುಹಿಸಬೇಕಾಗಿತ್ತು. ತಮ್ಮ ಜೀವಿತದ ಕೊನೆಯ ವರ್ಷಗಳಲ್ಲಿ ಗಾಂಧೀಜಿ ಪ್ರತಿ ಖಾದಿಕೊಳ್ಳುವವನೂ ಸ್ವಲ್ಪವಾದರೂ ಕೈಯಿಂದ ನೂತ ನೂಲನ್ನು ಒಪ್ಪಿಸಬೇಕೆಂದು ಒತ್ತಾಯಿಸುವಂತೆ ಚರಕ ಸಂಘಕ್ಕೆ ಸಲಹೆ ನೀಡಿದರು. ಜನರು ಹಾಗೆ ನೂತ ನೂಲು ಕಳುಹಿಸಲು ತಮಗೆ ಅಸಾಧ್ಯವೆಂದಾಗ ಗಾಂಧೀಜಿ "ಜನ ನೂಲಲು ಸಿದ್ಧವಿಲ್ಲದಿದ್ದರೆ ಖಾದಿ ಎಲ್ಲಿಂದ ಬರಬೇಕು?" ಎಂದು ಪ್ರಶ್ನಿಸಿದರು.

ಭಾರತದಲ್ಲಿ ವಸ್ತ್ರಕ್ಷಾಮವಿದೆ ಎನ್ನುವುದನ್ನು ಗಾಂಧೀಜಿ ಒಪ್ಪಲಿಲ್ಲ. ಭಾರತ ತನಗೆ ಬೇಕಾದುದಕ್ಕಿಂತ ಹೆಚ್ಚು ಹತ್ತಿಯನ್ನು ಉತ್ಪಾದಿಸುತ್ತದೆ ಮತ್ತು ಅಪಾರ ಮಾನವಶಕ್ತಿಯನ್ನು ಹೊಂದಿದೆ. ಪ್ರತಿ ಮನೆಯಲ್ಲೂ ಒಂದು ಚರಕ ಮತ್ತು ನೂಲುವ ತಕಲಿಗಳ ರೂಪದಲ್ಲಿ ಪುಟ್ಟ ಗಿರಣಿಯನ್ನು ಸ್ಥಾಪಿಸುವ ಮೂಲಕ, ವಸ್ತ್ರದ ಅಭಾವವನ್ನು ಹೋಗಲಾಡಿಸಬಹುದು. ನೂಲುವುದು ಗಾಂಧೀಜಿಗೆ ಅಂತರಂಗದ ಅಗತ್ಯವೇ ಆಯಿತು. ಅದರ ಮೂಲಕ ತಾವು ತೀರಾ ಬಡವರ ಸನಿಹಕ್ಕೆ, ಅವರ ಮೂಲಕ ಭಗವಂತನ ಸಮೀಪಕ್ಕೆ ಹೋಗುತ್ತಿರುವಂತೆ ಗಾಂಧೀಜಿಗೆ ಭಾಸವಾಯಿತು. "ಚರಕದಿಂದ ಪ್ರಗತಿ ನಿಧಾನ ಎಂದು ಜನ್ಮಾಂತರದಲ್ಲೂ ನಾನು ಒಪ್ಪಿಕೊಳ್ಳಲಾರೆ" ಎಂದು ಸಾರಿದರು ಗಾಂಧೀಜಿ.

ಪುರೋಹಿತ

ಗಾಂಧೀಜಿ ಬ್ರಹ್ಮಚರ್ಯದ ಮತ್ತು ಸ್ವಯಂಪ್ರೇರಿತ ಬಡತನದ ಜೀವನವನ್ನು ಸ್ವೀಕರಿಸಿದಾಗ, ಮಾನವ ಸೇವೆಯನ್ನು ಮಾಡಬಯಸುವವರು ಅವಿವಾಹಿತರಾಗಿಯೇ ಉಳಿಯಬೇಕೆನ್ನುವುದನ್ನು ಪುಷ್ಟೀಕರಿಸಿದರು.

ಈ ವಿಚಾರ ಹೊಳೆಯುವ ಮೊದಲು, ಅವರು ತನ್ನ ಅವಿವಾಹಿತ ಮಿತ್ರರು ವಾಹನ ಬಂಧನಕ್ಕೊಳಗಾಗುವ ಬಗ್ಗೆ ಹೆಚ್ಚು ಆಸ್ಥೆ ವಹಿಸುತ್ತಿದ್ದರು. ಅವರೆಲ್ಲ ಒಂದು ದೊಡ್ಡ ಕುಟುಂಬದ ಸದಸ್ಯರಂತೆ ಬಾಳಬೇಕೆಂದು ಅವರ ಆಸೆಯಾಗಿತ್ತು. ಭಾರತದ ತನ್ನ ಸಂಗಾತಿಗಳು ತಮ್ಮ ಪತ್ನಿಯರೊಂದಿಗೆ ದಕ್ಷಿಣ ಆಫ್ರಿಕಾಕ್ಕೆ ಬರಲು ಅವರು ಆಹ್ವಾನಿಸುತ್ತಿದ್ದರು ಮತ್ತು ತನ್ನ ಇಂಗ್ಲಿಷ್ ಮಿತ್ರರಾದ ವೆಸ್ಟ್ ಮತ್ತು ಪೋಲಕ್‌ರನ್ನು ವಿವಾಹ ಮಾಡಿಕೊಳ್ಳುವಂತೆ ಒತ್ತಾಯಿಸುತ್ತಿದ್ದರು. ಆರ್ಥಿಕ ಕಾರಣಗಳಿಗಾಗಿ ಪೋಲಕ್‌ರು ಮದುವೆ ಮಾಡಿಕೊಳ್ಳಲು ಹಿಂಜರಿಯುತ್ತಿದ್ದರು. ದೀರ್ಘಕಾಲದಿಂದ ನಿರ್ಧಾರವಾದ ವಿವಾಹವನ್ನು ಅದೂ ಎರಡು ಹೃದಯಗಳು ಒಂದಾಗಿರುವಾಗ ಮುಂದೂಡುವುದು ಸರಿಯಲ್ಲವೆಂದು ಗಾಂಧೀಜಿ ಹೇಳಿದರು. ಇಂಗ್ಲೆಂಡಿನಿಂದ ವಧು ದಕ್ಷಿಣ ಆಫ್ರಿಕಾಕ್ಕೆ ಆಗಮಿಸಿದ ಮರುದಿನವೇ ಪೋಲಕ್‌ರು ಆಕೆಯನ್ನು ವಿವಾಹವಾದರು. ವಿವಾಹದ ವ್ಯವಸ್ಥೆಯನ್ನೆಲ್ಲ ಗಾಂಧೀಜಿಯೇ ಮಾಡಿದರು ಮತ್ತು ತಾವೇ ವರನ ಸಖನಾಗಿ ಪಾತ್ರವಹಿಸಿದರು.

ಭಾರತದ ತನ್ನ ಆಶ್ರಮಗಳಲ್ಲಿ ಗಾಂಧೀಜಿ ಕೆಲವೊಮ್ಮೆ ಪುರೋಹಿತನಾಗಿ ಕಾರ್ಯ ನಿರ್ವಹಿಸಿದರು. ಮದುವೆಗೆ ವರ, ವಧುಗಳನ್ನು ಆಯ್ಕೆ ಮಾಡುವ ಮತ್ತು ಪುರೋಹಿತನಾಗಿ ಕಾರ್ಯ ನಿರ್ವಹಿಸುವ ಅವರ ವಿಧಾನ ಅಂದಿನ ರೂಢಿಗಿಂತ ಭಿನ್ನವಾಗಿತ್ತು. ಗಾಂಧೀಜಿ ಹಿಂದೂ ವಿವಾಹ ಪದ್ಧತಿಯನ್ನು ಸುಧಾರಿಸಿ, ಅದರ ಸಾಂಪ್ರದಾಯಿಕತೆಯನ್ನು ಧಿಕ್ಕರಿಸಿದರು. ವರನಿಗಾಗಲೀ, ವಧುವಿಗಾಗಲೀ ವರದಕ್ಷಿಣೆ, ಸಂಪತ್ತು, ಪದವಿ ಮತ್ತು ಜಾತಿಗಳಿಂದ ಅರ್ಹತೆ ಬರುವುದಿಲ್ಲವೆಂದು ಗಾಂಧೀಜಿ ತಿಳಿಸಿದರು. ಆರೋಗ್ಯ, ಶೀಲ ಮತ್ತು ಶಾರೀರಿಕ ಸಾಮರ್ಥ್ಯ ಇವೇ ಅವರ ದೃಷ್ಟಿಯಲ್ಲಿ ಮುಖ್ಯವಾದ ಅರ್ಹತೆಗಳಾಗಿದ್ದುವು.

ಗಾಂಧೀಜಿಯಿಂದ ಆಶೀರ್ವದಿಸಲ್ಪಟ್ಟ ವಿವಾಹದಲ್ಲಿ ವಧೂವರರು ಕೈಯಿಂದ ನೂತು ನೇದ ಖಾದಿ ಬಟ್ಟೆಯನ್ನೇ ಉಡುತ್ತಿದ್ದರು. ಅಗ್ನಿಸಾಕ್ಷಿಯಾಗಿ ವಿನಿಮಯ ಮಾಡಿಕೊಳ್ಳುವ ಕೈನೂಲಿನ ಮಾಲೆಗಳನ್ನು ಬಿಟ್ಟು ಇನ್ನಾವ ಆಭರಣಗಳೂ ಇರಲಿಲ್ಲ. ವೈದಿಕ ಮಂತ್ರಗಳನ್ನು ವಧೂವರರು ಉಚ್ಚರಿಸುತ್ತಿದ್ದರು. ವರನಿಗೆ ಬೆಲೆಬಾಳುವ ಉಡುಗೊರೆಗಳನ್ನಾಗಲೀ, ವರದಕ್ಷಿಣೆಯನ್ನಾಗಲೀ ಕೊಡುತ್ತಿರಲಿಲ್ಲ. ದೇತಿ-ಲೇತಿ (ವರದಕ್ಷಿಣೆ)ಯ ದುಷ್ಟಪದ್ಧತಿಯನ್ನು ಗಾಂಧೀಜಿ ಖಂಡಿಸಿದರು. ಮತ್ತು ಮಹಿಳೆಯರನ್ನು ಗುಲಾಮರ ಮಟ್ಟಕ್ಕೆ ತಂದುದಕ್ಕಾಗಿ ಕಾಲೇಜು ಕಲಿತ ಯುವಕರನ್ನು ತರಾಟೆಗೆ ತೆಗೆದುಕೊಂಡರು. ಹೆಂಡಂದಿರನ್ನು ತಮ್ಮ ಮನೆಗಳ ಮತ್ತು ಹೃದಯಗಳ ರಾಣಿಯರನ್ನಾಗಿ ಮಾಡುವ ಬದಲು ಅವರನ್ನು ಕೊಳ್ಳುವ, ಮಾರುವ ಸಾಮಗ್ರಿಗಳನ್ನಾಗಿ ಮಾಡಿದರೆಂದು ಯುವಕರನ್ನು ದೂಷಿಸಿದರು. ಮಹಿಳೆ ಗಂಡಸಿನ ಅರ್ಧಾಂಗಿಯೆಂದು ವರ್ಣಿತಳಾಗಿದ್ದಾಳೆಂದು ನೆನಪು ಮಾಡಿದರು. "ನನ್ನ ಆಶ್ರಯದಲ್ಲೊಬ್ಬಳು ಹುಡುಗಿಯಿದ್ದರೆ, ಅವಳನ್ನು ಹೆಂಡತಿಯಾಗಿ ಮಾಡಿಕೊಳ್ಳುವ ಸಲುವಾಗಿ ಕವಡೆ ಕಾಸನ್ನಾದರೂ ಕೇಳುವವನಿಗೆ ಕೊಡುವ ಬದಲು, ಜೀವಮಾನವಿಡೀ ಅವಳು ಕನ್ಯೆಯಾಗಿಯೇ ಉಳಿಯುವಂತೆ ಮಾಡುವೆ" ಎಂದು ಗಾಂಧೀಜಿ ನುಡಿದರು.

ಮದುವೆ ಔತಣಗಳಲ್ಲಿ ದುಂದುಗಾರಿಕೆ, ವೈಭವದ ಪ್ರದರ್ಶನವನ್ನು ಗಾಂಧೀಜಿ ಮೆಚ್ಚಲಿಲ್ಲ. ಪ್ರಜಾಪ್ರಭುತ್ವದ ಈ ಯುಗದಲ್ಲಿ ವಿವಾಹದ ಧಾರ್ಮಿಕ ಸಮಾರಂಭಕ್ಕೆ ಹತ್ತು ರೂಪಾಯಿಗಳಿಗಿಂತ ಹೆಚ್ಚು ಹಣ ವೆಚ್ಚ ಮಾಡಬಾರದೆಂದು ಅವರ ಅಭಿಮತವಾಗಿತ್ತು. ಅದಕ್ಕಿಂತ ಹಣ ವಿವಾಹಕ್ಕೆ ಅವಶ್ಯಕವೆಂದು ತಿಳಿಯಲೇಬಾರದು ಎನ್ನುತ್ತಿದ್ದರು.

ಈ ದೇಶದ ಅತಿ ಬಡವರಿಗು ಇಂತಹ ಕಡಿಮೆ ವೆಚ್ಚದ ಸರಳ ವಿವಾಹದ ಅನುಷ್ಠಾನ ಅಸಾಧ್ಯವಾಗಿದೆ. ವಿವಾಹ, ಶ್ರಾದ್ಧಗಳಿಗಾಗಿ ಅಪಾರ ವೆಚ್ಚ ಮಾಡಿ ವಿಪರೀತ ಸಾಲದಲ್ಲಿ ನರಳುವ ರೈತರಿಗೆ ಗಾಂಧೀಜಿ "ನಾನೇ ನಿಮ್ಮ ಪುರೋಹಿತನಾಗುವೆ. ಮದುವೆ ಅಥವಾ ಶ್ರಾದ್ಧ ನೆರವೇರಿಸಲು ತುಂಬ ಹಣ ಬೇಕಾಗುವುದಿಲ್ಲ" ಎಂದು ಹೇಳಿದರು. ಸಾಮಾನ್ಯವಾಗಿ ಜನರು ತಿಳಿದಿರುವ ಶ್ರಾದ್ಧಕರ್ಮದ ಅರ್ಥದಲ್ಲಿ ಗಾಂಧೀಜಿಗೆ ನಂಬಿಕೆ ಇರಲಿಲ್ಲ. ಅವರ ಮಟ್ಟಿಗೆ ಹಿರಿಯರ ಶ್ರಾದ್ಧ ಆಚರಿಸುವ ಸರಿಯಾದ ರೀತಿಯೆಂದರೆ,

ಅವರಲ್ಲಿದ್ದ ಒಳ್ಳೆಯ ಗುಣಗಳನ್ನು ನಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತರುವುದೇ ಆಗಿತ್ತು. ಯಜ್ಞೋಪವೀತದಲ್ಲಿ ಗುಪ್ತಶಕ್ತಿ ಇದೆ ಎಂಬುದನ್ನು ಅವರು ಒಪ್ಪುತ್ತಿರಲಿಲ್ಲ. ಜರನು ಅದನ್ನು ಧರಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ಆರ್ಯರು ಅನಾರ್ಯರಿಂದ ತಮ್ಮನ್ನು ಪ್ರತ್ಯೇಕಿಸುವ ಸಲುವಾಗಿ ಅದನ್ನು ಧರಿಸಿದರು. ಉಚ್ಚ ನೀಚ ಭೇದವನ್ನು ತೋರಿಸುವುದಕ್ಕಾಗಿಯೇ ಅದು ಯೋಗ್ಯವಾಗಿದ್ದರೆ, ಅದನ್ನು ತೆಗೆದೊಗೆಯುವುದೇ ಮೇಲು. ಪರಿಶುದ್ಧತೆಯನ್ನು ಕಾಯ್ದುಕೊಳ್ಳುವುದೇ ಎಲ್ಲಕ್ಕಿಂತ ಶ್ರೇಷ್ಠ ಜನಿವಾರ ಎಂದರು ಗಾಂಧೀಜಿ.

ಈ ಪುರೋಹಿತ ಯಾವ ಶುಲ್ಕವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಆದರೆ ಕೆಲವೊಮ್ಮೆ ಹರಿಜನ ನಿಧಿಗೆ ಕೊಡುಗೆಗಳನ್ನು ಕೇಳುತ್ತಿದ್ದರು. ಅವರೊಮ್ಮೆ ಅಂತರ್ಜಾತೀಯ ವಿವಾಹವೊಂದನ್ನು ನೆರವೇರಿಸಿ, ಹರಿಜನರಿಗಾಗಿ ಬಾವಿಗಳನ್ನು ತೋಡಲು 5000 ರೂಪಾಯಿಗಳನ್ನು ಪಡೆದರು. ಇನ್ನೊಮ್ಮೆ ಆಶ್ರಮದಲ್ಲಿ ಹಿಂದೂ ಬ್ರಾಹ್ಮಣ ಜೋಡಿಯ ವಿವಾಹದಲ್ಲಿ ಹರಿಜನ ಕ್ರಿಶ್ಚಿಯನ್ ಒಬ್ಬರು ಪುರೋಹಿತರಾಗಿ ಕಾರ್ಯ ನಿರ್ವಹಿಸುವಂತೆ ಮಾಡಿದರು.

ಬರೇ ಆರಾಣೆ ವೆಚ್ಚಮಾಡಿ ಹೊಸ ಬೆಲ್ಲವನ್ನು ಮದುವೆಯೊಂದರಲ್ಲಿ ಅತಿಥಿಗಳಿಗೆ ಗಾಂಧೀಜಿ ಬಡಿಸಿದರು. ಒಬ್ಬ ವಧುವಿಗೆ ಗಾಂಧೀಜಿ "ನೀನು ಒಬ್ಬಳೇ ಇಲ್ಲಿಗೆ ಬಾ. ನಾನು ನಿನ್ನ ಮದುವೆ ನೆರವೇರಿಸಿ ನಿಮ್ಮಿಬ್ಬರನ್ನೂ ಜತೆಮಾಡಿ ಕಳುಹಿಸಿಕೊಡುವೆ" ಎಂದು ಬರೆದರು. ಮದುವೆಯ ಗಂಡಿನ ಜತೆಯಲ್ಲಿ ಸ್ನೇಹಿತರು, ಬಂಧುಗಳು ಇರಬೇಕೆಂದು ಗಾಂಧೀಜಿಗೆ ಅನ್ನಿಸುತ್ತಿರಲಿಲ್ಲ. ಏಳು ಜನರಿರುವ ಮದುವೆ ಗುಂಪೊಂದನ್ನು ಕಂಡಾಗ ಅವರು "ಸಪ್ತರ್ಷಿಗಳು ಬಂದರು" ಎಂದರು. ಆ ಮಂದಿ "ಹೌದು, ಅರುಂಧತಿಯೂ (ವಧುವಿನ ತಾಯಿ) ಇದ್ದಾಳೆ" ಎಂದರು.

ತನ್ನ ಮೂರನೇ ಮಗನ ವಿವಾಹದ ಸಂದರ್ಭದಲ್ಲಿ ಗಾಂಧೀಜಿ, ದಂಪತಿಗಳಿಗೆ ಭಗವದ್ಗೀತೆಯ ಒಂದು ಪ್ರತಿ, ಆಶ್ರಮ ಭಜನಾವಳಿ, ಒಂದು ಮಂಗಳ ಸೂತ್ರ ಮತ್ತು ತಾಳಿ ಉಡುಗೊರೆಯಿತ್ತರು. ಮಗನಿಗೆ "ನೀನು ನಿನ್ನ ಪತ್ನಿಯ ಘನತೆಯ ರಕ್ಷಣೆ ಮಾಡಬೇಕು. ಅವಳ ನಿಜವಾದ ಸ್ನೇಹಿತನಾಗಬೇಕೇ ಹೊರತು ಯಜಮಾನನಲ್ಲ. ನಿಮ್ಮಿಬ್ಬರ ಬಾಳು ತಾಯ್ನಾಡಿನ ಸೇವೆಯಿಂದ ಪವಿತ್ರವಾಗಲಿ. ಬೆವರು ಸುರಿಸಿ,

ಬ್ಬರೂ ನಿಮ್ಮ ಆಹಾರವನ್ನು ಸಂಪಾದಿಸಿ" ಎಂದು ಬುದ್ಧಿವಾದ ಹೇಳಿದರು. ವಿನ ತಾಯಿ ವರನಿಗೆ ಒಂದು ಚರಕವನ್ನು ಉಡುಗೊರೆ ನೀಡಿದಳು. ಹ ಸಮಾರಂಭದ ಮೊದಲು ವಧೂವರರು ಉಪವಾಸ ಮಾಡಿದರು. ಕಟ್ಟೆಯನ್ನೂ ದನಗಳ ಕೊಟ್ಟಿಗೆಯನ್ನೂ ಶುಚಿಮಾಡಿದರು ಮತ್ತು ಇಡೀ ಷ್ಟಿಯ ಮೂಲಭೂತ ಐಕ್ಯತೆಯ ಸಂಕೇತವಾಗಿ ಮರಗಳಿಗೆ ನೀರೆರೆದರು. ಲು ತೆಗೆದರು ಮತ್ತು ಭಗವದ್ಗೀತೆಯ ಪಠಣವನ್ನೂ ಮಾಡಿದರು.

ಗಾಂಧೀಜಿ ಬಾಲ್ಯವಿವಾಹವನ್ನು ಒಪ್ಪುತ್ತಿರಲಿಲ್ಲ. 13 ವರ್ಷದ ಎಳೆಯರನ್ನು ಡಾಗ ನನಗೆ ನನ್ನ ವಿವಾಹದ ನೆನಪಾಗುತ್ತದೆ. ನನಗೆ ನನ್ನ ಮೇಲೆಯೇ ಣೆ ಮೂಡುತ್ತದೆ. ತನ್ನ ತೊಡೆ ಮೇಲೆ ಕೂಡಿಸಿ ಆಡಿಸಲಷ್ಟೇ ಅರ್ಹಳಾದ ಡುಗಿಯನ್ನು ಒಬ್ಬನು ಹೆಂಡತಿಯಾಗಿ ಮಾಡಿಕೊಳ್ಳುವುದನ್ನು ಬೇರೆ ಯಾವ ರ್ಮದಲ್ಲೂ ನಾನು ಕಾಣೆ. ಕನ್ಯೆಯ ಒಪ್ಪಿಗೆ ಇಲ್ಲದೆ ಹೆತ್ತವರೇ ಮದುವೆ ಾಡಿಕೊಡುವುದರಿಂದ ಆಕೆ ವಿವಾಹಿತಳಾದಳೆಂದು ನಾನಂತೂ ತಿಳಿಯಲಾರೆ. ದಿನೈದು ವರ್ಷದ ಹುಡುಗಿ ವಿಧವೆಯಾಗುವುದನ್ನು ನನಗೆ ಕಲ್ಪಿಸಿಕೊಳ್ಳಲೂ ಸಾಧ್ಯ. ವಿಧವೆಯರಿಗೆ, ವಿಧುರರಿಗಿರುವಷ್ಟೇ ಮರುಮದುವೆಯ ಹಕ್ಕು ಇದೆ ಂದರು ಗಾಂಧೀಜಿ. ಕೆಲವು ನಿಬಂಧನೆಗಳಿಗೊಳಪಟ್ಟಂತೆ ವಿವಾಹ ವಿಚ್ಛೇದನವನ್ನು ಂಬಲಿಸಿದರು ಮತ್ತು ತಾವು ಸೆರೆಮನೆಯಲ್ಲಿದ್ದಾಗ, ಒಬ್ಬ ಹರಿಜನ ಮಹಿಳೆ ತನ್ನ ೊದಲ ಪತಿ ಜೀವಂತವಿರುವಾಗಲೇ ಇನ್ನೊಮ್ಮೆ ವಿವಾಹವಾಗುವುದಕ್ಕೆ ತಮ್ಮ ಶೀರ್ವಾದಗಳನ್ನಿತ್ತರು.

ತನ್ನನ್ನು ಒಬ್ಬ ಸನಾತನಿ ಹಿಂದೂ ಎಂದು ಹೇಳಿಕೊಂಡರೂ ಗಾಂಧೀಜಿ ಂತರ್ಜಾತೀಯ ಅಂತರ್ಧರ್ಮೀಯ ಮತ್ತು ಅಂತರ್‌ಪ್ರಾಂತೀಯ ವಾಹಗಳಿಗೆ ಪ್ರಾಶಸ್ತ್ಯ ನೀಡಿದರು. ಪ್ರತಿ ಮಿಶ್ರವಿವಾಹವೂ ಜನರನ್ನು ಪರಸ್ಪರ ಕಟಗೊಳಿಸುವುದೆಂದು ಅವರು ಭಾವಿಸಿದ್ದರು.

ತನ್ನ ಕಿರಿಯ ಮಗ ಒಬ್ಬ ಗುಜರಾತಿ ಬನಿಯಾ ದಕ್ಷಿಣ ಭಾರತೀ ಬ್ರಾಹ್ಮಣ ಹುಡುಗಿಯನ್ನು ಮದುವೆಯಾದಾಗ ಗಾಂಧೀಜಿಗೆ ಸಂತೋಷವಾಯಿತು.

ತಮ್ಮ ಶ್ರದ್ಧಾಳು ವೈಷ್ಣವ ತಾಯ್ತಂದೆಯರಿಂದ ಗಾಂಧೀಜಿ ತುಂಬಾ ಪ್ರಭಾವಿತರಾಗಿದ್ದರು. ತಮ್ಮ ಹನ್ನೆರಡನೇ ವರ್ಷ ಪ್ರಾಯದಲ್ಲೇ ಗಾಂಧೀಜಿ

ಅಸ್ಪೃಶ್ಯತೆಯನ್ನು ಪಾಪ ಎಂದು ಪರಿಗಣಿಸಿದ್ದರು. 17ನೇ ವಯಸ್ಸಿನಲ್ಲಿ ಎಲ್ಲಾ ಮನುಷ್ಯರನ್ನೂ ಜಾತಿ ವರ್ಗಗಳಿಗೆ ಭೇದವಿಲ್ಲದೆ ಸಮಾನವಾಗಿ ಎಣಿಸತೊಡಗಿದರು ಮತ್ತು 21ನೇ ವಯಸ್ಸಿಗೆ ಗೀತೆ, ಬೈಬಲ್ ಮತ್ತು ಇತರ ಮತಗಳ ಧರ್ಮ ಗ್ರಂಥಗಳ ಅಧ್ಯಯನ ಮಾಡಿದರು. "ನಮ್ಮದೇ ಧರ್ಮ ಮತ್ತು ಉಳಿದುದೆಲ್ಲವೂ ಸುಳ್ಳು" ಎಂದು ಯಾವುದೇ ಧರ್ಮದ ಅನುಯಾಯಿಗಳು ಹೇಳುವುದು ಹುಚ್ಚುತನ ಎಂಬುದು ಅವರ ನಂಬಿಕೆಯಾಗಿತ್ತು. ಗೀತೆ ಮತ್ತು ಉಪನಿಷತ್ತುಗಳನ್ನವರು ಚೆನ್ನಾಗಿ ಅಭ್ಯಾಸ ಮಾಡಿದ್ದರು. ವೇದದ ಕೆಲವು ಭಾಗಗಳನ್ನು ಓದಿಕೊಂಡಿದ್ದರು. ಧರ್ಮಗ್ರಂಥಗಳ ಅಧ್ಯಯನ ಅವರಿಗೆ ಸಹನೆ ಮತ್ತು ದುಃಖವನ್ನು ಸಹಿಸುವ ಧೈರ್ಯವನ್ನು ಕೊಟ್ಟಿತು. ಭೌತಿಕ ಶಕ್ತಿಯನ್ನು ಅವಲಂಬಿಸುವ ಮನುಷ್ಯ ಅಧರ್ಮವನ್ನೇ ಹರಡುತ್ತಾನಾದರೆ, ಆತ್ಮಶಕ್ತಿಯನ್ನು ಅವಲಂಬಿಸಿದವನೇ ನಿಜವಾಗಿ ಧರ್ಮವನ್ನು ತಿಳಿದವನೆಂದು ಗಾಂಧೀಜಿ ಅರಿತರು. ಮತಾಂತರ ಅರ್ಥಶೂನ್ಯವೆಂದು ಗಾಂಧೀಜಿಯ ನಿಲುಮೆಯಾಗಿತ್ತು. ಹಿಂದೂ, ಬುದ್ಧ, ಸಿಖ್ಖ, ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳ ಮೂಲತತ್ವಗಳನ್ನು ಗಾಂಧೀಜಿ ಸರಳವಾಗಿ ವಿವರಿಸಬಲ್ಲವರಾಗಿದ್ದರು. ಅನೇಕ ವೇಳೆ ಅವರು ಇಗರ್ಜಿಯಲ್ಲಿ ನಡೆಯುವ ಕ್ರೈಸ್ತ ಪ್ರಾರ್ಥನೆಗಳಿಗೆ ಹಾಜರಾಗುತ್ತಿದ್ದರು. ಹಿಂದೂ ಧರ್ಮದ ಮೇಲೆ ನೀಡಿದ ನಾಲ್ಕು ಭಾಷಣಗಳ ಸರಮಾಲೆಯಲ್ಲಿ ಗಾಂಧೀಜಿ ಪ್ರತಿ ಧರ್ಮದ ವಿಶಿಷ್ಟ ಗುಣವನ್ನು ಬೊಟ್ಟು ಮಾಡಿ ತೋರಿಸಿದರು.

ಏಸುಕ್ರಿಸ್ತನ ವಚನಗಳನ್ನು ಗಾಂಧೀಜಿ ಎಷ್ಟು ಸಹಜವಾಗಿ ಉದ್ಧೃತಗೊಳಿಸುತ್ತಿದ್ದರೆಂದರೆ, ಕೆಲವು ಯೂರೋಪಿಯನರು ಅವರನ್ನು ಜನ್ಮತಃ ಕ್ರೈಸ್ತರೆಂದು ತಿಳಿದಿದ್ದರು.

ಒಮ್ಮೆ ಕ್ರಿಸ್ಮಸ್ ಹಬ್ಬದ ಮುನ್ನಾದಿನ ಹಡಗೊಂದರಲ್ಲಿ ಪ್ರಯಾಣಿಸುತ್ತಿದ್ದಾಗ ಪ್ರಯಾಣಿಕರು ಏಸುಕ್ರಿಸ್ತನ ಬೋಧನೆಯ ಬಗ್ಗೆ ಮಾತನಾಡುವಂತೆ ಗಾಂಧೀಜಿಯನ್ನು ಕೇಳಿಕೊಂಡರು.

ಸಾಮೂಹಿಕ ಪ್ರಾರ್ಥನೆಗಳಲ್ಲಿ ಗಾಂಧೀಜಿ ಕುರಾನಿನ ಅಯಾತ್‌ಗಳನ್ನು ಪಠಿಸುತ್ತಿದ್ದರು. ಕೆಲವರು ಹಿಂದೂಗಳು ಮತ್ತು ಕ್ರಿಶ್ಚಿಯನರು ಅದಕ್ಕೆ ಆಕ್ಷೇಪವೆತ್ತಿದ್ದರು. ಹಿಂದೂಧರ್ಮವನ್ನು ಕುರಿತು ದಿಟ್ಟ ನಿಲುವನ್ನು ತಾಳಿದ್ದ ಗಾಂಧೀಜಿ ಜಾತಿಗಳ

ತಾರತಮ್ಯವನ್ನು ಅಲ್ಲಗಳೆದರು. ಇದರಿಂದ ಸಂಪ್ರದಾಯವಾದೀ ಹಿಂದೂಗಳಿಗೆ ಕೋಪ ಬಂತು. ಅವರು ಗಾಂಧೀಜಿಯನ್ನು ಕಪ್ಪು ಬಾವುಟ ಪ್ರದರ್ಶನ, ಚಪ್ಪಲಿ ಹಾರ ಇತ್ಯಾದಿಗಳಿಂದ ಅವಮಾನಗೊಳಿಸಲೆತ್ನಿಸಿದರು. ಕೊಲ್ಲುವ ಪ್ರಯತ್ನವನ್ನೂ ಮಾಡಿದರು. ಆದರೂ ಗಾಂಧೀಜಿ ಹೇಳಿದರು. "ಅಸ್ಪೃಶ್ಯತೆ ಹಿಂದೂಧರ್ಮದ ಭಾಗವಾಗಿ ಉಳಿಯುವುದಾದಲ್ಲಿ ನಾನು ಹಿಂದೂ ಆಗಿರಲು ನಿರಾಕರಿಸುತ್ತೇನೆ. ಮನುಷ್ಯತ್ವದ ಮೇಲಿನ ಈ ಕಪ್ಪು ಚುಕ್ಕೆಯನ್ನು ತೆಗೆಯಲಾಗದಿದ್ದಲ್ಲಿ, ಹಿಂದೂ ಧರ್ಮ ನಾಶವಾಗಲಿ. ಪ್ರೇಮದ ಹೊರತು ಇನ್ನೇನೂ ಅಲ್ಲದ ಅಹಿಂಸೆಯ ತಳಹದಿಯ ಮೇಲೆ ನನ್ನ ಧರ್ಮ ನಿಂತಿದೆ. ಪ್ರೇಮ ಕೇವಲ ನಮ್ಮ ನೆರೆಹೊರೆಯವರಿಗಷ್ಟೇ ಅಲ್ಲ, ನನ್ನ ಮಿತ್ರರಿಗಷ್ಟೇ ಅಲ್ಲ, ನಮ್ಮ ಶತ್ರುಗಳನ್ನೂ ಅಪ್ಪಿಕೊಳ್ಳುವಂತಹುದೇ ಪ್ರೇಮ. ಎಲ್ಲರಿಗೂ ತೆರೆದಿರದ ದೇವಾಲಯಗಳನ್ನು ಗಾಂಧೀಜಿ ಪ್ರವೇಶಿಸಲಿಲ್ಲ. ಅನೇಕ ವರ್ಷಗಳ ಒತ್ತಾಯದ ಬಳಿಕ ಅನೇಕ ದೇವಾಲಯಗಳನ್ನು ಹರಿಜನರ ಪ್ರವೇಶಕ್ಕೆ ಮುಕ್ತಗೊಳಿಸುವುದರಲ್ಲಿ ಗಾಂಧೀಜಿ ಸಫಲರಾದರು.

ಅವರಿಗೆ ಸತ್ಯವೇ ದೇವರಾಗಿತ್ತು. ಬದುಕಿನ ಹಾದಿಯಾಗಿತ್ತು. "ದೇವರು ನೀರಿನ ಒಂದೊಂದು ಹನಿಯಲ್ಲೂ, ಧೂಳಿನ ಕಣಕಣದಲ್ಲೂ ಇದ್ದಾನೆ" ಎಂದರು. ಗಾಂಧೀಜಿಗೆ ನಿರಾಕಾರದ ಪೂಜೆಯೇ ಇಷ್ಟವಾದರೂ, ಮೂರ್ತಿಪೂಜೆಯನ್ನವರು ವಿರೋಧಿಸಲಿಲ್ಲ. ಏಕೆಂದರೆ ವಿಗ್ರಹಗಳನ್ನು ಪೂಜಿಸುವವರು ಆ ಕಲ್ಲನ್ನು ಪೂಜಿಸದೇ, ಕಲ್ಲಿನೊಳಗಿರುವ ಭಗವಂತನನ್ನೇ ಆರಾಧಿಸುತ್ತಾರೆ. ವಿಗ್ರಹಾರಾಧನೆಯ ಬಗ್ಗೆ ವಾದಿಸುತ್ತಿರುವಾಗ ಒಮ್ಮೆ ಕವಿವರ್ಯ ರವೀಂದ್ರನಾಥ ಠಾಗೋರರಿಗೆ ಗಾಂಧೀಜಿ "ಮರದ ಕೆಳಗೆ ಹೊಲೆಯನೊಬ್ಬ ದೇವನ ಗುಡಿಯಾಗಿ ಬಳಸುವ, ಕೆಂಪು ಬಣ್ಣ ಬಳಿದಿರುವ ಕಲ್ಲೂ ಪ್ರಧಾನವಾದುದು. ಏಕೆಂದರೆ ಅದು ಅವನಿಗೂ ಭಗವಂತನಿಗೂ ನಡುವಿನ ಸಂಬಂಧದ ಏಕಮಾತ್ರ ಕೊಂಡಿ. ಹೆಳವನೊಬ್ಬನಿಗೆ ನಡೆಯಲು ಕಲಿಸುವವರಿಗೆ ನೀವು ಅವನ ಏಕಮಾತ್ರ ಊರುಗೋಲನ್ನು ಕಸಿದುಕೊಳ್ಳುವುದು ಅಸಾಧ್ಯ. ವೃಕ್ಷಾರಾಧನೆಯಲ್ಲೂ ಗಾಂಧೀಜಿ ಅಸಾಧುವಾದುದನ್ನಾಗಲೀ ಕೆಟ್ಟದ್ದನ್ನಾಗಲೀ ಕಾಣಲಿಲ್ಲ. ಅದರಲ್ಲಿ ನಾನು ಅಂತರಂಗದ ಆಳವಾದ ಅಭೀಷ್ಟ ಮತ್ತು ಕಾವ್ಯಮಯ ಸೌಂದರ್ಯದ ಒಂದು ಸ್ವಭಾವವನ್ನು ಕಾಣುತ್ತೇನೆ. ಭಗವಂತನ ಮಹತ್ವ ಮತ್ತು ವೈಭವಗಳನ್ನು ಸಾರುವ ಸಸ್ಯ ಸಾಮ್ರಾಜ್ಯಕ್ಕೆ ತೋರುವ ನಿಜವಾದ ಗೌರವದ ಸಂಕೇತ ಅದು" ಎಂದು ಹೇಳಿದರು.

"ಗಾಂಧೀಜಿಗೊಂದು ಗುಡಿ" ತೆರೆಯುವುದನ್ನು ಅವರು ಬಲವಾಗಿ ವಿರೋಧಿಸಿದರು. ಆಶ್ರಮದಲ್ಲಿ ತಮ್ಮ ಕಾಲುಮುಟ್ಟಿ ನಮಸ್ಕರಿಸುವುದನ್ನೂ ಅವರು ಅಪರಾಧವೆಂದೇ ಪರಿಗಣಿಸುತ್ತಿದ್ದರು.

ಆ ಸಂತ ಗುಣಗಳ ಆತ್ಮ ತಮ್ಮ ದೇಶವಾಸಿಗಳಿಗೆ ಹೊಸದೊಂದು ಮಂತ್ರದೀಕ್ಷೆಯನ್ನೇ ಕೊಟ್ಟರು. ತಾಯ್ನಾಡು ಮತ್ತು ದರಿದ್ರನಾರಾಯಣನ ಸೇವೆಯ ಮೂಲಕ ಸ್ವಾತಂತ್ರ್ಯ, ಸಮಾನತೆ, ಮಾನವಸೋದರತ್ವಗಳ ಮಂತ್ರ, ಎಲ್ಲ ಭಯಗಳಿಂದ ಗುಲಾಮಗಿರಿಯಿಂದ ಮನಸ್ಸನ್ನು ಬಿಡುಗಡೆಗೊಳಿಸುವ ಮಂತ್ರ, ಜೀವನದ ವಿವಿಧ ರಂಗಗಳಲ್ಲಿ ತನ್ನನ್ನು ಸಮರ್ಪಿಸಿಕೊಳ್ಳುವ ಉದಾತ್ತ ಮತ್ತು ಧೀರ ಕರ್ಮವನ್ನು ತಮ್ಮ ಜೀವನದಲ್ಲಿ ಮಾಡಿ ತೋರಿಸಿದರು. "ಮಾನವತೆ ಅಹಿಂಸೆಯ ಮೂಲಕ ಹಿಂಸೆಯಿಂದ ಹೇಗೆ ಪಾರಾಗಬೇಕು ಮತ್ತು ಪ್ರೇಮದಿಂದಲೇ ದ್ವೇಷವನ್ನು ಜಯಿಸಲು ಹೇಗೆ ಸಾಧ್ಯ" ಎನ್ನುವುದನ್ನು ಮರಳಿ ಮರಳಿ ಗಾಂಧೀಜಿ ಕಲಿಸುತ್ತಿದ್ದರು.

ಗಾಂಧೀಜಿ ಅತ್ಯಂತ ಸಕ್ರಿಯ ಬಾಳನ್ನು ಬದುಕಿದರು. ಕರ್ಮಯಜ್ಞ ಅಥವಾ ಶಾರೀರಿಕ ಶ್ರಮವೆನ್ನುವ ದೈನಂದಿನ ಯಜ್ಞವನ್ನು ಮಾಡದೆ ಊಟ ಮಾಡುವವನು, ಕಳ್ಳತನದ ಅನ್ನವನ್ನೇ ಉಣ್ಣುತ್ತಾನೆ ಎನ್ನುವ ಗೀತೆಯ ಬೋಧೆಯನ್ನವರು ಒಪ್ಪಿಕೊಂಡಿದ್ದರು. ಯಾವುದಾದರೊಂದು ಶರೀರ ಶ್ರಮದ ಕೆಲಸ ಮಾಡದೇ ಒಂದು ದಿನವನ್ನೂ ಅವರು ಕಳೆಯುತ್ತಿರಲಿಲ್ಲ.

ಅವರೆಂದೂ ಸುಳ್ಳಾಡಲಿಲ್ಲ. ಯಾವುದೇ ಜೀವಿಗೆ ಹಿಂಸೆಮಾಡಲಿಲ್ಲ, ಯಾರಿಗೂ ಕೆಟ್ಟ ಮಾತನ್ನಾಡಲಿಲ್ಲ. ಸೂರ್ಯೋದಯಕ್ಕೆ ಮೊದಲೇ ಏಳುತ್ತಿದ್ದರು. ಸಂಜೆ ಮುಂಜಾನೆಗಳಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಅವರ ದಿನದ ಪ್ರಾರ್ಥನೆಯಲ್ಲಿ ಗೀತೆ, ಉಪನಿಷತ್ತು, ಕುರಾನ್ ಮತ್ತು ಬೆಂಜ್ ಅವೆಸ್ತಾನಗಳ ಆಯ್ದ ಭಾಗಗಳಲ್ಲಿದ್ದವು. ರೈಲು, ಹಡಗು ಪ್ರಯಾಣ ಮಾಡುವಾಗಲೂ, ಪಾದಯಾತ್ರೆ ವೇಳೆಯಲ್ಲೂ ಸಹ ಗಾಂಧೀಜಿ ತಮ್ಮ ನಿತ್ಯದ ಪ್ರಾರ್ಥನೆಯನ್ನು ಬಿಡಲಿಲ್ಲ. ಸೆರೆವಾಸದ ಅವಧಿಯೂ ಇದಕ್ಕೆ ಹೊರತಾಗಿರಲಿಲ್ಲ. ಅವರು 21 ದಿನಗಳ ಕಾಲ ಉಪವಾಸ ಇರಬಲ್ಲವರಾಗಿದ್ದರು. ಆದರೆ ಪ್ರಾರ್ಥನೆ ಸಲ್ಲಿಸದೆ ಒಂದು ದಿನವನ್ನು ಕಳೆಯುವುದೂ ಅವರಿಗೆ ಅಸಾಧ್ಯವಾಗಿತ್ತು. ಪ್ರಾರ್ಥನೆ ಅವರಿಗೆ ಕೇವಲ

ಟಗಳಿಂದ ಮಾಡುವ ಒಂದು ಕ್ರಿಯೆಯಷ್ಟೇ ಆಗಿರಲಿಲ್ಲ. ಅದು ಭಗವಂತನ ಮೇಲಿನ ಜೀವಂತ ನಂಬಿಕೆಯಾಗಿತ್ತು. ಪ್ರಾರ್ಥನೆಯ ಉದ್ದೇಶ ದೇವನನ್ನು ಪ್ರಸನ್ನಗೊಳಿಸುವುದಾಗಿರಲಿಲ್ಲ. ಅದು ತನ್ನ ಆತ್ಮವನ್ನೇ ಶುದ್ಧೀಕರಿಸುವುದಾಗಿತ್ತು. ತಮ್ಮ 36ನೇ ವಯಸ್ಸಿಗೆ ಗಾಂಧೀಜಿ ಬ್ರಹ್ಮಚರ್ಯ ಪಾಲನೆಗೆ ತೊಡಗಿದರು ಮತ್ತು ಫೀನಿಕ್ಸ್ ಆಶ್ರಮದಲ್ಲಿ ಸಾಮೂಹಿಕ ಪ್ರಾರ್ಥನೆಯನ್ನು ಪ್ರಾರಂಭಿಸಿದರು. ಪ್ರತಿ ಸಂಜೆ ಯಲ್ಲಿ ಭಜನೆ ಮತ್ತು ಕ್ರೈಸ್ತ ಮತಗ್ರಂಥಗಳ ಪಾರಾಯಣ ನಡೆಯುತ್ತಿತ್ತು. ಜೀವನದ ಕೊನೆಕೊನೆಗೆ ಗಾಂಧೀಜಿ ತಮ್ಮ ಪ್ರಾರ್ಥನಾ ಸಭೆಗಳಲ್ಲಿ ತಮ್ಮೊಡನೆ ಕೈತಟ್ಟಿ ತಾಳಹಾಕುತ್ತಾ ರಾಮಧ್ಯಾನಗಳಲ್ಲಿ ಪಾಲ್ಗೊಳ್ಳುವಂತೆ ಅವರಿಗೆ ಹೇಳುತ್ತಿದ್ದರು. ಇಡಿಯ ಭಾರತವೇ ಅಂತಹ ಪ್ರಾರ್ಥನೆ ಕೂಟಗಳಿಂದ ತುಂಬಿಹೋಗಬೇಕೆಂದು ಗಾಂಧೀಜಿಯವರ ಬಯಕೆಯಾಗಿತ್ತು.

ವಂಚನೆಯನ್ನು ಅವರೆಂದೂ ಸಹಿಸುತ್ತಿರಲಿಲ್ಲ. ಆದರೆ ಇತರರನ್ನು ಅವರ ತಪ್ಪುಗಳಿಗಾಗಿ ಗಾಂಧೀಜಿ ದಂಡಿಸಲಿಲ್ಲ. ಯಾರಾದರೂ ಸುಳ್ಳು ಹೇಳಿದರೆ ಅಥವಾ ತಪ್ಪೆಸಗಿದರೆ ಗಾಂಧೀಜಿ ತಾವೇ ಸ್ವತಃ ಅವರನ್ನು ಸರಿಮಾಡಲು ಉಪವಾಸ ಮಾಡುತ್ತಿದ್ದರು.

ಧರ್ಮಗುರುಗಳ ಪರಂಪರೆಗನುಸರಿಸಿ, ಗಾಂಧೀಜಿಯೂ ಅನೇಕ ವೇಳೆ ದೇವಾಲಯಗಳ ಉದ್ಘಾಟನೆಯನ್ನು ನೆರವೇರಿಸಿದರು. ಶಾಲೆ, ಆಸ್ಪತ್ರೆಗಳ ಅಸ್ತಿಭಾರ ಹಾಕಿದರು. ನೌಖಾಲಿಯಲ್ಲಿ ಮುಸ್ಲಿಮರು ಭ್ರಷ್ಟಗೊಳಿಸಿದ ವಿಗ್ರಹವೊಂದರ ಪುನಃ ಸ್ಥಾಪನೆಯನ್ನು ಗಾಂಧೀಜಿ ಮಾಡಿದರು. ದೆಹಲಿಯ ಲಕ್ಷ್ಮೀನಾರಾಯಣ ದೇಗುಲ, ವಾರಾಣಸಿಯ ಭಾರತಮಾತೆ ದೇಗುಲ, ಸೇಲಂನಲ್ಲಿನ ಹರಿಜನರ ದೇಗುಲ ಮತ್ತು ರತ್ನಗಿರಿಯ ಮಾರುತಿ ಗುಡಿಗಳನ್ನು ಗಾಂಧೀಜಿ ಉದ್ಘಾಟನೆ ಮಾಡಿದರು "ಮಾರುತಿ ದೈತ್ಯಶಕ್ತಿಯನ್ನು ಹೊಂದಿದ್ದನೆಂಬುದಕ್ಕಾಗಿಯಷ್ಟೇ ನಾನು ಈ ದೇಗುಲವನ್ನು ಉದ್ಘಾಟನೆ ಮಾಡುತ್ತಿಲ್ಲ. ಆ ಶಕ್ತಿ ರಾವಣನಲ್ಲೂ ಇತ್ತು. ಆದರೆ ಮಾರುತಿಯಲ್ಲಿ ಆತ್ಮಶಕ್ತಿ ತುಂಬಿತ್ತು. ಮಾರುತಿಯ ಬ್ರಹ್ಮಚರ್ಯೆ ಮತ್ತು ರಾಮಭಕ್ತಿಯ ಫಲವೇ ಅವನ ಅಧ್ಯಾತ್ಮ ಶಕ್ತಿಯಾಗಿತ್ತು" ಎಂದರು ಗಾಂಧೀಜಿ.

ರಾಮನಾಮದಲ್ಲಿ ಗಾಂಧೀಜಿಗೆ ಅಚಲ ವಿಶ್ವಾಸ. ಪ್ರಾರ್ಥನಾ ಸಭೆಗೆ ಹೋಗುವ ದಾರಿಯಲ್ಲಿ ಒಬ್ಬ ಮತಾಂಧ ಹಿಂದೂ ಅವರನ್ನು ಗುಂಡಿನಿಂದ ಹೊಡೆದಾಗ ಸಹ ಗಾಂಧೀಜಿ "ಹೇ ರಾಮ್" ಎನ್ನುತ್ತಾ ಕೊನೆಯುಸಿರೆಳೆದರು.

ವೈದ್ಯ

ರಾಜಕೋಟದ ಆಲ್ಫ್ರಡ್ ಹೈಸ್ಕೂಲಿನಿಂದ ಗಾಂಧೀಜಿ ಮೆಟ್ರಿಕ್ಯುಲೇಶನ್ ಪಾಸಾದರೂ, ಆಮೇಲೆ ಸ್ವಲ್ಪ ಸಮಯದಲ್ಲಿ ಅವರ ರಕ್ಷಕರು ಗಾಂಧೀಜಿಯನ್ನು ಕಾನೂನು ವಿದ್ಯಾಭ್ಯಾಸಕ್ಕೆಂದು ಇಂಗ್ಲೆಂಡಿಗೆ ಕಳುಹಿಸಲು ನಿರ್ಧರಿಸಿದಾಗ ಗಾಂಧೀಜಿ ತಾನು ವೈದ್ಯನಾಗಿ ತರಬೇತು ಹೊಂದುವ ಇಚ್ಛೆ ವ್ಯಕ್ತಪಡಿಸಿದರು. ಆದರೆ ವೈಷ್ಣವನಾದವನು, ಹೆಣಗಳನ್ನು ಕೊಯ್ಯುವಂತಹ ಕೆಲಸ ಮಾಡಬಾರದೆಂದು ತಂದೆ ದಿವಂಗತ ಕರಮಚಂದರೂ ಅದನ್ನು ಎಂದೂ ಇಷ್ಟಪಟ್ಟಿರಲಿಲ್ಲ.

ದಕ್ಷಿಣ ಆಫ್ರಿಕಾದಿಂದ ಇಂಗ್ಲೆಂಡಿಗೆ ಮತ್ತೊಮ್ಮೆ ತನ್ನ 39ನೇ ವಯಸ್ಸಿನಲ್ಲಿ ತೆರಳಿದಾಗಲೂ ವೈದ್ಯಕೀಯ ವೃತ್ತಿಯನ್ನು ಅನುಸರಿಸುವ ಯೋಚನೆ ಗಾಂಧೀಜಿಗೆ ಬಂದು, ಆಗಲೂ ಪ್ರಾಣಿಗಳ ಅಂಗವಿಚ್ಛೇದನ ಅಡ್ಡ ಬಂತು. ಜೀವಂತ ಪ್ರಾಣಿಗಳನ್ನು ಕೊಯ್ಯುವುದು ಮತ್ತು ಔಷಧಿಗಳ ಚುಚ್ಚುಮದ್ದುಗಳನ್ನು ತಯಾರಿಸುವ ಸಲುವಾಗಿ ಜೀವವಿರುವ ಪ್ರಾಣಿಗಳ ಮೇಲೆ ಪ್ರಯೋಗಗಳನ್ನು ನಡೆಸುವುದನ್ನು ಅವರಿಂದ ಸಹಿಸಲಾಗುತ್ತಿರಲಿಲ್ಲ. ಅವರ ಮಟ್ಟಿಗೆ ಅಲೋಪತಿ ವೈದ್ಯರು ಸೈತಾನನ ಶಿಷ್ಯರೂ, ಪಾಶ್ಚಾತ್ಯ ವೈದ್ಯ ಪದ್ಧತಿ ಮಾಟಮಂತ್ರದ ಸಾರವೇ ಆಗಿತ್ತು. ಆಧುನಿಕ ಪ್ರಯೋಗಗಳನ್ನು ಆಯುರ್ವೇದ ವೈದ್ಯರು ಹೀಗಳೆಯುವುದನ್ನು ಅವರು ಖಂಡಿಸುತ್ತಿದ್ದರೂ ಹೋಮಿಯೋಪತಿಯಿಂದ ಅವರು ಪ್ರಭಾವಿತರಾಗಲಿಲ್ಲ. ರೋಗಿಗಳನ್ನು ಗುಣಪಡಿಸುವಲ್ಲಿ ಅವರಿಗಿದ್ದ ತೀವ್ರ ಆಸಕ್ತಿ ಅವರನ್ನು ಓರ್ವ ಪ್ರಕೃತಿ ಚಿಕಿತ್ಸಕರನ್ನಾಗಿ ಮಾಡಿದ ನಂತರವೇ ಅವರಿಗೆ ಶಾಂತಿ ದೊರೆಯಿತು.

ಡಾ॥ ಕುನ್ಹೆಯ ಲೇಖನಗಳನ್ನು ಓದಿ ಗಾಂಧೀಜಿ ರೋಗಗಳನ್ನು ವಾಸಿ ಮಾಡುವುದರಲ್ಲಿ ನೀರಿನ ಉಪಯೋಗದ ಮಹತ್ವವನ್ನು ತಿಳಿದುಕೊಂಡರು. ನಿಧಾನವಾಗಿ ತನ್ನ ಹಾಗೂ ಪತ್ನಿ ಪುತ್ರರ ಮೇಲೆ ಪ್ರಯೋಗಗಳನ್ನು ನಡೆಸಿದ ಬಳಿಕ ಪ್ರಕೃತಿಯಲ್ಲೇ ದೊರೆಯುವ ಮೂಲವಸ್ತುಗಳಾದ ನೀರು, ಮಣ್ಣು, ಹವೆ ಮತ್ತು ಸೂರ್ಯ ಪ್ರಕಾಶಗಳನ್ನು ಸರಿಯಾದ ವಿಧಾನದಲ್ಲಿ ಉಪಯೋಗಿಸಿ ರೋಗ ವಾಸಿಮಾಡುವ ಚಿಕಿತ್ಸಾ ವಿಧಾನವೊಂದನ್ನು ರೂಪಿಸಿದರು. ಗುಳಿಗೆಗಳು, ಚೂರ್ಣಗಳಿಂದ ದೇಹವನ್ನು ಕಲುಷಿತಗೊಳಿಸಲು ಅವರು ಬಿಡುತ್ತಿರಲಿಲ್ಲ.

ರೋಗಿಗಳನ್ನು ಉಪವಾಸ ಮಾಡಲು, ಆಹಾರ ಪದ್ಧತಿಯನ್ನು ಬದಲಾಯಿಸಲು ಮತ್ತು ಗಿಡಮೂಲಿಕೆಗಳನ್ನು ಬಳಸಲು ಅವರು ಒತ್ತಾಯ ಮಾಡುತ್ತಿದ್ದರು.

ರೋಗಿಗಳನ್ನು ಪರೀಕ್ಷಿಸಿ ಅವರ ಕಾಯಿಲೆಯ ಎಲ್ಲ ಅಂಶಗಳನ್ನು ಅಧ್ಯಯನ ಮಾಡುವಲ್ಲಿ ಗಾಂಧೀಜಿಗೆ ಇದ್ದ ಅಸಾಮಾನ್ಯ ಶಕ್ತಿ, ರೋಗಿಗಳನ್ನು ಯಶಸ್ವಿಯಾಗಿ ಚಿಕಿತ್ಸೆಗೆ ಒಳಪಡಿಸಲು ಅವರಿಗೆ ನೆರವಾಯಿತು. ದಕ್ಷಿಣ ಆಫ್ರಿಕಾದಲ್ಲಿ ಅವರು ಅಲ್ಲಿನ ಪ್ರಥಮ ಕೂಲಿ ಬ್ಯಾರಿಸ್ಟರರೂ, ಪ್ರಥಮ ಕೂಲಿ ನಾಟಿ ವೈದ್ಯರೂ ಆಗಿದ್ದರು. ಅನೇಕ ಯೂರೋಪಿಯನ್ನರೂ, ಭಾರತೀಯರೂ ಅವರ ಸಲಹೆಗಳನ್ನಪೇಕ್ಷಿಸಿ ಬರುತ್ತಿದ್ದರು. ಮತ್ತು ತಮ್ಮ ಅನೇಕ ಕಕ್ಷಿಗಾರರಿಗೆ ಅವರು ಕುಟುಂಬ ವೈದ್ಯರೇ ಆದರು. ಅವರ ವೈದ್ಯ ವಿಧಾನ ಆಗಿನ ವೈದ್ಯಕೀಯ ಪದ್ಧತಿಯ ನಿಯಮಗಳಿಗೆ ವಿರುದ್ಧವಾಗಿತ್ತು. ಮುಂದೆ ಅವುಗಳನ್ನೇ ಡಾಕ್ಟರುಗಳೂ ಆಂಶಿಕವಾಗಿ ಸ್ವೀಕಾರ ಮಾಡಿದರು.

ತಮ್ಮ ಮಗ ಟೈಫಾಯಿಡ್ (ವಿಷಮಜ್ವರ) ಜ್ವರದಿಂದ ಮಲಗಿದಾಗ ಡಾಕ್ಟರರು ಕೋಳಿಸಾರು ಮತ್ತು ಕೋಳಿಮೊಟ್ಟೆ ಎರಡನ್ನೂ ಆತನಿಗೆ ಕೊಡಲು ಸಲಹೆ ಮಾಡಿದರು. ಆದರೆ ಮಗನಿಗೆ ಮಾಂಸಾಹಾರ ನೀಡಲು ಗಾಂಧೀಜಿ ನಿರಾಕರಿಸಿದರು. ತಾವೇ ಮಗನ ಆರೈಕೆ ನೋಡಿಕೊಂಡರು. ಆತನನ್ನು ಬರೇ ನೀರು ಮತ್ತು ಕಿತ್ತಳೆ ರಸದ ಆಹಾರದ ಮೇಲೆ ಆರೈಕೆ ಮಾಡಿದರು. ಮೈಮೇಲೆ ಒದ್ದೆ ಮಣ್ಣಿನ ಪಟ್ಟಿಗಳನ್ನಿಟ್ಟರು. ಜ್ವರದ ತಾಪ ತಲೆಗೇರಿ ಬಡಬಡಿಸತೊಡಗಿದಾಗ ಗಾಂಧೀಜಿ ಸ್ವಲ್ಪ ಅಧೀರರಾದರು. ಆದರೂ ತಮ್ಮ ಪ್ರಕೃತಿ ಚಿಕಿತ್ಸೆಯ ವಿಧಾನಕ್ಕೆ ಬದ್ಧರಾಗಿ ನಿಂತರು. ಮತ್ತು ಮಗನ ಕಾಯಿಲೆ ಗುಣಪಡಿಸಿದರು. ಮತ್ತು ಅನೇಕ ಪ್ರಕರಣಗಳಲ್ಲಿ ಗಾಂಧೀಜಿ ಚುಚ್ಚುಮದ್ದುಗಳ ನೆರವಿಲ್ಲದೆಯೇ ಚಿಕಿತ್ಸೆಯನ್ನು ಮಾಡಿ ಗುಣಪಡಿಸಿದರು.

ಡಾಕ್ಟರ್‌ರ ಅಪ್ಪಣೆಯನ್ನು ಗಾಂಧೀಜಿ ಅನೇಕ ವೇಳೆ ಉಲ್ಲಂಘಿಸಿದರು. ಕಸ್ತೂರಬಾ ಒಮ್ಮೆ ಅತಿಹೆಚ್ಚಿನ ರಕ್ತಹೀನತೆಯಿಂದ ಹಾಸಿಗೆ ಹಿಡಿದಿದ್ದರು. ದನದ ಮಾಂಸದ ಸಾರು (ಸೂಪ್) ಸೇವಿಸಲು ಡಾಕ್ಟರರು ಸಲಹೆ ಮಾಡಿದರು. ಗಾಂಧೀಜಿ ಕಸ್ತೂರ್‌ಬಾ ಇಬ್ಬರೂ ವಿರೋಧಿಸಿದರು. ಅನೇಕ ದಿನಗಳು ಆಕೆಗೆ ನಿಂಬೆರಸ ಕುಡಿಸಿ ಗಾಂಧೀಜಿ ರೋಗ ವಾಸಿಮಾಡಿದರು. ಬೇಳೆ ಮತ್ತು ಉಪ್ಪು ಸೇವಿಸದಿರುವಂತೆ ಕಸ್ತೂರ್‌ಬಾಗೆ ಗಾಂಧೀಜಿ ಸಲಹೆ ನೀಡಿದರು. ಗಂಡನ ಕಠಿಣ

ನಿಷ್ಠೆಯನ್ನು ಕ್ಷಣಕಾಲ ಮರೆತ ಕಸ್ತೂರ್‌ಬಾ ಗೊಣಗುಟ್ಟಿಕೊಂಡರು. "ಇನ್ನೊಬ್ಬರಿಗೆ ಹಾಗೆ ಮಾಡಲು ಹೇಳುವುದು ಸುಲಭ. ನಿಮಗೆ ಅವುಗಳನ್ನು ಬಿಟ್ಟುಬಿಡಲು ಸಾಧ್ಯವೇ?" ಎಂದರು. ತಕ್ಷಣವೇ ಗಾಂಧೀಜಿ "ಡಾಕ್ಟರರು ಹಾಗೆಂದು ಸಲಹೆ ನೀಡಿದರೆ ಖಂಡಿತವಾಗಿ ಬಿಡುತ್ತೇನೆ. ವೈದ್ಯರ ಸಲಹೆ ಇಲ್ಲದೆಯೂ ಈಗ ಉಪ್ಪು ಮತ್ತು ಬೇಳೆಯನ್ನು ಒಂದು ವರ್ಷ ಬಿಟ್ಟುಬಿಡುತ್ತೇನೆ" ಎಂದರು. ಕಸ್ತೂರ್‌ಬಾ ಕಣ್ಣೀರುಗರೆದೂ ಗಾಂಧೀಜಿಯನ್ನು ತನ್ನ ವ್ರತ ಹಿಂತೆಗೆದುಕೊಳ್ಳುವಂತೆ ಮಾಡಲಾಗಲಿಲ್ಲ. ರೋಗಿ, ವೈದ್ಯ ಇಬ್ಬರೂ ಉಪ್ಪು, ಬೇಳೆ ತೆಗೆದುಕೊಳ್ಳುವುದನ್ನು ಬಿಟ್ಟುಬಿಟ್ಟರು. ಇನ್ನೊಂದು ಸಂದರ್ಭದಲ್ಲಿ, ಕಸ್ತೂರ್‌ಬಾ 15 ದಿನಗಳ ಕಾಲ ನಿಯಮಿತವಾಗಿ ಬೇವಿನರಸ ಕುಡಿಯಬೇಕಾಯ್ತು. ಮಲವಿಸರ್ಜನೆಗಾಗಿ ಹೊಟ್ಟೆ ಖಾಲಿಯಿರುವಂತೆ ನೋಡಿಕೊಳ್ಳುವುದು ಗಾಂಧೀಜಿಯ ದೃಷ್ಟಿಯಲ್ಲಿ ತುಂಬ ಮಹತ್ವದ್ದಾಗಿತ್ತು. ಶರೀರದಲ್ಲಿ ಶೇಖರವಾದ ವಿಷಪದಾರ್ಥಗಳನ್ನು ನಿವಾರಿಸಲು ಗಾಂಧೀಜಿ, ಉಪವಾಸ, ಅರೆಉಪವಾಸ ಮತ್ತು ಎನಿಮಾ ಪ್ರಯೋಗಗಳ ಸಲಹೆ ನೀಡುತ್ತಿದ್ದರು. ಮಿತಿಮೀರಿ ತಿನ್ನುವುದು ಮತ್ತು ವ್ಯಾಯಾಮದ ಕೊರತೆಯಿಂದಾಗಿ ತಲೆನೋವು, ಅಜೀರ್ಣ, ಭೇದಿ ಮತ್ತು ಮಲಬದ್ಧತೆಗಳುಂಟಾಗುವುದೆಂದು ಅವರ ನಂಬಿಕೆಯಾಗಿತ್ತು. ವೇಗವಾಗಿ ಸಾಕಷ್ಟು ದೂರ ನಡೆಯುವುದು ಗಾಂಧೀಜಿಗೆ ಆರೋಗ್ಯವನ್ನು ಕಾಪಾಡಿಕೊಳ್ಳುವ ಸಫಲ ಸೂತ್ರವಾಗಿತ್ತು. ಸೆರೆಮನೆಯಲ್ಲಿ ಲಭ್ಯವಿರುವ ಜಾಗದಲ್ಲೇ ದಿನವೂ ಸಂಜೆ ಮುಂಜಾನೆಗಳಲ್ಲಿ ನಡೆಯುವ ಅಭ್ಯಾಸವಿರಿಸಿಕೊಂಡಿದ್ದರು. ಉಸಿರಾಟದ ವ್ಯಾಯಾಮವನ್ನು ಗಾಂಧೀಜಿ ಸಲಹೆ ಮಾಡುತ್ತಿದ್ದರು. ಮಾನಸಿಕ ಗೊಂದಲದಿಂದಲೂ, ದೇಹಾರೋಗ್ಯ ಅಸ್ತವ್ಯಸ್ತಗೊಳ್ಳುವುದೆಂದು ಅವರಿಗೆ ತಿಳಿದಿತ್ತು. ಗಾಂಧೀಜಿಗೆ ರಾಮನಾಮವೆಂದರೆ ಎಲ್ಲ ಚಿಂತನೆಗಳನ್ನೂ ತ್ಯಜಿಸಿ, ಭಗವತ್ಸಂಕಲ್ಪದ ಮೇಲಿರುವ ಪೂರ್ಣಭರವಸೆಯೇ ಆಗಿತ್ತು. ಅದು ಎಲ್ಲ ಅನಿಷ್ಟಗಳನ್ನೂ ದೂರಮಾಡುವ ತಾರಕಮಂತ್ರವಾಗಿತ್ತು.

ದಕ್ಷಿಣ ಆಫ್ರಿಕಾದಲ್ಲಿ ಪಠಾಣರು ತಮ್ಮ ಮೈಮೇಲೆ ಹಲ್ಲೆ ನಡೆಸಿದಾಗ, ಗಾಂಧೀಜಿ ಮುಖ, ಹಣೆ ಮತ್ತು ಪಕ್ಕೆಗಳ ಮೇಲೆ ಆದ ಗಾಯಗಳಿಗೆ ಒದ್ದೆ ಮಣ್ಣಿನ ಲೇಪಗಳನ್ನು ಕಟ್ಟಿದ್ದರು. ಊತ ಶೀಘ್ರವೇ ಶಮನವಾಯಿತು. ಪ್ಲೇಗು ಜತರ ಉರಿಯೂತದ ಜ್ವರ, ಮಲೇರಿಯಾ, ಸನ್ನಿ, ಕಾಮಾಲೆ, ರಕ್ತದ ಒತ್ತಡ, ಸುಟ್ಟಗಾಯಗಳು, ಸಿಡುಬು ಮತ್ತು ಮೂಳೆಮುರಿತದ ಎಲ್ಲಾ ಪ್ರಕರಣಗಳಲ್ಲಿ ಗಾಂಧೀಜಿ ಮಣ್ಣಿನ ಚಿಕಿತ್ಸೆ ನಡೆಸಿದರು. ಒಮ್ಮೆ ಪ್ರಯಾಣದಲ್ಲಿ ಗಾಂಧೀಜಿಯ

ಮಗ ಬಿದ್ದು ಮೂಳೆ ಮುರಿದುಕೊಂಡ. ಗಾಂಧೀಜಿ ಮಣ್ಣಿನ ಬ್ಯಾಂಡೇಜು ಬಿಗಿದರು. ಗಾಯ ವಾಸಿಯಾಯಿತು. ಅನೇಕ ರೋಗ ಪ್ರಕರಣಗಳಲ್ಲಿ ಗಾಂಧೀಜಿ ಯಶಸ್ವಿಯಾದರು. ಆದರೆ ತನ್ನ ಪ್ರಯೋಗಗಳನ್ನು ವೇದವಾಕ್ಯವೆಂದೇ ತಿಳಿದುಕೊಳ್ಳಬಾರದೆಂದು ಜನರಿಗೆ ಎಚ್ಚರಿಕೆಯನ್ನೂ ನೀಡಿದರು. ಅಂತಹ ರೂಢಿಯಲ್ಲಿಲ್ಲದ ಕ್ರಾಂತಿಕಾರಿ ಪ್ರಯೋಗಗಳ ಅಪಾಯವನ್ನು ಗಾಂಧೀಜಿ ತಿಳಿದಿದ್ದರು. ಅವರ "ಸ್ವಾಸ್ಥ್ಯ ಕೈಪಿಡಿ" ಗ್ರಂಥದಲ್ಲಿ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಕೆಲವು ದಿಟ್ಟತನದ ವಿಚಾರಗಳನ್ನು ತಿಳಿಸಲಾಗಿದೆಯೆಂದು ಅವರು ಒಪ್ಪಿಕೊಂಡರು. ಪ್ರಸೂತಿಕಾ ಗೃಹಗಳನ್ನು, ಆಸ್ಪತ್ರೆಗಳನ್ನು ತೆರೆಯುವ ಬದಲು ಜನರಿಗೆ ಸ್ವಚ್ಛತೆಯ ಬಗ್ಗೆ, ಆರೋಗ್ಯಕರ ಜೀವನದ ಬಗ್ಗೆ ಶಿಕ್ಷಣ ನೀಡಲು, ವ್ಯವಸ್ಥೆಗಳಾಗಬೇಕೆಂದು ಗಾಂಧೀಜಿ ಹೇಳುತ್ತಿದ್ದರು. ರೋಗ ಚಿಕಿತ್ಸೆಗಿಂತಲೂ, ರೋಗ ಪ್ರತಿಬಂಧಕ ವೈದ್ಯಪದ್ಧತಿಗೆ ಗಾಂಧೀಜಿ ಮಹತ್ವ ನೀಡುತ್ತಿದ್ದರು.

ಅಲೋಪತಿ ಔಷಧಗಳು ಅವರಿಗೆ ನಿಷೇಧವೇನೂ ಆಗಿರಲಿಲ್ಲ. ಒಮ್ಮೆ ಸೇವಾಗ್ರಾಮದಲ್ಲಿ ಕಾಲರಾ ಬಂದಾಗ, ಗ್ರಾಮಸ್ಥರು ಮತ್ತು ಆಶ್ರಮವಾಸಿಗಳು ಕಾಲರಾ ಚುಚ್ಚುಮದ್ದು ಹಾಕಿಸಿಕೊಳ್ಳಲು ಪರವಾನಿಗೆ ಇತ್ತರು. ಜೈಲಿನಲ್ಲಿ ತಾನೇ ಸ್ವತಃ ಅಪೆಂಡಿಸೈಟಿಸ್ ಶಸ್ತ್ರಕ್ರಿಯೆಗೊಳಗಾದರು. ಆಗ ಸಾರ್ವಜನಿಕರಲ್ಲನೇಕರು ಗಾಂಧೀಜಿಯನ್ನಾಕ್ಷೇಪಿಸಿ ಪತ್ರಗಳ ಮಳೆಗರೆದರು. ತನ್ನ ಕೊರತೆಯನ್ನು ಗಾಂಧೀಜಿ ಒಪ್ಪಿಕೊಂಡರು. ಪ್ರಕೃತಿ ಚಿಕಿತ್ಸೆಯ ಮಿತಿಗಳನ್ನು ಗಾಂಧೀಜಿ ಅರಿತಿದ್ದರು. ಆದರೆ ಅನೇಕ ಕಾರಣಗಳಿಗಾಗಿ ಆ ಪದ್ಧತಿಯನ್ನು ಪ್ರೋತ್ಸಾಹಿಸಿದರು. ಅದು ಭಾರತದ ಬಡ ಜನತೆಯ ಕೈಗೆ ಎಟುಕುವಂತಿತ್ತು. ನೂರಕ್ಕೆ ನೂರು ಸ್ವದೇಶಿ ಪದ್ಧತಿಯಾಗಿತ್ತು.

77 ವರ್ಷ ವಯಸ್ಸಾದಾಗ ಗಾಂಧೀಜಿ ಪ್ರಕೃತಿಚಿಕಿತ್ಸೆಯ ಪ್ರಚಾರವನ್ನು ದ್ವಿಗುಣ ಉತ್ಸಾಹದಿಂದ ಪ್ರಾರಂಭಿಸಿದರು. ಉರುಳಿಕಾಂಚನ ಎನ್ನುವ ಗ್ರಾಮದಲ್ಲಿ ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಿದರು. ಈ ಕೇಂದ್ರದಲ್ಲಿ ಯಾವುದೇ ಬೆಲೆಬಾಳುವ ಅಥವಾ ಯಾಂತ್ರಿಕ ಸಲಕರಣೆಗಳಿರಲಿಲ್ಲ. ಒಬ್ಬ ಆದರ್ಶ ವೈದ್ಯ ಔಷಧದ ಪೂರ್ಣಜ್ಞಾನ ಹೊಂದಿರಬೇಕು ಮತ್ತು ಆ ಜ್ಞಾನವನ್ನು ಯಾವ ಪ್ರತಿಫಲವನ್ನೂ ಪಡೆಯದೆ ಜನತೆಗೆ ತಿಳಿಸಬೇಕು ಎಂದು ಗಾಂಧೀಜಿಗೆ ಅನಿಸುತ್ತಿತ್ತು. ಬಡವನಾಗಲೀ ಶ್ರೀಮಂತನಾಗಲೀ ರೋಗಿಯಿಂದ ಶುಲ್ಕ ಪಡೆಯದೆ ವೈದ್ಯರೆಲ್ಲರೂ ತಿಂಗಳಿಗೆ ನಿಶ್ಚಿತ ವೇತನ ಪಡೆಯುವಂತಾಗಬೇಕೆಂದು ಅವರು ಅಭಿಪ್ರಾಯಪಟ್ಟಿದ್ದರು.

ಕೆಲವು ದಿನಗಳ ಕಾಲ ಗಾಂಧೀಜಿ ರೋಗಿಗಳನ್ನು ಪರೀಕ್ಷಿಸಿ ಸಲಹಾ ಚೀಟಿಗಳನ್ನು ಬರೆದು ಕೊಡುತ್ತಿದ್ದರು. ಒಂದರಲ್ಲಿ ಹೀಗೆ ಬರೆದಿತ್ತು, ರಾಜುವಿಗೆ "ಸೂರ್ಯಸ್ನಾನ, ಸೊಂಟಸ್ನಾನ ಮಾಡಿಸು. ಹಣ್ಣಿನ ರಸ ಸೇವಿಸಬಾರದು. ಕುದಿಸಿ ಆರಿಸಿದ ನೀರು ಕೊಡಬೇಕು." ಇನ್ನೊಂದರಲ್ಲಿ ಪಾರ್ವತಿಗೆ "ಬರೇ ಮೂಸಂಬಿ ರಸ, ಸೊಂಟಸ್ನಾನ, ಕಿಬ್ಬೊಟ್ಟೆಗೆ ಮಣ್ಣಿನ ಪಟ್ಟಿ, ನಿಯಮಿತವಾಗಿ ಸೂರ್ಯ ಸ್ನಾನ, ಇಷ್ಟನ್ನು ಮಾಡಿದರೆ ಆಕೆ ಹುಷಾರಾಗುವಳು. ರಾಮನಾಮದ ಮಹತ್ವವನ್ನು ಅವಳಿಗೆ ತಿಳಿಸಿರಿ" ಎಂದಿತ್ತು.

ಆಶ್ರಮದಲ್ಲಿ ಪ್ರಚಲಿತವಿದ್ದ ಮಾತೆಂದರೆ "ಬಾಪೂ ನಿಮ್ಮ ಬಳಿ ಇರಬೇಕೆಂದು ನಿಮಗನಿಸಿದರೆ, ಕಾಯಿಲೆ ಮಲಗಿರಿ" ಎಂಬುದು. ಪ್ರತಿ ಕಾಯಿಲೆ ಮನುಷ್ಯನ ಅತಿ ಸಣ್ಣ ಸಂಗತಿಯೂ ಗಾಂಧೀಜಿಗೆ ತಿಳಿದಿರುತ್ತಿತ್ತು. ಮುಂಜಾನೆಯ ತಿರುಗಾಟದ ಬಳಿಕ ಮರಳುವಾಗ ಪ್ರತಿ ರೋಗಿಯನ್ನೂ ಸಂದರ್ಶಿಸುತ್ತಿದ್ದರು. ರೋಗಿಯ ಆಹಾರ ತಯಾರಿಸುವ ರೀತಿ, ಮೈಯುಜ್ಜಿ ಮಸಾಜ್ ಮಾಡಿ ಸ್ನಾನ ಮಾಡಿಸುವ ವಿಧಾನ ಮತ್ತು ರೋಗಿಗೆ ನಿಡುವ ಎನಿಮಾದಲ್ಲಿ ಎಷ್ಟು ಉಪ್ಪು ಅಥವಾ ಸೋಡಾ ಹಾಕಬೇಕು ಎನ್ನುವ ಬಗ್ಗೆ ವಿವರವಾದ ನಿದರ್ಶನಗಳನ್ನೀಯುತ್ತಿದ್ದರು. ಸೇವಾಗ್ರಾಮದಲ್ಲಿ ಪ್ರತಿದಿನ ಬೆಳಗ್ಗೆ ರೋಗಿಗಳನ್ನು ನೋಡಲು ಒಂದು ಗಂಟೆ ಗಾಂಧೀಜಿ ನಿಗದಿಗೊಳಿಸಿದಾಗ ಸುತ್ತಮುತ್ತಲ ಗ್ರಾಮದಿಂದ ರೋಗಿಗಳ ಸಾಲು ಸಾಲೇ ಬಂದಿತು. ಅವರ ಸಲಹೆಗಳಾದರೋ "ಭಾಜಿ ಖಾವೊ, ಚಾಂಚ ಪೀವೊ, ಮಿಟ್ಟಿ ಲಗಾವೊ" (ತರಕಾರಿ ತಿನ್ನು, ಮಜ್ಜಿಗೆ ಕುಡಿ, ಮಣ್ಣಿನ ಪಟ್ಟಿ ಕಟ್ಟು) ಎಂಬುದೇ ಆಗಿದ್ದವು. ಕೆಲವೊಮ್ಮೆ ಅವರ ರೋಗಿಯ ಮಲಪರೀಕ್ಷೆ ಮಾಡುತ್ತಿದ್ದರು. ರೋಗಿ ತುಂಬ ಅಶಕ್ತನಲ್ಲವಾದರೆ ಆತನನ್ನು ಮನೆಯ ಹೊರಗೆ ಅಂಗಳದಲ್ಲಿ ಇರಿಸಲಾಗುತ್ತಿತ್ತು. ರೋಗದ ಸರಿಯಾದ ಪರಿಶೀಲನೆಯ ನಂತರವೇ ಅವರು ಚಿಕಿತ್ಸೆ ನೀಡುತ್ತಿದ್ದರು. ನರಗಳ ಮೇಲೆ ಬಿದ್ದ ಹೆಚ್ಚಿನ ಶ್ರಮದಿಂದ ಒಬ್ಬ ಸಹಕಾರ್ಯಕರ್ತರು ರಕ್ತದ ಒತ್ತಡಕ್ಕೆ ಬಲಿಯಾಗಿದ್ದರು. ರೋಗದ ಕಾರಣವನ್ನು ತಿಳಿಯುವ ಸಲುವಾಗಿ ಗಾಂಧೀಜಿ ಆತನ ರಕ್ತದ ಒತ್ತಡವನ್ನು ಗಂಭೀರ ಚರ್ಚೆಯೊಂದರ ಮೊದಲು ಮತ್ತು ನಂತರ ಪರೀಕ್ಷೆಗೊಳಪಡಿಸಿದರು. ಮರುದಿನ ಹಲಗೆಯೊಂದನ್ನು ಗರಗಸದಿಂದ ಸೀಳುವ ಕೆಲಸವನ್ನಿತ್ತರು. ಕೆಲಸದ ಮೊದಲು ಮತ್ತೆ ಅನಂತರ ರಕ್ತದೊತ್ತಡದ ಪರೀಕ್ಷೆ ಮಾಡಲಾಯಿತು. ಅನಂತರ ಮೂರನೆಯ ದಿನ ಆತ ಆಶ್ರಮದ ಸುತ್ತ ಒಂದು ಫರ್ಲಾಂಗ್ ದೂರ ಓಡುವ ಮೊದಲು ಮತ್ತು ಓಡಿದ ನಂತರ ಪರೀಕ್ಷೆ

ಾಡಲಾಯಿತು. ಕಡೆಯ ದಿನ ರಕ್ತದ ಒತ್ತಡ ಕಡಿಮೆಯಾದುದ್ದು ಕಂಡುಬಂತು. ಾವಲಿನೆರಡೂ ದಿನಗಳಲ್ಲಿ ಒತ್ತಡ ಹೆಚ್ಚಾಗಿತ್ತು. ಅವನಿಗೆ ಗಾಂಧೀಜಿ ಓಡಾಟದ ಮೂಲಕ ನಿನ್ನ ರಕ್ತದ ಒತ್ತಡವನ್ನು ನೀನೇ ಪರಿಹರಿಸಿಕೋ ಎಂದರು. ಆಹಾರ, ್ನಾನ ಅಥವಾ ರೋಗಿಗಳ ಶುಶ್ರೂಷೆಗಳ ವಿಚಾರದಲ್ಲಿ ಅವರ ಸಲಹೆ ಕೇಳಿಬರುವ ಯಾರಿಗಾದರೂ, ಗಾಂಧೀಜಿಯ ಮಾತುಕತೆಗಳನ್ನಾಗಲೀ, ಕೆಲಸವನ್ನಾಗಲೀ ಭಂಗಗೊಳಿಸಲು ಅನುಮತಿಯಿತ್ತು. ತಮ್ಮ ಸಲಹೆಗಳನ್ನು ಮೀರದಂತೆ, ಅನೇಕ ಪ್ರಸಿದ್ಧ ದೇಶನಾಯಕರಿಗೂ ಗಾಂಧೀಜಿ ಕಠಿಣ ನಿಯಮಗಳನ್ನು ವಿಧಿಸುತ್ತಿದ್ದರು. ಜೈಲಿನಲ್ಲೂ ತನ್ನ ಸಹಖೈದಿಗಳ ಶುಶ್ರೂಷೆಗೆ ಗಾಂಧೀಜಿ ಅಧಿಕಾರಿಗಳಿಂದ ಅನುಮತಿ ಪಡೆದುಕೊಳ್ಳುತ್ತಿದ್ದರು.

ಅಸ್ತಮಾದಿಂದ ಬಳಲುತ್ತಿದ್ದ ಸಂಗಾತಿಯೊಬ್ಬ ಗಾಂಧೀಜಿಯ ನೆರವನ್ನು ಯಾಚಿಸಿದ. ಗಾಂಧೀಜಿ ಧೂಮಪಾನ ತ್ಯಜಿಸಲು ಹೇಳಿದರು. ಆತ ಒಪ್ಪಿಕೊಂಡ. ಮೂರು ದಿನವಾದರೂ ರೋಗದಲ್ಲಿ ಯಾವ ಸುಧಾರಣೆಯೂ ಆಗಲಿಲ್ಲ. ಆತನಿಗೆ ದಿನಕ್ಕೆ ಒಂದೆರಡಾದರೂ ಸಿಗರೇಟು ಸೇದದಿರಲಾಗಲಿಲ್ಲ. ಒಂದು ರಾತ್ರಿ ಸಿಗರೇಟು ಹಚ್ಚಲೆಂದು ಕಡ್ಡಿ ಗೀರಿದಾಗ, ಟಾರ್ಚುಲೈಟಿನ ಬೆಳಕು ಅವನ ಮುಖದ ಮೇಲೆ ಬಿತ್ತು. ಗಾಂಧೀಜಿ ತನ್ನ ಮುಂದಿರುವುದನ್ನು ಆತ ನೋಡಿದ. ಗಾಂಧೀಜಿಯನ್ನು ಕ್ಷಮೆ ಕೇಳಿ ಸಿಗರೇಟು ಸೇದುವುದನ್ನು ತ್ಯಜಿಸಿದ. ಕೆಲವೇ ದಿನಗಳಲ್ಲಿ ಅಸ್ತಮಾ ರೋಗವೂ ಆತನನ್ನು ಬಿಟ್ಟೇ ಹೋಯಿತು.

ಗಫಾರಖಾನರಿಗೆ ತಲೆಯ ಚಿಪ್ಪಿನಲ್ಲೇನೋ ತೊಂದರೆಯಿತ್ತು. ಗಾಂಧೀಜಿ ಯಾವುದೋ ಮನೆಮದ್ದನ್ನು ಸಲಹೆ ಮಾಡಿದರು. ಆ ನೀಳಕಾಯದ ಪಠಾಣನಿಗೆ ಚಿಕಿತ್ಸೆ, ರೋಗಕ್ಕಿಂತಲೂ ಹೆಚ್ಚು ವೇದನೆ ನೀಡಿತು. ವಲ್ಲಭಭಾಯಿಯವರ ಕಾಲಿಗೆ ಒಮ್ಮೆ ಒಂದು ಮುಳ್ಳು ಚುಚ್ಚಿತು. ಗಾಂಧೀಜಿ ಉರಿಯುತ್ತಿರುವ ಬಿರ್ಟಾ ಕಾಯಿಯನ್ನು ಐಯೊಡಿನ್‌ಗೆ ಪ್ರತಿಯಾಗಿ ಹಾಕಿದರು. "ಈ ಯಾತನಾಮಯ ಚಿಕಿತ್ಸೆಗಿಂತ, ನನಗೆ ಮುಳ್ಳಿನ ನೋವೇ ಎಷ್ಟೋ ವಾಸಿ ಎನಿಸುತ್ತದೆ" ಎಂದರು ವಲ್ಲಭಬಾಯಿ.

ಭಿಕ್ಷುಕ

ಗಾಂಧೀಜಿ ಹೆಚ್ಚು ಹೆಚ್ಚು ಸಾರ್ವಜನಿಕ ಕೆಲಸಗಳಲ್ಲಿ ತೊಡಗಿದ ಫಲವಾಗಿ ತಮ್ಮ ಗಮನವನ್ನು ತಮ್ಮ ಕುಟುಂಬದ ಕಡೆಗಾಗಲೀ ನ್ಯಾಯವಾದಿಯ ವೃತ್ತಿಗಾಗಲೀ ಕೊಡಲಾಗಲಿಲ್ಲ. ತಾವು ಜನಸೇವೆ ಮಾಡಬೇಕೆಂದು ಬಯಸುವುದಾದರೆ ಸುಖ ಸೌಖ್ಯಗಳನ್ನು ತ್ಯಜಿಸಿ, ಸಕಲ ಸಂಪತ್ತನ್ನೂ ಬಿಟ್ಟು ಸಂಗ್ರಹ ಬುದ್ಧಿ ಇಲ್ಲದೆ ಐಚ್ಛಿಕ ಬಡತನದ ಬಾಳನ್ನು ಬದುಕಬೇಕಾಗುತ್ತದೆ ಎಂದು ಗಾಂಧೀಜಿಗೆ ಅರಿವಾಯಿತು. ಮುಂದೊಂದು ದಿನ ವಸ್ತುಗಳನ್ನು ಕೂಡಿಡುವುದು ಅಪರಾಧ ಎನ್ನುವ ಭಾವನೆಯೂ ಅವರಿಗೆ ಬಂತು. ಆಗ ವಸ್ತುಗಳ ತ್ಯಾಗದಲ್ಲೇ ಅವರಿಗೆ ಹೆಚ್ಚಿನ ಆನಂದವಿದೆ ಎನ್ನುವ ಅನುಭವ ಆಯಿತು. ಒಂದರ ಹಿಂದೆ ಒಂದರಂತೆ ವಸ್ತುಗಳು ಅವರನ್ನು ಬಿಟ್ಟು ತೊಲಗಿದವು. ತಮ್ಮ ಹಿರಿಯರ ಆಸ್ತಿಯ ಮೇಲಣ ಹಕ್ಕನ್ನು ಬಿಟ್ಟುಕೊಟ್ಟರು. ವಿಮಾಪಾಲಿಸಿಯ ಕಂತನ್ನು ಕಟ್ಟದೆ ವ್ಯರ್ಥಗೊಳಿಸಿದರು. ತಿಂಗಳಿಗೆ ರೂ. 4,000 ಸಂಪಾದನೆ ಇದ್ದ ನ್ಯಾಯವಾದಿಯ ವೃತ್ತಿಯನ್ನು ತೊರೆದರು. ದಕ್ಷಿಣ ಆಫ್ರಿಕಾದ ಸಹೋದ್ಯೋಗಿಗಳು ಕೊಟ್ಟ ಚಿನ್ನ, ಬೆಳ್ಳಿ ಮತ್ತಿತರ ಆಭರಣಗಳು ಮತ್ತು ಫೀನಿಕ್ಸ್ ಆಶ್ರಮದ ಆಸ್ತಿಗಳನ್ನೆಲ್ಲಾ ಸೇರಿಸಿ ರೂ.65,000 ಮೂಲ ಧನದ ಆಡಳಿತವನ್ನು ಧರ್ಮದರ್ಶಿ ಮಂಡಳಿಗೆ ಒಪ್ಪಿಸಿ ಸಾರ್ವಜನಿಕ ಸೇವೆಗೆ ಬಳಸುವ ವ್ಯವಸ್ಥೆ ಮಾಡಿದರು.

ತಮ್ಮ ಸ್ವಂತ ಜೀವನದ ಭದ್ರತೆಯ ವ್ಯವಸ್ಥೆ ಮಾಡಲು ನಿರಾಕರಿಸಿದರು. ಹೆಂಡತಿ, ಮಕ್ಕಳು ಮತ್ತು ಬಂಧುಗಳ ಮಟ್ಟಿಗೂ ಈ ವಿಚಾರದಲ್ಲಿ ನಿಷ್ಠುರರಾಗಿಯೇ ನಡೆದುಕೊಂಡರು.

ಅವರ ಬದುಕಿನ ಕಡೆಯ 40 ವರ್ಷಗಳಲ್ಲಿ ಗಾಂಧೀಜಿ ಸ್ನೇಹಿತರು ಮತ್ತು ಅಭಿಮಾನಿಗಳು ಸ್ವಯಂಪ್ರೇರಣೆಯಿಂದ ನೀಡಿದ ಕೊಡುಗೆಗಳಿಂದಲೇ ಬಾಳಿದರು. ಗಾಂಧೀಜಿ ಮತ್ತು ಅವರ ಕುಟುಂಬ ಟಾಲ್‌ಸ್ಟಾಯ್ ಆಶ್ರಮದಲ್ಲಿದ್ದಾಗ ಖರ್ಚು ವೆಚ್ಚಗಳನ್ನೆಲ್ಲ ಜರ್ಮನ್ ಸ್ನೇಹಿತ ಕಾಲೆನ್ ಬಾಕ್ ನೋಡಿಕೊಂಡರು. ಭಾರತದ ಆಶ್ರಮಗಳ ವೆಚ್ಚವನ್ನು, ಗಾಂಧೀಜಿಯ ಮೇಲೆ ಸಹಾನುಭೂತಿಯುಳ್ಳ ಸಜ್ಜನರೇ ನೋಡಿಕೊಂಡರು.

ಪಂಡಿತ ಮದನಮೋಹನ ಮಾಲವೀಯರನ್ನು ಭಿಕ್ಷುಕರ ರಾಜಕುಮಾರನೆಂದು ರ್ಣಿಸಲಾಗುತ್ತದೆ. ಗಾಂಧೀಜಿ ಭಿಕ್ಷುಕರ ಚಕ್ರವರ್ತಿಯೇ ಆಗಿದ್ದರು. ಸಾರ್ವಜನಿಕ ದ್ದೇಶಕ್ಕಾಗಿ ಭಿಕ್ಷೆ ಎತ್ತಿದವರ ಚರಿತ್ರೆಯಲ್ಲೇ ಗಾಂಧೀಜಿ ದಾಖಲೆ ಸ್ಥಾಪಿಸಿದರು. ಮ್ಮ ಈ ಸಾಮರ್ಥ್ಯವನ್ನು ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ನೇಟಾಲ್ ಂಡಿಯನ್ ಕಾಂಗ್ರೆಸ್‌ನ ಸದಸ್ಯರಿಂದ ಚಂದಾ ಸಂಗ್ರಹಿಸುವ ಕಾರ್ಯದ ೊಣೆಯನ್ನು ಹೊತ್ತಿದ್ದಾಗ ಕಂಡುಕೊಂಡರು. ಒಂದು ಸಂಜೆ ತುಂಬ ತಡವಾಗಿ ವರೊಮ್ಮೆ ಒಬ್ಬ ಶ್ರೀಮಂತ ದಾನಿಯ ಮನೆಗೆ ತೆರಳಿದರು. ಆತ ರೂ. 80 ೊಡುವನೆಂದು ನಿರೀಕ್ಷಿಸಲಾಗಿತ್ತು. ಎಲ್ಲ ಒತ್ತಾಯ, ಮನವೊಲಿಸುವಿಕೆ ್ಯರ್ಥವಾಯಿತು. ಆತ ಕೇವಲ ರೂ. 50 ಕೊಟ್ಟು, ಸುಮ್ಮನಾದ. ಗಾಂಧೀಜಿ ುಂಬ ಹಸಿವಾಗಿತ್ತು, ಬಳಲಿದ್ದರು. ಆದರೂ ಛಲ ಬಿಡಲಿಲ್ಲ. ಇಡೀರಾತ್ರಿ ಆ ್ರೀಮಂತನ ಮನೆಯಲ್ಲೇ ತಳ ಊರಿದರು. ಬೆಳಗಾಗುವ ವೇಳೆಗೆ ರೂ. 80 ಪಡೆದೇ ಅಲ್ಲಿಂದ ಹೊರಗೆ ಬಂದರು.

ದಕ್ಷಿಣ ಆಫ್ರಿಕಾದ ಭಾರತೀಯ ವಲಸೆಗಾರರ ಚಾರಿತ್ರಿಕ ಹೋರಾಟದ ಸಮಯದಲ್ಲಿ ಸುಮಾರು 6,000 ಹೋರಾಟಗಾರರ ಮತ್ತವರ ಕುಟುಂಬಗಳ ರಕ್ಷಣೆ, ಪುನರ್ವಸತಿಗಳಿಗಾಗಿ ನಿಧಿ ಸಂಗ್ರಹಿಸುವಲ್ಲಿ ಗಾಂಧೀಜಿಯೇ ಪ್ರಮುಖ ಪಾತ್ರವಹಿಸಿದರು. ಅಂದಿನ ಪ್ರತಿದಿನದ ವೆಚ್ಚ ರೂ. 3,200. ಗಾಂಧೀಜಿ ಕೇಬಲ್ ಮೂಲಕ ಮಾಡಿದ ವಿನಂತಿಗೆ ಭಾರತ ಉದಾರ ಪ್ರತಿಕ್ರಿಯೆ ನೀಡಿತು. ರಾಜರುಗಳು ಮತ್ತು ಶ್ರೀಮಂತ ವರ್ತಕರು ಹಣ ಕಳುಹಿಸಿದರು. ಕಾಂಗ್ರೆಸ್ ಅಧಿವೇಶನ ಒಂದರಲ್ಲಿ ಗಾಂಧೀಜಿ ಅವರ ಹೋರಾಟಕ್ಕೆ ನೆರವು ನೀಡಲು ವಿನಂತಿ ಮಾಡಲಾಗಿ ಸಭಿಕರು ನೋಟು ಮತ್ತು ಬೆಳ್ಳಿ ಬಂಗಾರಗಳ ಮಳೆಯನ್ನು ಸುರಿಸಿದರು.

ಗಾಂಧೀಜಿ ಎಲ್ಲ ಕೊಡುಗೆಗಳಿಗೆ ಒಂದು ರಶೀದಿ ಮತ್ತು ತಮ್ಮ ಖರ್ಚು ವೆಚ್ಚಗಳ ವಿವರಗಳ ಪಟ್ಟಿಯನ್ನು ಕಳುಹಿಸಿದರು. ದಾನಿಗಳ ಭಾವನೆಗಳಿಗೆ ಗೌರವ ನೀಡಿ ಗಾಂಧೀಜಿ, ಅವರಿತ್ತ ಹಣದಿಂದ ಒಂದು ಕಾಸನ್ನಾದರೂ, ಹೋರಾಟಗಾರರ ನೆರವಿಗಲ್ಲದೆ ಬೇರೆ ಯಾವ ಉದ್ದೇಶಕ್ಕೂ ಬಳಸಲಿಲ್ಲ. ಸಾರ್ವಜನಿಕ ಹಣವನ್ನು ಬಳಸುವಲ್ಲಿ ಗಾಂಧೀಜಿಗೆ ತುಂಬ ಎಚ್ಚರಿಕೆ. ಯಾರೋ ಟೀಕೆ ಮಾಡಿದಾಗ ಗಾಂಧೀಜಿ ತಿಲಕ ಸ್ವರಾಜ್ ನಿಧಿಯ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳನ್ನು ಪರಾಂಬರಿಸುವಂತೆ ಟೀಕಾಕಾರರನ್ನು ಆಹ್ವಾನಿಸಿದರು. ತಾವು ಸ್ಥಾಪಿಸಿದ ತಿಲಕ ಸ್ವರಾಜ್ಯ ನಿಧಿಗೆ ಮೂರು ತಿಂಗಳಲ್ಲಿ ರೂ. 1,00,000 ಸಂಗ್ರಹದ ಗುರಿಯನ್ನು

ಗಾಂಧೀಜಿ ಇಟ್ಟಿದ್ದರು. ಗಾಂಧೀಜಿ ಬರೇ 10 ನಿಮಿಷಗಳ ಕಾಲ ವೃತ್ತಿ ನಿರತ ನಾಟಕ ಮಂಡಳಿಯ ನಾಟಕವೊಂದಕ್ಕೆ ಹಾಜರಾದರೆ, ನಟರಿಂದ ರೂ. 50,000 ಸಂಗ್ರಹಿಸುವುದಾಗಿ ಮಿತ್ರರೊಬ್ಬರು ಹೇಳಿದರು. ಗಾಂಧೀಜಿ ನಿರಾಕರಿಸಿದರು. ಆದರೂ ನಿಧಿಗೆ ಒಟ್ಟು ರೂ. 1,15,000 ಸಂಗ್ರಹವಾಯಿತು. ಶ್ರೀಮಂತರು ಕೊಡುವ ಸಾವಿರಾರು ರೂಪಾಯಿಗಳು ಸ್ವಾಗತಾರ್ಹವೇ ಆದರೂ, ಬಡವರು ಕೊಡುವ ತಾಮ್ರದ ಕಾಸುಗಳೇ ಸಾರ್ವಜನಿಕ ಹೋರಾಟದ ಶ್ರೀರಕ್ಷೆ ಎನ್ನುತ್ತಿದ್ದರು ಗಾಂಧೀಜಿ. ತಿಳಿದು ಕೊಡುವ ಪ್ರತಿಯೊಂದು ಪೈ ಕೂಡಾ ಅದನ್ನು ದಾನವಿತ್ತ ವ್ಯಕ್ತಿ ಸ್ವರಾಜ್ಯ ಸ್ಥಾಪನೆಗೆ ಮಾಡಿದ ಸಂಕಲ್ಪದ ಸಂಕೇತ ಎಂದು ಗಾಂಧೀಜಿ ಆಗಾಗ ಹೇಳುತ್ತಿದ್ದರು. ತಾವು ಶ್ರಮಪಟ್ಟು ಗಳಿಸಿದ ಪೈಗಳನ್ನು ಬಿಗಿಯಾಗಿ ಕಟ್ಟಿದ್ದ ಬಟ್ಟೆಯ ಗಂಟುಗಳನ್ನು ನಡುಗುತ್ತಿರುವ ಕೈಗಳಿಂದ ಬಿಚ್ಚುತ್ತಿರುವ ವಯಸ್ಸಾದ ಬಡಜನರ ದೃಶ್ಯ ಗಾಂಧೀಜಿಯವರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿತ್ತು. ತಾವಾಗಿ ಸ್ವಯಂ ಪ್ರೇರಣೆಯಿಂದ ಉಳಿತಾಯದ ಹಣವನ್ನು ತಮಗೆ ಒಪ್ಪಿಸಲು ಬಂದ ಜನತೆಯ ಬಗ್ಗೆ ಗಾಂಧೀಜಿಗೆ ತುಂಬ ಮೆಚ್ಚುಗೆ. ತಿಲಕ್ ಸ್ವರಾಜ್ಯ ನಿಧಿಯಲ್ಲದೆ ಗಾಂಧೀಜಿ ಹುತಾತ್ಮಳಾದ ಬಾಲೆ ವಲ್ಲಿಯಮ್ಮಾ, ಗೋಖಲೆ, ಲಜಪತರಾಯ್, ದೇಶಬಂಧುದಾಸ್, ಆಂಡ್ರ್ಯೂಸ್ ಮತ್ತು ಜಲಿಯನ್ ವಾಲಾಭಾಗ್ ಹತ್ಯಾಕಾಂಡದ ದುರ್ದೈವಿಗಳಿಗಾಗಿಯೂ ನಿಧಿ ಸಂಗ್ರಹಿಸಿದರು. ಜಲಿಯನ್ ವಾಲಾಭಾಗ್ ಸ್ಮಾರಕ ನಿರ್ಮಾಣಕ್ಕೆ ಬೇಕಾದ ನಿಧಿ ತಾವು ನಿಗದಿಪಡಿಸಿದ ಸಮಯದಲ್ಲಿ ಸಂಗ್ರಹವಾಗದೆ ಹೋದರೆ ತನ್ನ ಆಶ್ರಮವನ್ನೇ ಮಾರಿಯಾದರೂ ಸಾಧ್ಯವಾದಷ್ಟು ಹಣ ಕೊಡಿಸುವುದಾಗಿ ಗಾಂಧೀಜಿ ಜನರಿಗೆ ತಿಳಿಸಿದರು. ಎರಡು ತಿಂಗಳುಗಳಲ್ಲಿ ದೇಶಬಂಧು ಸ್ಮಾರಕ ನಿಧಿಗೆ 10 ಲಕ್ಷ ರೂ.ಗಳು ಸಂಗ್ರಹವಾದವು. ಟಾಗೋರರು ಶಾಂತಿನಿಕೇತನಕ್ಕಾಗಿ ಹಣ ಕೂಡಿಸಲು ತಮ್ಮ ನಾಟಕಗಳ ಸಾರ್ವಜನಿಕ ಪ್ರದರ್ಶನ ನೀಡುತ್ತಾ ದೇಶಾದ್ಯಂತ ಸಂಚರಿಸುತ್ತಿದ್ದಾರೆಂದು ಗಾಂಧೀಜಿಗೆ ತಿಳಿದಾಗ ಮೊದಲ ಕಂತಾಗಿ ರೂ. 50,000 ಟಾಗೋರರಿಗೆ ಸಂಗ್ರಹಿಸಿ ಕಳುಹಿಸಿ ತಮ್ಮ ಇಳಿ ಪ್ರಾಯದಲ್ಲಿ ಅಂತಹ ಕಷ್ಟದ ಪ್ರವಾಸ ಮಾಡಬಾರದೆಂದು ಅವರನ್ನು ಒತ್ತಾಯಿಸಿದರು.

ಪ್ರವಾಹಗಳು, ಕ್ಷಾಮಗಳು ಮತ್ತು ಭೂಕಂಪಗಳು ತಾಯ್ನಾಡನ್ನು ಬಾಧಿಸಿದಾಗ ಗಾಂಧೀಜಿ ಜನರಿಂದ ಭಿಕ್ಷೆ ಎತ್ತಿದರು. ಖಾದಿ ಪ್ರಚಾರಕ್ಕಾಗಿ ಮತ್ತು ಅಸ್ಪೃಶ್ಯತೆಯ ಪಾಪವನ್ನು ಹೋಗಲಾಡಿಸುವ ಸಲುವಾಗಿ ದೇಶಾದ್ಯಂತ ಬಿರುಗಾಳಿ ಪ್ರವಾಸಗಳನ್ನು ಕೈಕೊಂಡರು. ಹರಿಜನ ನಿಧಿಗಾಗಿ ಕೋಟಿ ರೂ.

ಂತಲೂ ಹೆಚ್ಚು ಸಂಗ್ರಹಿಸಿದರು. ಹಸಿದವರಿಗೆ ಅನ್ನ ನೀಡಲೆಂದು ನೀಡಿದ ದಾನವನ್ನು ಗಾಂಧೀಜಿ ಸ್ವೀಕರಿಸಲಿಲ್ಲ. ಮನುಷ್ಯನ ನಿಜವಾದ ಹಸಿವೆ ತುತ್ತು ಅನ್ನಕ್ಕಾಗಿ ಅಲ್ಲ. ಆತ್ಮಗೌರವದಿಂದ ಮನುಷ್ಯನಾಗಿ ಬಾಳಬೇಕೆಂಬುದೇ ನಿಜವಾದ ಹಸಿವೆ ಎಂದು ಗಾಂಧೀಜಿ ನಂಬಿದ್ದರು. ಬೆತ್ತಲೆಯಾಗಿಯೇ ಇರುವವರಿಗೆ ಅತಿ ಅಗತ್ಯವಿರುವ ಕೆಲಸ ಕೊಡುವುದನ್ನು ಬಿಟ್ಟು ಕೇವಲ ವಸ್ತ್ರ ಕೊಟ್ಟು ಅವಮಾನಗೊಳಿಸಲು ನಾನು ನಿರಾಕರಿಸುವೆ. ರೊಟ್ಟಿಯ ತುಣುಕುಗಳನ್ನಾಗಲೀ, ಹರಿದ ಬಟ್ಟೆಗಳನ್ನಾಗಲೀ ನಾನವರಿಗೆ ಕೊಡಲಾರೆ ಎಂದರು. ಸೆರೆಮನೆಯ ವೈದ್ಯಾಧಿಕಾರಿಯೊಬ್ಬರು ಗಾಂಧೀಜಿಯೊಡನೆ ದೃಢಕಾಯರಾದ ವ್ಯಕ್ತಿಗಳನ್ನು ಭಿಕ್ಷೆ ನೀಡಲು ಬಿಡಬಾರದೆಂದು ನಿಮಗನಿಸುವುದಿಲ್ಲವೇ? ಈ ಸಂಬಂಧವಾಗಿ ಒಂದು ಕಾನೂನು ಮಾಡುವುದು ನಿಮಗೆ ಸಮ್ಮತವೇ?" ಎಂದು ಕೇಳಿದ. ಗಾಂಧೀಜಿ "ಖಂಡಿತವಾಗಿ, ಆದರೆ ನನ್ನಂತಹ ಜನ ಬೇಡಬಹುದು" ಎಂದರು. "ಭಿಕ್ಷುಕರಿಗೆ ನೀಡುವಲ್ಲಿ ಆಯ್ಕೆಯ ಹಕ್ಕು ಇರಬಾರದು" ಎನ್ನುವ ನಾಣ್ಣುಡಿಯನ್ನು ಗಾಂಧೀಜಿ ಅತಿಕ್ರಮಿಸಿದರು. ಗಾಂಧೀಜಿಯ ಮುದ್ರಾವಾಕ್ಯಗಳು, ದಾನಿಗಳನ್ನು ಕುರಿತಂತೆ ಅವರ ನಿಲುಮೆ ಮತ್ತು ದಾನ ಸ್ವೀಕಾರಕ್ಕೆ ಅವರು ವಿಧಿಸಿಕೊಂಡ ನಿಯಮಗಳು ಅಸಾಧಾರಣವಾದವು. ರೈಲುಬಂಡಿಯಲ್ಲಿ, ವೇದಿಕೆಯ ಮೇಲೆ ನಿಂತು ಅಥವಾ ಚಲಿಸುತ್ತಿರುವ ಮೋಟರ್ ಗಾಡಿಯಲ್ಲಿ ಕುಳಿತು ಗಾಂಧೀಜಿ ಪ್ರೇಕ್ಷಕರ ಕಡೆಗೆ ತನ್ನ ಭಿಕ್ಷಾ ಪಾತ್ರೆಯನ್ನು ಚಾಚುತ್ತಿದ್ದರು. ಸಾಮಾನ್ಯವಾಗಿ ಗಾಂಧೀಜಿಗೆ ಭಿಕ್ಷೆ ನೀಡಲು ದೊಡ್ಡ ಜಂಗುಳಿಯೇ ಸೇರುತ್ತಿತ್ತು. ನಾಮುಂದೆ ತಾಮುಂದೆ ಎಳೆದಾಟವೇ ನಡೆಯುತ್ತಿತ್ತು. ನೂರಾರು ಹಳ್ಳಿಗಳು, ವಯಸ್ಸಾದವರು, ದುರ್ಬಲರು, ಹೆಂಗಸರು, ಗಂಡಸರು ಮೈಲುಗಟ್ಟಲೆ ನಡೆದು ತಮ್ಮ ಕೈಲಾದಷ್ಟು ಕಾಣಿಕೆಯನ್ನು ಗಾಂಧೀಜಿಗೆ ಅರ್ಪಿಸಲು ಬರುತ್ತಿದ್ದರು. ಕೆಲವರು ತಮ್ಮ ತೋಟಗಳಲ್ಲಿ ಬೆಳೆದ ಬದನೆ, ಸೌತೆಕಾಯಿ, ತರಕಾರಿಗಳನ್ನು ಕೊಡುವುದಿತ್ತು. ಒಂದು ಆಶ್ರಮ ಶಾಲೆಯ ಮಕ್ಕಳು ಒಂದು ರಾಶಿ ಕೈಯಿಂದ ನೂತ ನೂಲು, ತಾವೇ ನೇಯ್ದ ಖಾದಿ ಬಟ್ಟೆ ಹಾಗೂ ತಮ್ಮ ಭೋಜನ ಶಾಲೆಯಲ್ಲಿ ಮಿತವ್ಯಯಮಾಡಿ ಉಳಿಸಿದ ಕೊಂಚ ಹಣವನ್ನೂ ಒಪ್ಪಿಸಿದರು. ಒಮ್ಮೆ ವಿಧವೆಯೊಬ್ಬಳು ಎರಡಾಣೆ ಸಾಲ ಎತ್ತಿ ಗಾಂಧೀಜಿಗೊಪ್ಪಿಸಿದಳು. ಆಕೆಯನ್ನು ಬರೇ ಎರಡಾಣೆ ಏಕೆ ನೀಡಿದಳೆಂದು ಪ್ರಶ್ನಿಸಿದಾಗ ಆಕೆ "ದೇಶದ ಕಾರಣಕ್ಕಾಗಿ ನಾನದನ್ನು ಕೊಡಲಿಲ್ಲ. ಸರ್ವಸಂಗ ಪರಿತ್ಯಾಗಿಯಾದ ಮಹಾತ್ಮರಿಗೆ ಭಿಕ್ಷೆ ನೀಡಬೇಕೆನ್ನುವ ಜೀವಿತದ ಆಸೆಯ ಪೂರ್ತಿಗಾಗಿ ನೀಡಿದೆ" ಎಂದಳು.

ಧ್ವನಿವರ್ಧಕಗಳು, ಕೇಬಲ್‌ಗಳು ಮತ್ತು ಪತ್ರಿಕೆಗಳ ಮೂಲಕ ತಮ್ಮ ವಿನಂತಿಗಳನ್ನು ಬಿತ್ತರಿಸುತ್ತಿದ್ದ ಗಾಂಧೀಜಿಗೆ ಕೆಲವು ಲಕ್ಷ ರೂ.ಗಳನ್ನು ಸಂಗ್ರಹಿಸುವುದೆಂದರೆ ಮಕ್ಕಳಾಟದಂತೆ. ಒಮ್ಮೆ ಬಳಿಯಲ್ಲಿದ್ದ ಪತ್ರಿಕೋದ್ಯಮಿಯ ತಲೆಯಿಂದ ಹ್ಯಾಟನ್ನೇ ತೆಗೆದುಕೊಂಡು ಭಿಕ್ಷಾಪಾತ್ರೆಯಾಗಿ ಬಳಸಿದರು. ದಿಗ್ಭ್ರಾಂತನಾದ ಆ ಪತ್ರಕರ್ತನಿಂದಲೇ ಗಾಂಧೀಜಿ ಪ್ರಥಮ ಭಿಕ್ಷೆ ಸ್ವೀಕರಿಸಿದಾಗ ಅವನೇ ಗಾಂಧೀಜಿಯವರ ಈ ಹೊಸ ಆವಿಷ್ಕಾರದ ಪ್ರಯೋಗ ಪಶುವೂ ಆದ.

ಭಿಕ್ಷೆಯೆತ್ತುವ ಉದ್ದೇಶದಿಂದ ಒಮ್ಮೆ ಬರ್ಮಾಕ್ಕೆ ಭೇಟಿ ನೀಡಿದಾಗ ಗಾಂಧೀಜಿಯ ಬೇಡಿಕೆಯ ವರಸೆ ಈ ರೀತಿ ಇತ್ತು. "ಹದಿನಾಲ್ಕು ವರ್ಷಗಳಿಗೊಮ್ಮೆ ಒಂದು ಕ್ಷಾಮವೇ ಬಂದರೂ ನೀವು ಕಂಗೆಡಲಾರಿರಿ ಮತ್ತು ಧೈರ್ಯವಾಗಿ ಅದನ್ನು ಎದುರಿಸುವಿರಿ. ನಿಮ್ಮ ನಡುವೆ ಪ್ರಾಯಶಃ ಇನ್ನೆಂದಿಗೂ ಬರಲಾರದ ಈ ಭಾರತದ ದರಿದ್ರನಾರಾಯಣ ಪ್ರತಿನಿಧಿಯ ಹಸಿವನ್ನು ನೀವು ತಣಿಸುವಿರೆಂದು ಆಶಿಸುತ್ತೇನೆ" ಎಂದರು. ಶ್ರೀಮಂತ ವ್ಯಾಪಾರಿಗಳು ಜಿಪುಣತನದಿಂದ ಸ್ವಲ್ಪವೇ ದಾನವಿತ್ತಾಗ ಗಾಂಧೀಜಿ ಅವರನ್ನು ವ್ಯಂಗ್ಯ ಮಾಡಿದರು. "ಈ ಚಂದಾಪಟ್ಟಿಯನ್ನು ಹರಿದುಹಾಕಿ ಹೊಸದನ್ನು ಪ್ರಾರಂಭಿಸಿ ಇತರ ವ್ಯಾಪಾರಿಗಳಿಗಿಂತಲೂ, ಗುಜರಾತಿ ವ್ಯಾಪಾರಿಗಳ ಜೇಬಿನೊಳಗೆ ನನ್ನ ಕೈಗಳನ್ನು ಆಳಕ್ಕೆ ಇಳಿಸದೆ ಖಂಡಿತ ಬಿಡಲಾರೆ. ನಾನೊಬ್ಬ ಗುಜರಾತಿ ಬನಿಯ" ಎಂದರು. ಈ ಯುಕ್ತಿಪೂರ್ಣ ಮಾತುಗಳಿಂದಾಗಿ ಸ್ಥಳದಲ್ಲೇ ಚಂದಾ ಮೊತ್ತ ದ್ವಿಗುಣಗೊಂಡಿತು. ಸಿಂಹಳೀಯರನ್ನುದ್ದೇಶಿಸಿ ಗಾಂಧೀಜಿ "ಚರಿತ್ರೆಯ ಮಹೇಂದ್ರ ಈ ಸಿಲೋನಿಗೆ ಬಂದಾಗ ತಾಯ್ನಾಡಿನ ಮಕ್ಕಳು ಹಸಿದಿರಲಿಲ್ಲ. ನಮ್ಮ ಅದೃಷ್ಟ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಆ ದಿನ ನಮ್ಮ ವೈಭವದಲ್ಲಿ ನೀವೂ ಪಾಲ್ಗೊಂಡಿರಿ. ಆಗಿನ ಅದೃಷ್ಟಶಾಲೀ ಭಾರತೀಯರೊಡನೆ ನಿಮ್ಮ ಸಂಬಂಧವನ್ನು ನಿರಾಕರಿಸದೆ ಅದರ ಬಗ್ಗೆ ನೀವು ಅಭಿಮಾನಪಡುತ್ತೀರಾದರೆ ನೀವು ಹಣ ಅಷ್ಟೇ ಅಲ್ಲ, ನಿಮ್ಮ ಆಭರಣಗಳನ್ನೂ ದಾನವೀಯಬೇಕು" ಎಂದರು. ಕಛ್ ವರ್ತಕರು, ತಮ್ಮ ದೇಣಿಗೆಯನ್ನು ಕಛ್ ಜನರಿಗೆ ಬಳಸಬೇಕೆಂದು ಹಾಕಿದ ಬೇಡಿಕೆಯನ್ನು ಗಾಂಧೀಜಿ ನಿರಾಕರಿಸಿದರು. "ನೀವು ಹಣದ ಬಗ್ಗೆ ನನ್ನಲ್ಲಿ ವಿಶ್ವಾಸವಿರಿಸುವಿರಾದರೆ, ಆ ಹಣವನ್ನು ಹೇಗೆ ಮತ್ತು ಯಾವಾಗ ಬಳಸಬೇಕು ಎನ್ನುವುದು ನನಗೆ ಗೊತ್ತು ಎನ್ನುವ ಪೂರ್ಣ ತಿಳುವಳಿಕೆಯಿಂದಲೇ ಆ ರೀತಿಯ ವಿಶ್ವಾಸ ತೋರಿಸಬೇಕು" ಎಂದರು.

ತೀವ್ರ ತಾಪದ ಒಂದು ಕ್ಷಣದಲ್ಲಿ ಗಾಂಧೀಜಿ ತನ್ನ ಅಂತರಂಗವನ್ನು ಈ ಮಾತುಗಳಲ್ಲಿ ತೋಡಿಕೊಂಡರು. "ಹನುಮಂತನಿಗಿದ್ದಂತೆ ನನ್ನ ಹೃದಯವನ್ನು ಸೀಳಿ ತೋರಿಸುವ ಶಕ್ತಿ ನನಗಿಲ್ಲ. ಆದರೆ ನನ್ ಹೃದಯಾಂತರಾಳದಲ್ಲಿ ಭಾರತದ ಹಸಿದ ಜನಕೋಟಿಯಲ್ಲಿ ನಾನು ಪ್ರತ್ಯಕ್ಷ ಕಾಣುವ ರಾಮನ ಮೇಲಿನ ಪ್ರೀತಿಯಲ್ಲದೆ ಇನ್ನೇನೂ ಇಲ್ಲ ಎಂದು ನಿಮಗೆ ಭರವಸೆ ನೀಡಬಲ್ಲೆ" ಎಂದರು. ಅನೇಕ ಬಾರಿ ದಿನವೊಂದಕ್ಕೆ 12 ಸಭೆಗಳಲ್ಲಿ ಮಾತನಾಡಿ "ನನಗೆ ಕಾಲಾಣೆ, ಅರ್ಧ ಆಣೆ, ನಿಮ್ಮಲ್ಲಿರುವ ಏನಾದರೂ ಅದು ಒಂದು ಪೈಯೇ ಆಗಿರಬಾರದೇಕೆ ಕೊಡಿ" ಎಂದು ಕೇಳುತ್ತಿದ್ದರು. ನಾಗರಿಕ ಸನ್ಮಾನವೊಂದರಲ್ಲಿ, ಮಾನಪತ್ರ ಸ್ವೀಕರಿಸಿದ ಬಳಿಕ "ನಿಧಿ ಎಲ್ಲಿ?" ಎಂದು ಪ್ರಶ್ನಿಸುತ್ತಿದ್ದರು. ಎಂದಾದರೂ ಹಣ ದೊರೆಯದೆ ಹೋದರೆ "ನಾನು ಇಲ್ಲಿಂದ ಹೋಗಲಾರೆ ಇಲ್ಲೇ ಕುಳಿತುಕೊಳ್ಳುವೆ" ಎಂದು ಹಟ ಹಿಡಿಯುತ್ತಿದ್ದರು. ಹೀಗೆ ಜನ ದೇಶಕ್ಕಾಗಿ ದೇಣಿಗೆ ನೀಡಲು ಒತ್ತಾಯಿಸುತ್ತಿದ್ದರು. ಕೆಲವೊಮ್ಮೆ ಜನ ಸಮೂಹ ಆಭರಣಗಳು, ಚೆಕ್ಕುಗಳು, ನೋಟುಗಳು, ಬಂಗಾರ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು, ನೂಲಿನ ರಾಶಿ ಮತ್ತು ಖಾದಿ ಬಟ್ಟೆಗಳನ್ನು ದಾನವೀಯಲು ಮಧ್ಯರಾತ್ರಿಯವರೆಗೂ ಕಾದಿರುತ್ತಿದ್ದರು. ಗಾಂಧೀಜಿಯ 78ನೇ ಹುಟ್ಟುಹಬ್ಬದಂದು ಅವರಿಗೆ 78 ಲಕ್ಷ ಅಡಿ ನೂಲನ್ನು ಅರ್ಪಿಸಲಾಯಿತು.

ಒಮ್ಮೆ ಹಣದ ಸಂಗ್ರಹದಲ್ಲಿ ಒಂದು ಕವಡೆ ನಾಣ್ಯ ಕಂಡುಬಂತು. ಆ ದೇಣಿಗೆ, ಗಾಂಧೀಜಿಗೆ ಬಂಗಾರಕ್ಕಿಂತಲೂ ಬೆಲೆಬಾಳುವ ಅತಿ ದೊಡ್ಡ ತ್ಯಾಗದ ಸಂಕೇತವಾಗಿ ಕಂಡುಬಂತು.

ಒಬ್ಬ ಕೊಲೆಗಡುಕ ಗಲ್ಲಿಗೇರುವ ಮುನ್ನ ತನ್ನ ಕೊನೆಯ ಇಚ್ಛೆಯಾಗಿ ತನ್ನಲ್ಲಿದ್ದ ಒಟ್ಟು 100 ರೂಪಾಯಿಗಳನ್ನು ರಾಷ್ಟ್ರದ ಕೆಲಸಕ್ಕಾಗಿ ಗಾಂಧೀಜಿಗೆ ನೀಡಬಯಸಿದ್ದ.

ಸಭೆಯಿಂದ ತೆರಳುವಾಗ ಪ್ರತಿಸಲವೆಂಬಂತೆ ಹಣವನ್ನೆಣಿಸಲು ಮತ್ತು ಸಭೆಯ ಸ್ಥಳದಿಂದ ಹಣವನ್ನು ಒಯ್ಯಲು ಗಾಂಧೀಜಿಗೆ ನಾಲ್ಕಾರು ಕಾರ್ಯಕರ್ತರ ಅವಶ್ಯಕತೆ ಬೀಳುತ್ತಿತ್ತು. ತಾಮ್ರದ ನಾಣ್ಯಗಳೇ ಹೆಚ್ಚಾಗಿ ಸಂಗ್ರಹವಾಗಿದ್ದ ಒಂದು ಸಂದರ್ಭದಲ್ಲಿ, ನಾಣ್ಯಗಳನ್ನೆಣಿಸಿ ಹಸಿರು ಬಣ್ಣಕ್ಕೆ ತಿರುಗಿದ್ದ ತನ್ನ ಅಂಗೈಗಳನ್ನು ಸ್ವಯಂಸೇವಕನೊಬ್ಬ ಗಾಂಧೀಜಿಗೆ ತೋರಿಸಿದ್ದ. ಬಡ ಜನರು ವರ್ಷಾನುಗಟ್ಟಲೆ ಭೂಮಿಯಡಿಯಲ್ಲಿ ಬಚ್ಚಿಟ್ಟ ಪರಿಣಾಮವಾಗಿ ಕಿಲುಬು ಹಿಡಿದಿದ್ದ ನಾಣ್ಯಗಳನ್ನು ಗಾಂಧೀಜಿಗೆ ದೇಣಿಗೆ ನೀಡಿದ್ದರು. ಆ ಕಿಲುಬಿನ ಹಸಿರು ಸ್ವಯಂಸೇವಕನ ಕೈಗಳಿಗೆ ಮೆತ್ತಿಕೊಂಡಿತ್ತು. "ಈ ದೇಣಿಗೆ ಸಾರ್ಥಕವಾದುದು. ನಮ್ಮ ಪಾಲಿಗೆ ಅದೊಂದು

ಸಮರ್ಪಣೆ. ಅವರ ಪಾಲಿಗೆ ನಿರಾಶೆಯಿಂದ ಕತ್ತಲಾದ ಪ್ರಪಂಚಲ್ಲೊಂದು ಆಶಾಕಿರಣ. ಭವಿಷ್ಯದಲ್ಲಿ ಬರಲಿರುವ ಒಳ್ಳೆಯ ಸಂಗತಿಗಳ ಸಂಕೇತ ಅದು" ಎಂದರು ಗಾಂಧೀಜಿ.

ಜೀವನೋಪಾಯಕ್ಕಾಗಿ ಭಿಕ್ಷಾವೃತ್ತಿಯನ್ನು ಅವಲಂಬಿಸುವುದನ್ನು ಗಾಂಧೀಜಿ ಪ್ರೋತ್ಸಾಹಿಸಲಿಲ್ಲ. ಸನ್ನಡತೆಯ ಎಲ್ಲ ಭಾವನೆಗಳನ್ನೂ, ಆತ್ಮಗೌರವವನ್ನೂ ಬಿಟ್ಟು ಭಿಕ್ಷುಕನೊಬ್ಬ ಆಹಾರಕ್ಕಾಗಿ ಚಡಪಡಿಸುವುದು ಗಾಂಧೀಜಿಗೆ ವಾಕರಿಗೆ ತರಿಸುತ್ತಿತ್ತು. ಬಡವರಿಗೆ ಕೆಲಸ ಕೊಡುವುದರ ಬದಲು ಅವರಿಗೆ ಭಿಕ್ಷೆ ನೀಡುವುದಕ್ಕೆ ಅವರ ಸಮ್ಮತಿ ಇರಲಿಲ್ಲ. ಭಾರತದಲ್ಲಿ 56 ಲಕ್ಷಕ್ಕಿಂತಲೂ ಹೆಚ್ಚು ಭಿಕ್ಷುಕ ಬೈರಾಗಿಗಳಿರುವ ಬಗ್ಗೆ ಗಾಂಧೀಜಿ ವಿಷಾದ ವ್ಯಕ್ತಪಡಿಸಿದರು.

ಶಾರೀರಿಕವಾಗಿ ದುರ್ಬಲರಾದವರಲ್ಲದೆ ಇತರ ಯಾವುದೇ ವ್ಯಕ್ತಿ ಸಮಾಜಕ್ಕೆ ಪ್ರಯೋಜನಕಾರಿಯಾದ ಯಾವುದಾದರೂ ಕೆಲಸ ಮಾಡದೆ ದಾನದ ಕೂಳಿನಿಂದ ಬದುಕುವುದನ್ನು ಅವರು ಅನುಮೋದಿಸಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಭಿಕ್ಷೆ ನೀಡುವುದೂ, ಸ್ವೀಕರಿಸುವುದೂ ತಪ್ಪೆಂದು ಅವರ ಅಭಿಪ್ರಾಯವಾಗಿತ್ತು. ದೃಢಕಾಯರಾಗಿದ್ದೂ ಬೇಡುವುದೆಂದರೆ ಕಳ್ಳತನಮಾಡಿದಂತೆ ಎಂದು ಗಾಂಧೀಜಿಯ ಭಾವನೆಯಾಗಿತ್ತು.

ಬಿಹಾರ ಭೂಕಂಪದಿಂದ ನಿರ್ಗತಿಕರಾದವರಿಗೆ ಗಾಂಧೀಜಿ, ನಿರಾಶ್ರಿತರ ಶಿಬಿರಗಳಲ್ಲಿ ಅವರಿಗೆ ಕೊಡಲಾದ ಅನ್ನ, ವಸತಿ ಮತ್ತು ವಸ್ತ್ರಗಳಿಗೆ ಪ್ರತಿಯಾಗಿ ಕೆಲಸ ಮಾಡುವಂತೆ ಬೋಧಿಸಿದರು. ಇಲ್ಲವಾದರೆ ಸಾರ್ವಜನಿಕ ದಾನ ದೇಣಿಗೆಗಳ ಮೇಲೆಯೇ ಅವಲಂಬಿಸಿ ಬದುಕುವ ಪ್ರವೃತ್ತಿ ಅದರಲ್ಲುಂಟಾಗಬಹುದೆಂದು ಎಚ್ಚರಿಕೆ ಇತ್ತರು. ಸಾರ್ವಜನಿಕ ದಾನದಿಂದ ಬದುಕುವುದು ಯಾರಿಗಾಗಲೀ ಸರಿಯಾದುದಲ್ಲ. ಅಂತಹವರಿಗೆ ಗಾಂಧೀಜಿಯ ಬುದ್ಧಿವಾದ ಈ ರೀತಿ ಇತ್ತು. "ಪ್ರಾಮಾಣಿಕವಾಗಿ ಒಳ್ಳೆಯ ಕೆಲಸ ಮಾಡಿ, ನನಗೆ ಭಿಕ್ಷುಕರು ಬೇಕಾಗಿಲ್ಲ. ಕೆಲಸವನ್ನು ಕೇಳಿ ಪಡೆಯಿರಿ ಮತ್ತು ಶ್ರದ್ಧೆಯಿಂದ ಕೆಲಸ ಮಾಡಿ ಭಿಕ್ಷೆ ಬೇಡದಿರಿ."

ಸಾಹಿತಿ, ಪತ್ರಕಾರ

ಗಾಂಧೀಜಿ ಎಂ. ಕೆ. ಗಾಂಧಿ ಹೆಸರಿನಲ್ಲಿ ಅನೇಕ ಕೃತಿಗಳನ್ನು ರಚಿಸಿದರು. ಅವುಗಳಲ್ಲಿ ಹೆಚ್ಚಿನವುಗಳನ್ನು ಪುಸ್ತಕ ರೂಪದಲ್ಲಿ ಬರೆದಿಲ್ಲ. ಅವು ಗಾಂಧೀಜಿ ಸತ್ಯ, ಅಹಿಂಸೆ ಮತ್ತು ಚರಕಗಳ ಕುರಿತು ಬರೆದ ಲೇಖನಗಳು ಮತ್ತು ಭಾಷಣಗಳು ಅಥವಾ ಮಹಿಳೆಯರು, ವಿದ್ಯಾರ್ಥಿಗಳು ಮತ್ತು ರಾಜರುಗಳನ್ನು ಉದ್ದೇಶಿಸಿ ಮಾಡಿದ ಭಾಷಣಗಳ ಸಂಗ್ರಹಗಳು.

ಒಬ್ಬ ಉತ್ತಮ ಲೇಖಕರಾಗಿ ಗಾಂಧೀಜಿ ಮನ್ನಣೆ ಪಡೆದರು. ತಮ್ಮದೊಂದು ಲೇಖನ ಶೈಲಿಯನ್ನು ರೂಪಿಸಬೇಕೆಂದಾಗಲೀ ಕಿವಿಗೆ ಕೇಳಲು ರಮ್ಯವಾಗುವ ಶಬ್ದಗಳನ್ನು ಪ್ರಯೋಗಿಸಬೇಕೆಂದಾಗಲೀ ಗಾಂಧೀಜಿ ಇಚ್ಛೆಪಡಲಿಲ್ಲ. ತಮ್ಮ ಅರೆ ನಂಬಿಕೆಗಳನ್ನು, ದುಃಖ ನಿರಾಶೆಗಳನ್ನು ಸಶಕ್ತವಾಗಿ ಪ್ರತಿಫಲಿಸುವ ಸಮರ್ಥ ಜೀವನಶೈಲಿ ಅವರಿಗೆ ತಾನಾಗಿ ಸಿದ್ಧಿಸಿತ್ತು. ಗಾಂಧೀಜಿಯ ಬರಹಗಳ ಶೈಲಿ ಸರಳ ನಿಖರ ಮತ್ತು ಸ್ಪಷ್ಟತೆಯಿಂದ ಕೂಡಿದುದು. ಆ ಬರಹಗಳು ಅವುಗಳ ಬರಹಗಾರನ ಜೀವನದಂತೆಯೇ ಕೃತಕತೆಯಿಲ್ಲದುವು. ಗಾಂಧೀಜಿ ಆಂಗ್ಲಭಾಷೆಯಲ್ಲಿ ತಾವು ಬಳಸುವ ಶಬ್ದಗಳ ಮೌಲ್ಯವನ್ನು ಶ್ರೇಷ್ಠ ರೀತಿಯಲ್ಲಿ ತಿಳಿದುಕೊಂಡವರಾಗಿ ಬರೆಯುತ್ತಿದ್ದರೆಂದು ಕೆಲವರು ವೈಸ್‌ರಾಯ್‌ಗಳ ಅಭಿಮತವಾಗಿತ್ತು. ವಿವೇಚನಾರಹಿತವಾದ ಶಬ್ದಗಳು ತಮ್ಮ ಮಾತುಗಳಲ್ಲಾಗಲೀ, ಬರವಣಿಗೆಯಲ್ಲಾಗಲೀ ಬರಲಾರವೆಂದು ಗಾಂಧೀಜಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ದುಂಡು ಮೇಜಿನ ಪರಿಷತ್ತಿನಲ್ಲಿ ಗಾಂಧೀಜಿಯ ಹೇಳಿಕೆಗಳ ಕರಡು ತಯಾರಿಸುವುದರಲ್ಲಿ ನೆರವಾದ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಪ್ರೊಫೆಸರ್‌ರೊಬ್ಬರು "ವಿಭಕ್ತಿ ಪ್ರತ್ಯಯಗಳನ್ನು ಗಾಂಧೀಜಿಯಂತೆ ಕರಗತ ಮಾಡಿಕೊಂಡ ಇನ್ನೊಬ್ಬ ವ್ಯಕ್ತಿಯನ್ನು ನಾನಿದುವರೆಗೆ ಕಂಡಿಲ್ಲ. ಈ ಕರಡು ತಯಾರಿಯಲ್ಲಿ ನಾನು ಸಾಕಷ್ಟು ಶ್ರಮಿಸಿದ್ದೆ. ನನ್ನ ಕೆಲಸವನ್ನು ಆಮೂಲಾಗ್ರವಾಗಿ ಒಮ್ಮೆ ಪರಿಶೀಲಿಸಿದ ಬಳಿಕ ಗಾಂಧೀಜಿ ವಿಭಕ್ತಿ ಪ್ರತ್ಯಯದ ಅತಿ ಸೂಕ್ಷ್ಮವಾದ ಒಂದೇ ಒಂದು ಬದಲಾವಣೆ ಮಾಡಿದರು. ಆ ಬದಲಾವಣೆಯಿಂದಲೇ ಆ ಕರಡಿನ ಉದ್ದೇಶ ಪೂರ್ತಿಯಾಯಿತು. ಆ ಬದಲಾವಣೆ ಕರಡಿನ ನನ್ನ ಅರ್ಥವನ್ನು ಗಾಂಧೀಜಿಯ ಅರ್ಥಕ್ಕೆ ಬದಲಾವಣೆ ಮಾಡಿತು" ಎಂದಿದ್ದಾರೆ. ಪ್ರಾಯಃ ಆಯ್ದ

ಇಂಗ್ಲಿಷ್ ಕೃತಿಕಾರರ ಗ್ರಂಥಗಳು ಮತ್ತು ಬೈಬಲ್ ಗ್ರಂಥವನ್ನು ಓದುವಲ್ಲಿ ಗಾಂಧೀಜಿಗಿದ್ದ ಆಸಕ್ತಿ ಮತ್ತು ಅವರೂ ಸೂಕ್ಷ್ಮ ವ್ಯಾಸಂಗ ಶಬ್ದಗಳ ಸೂಕ್ತ ಪ್ರಯೋಗದಲ್ಲಿ ಅವರಿಗೆ ಸರಿಯಾದ ತರಬೇತಿ ನೀಡಿರಬೇಕು. ಗಾಂಧೀಜಿಯದ್ದು ವಿಸ್ತೃತ ವ್ಯಾಸಂಗ; ಓದಿದ್ದೆಲ್ಲವನ್ನು ಅವರು ಅರಗಿಸಿಕೊಂಡರು.

ಭಾರತೀಯ ವಿದ್ಯಾರ್ಥಿಗಳಿಗಾಗಿ ತಮ್ಮ ಎಳೆಯ ಪ್ರಾಯದಲ್ಲಿ ಬರೆದ "ಲಂಡನ್ ಗೇಟ್" ಗಾಂಧೀಜಿಯವರು ಲೇಖಕನಾಗಿ ನಡೆಸಿದ ಪ್ರಯತ್ನ. ಅದರಲ್ಲಿ ಲಂಡನ್ ನಗರದ ಬಗ್ಗೆ ಪ್ರಯೋಜನಕರವಾದ ವಿವರಗಳನ್ನು ಕೊಡಲಾಗಿತ್ತು. ಆ ಮೇಲೆ "ಪ್ರತಿ ಬ್ರಿಟಿಷ್ ನಾಗರಿಕನಿಗೂ ಒಂದು ವಿನಂತಿ" ಮತ್ತು "ಭಾರತೀಯನ ಮತದಾನ" ಎನ್ನುವ ಎರಡು ಪತ್ರಾವಳಿಗಳು ಬಂದವು. ಮೊದಲನೆಯದು, ನೇಟಾಲ್ ಭಾರತೀಯರ ಸಾಮಾನ್ಯ ಸ್ಥಿತಿಗತಿಗಳನ್ನು ವರ್ಣಿಸುತ್ತಿತ್ತು. ಇನ್ನೊಂದು ನೇಟಾಲ್‌ನಲ್ಲಿ ಭಾರತೀಯರ ಮತದಾನದ ಹಕ್ಕಿನ ಚರಿತ್ರೆ ಆ ನಂತರ ಗಾಂಧೀಜಿ ಹೊರಡಿಸಿದ "ಹಸಿರುಪತ್ರ"ದಲ್ಲಿ ಕೆಲವು ಸಂಗತಿಗಳ ಯಥಾರ್ಥ ವಿವರಣೆ ಇತ್ತು. ಒಂದು ತಿಂಗಳಲ್ಲಿ ಅದರ ಪರಿಷ್ಕೃತ ಆವೃತ್ತಿ ಹೊರಗೆ ಬಂತು. ಈ ಹಸುರು ಪತ್ರದ ಸಾರಾಂಶ ದಕ್ಷಿಣ ಆಫ್ರಿಕಾದ ವೃತ್ತಪತ್ರಿಕೆಗಳಲ್ಲಿ ಪ್ರಕಟಗೊಂಡು, ಯೂರೋಪಿಯನ್ನರ ಕೋಪವನ್ನು ಕೆರಳಿಸಿತು. ಆನಂತರ ಗಾಂಧೀಜಿ ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಬಂದಿಳಿದಾಗ ಅವರನ್ನು ಆಕ್ರಮಿಸಿ ಥಳಿಸಲಾಯಿತು. ತಮ್ಮ ಬರಹಗಳನ್ನು ಸರಿಯಾಗಿ ಸಂಕ್ಷಿಪ್ತವಾಗಿ ಬರೆಯುವ ಕಲೆ ಗಾಂಧೀಜಿಗೆ ಚೆನ್ನಾಗಿ ಸಿದ್ಧಿಸಿತ್ತು. ಕಾಂಗ್ರೆಸ್ ಸಂವಿಧಾನವನ್ನೂ ಇತರ ಅನೇಕ ಗೊತ್ತುವಳಿಗಳ ಕರಡನ್ನೂ ಗಾಂಧೀಜಿಯೇ ತಯಾರಿಸುತ್ತಿದ್ದರು.

ಗಾಂಧೀಜಿ ಆಹಾರದ ಕುರಿತು ನಡೆಸಿದ ಪ್ರಯೋಗಗಳನ್ನು "ಆರೋಗ್ಯ ಕೈಪಿಡಿ" ಎನ್ನುವ ಕೃತಿಯಲ್ಲಿ ದಾಖಲಿಸಲಾಗಿದೆ. ಅದು ಇಂಡಿಯನ್ ಒಪಿನಿಯನ್‌ನ ಗುಜರಾತಿ ಆವೃತ್ತಿಯಲ್ಲಿ ಗಾಂಧೀಜಿ ಬರೆದ ಲೇಖನಗಳ ಸಂಗ್ರಹ. ಆ ಪತ್ರಿಕೆಯನ್ನು ಭಾರತ ಮತ್ತು ವಿದೇಶಗಳಲ್ಲಿ ಅಭಿಮಾನಿಗಳು ಆಸಕ್ತಿಯಿಂದ ಓದುತ್ತಿದ್ದರು. ಅದು ಇಂಗ್ಲೀಷ್, ಐರೋಪ್ಯ ಮತ್ತು ಭಾರತೀಯ ಭಾಷೆಗಳಲ್ಲಿ ಅನುವಾದಗೊಂಡಿದೆ.

ಯಾವುದೇ ವಿಚಾರ ಅವರ ಮನಸ್ಸಿನಲ್ಲಿ ಬಂದಾಗ, ಜನರ ಭರ್ತ್ಸನೆಗೊಳಗಾದೇನೆಂಬ ಭಯವೂ ಇಲ್ಲದೆ, ತನ್ನ ನಂಬಿಕೆಯಂತೆ ಬರಹಕ್ಕಿಳಿಸಿಬಿಡುತ್ತಿದ್ದರು. ಬರೆಯಬೇಕೆನ್ನುವ ಅದಮ್ಯ ಇಚ್ಛೆ ಅವರನ್ನು

ಓಡುತ್ತಿರುವ ರೈಲು ಬಂಡಿಯಲ್ಲಿ ಮತ್ತು ಓಲಾಡುವ ಹಡಗಿನಲ್ಲಿ ಕಾಗದದ ಮೇಲೆ ಲೇಖನಿ ಓಡಿಸುವಂತೆ ಮಾಡುತ್ತಿತ್ತು. ಸ್ವದೇಶಕ್ಕೆ 1896ರಲ್ಲಿ ಹಡಗಿನಲ್ಲಿ ಮರಳುತ್ತಿರುವಾಗ ಗಾಂಧೀಜಿ ತಮ್ಮ "ಹರು ಪತ್ರ"ದ ಇಡೀ ಹಸ್ತಪ್ರತಿಯನ್ನು ಬರೆದು ಮುಗಿಸಿದರು. ಆಧುನಿಕ ನಾಗರಿಕತೆಯನ್ನು ಕುರಿತ ಅವರ ತಮ್ಮ ಬೇಡಿಕೆಯಿರುವ "ಹಿಂದ್ ಸ್ವರಾಜ್ಯ" ಕೃತಿ 1909ದರಲ್ಲಿ ಇಂಗ್ಲೆಂಡಿನಿಂದ ದಕ್ಷಿಣ ಆಫ್ರಿಕಾಕ್ಕೆ ನಡೆಸಿದ ಹಡಗು ಪ್ರಯಾಣದ ವೇಳೆ ರಚಿಸಲ್ಪಟ್ಟಿತು. ಹಡಗಿನಲ್ಲಿ ದೊರೆಯುವ ಪತ್ರಲೇಖನ ಸಾಮಗ್ರಿಗಳನ್ನೇ ಗಾಂಧೀಜಿ ತಮ್ಮ ಕೆಲಸಕ್ಕೆ ಬಳಸಿದರು. ಬಲಗೈಯಲ್ಲಿ ಬರೆದು ದಣಿದಾಗ ಎಡಗೈಯನ್ನೇ ಬಳಸಿದರು. ಮತ್ತು ಹತ್ತೇ ದಿನಗಳಲ್ಲಿ ಬರೆದು ಮುಗಿಸಿದರು. ಆ ಕೃತಿಯನ್ನು ಓದಿದ ಟಾಲ್‌ಸ್ಟಾಯ್ "ಅಹಿಂಸಾತ್ಮಕ ಪ್ರತಿಭಟನೆಯ ಪ್ರಶ್ನೆ. ಭಾರತಕ್ಕಷ್ಟೇ ಅಲ್ಲ, ಇಡೀ ಪ್ರಪಂಚಕ್ಕೆ ಅತಿ ಮುಖ್ಯವಾದುದು" ಎಂದರು. "ರಚನಾತ್ಮಕ ಕಾರ್ಯಕ್ರಮ"ವೆನ್ನುವ ರಾಷ್ಟ್ರ ನಿರ್ಮಾಣವನ್ನು ಹೊತ್ತ ಕಿರುಹೊತ್ತಿಗೆಯನ್ನು ಗಾಂಧೀಜಿ ರೈಲು ಪ್ರಯಾಣದಲ್ಲಿ ಬರೆದರು. ಅವರ ಹಸ್ತಪ್ರತಿಗಳಲ್ಲಿ ಕೆಲವೇ ತಿದ್ದುಪಡಿಗಳಿರುತ್ತಿದ್ದವು ಮತ್ತು ಅವುಗಳಲ್ಲಿ ಹೆಚ್ಚು ಬದಲಾವಣೆಗಳೇನೂ ಬೇಕಾಗುತ್ತಿರಲಿಲ್ಲ. "ಇದು ಸತ್ಯಶೋಧಕನೊಬ್ಬನ ಆಧ್ಯಾತ್ಮಿಕ ಶಿಸ್ತಿನಿಂದಾಗಿ ಸಾಧ್ಯವಾಯಿತು" ಎಂದು ಗಾಂಧೀಜಿ ಹೇಳಿದರು.

ಒಂದು ವಿಚಾರವನ್ನು ಇನ್ನೊಂದು ಭಾಷೆಗೆ ಅನುವಾದಿಸುವಾಗ ಸರಿಯಾದ ಶಬ್ದಗಳನ್ನೇ ಆರಿಸುವಲ್ಲಿ ಗಾಂಧೀಜಿಗಿದ್ದ ಜಾಣ್ಮೆ ವಿಶೇಷವಾದುದು. ಗಾಂಧೀಜಿ ಒಂದು ಶಬ್ದ ಅಥವಾ ವಿಚಾರದ ಬಾಹ್ಯಾರ್ಥಕ್ಕೆ ಗಮನ ನೀಡಿದೆ ಆದರೆ ಅಂತರಾರ್ಥವನ್ನು ಹುಡುಕುತ್ತಿದ್ದರು. DEATH DANCE ಎಂಬ ಆಂಗ್ಲಪದಕ್ಕೆ ಗಾಂಧೀಜಿ ಪತಂಗನೃತ್ಯವೆಂದು ಭಾಷಾಂತರ ಮಾಡಿದರು. ತಮ್ಮ ಅಂತರಂಗದ ಆಳದ ನಂಬಿಕೆಗಳಿಗೆ ಧ್ವನಿಕೊಟ್ಟು ರಸ್ಕಿನ್ ಮಹಾಶಯನ "ಅನ್ ಟು ದಿಸ್ ಲಾಸ್ಟ್" ಕೃತಿಯನ್ನು ಗಾಂಧೀಜಿ ಗುಜರಾತಿ ಭಾಷೆಗೆ ಅನುವಾದ ಮಾಡಿದರು. ಅದು ಗುಜರಾತಿ ಭಾಷೆಯಲ್ಲಿ "ಸರ್ವೋದಯ"ವಾಯಿತು.

ಕಾರ್ಲೈಲ್ ಮತ್ತು ಕಮಾಲ್ ಪಾಶಾರ ಕೃತಿಗಳ ಕೆಲವು ಭಾಗಗಳನ್ನೂ ಗುಜರಾತಿಗೆ ಇಳಿಸಿದರು. ಅವರ "ಸತ್ಯಾಗ್ರಹಿಯೊಬ್ಬನ ಕತೆ" ಪ್ಲೇಟೋ ಬರೆದ "ಸಾಕ್ರೆಟೀಸನ ಸಮರ್ಥನೆ ಮತ್ತು ಮರಣ" ಎನ್ನುವ ಕೃತಿಯ ವ್ಯಾಖ್ಯಾನವೇ ಆಗಿದೆ. ಆಶ್ರಮ ಭಜನಾವಲಿ ಮತ್ತು ಕೆಲವು ಭಾರತದ ಸಂತ ಕವಿಗಳ ಹಾಡುಗಳನ್ನು ಗಾಂಧೀಜಿ ಸೆರೆಮನೆಯಲ್ಲಿದ್ದಾಗ ಇಂಗ್ಲಿಷ್‌ಗೆ ಅನುವಾದ ಮಾಡಿದರು. ಅವೇ "ಸೆರೆಮನೆಯಿಂದ ಹಾಡುಗಳು" ಕೃತಿಯಾಗಿ ಪ್ರಕಟಗೊಂಡುವು.

ಗಾಂಧೀಜಿ ತಮ್ಮ ಆತ್ಮಕತೆಯನ್ನು ಗುಜರಾತಿ ಭಾಷೆಯಲ್ಲಿ ಬರೆದರು. ಅವರು ಸರಳ, ಸಶಕ್ತ ಶೈಲಿಯೊಂದನ್ನು ಪ್ರಾರಂಭಿಸಿದರು. ಪರಿಣಾಮವಾಗಿ ಗುಜರಾತಿ ಭಾಷೆ ಜನಸಾಮಾನ್ಯರ ಭಾಷೆಯಗಿ ಪರಿವರ್ತನೆಯಾಯಿತು. "ನನ್ನ ಸತ್ಯ ಶೋಧನೆಯ ಕತೆ"ಯೆಂದು ಗಾಂಧೀಜಿಯವರು ಅದನ್ನು ಇಂಗ್ಲಿಷ್‌ನಲ್ಲೂ ಬರೆದರು. ಹಲವರು ಪ್ರಸಿದ್ಧ ಸಾಹಿತಿಗಳು ಅದೊಂದು ಒಳ್ಳೆಯ ಸಾಹಿತ್ಯ ಕೃತಿಯೊಂದು ತೀರ್ಮಾನಿಸಿದ್ದಾರೆ. ಆ ಕೃತಿ ಜಗತ್ಪ್ರಸಿದ್ಧ ವ್ಯಕ್ತಿಯೊಬ್ಬರ ಮಾನವೀಯ ವ್ಯಕ್ತಿತ್ವವನ್ನು ಓದುಗರ ಮುಂದಿಡುವುದಷ್ಟೇ ಅಲ್ಲದೆ, ಅವರ ಹೆತ್ತವರು, ಮಡದಿ ಮತ್ತು ಮಿತ್ರರ ಬಗೆಗೂ ತಿಳಿಸುತ್ತದೆ. ಅವರ ಜೀವನದ ಅನೇಕ ನಾಟಕೀಯ ಘಟನೆಗಳ ವಿವರವೂ ಅಲ್ಲಿದೆ. ಬಿಡಿ ಸಂಭಾಷಣೆಗಳನ್ನು ಪೋಷಿಸುವ ಮತ್ತು ಕುತೂಹಲವನ್ನು ಕಾಯ್ದಿಟ್ಟುಕೊಳ್ಳುವ ಗಾಂಧೀಜಿಯ ಕಥನ ಕಲೆ ಓದುಗರ ಆಸಕ್ತಿಯನ್ನು ಉದ್ದಕ್ಕೆ ಉಳಿಸಿಕೊಳ್ಳುತ್ತದೆ. ಸರಿಸುಮಾರು ಎಲ್ಲ ಭಾರತೀಯ ಭಾಷೆಗಳಿಗೂ ಇಂಗ್ಲಿಷ್, ಫ್ರೆಂಚ್, ರಷ್ಯನ್, ಜರ್ಮನ್, ಚೈನೀ ಮತ್ತು ಜಪಾನೀ ಭಾಷೆಗಳಿಗೂ ಈ ಕೃತಿ ಅನುವಾದಗೊಂಡಿತು.

ಗಾಂಧೀಜಿಯ ಎಲ್ಲ ಬರಹಗಳಲ್ಲೂ ಸತ್ಯ ಮತ್ತು ಉನ್ನತ ನೈತಿಕ ಮೌಲ್ಯಗಳನ್ನೆತ್ತಿ ಹಿಡಿಯಲಾಗಿದೆ. ಅದೇ ಹೊತ್ತಿಗೆ ಅವು ಬರೇ ಒಣ ನಿಯಮ, ನಡತೆಗಳ ದಾಖಲೆಗಳಷ್ಟೇ ಅಲ್ಲ! ಮಕ್ಕಳಿಗಾಗಿ "ಬಾಲಪೋಥಿ" ಎನ್ನುವ ಪದ್ಯವನ್ನೂ, ನೀತಿ ಬೋಧೆಯನ್ನು ಕುರಿತ "ನೀತಿಧರ್ಮ" ಎನ್ನುವ ಕೃತಿಯನ್ನೂ ಗಾಂಧೀಜಿ ಬರೆದರು. ಮಕ್ಕಳು ಜೀವನದಲ್ಲಿ ಅಭ್ಯಾಸ ಮಾಡಲಾರದ ಏನನ್ನೂ ಗಾಂಧೀಜಿ ಬೋಧಿಸಲಿಲ್ಲ. ಸೆರೆಮನೆಯಿಂದ ಗಾಂಧೀಜಿ ಆಶ್ರಮದ ಮಕ್ಕಳಿಗಾಗಿ ಬರೆದ ಪತ್ರಗಳು ಸ್ವಾರಸ್ಯಕರವಾಗಿಯೂ ಶೈಕ್ಷಣಿಕವಾಗಿಯೂ ಇದ್ದವು. ಅವರೊಬ್ಬ ಉತ್ತಮ ಪತ್ರಲೇಖಕರು. ಸ್ವಹಸ್ತದಿಂದಲೇ ದಿನಕ್ಕೆ 50 ಪತ್ರಗಳನ್ನು ಬರೆಯಬಲ್ಲರಾಗಿದ್ದರು. ಸುಮಾರು 1 ಲಕ್ಷದಷ್ಟಿರುವ ಅವರ ಪತ್ರಗಳ ಸಂಗ್ರಹವೇ ಗಾಂಧೀಜಿಯ ಬರಹಗಳ ಒಂದು ಪ್ರಧಾನ ಭಾಗವಾಗಿದೆ.

"ಕಲೆಗಾಗಿ ಕಲೆ" ಎನ್ನುವ ತತ್ವಕ್ಕೆ ಗಾಂಧೀಜಿ ವಿರೋಧವಾಗಿದ್ದರು. ಅವರ ನಿಲುಮೆಯಂತೆ ಎಲ್ಲ ರೀತಿಯ ಕಲೆಗಳೂ ಸತ್ಯವನ್ನು ಆಧರಿಸಿರಬೇಕು. ಮತ್ತು ಸಾಹಿತ್ಯಕ್ಕೆ ಮನುಷ್ಯನನ್ನು ಮೇಲ್ಮಟ್ಟಕ್ಕೆ ಏರಿಸುವ ದೃಷ್ಟಿಯಿಂದಷ್ಟೇ ಬೆಲೆ ಬರುವುದು. ಅರೆಹೊಟ್ಟೆಯ ಮಿಲಿಯಾಂತರ ಭಾರತೀಯ ಬಡಜನರಿಗೆ ಸರಳವಾದ ಒಳ್ಳೆಯ ಕತೆಗಳು ಮತ್ತು ಒಬ್ಬ ರೈತನಿಗೆ ಕೊಳಕು ಬೈಗಳ, ಅವಾಚ್ಯ ಮಾತುಗಳನ್ನು

ಮರೆತು ಆನಂದವಾಗಿ ಹಾಡಿಕೊಳ್ಳಲು ಸರಳ ದ್ವಿಪದಿಯ ಹಾಡುಗಳಿದ್ದರೆ ಸಾಕೆಂದು ಗಾಂಧೀಜಿಯ ಅಭಿಮತವಾಗಿತ್ತು. ಒಂದು ಸಾಹಿತ್ಯ ಸಮ್ಮೇಳನದಲ್ಲಿ, ಬರಹಗಾರರನ್ನುದ್ದೇಶಿಸಿ ಗಾಂಧೀಜಿ "ಈ ಮೂಕ ಜನಕೋಟಿಯ ಆಸೆಗಳು, ಆಶೋತ್ತರಗಳ ಬಗ್ಗೆ ನೀವೆಂದಾದರೂ ಯೋಚಿಸಿದ್ದೀರಾ? ನಮ್ಮ ಸಾಹಿತ್ಯ ಅವರಿಗೋಸ್ಕರವಿದೆಯೆ? ನಾನು ಅವರಿಗೇನನ್ನು ಓದಿ ಹೇಳಲಿ?" ಎಂದರು. ಒಂದು ಮಾದರಿಗಾಗಿ ಗಾಂಧೀ, ಇಂಗ್ಲೆಂಡಿನ ಜನಸಾಮಾನ್ಯ ಭಾಷೆಯಲ್ಲಿ ಡೀನ್ ಫ್ಯಾರರ್ ಬರೆದ ಏಸುಕ್ರಿಸ್ತನ ಜೀವನ ಕತೆಯನ್ನು ಉದಾಹರಿಸಿದರು. ಗುಜರಾತಿ ಇಂಡಿಯನ್ ಒಪಿನಿಯನ್ ಪತ್ರಿಕೆಯಲ್ಲಿ ಗಾಂಧೀಜಿ ವಿಶೇಷ ಮಹಿಳೆಯರು ಮತ್ತು ಮಹನೀಯರ ಸಂಕ್ಷಿಪ್ತ ವ್ಯಕ್ತಿಚಿತ್ರಗಳನ್ನು ಬರೆದರು. ತಮ್ಮ ಪ್ರಿಯಕವಿ ತತ್ವಜ್ಞಾನಿ ರಾಯಚಂದಭಾಯ್‌ರವರ ಜೀವನಚರಿತ್ರೆಯನ್ನು ಬರೆಯಬೇಕೆಂದು ಗಾಂಧೀಜಿಯವರನ್ನು ಕೇಳಿಕೊಂಡಾಗ ಗಾಂಧೀಜಿ "ನಾನು ಅವರ ಜೀವನ ಚರಿತ್ರೆಯನ್ನು ಬರೆಯಬೇಕಾದರೆ ಅವರ ಮನೆ, ಅವರಾಡಿದ ಆಟದ ಬಯಲುಗಳ ಅಧ್ಯಯನ ಮಾಡಬೇಕು. ಅವರ ಮಿತ್ರರು, ಸಹಪಾಠಿಗಳು, ಬಂಧುಗಳು ಮತ್ತು ಅನುಯಾಯಿಗಳ ಜತೆ ಸೇರಿ ಸಂಭಾಷಣೆ ನಡೆಸಬೇಕು" ಎಂದರು. ಈ ಕ್ಷೇತ್ರದಲ್ಲೂ ಗಾಂಧೀಜಿಗೆ ಸತ್ಯವೇ ಮಾರ್ಗದರ್ಶಿಯಾಗಿತ್ತೇ ಹೊರತು ಕಲ್ಪನೆಯಲ್ಲ.

ಭಾರತದ ಪುರಾಣ ಕತೆಗಳಲ್ಲಿ ಮತ್ತು ರಾಮಕೃಷ್ಣ, ಮೊಹಮ್ಮದ್ ಇತ್ಯಾದಿಗಳ ಜೀವನದಲ್ಲಿ ಕಂಡುಬರುವ ತತ್ವಗಳ ಉದಾಹರಣೆಗಳು ಮತ್ತು ಘಟನೆಗಳನ್ನು ಗಾಂಧೀಜಿ ಆಗಾಗ ಪ್ರಸ್ತಾಪಿಸುತ್ತಿದ್ದರು. ಇದರಿಂದಾಗಿ ಗಾಂಧೀಜಿಯ ವಿಚಾರಗಳನ್ನು ಜನರು ಸುಲಭವಾಗಿ ತಿಳಿದುಕೊಳ್ಳುತ್ತಿದ್ದರು ಮತ್ತು ಇದರಿಂದಾಗಿ ಗಾಂಧೀಜಿಗೆ ಜನರು ಹೃದಯವನ್ನೇ ಪ್ರವೇಶಿಸುವ ಅದ್ಭುತ ಶಕ್ತಿ ಲಭಿಸಿತು. ಚರ್ಮ ಸುಲಿಯುವಂತಹ ಛಡಿಯೇಟುಗಳನ್ನೀಯುವ ಬಿಳಿಯರ ದೌರ್ಜನ್ಯಗಳು, ಅಸ್ಪೃಶ್ಯತೆ, ಸ್ವಾರ್ಥ, ಕಾಂಗ್ರೆಸ್ ಪುಡಾರಿಗಳು ಬಿಳಿ ಉಡುಗೆಯ ಗೂಂಡಾಗಳಾಗಿ ಅಧಃಪತನ ಹೊಂದಿದ್ದು ಇತ್ಯಾದಿ ಅನಿಷ್ಟಗಳನ್ನು ಗಾಂಧೀಜಿ ತೀಕ್ಷ್ಣ ಶಬ್ದಗಳಲ್ಲಿ ಸ್ವಲ್ಪವೂ ಮುಚ್ಚುಮರೆ, ಅಳುಕಿಲ್ಲದೆ ಖಂಡಿಸಿದರು. ಅವುಗಳಲ್ಲನೇಕವು ಮುಂದೆ ನಡೆಯಲಿರುವ ಸಂಗತಿಗಳನ್ನೇ ಕುರಿತು ಹೇಳಿದಂತಿದೆ. "ಸತ್ಯದ ಆದರ್ಶ ಹೆಚ್ಚಿನ ಮಟ್ಟಿಗೆ ಒಂದು ಪಾಶ್ಚಾತ್ಯ ಕಲ್ಪನೆ" ಎಂದ ಲಾರ್ಡ್ ಕರ್ಜನ್‌ನ ಹೇಳಿಕೆಗೆ ಗಾಂಧೀಜಿ ಭಾರತದಲ್ಲಿ ನಡೆದು ಬಂದ ಸತ್ಯದ ಆರಾಧನೆಗೆ ಪುರಾವೆಯಾಗಿ ರಾಮಾಯಣ, ಮಹಾಭಾರತ, ವೇದ ಮೊದಲಾದವುಗಳಿಂದ

ಉದಾಹರಣೆಗಳನ್ನಿತ್ತರು. ಒಬ್ಬ ಆಂಗ್ಲ ಸಭ್ಯ ಗೃಹಸ್ಥನಾಗಿ, ಕರ್ಜನ್ ದೊರೆ ತನ್ನ ನಿರಾಧಾರವಾದ, ಆಕ್ರಮಣಕಾರೀ ಹೇಳಿಕೆಯನ್ನು ಹಿಂತೆಗೆದುಕೊಳ್ಳಬೇಕೆಂದು ಸವಾಲೆಸೆದರು. ಒಮ್ಮೆ ಗಾಂಧೀಜಿ ಪ್ರವಾದಿ ಮಹಮ್ಮದರಾಗಲೀ ಅವರ ಶಾಂತಿಯ ಸಂದೇಶವಾಗಲಿ ಈಗ ಎಲ್ಲಿ? ಇಂದು ಮಹಮದರೇನಾದರೂ ಭಾರತಕ್ಕೆ ಬಂದರೆ, ತನ್ನ ಹಿಂಬಾಲಕರೆಂದುಕೊಳ್ಳುವ ಅನೇಕರನ್ನು ತನ್ನವರೆಂದು ಖಂಡಿತ ಒಪ್ಪಿಕೊಳ್ಳಲಾರರು ಮತ್ತು ನನ್ನನ್ನು ಒಬ್ಬ ನಿಜವಾದ ಮುಸ್ಲಿಂ ಎಂದು ಒಪ್ಪಿಕೊಳ್ಳುವರು. ಹಾಗೆಯೇ ಏಸುಕ್ರಿಸ್ತನಾದರೂ ನನ್ನನ್ನು ಒಬ್ಬ ನಿಜವಾದ ಕ್ರೈಸ್ತ ಅನುಯಾಯಿ ಎಂದು ಮನ್ನಿಸುವರು. ಪಶ್ಚಿಮ ದೇಶಗಳಲ್ಲಿ ಇಂದು ಕ್ರೈಸ್ತಮತ ಇಲ್ಲ. ಇದ್ದಿದ್ದರೆ ಇಲ್ಲಿ ಯಾವುದೇ ಯುದ್ಧ ನಡೆಯಬಾರದು" ಎಂದರು.

"ಕವಿಯೊಬ್ಬ ತನ್ನದೇ ಸೃಷ್ಟಿಯಾದ ಒಂದು ಮಾಯಾಲೋಕದಲ್ಲಿ ಜೀವಿಸುತ್ತಾನೆ" ಎಂದು ಒಮ್ಮೆ ಗಾಂಧೀಜಿ ನುಡಿದರು. ತಾವು ಮಾತ್ರ ಇನ್ನೊಬ್ಬರಿಂದ ನಿರ್ಮಿಸಲ್ಪಟ್ಟ ಚರಕದ ದಾಸರಾದರು. ಆದರೆ ಅವರ ಅನೇಕ ಬರಹಗಳು, ಕೆಲವೇ ಸಾಲುಗಳ ಬರವಣಿಗೆಯಲ್ಲಿ ಗಾಂಧೀಜಿ ಎಂಥ ವೈವಿಧ್ಯಪೂರ್ಣ ಜೀವಂತ ಚಿತ್ರಣಗಳನ್ನು ಓದುಗರ ಮುಂದಿರಿಸಬಲ್ಲರೆನ್ನುವುದನ್ನು ಸ್ಪಷ್ಟಪಡಿಸುತ್ತವೆ:

"ಮೈಸೂರಿನ ಒಂದು ಪುರಾತನ ದೇವಾಲಯದಲ್ಲಿ ಶಿಲಾವಿಗ್ರಹದ ಕಲಾಕೃತಿಯೊಂದನ್ನು ನಾನು ನೋಡಿದೆ. ಜೀವಂತ ಕಲಾಕೃತಿಯದು. ಮನ್ಮಥನ ಬಾಧೆಯಿಂದ ಬಳಲುತ್ತಿರುವ, ಮಿತವಸ್ತ್ರಭೂಷಿತಳಾದ ಲಲನೆ ತನ್ನ ಸೀರೆಯ ಮಡಿಕೆಗಳಿಂದ ಚೇಳನ್ನು ಕೊಡಹಲು ಚಡಪಡಿಸುತ್ತಿರುವ ಚಿತ್ರ ಅದು. ಚೇಳಿನ ರೂಪದ ಮನ್ಮಥನಾದರೋ ಆಕೆಯ ಪಾದತಲದಲ್ಲೇ ಬಿದ್ದಿದ್ದಾನೆ. ಚೇಳಿನ ಕಡಿತದ ನೋವು ಆಕೆಯ ಇಡೀ ದೇಹದಲ್ಲಿ ವ್ಯಾಪಿಸಿದುದನ್ನು ಆ ಕಲಾಕೃತಿಯಲ್ಲಿ ನೋಡಬಹುದಾಗಿತ್ತು."

"ಒರಿಸ್ಸಾ ಮತ್ತು ಅಲ್ಲಿನ ಅಸ್ತಿಪಂಜರಗಳ ಬಗ್ಗೆ ನಿಮಗೆ ಗೊತ್ತೇ" ಚೆನ್ನಾಯಿತು. ಆ ಹಸಿದ ಬೆಂಡಾದ, ಅಸ್ತಿಪಂಜರಗಳ ಪವಿತ್ರ ನಾಡಿನಿಂದಲೇ ಎಲುಬು, ಕೊಂಬು ಮತ್ತು ಬೆಳ್ಳಿಯ ಕುಸುರಿ ಕೆಲಸದಲ್ಲಿ ಅದ್ಭುತಗಳನ್ನು ಮಾಡಿದವರು ಬಂದರು. ಜೀರ್ಣದೇಹದ ಮನುಷ್ಯನ ಆತ್ಮವೂ, ನಿರ್ಜೀವ ಕೊಂಬು ಮತ್ತು ಲೋಹಗಳಿಗೆ ಹೇಗೆ ಜೀವ ತುಂಬಬಲ್ಲದೆಂಬುದನ್ನು ಹೋಗಿ ನೋಡಿರಿ. ಒಬ್ಬ ಬಡ ಕುಂಬಾರನೂ ಆವೆ ಮಣ್ಣಿನಲ್ಲಿ ಅದ್ಭುತವನ್ನು ಸಾಧಿಸಿದ್ದಾನೆ ಅಲ್ಲಿ."

ಆ ತಾಣ ಒಂದು ನದೀ ದಡದಲ್ಲಿತ್ತು. ನದಿ ಮರಗಳು, ಕುರುಚಲು ಗಿಡಗಳಿಂದ ಆವೃತವಾದ ಪರಿಚಿತ ಬೆಟ್ಟಸಾಲುಗಳ ಮಧ್ಯೆ ಹರಿಯುತ್ತಿತ್ತು. ನದೀ ದಂಡೆ ಮರಳಿನಿಂದ ಕೂಡಿತ್ತು. ಆದರೆ ಕೆಸರಿರಲಿಲ್ಲ. ನದೀ ನೀರಿನ ಮೇಲೆಯೇ ವೇದಿಕೆಯನ್ನು ನಿರ್ಮಿಸಲಾಗಿತ್ತು. ವೇದಿಕೆಯ ಮುಂಭಾಗದ ರಸ್ತೆಯ ಎರಡೂ ಬದಿಗಳಲ್ಲಿ 12,000ಕ್ಕಿಂತಲೂ ಅಧಿಕ ಸಂಖ್ಯೆಯ ನರನಾರಿಯರ ಸಮೂಹ ಮೌನವಾಗಿ ಕುಳಿತಿತ್ತು."

"ಬೆಳಿಗ್ಗೆ ಬೇಗನೇ ನಾನು ಮಲಬಾರನ್ನು ಪ್ರವೇಶಿಸಿದೆ. ಪರಿಚಿತ ಸ್ಥಳಗಳ ಮೂಲಕ ನಾನು ಹಾದು ಹೋಗುತ್ತಿದ್ದಂತೆ ಹಿಂದಿನ ಭೇಟಿಯ ಸಂದರ್ಭದಲ್ಲಿ ನಾನು ನೋಡಿದ ಒಬ್ಬ ನಾಯಡಿಯ ಮುಖ ನನ್ನ ಕಣ್ಣೆದುರಿಗೆ ಬಂತು. ಅಸ್ಪೃಶ್ಯತೆಯ ಬಗ್ಗೆ ಚರ್ಚೆ ನಡೆಯುತ್ತಿರುವಾಗಲೇ ಚಿಟಾರನೆ ಕಿರುಚಿದ ಶಬ್ದ ಕೇಳಿ ಬಂತು. ನನ್ನೊಡನೆ ಮಾತನಾಡುತ್ತಿದ್ದವರು, "ನಿಮಗೊಬ್ಬ ಜೀವಂತ ನಾಯಡಿಯನ್ನು ನಾವು ತೋರಿಸಬಲ್ಲೆವು" ಎಂದರು ನಾಯಡಿ ಸಾರ್ವಜನಿಕ ರಸ್ತೆಯಲ್ಲಿ ತಿರುಗುವಂತಿರಲಿಲ್ಲ. ಮರೆಯಲ್ಲಿ ಕಳ್ಳ ಹೆಜ್ಜೆಯಲ್ಲಿ ನಾಯಡಿ ಗದ್ದೆಗಳ ನಡುವೆ ನಡೆದು ಹೋಗುತ್ತಿದ್ದ. ಅವನನ್ನು ನನ್ನ ಬಳಿಗೆ ಬಂದು ಮಾತನಾಡುವಂತೆ ನಾನು ಕೇಳಿದೆ. ನಡುಗುತ್ತಾ ನನ್ನ ಬಳಿಗೆ ಬಂದ. ಸಾರ್ವಜನಿಕ ರಸ್ತೆಯಲ್ಲಿ ನನ್ನಷ್ಟೇ ಹಕ್ಕು ಅವನಿಗೂ ಇದೆ ಎಂದೆ. ಅದಕ್ಕಾತ "ಹಾಗಾಗಲು ಸಾಧ್ಯವಿಲ್ಲ. ನಾನು ಸಾರ್ವಜನಿಕ ರಸ್ತೆಯಲ್ಲಿ ನಡೆಯುವುದು ಸಾಧ್ಯವಿಲ್ಲದ ಮಾತು" ಎಂದ. ನಿಮ್ಮೊಂದಿಗೆ ನಾನು ನಗುನಗುತ್ತಾ ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಾ ಮಾತನಾಡಬಹುದು. ಆದರೆ ಈ ಎಲ್ಲ ನಗು, ಹಾಸ್ಯಗಳ ಹಿಂದೆ. ಆ ನಾಯಡಿಯ ದುಃಖ ಮತ್ತು ಆ ದೃಶ್ಯ ನನ್ನ ಮಲಬಾರ್ ಯಾತ್ರೆಯುದ್ದಕ್ಕೂ ನನ್ನನ್ನು ಕಾಡುತ್ತಿರುವುದೆಂದು ನೀವು ತಿಳಿದಿರಬೇಕು.

ಗಾಂಧೀಜಿಯ ಯೋಚನೆಗಳು ಮತ್ತು ಭಾಷೆಯ ಸೌಂದರ್ಯ ನಮ್ಮ ಕಾಲದ ಕೆಲವರು ಮಹಾವ್ಯಕ್ತಿಗಳ ಮೇಲೆ ಗಾಢ ಪ್ರಭಾವವನ್ನು ಬೀರಿತು.

ದಕ್ಷಿಣ ಆಫ್ರಿಕಾದ ದಳಪತಿ

ದ. ಆಫ್ರಿಕಾ ಗಾಂಧೀಜಿಯನ್ನು ಒಬ್ಬ ಮನುಷ್ಯನನ್ನಾಗಿ ಮಾಡಿತು. ತಮ್ಮ 23ನೇ ವಯಸ್ಸಿನಲ್ಲಿ ಅವರು ದರ್ಬಾನ್ ತಲುಪಿದರು. ಆತನಕ ಅವರೊಬ್ಬ ಲಜ್ಜಾಶೀಲ, ಅಂಜುಕುಳಿ ಯುವಕನಾಗಿದ್ದರು. ಭಾರತೀಯರು ಮತ್ತಿತರ ವರ್ಣೀಯ ಜನಾಂಗದವರನ್ನು ಬಿಳಿಯರು ಆದಷ್ಟು ನಿಕೃಷ್ಟವಾಗಿ ಕಾಣುತ್ತಾರೆನ್ನುವುದನ್ನು ದ. ಆಫ್ರಿಕಾದ ಮಣ್ಣಿನಲ್ಲಿ ಕಾಲಿರಿಸಿದ ಕ್ಷಣದಿಂದಲೇ ಗಾಂಧೀಜಿ ಅರಿತುಕೊಂಡರು. ಬಿಳಿಯರು ಭಾರತೀಯರನ್ನು "ಕೂಲಿ"ಗಳೆಂದೇ ಕರೆಯುತ್ತಿದ್ದರು.

ದ. ಆಫ್ರಿಕಾ ತಲುಪಿದ ಮೂರನೇ ದಿನ ಗಾಂಧೀಜಿ ದರ್ಬಾನ್ ನ್ಯಾಯಾಲಯಕ್ಕೆ ಹೋದರು. ನ್ಯಾಯಾಧೀಶರಿಗೆ ಗೌರವ ಸೂಚಿಸಲು ತಲೆಯ ಮೇಲಿನ ಮುಂಡಾಸು ತೆಗೆಯಲು ಅಪ್ಪಣೆಯಾಯಿತು. ಗಾಂಧೀಜಿಗೆ ಅವಮಾನವಾಯಿತು. ಮುಂಡಾಸು ತೆಗೆಯಲು ನಿರಾಕರಿಸಿ, ನ್ಯಾಯಾಲಯದಿಂದ ಹೊರನಡೆದರು.

ಒಂದು ವಾರದ ನಂತರ ರೈಲಿನಲ್ಲಿ ಅವರು ಇನ್ನೊಂದು ಪಟ್ಟಣಕ್ಕೆ ಹೋಗಬೇಕಾಯಿತು. ಪ್ರಥಮ ದರ್ಜೆಯ ಟಿಕೇಟು ಪಡೆದು ಪ್ರಥಮ ದರ್ಜೆಯ ಬೋಗಿಯಲ್ಲಿ ಗಾಂಧೀಜಿ ಕುಳಿತರು. ಮುಂದಿನ ನಿಲ್ದಾಣದಲ್ಲಿ ಟಿಕೇಟು ಪರೀಕ್ಷಕ ಗಾಂಧೀಜಿ ಅವರನ್ನು ಮೂರನೇ ದರ್ಜೆಗೆ ಹೋಗುವಂತೆ ಆಜ್ಞಾಪಿಸಿದ. ಗಾಂಧೀಜಿ ಪ್ರಥಮ ದರ್ಜೆಯಲ್ಲೇ ಪ್ರಯಾಣಿಸುವ ತಮ್ಮ ಹಕ್ಕನ್ನು ಸಾಬೀತುಪಡಿಸಲು ಯತ್ನಿಸುತ್ತಿರುವಾಗಲೇ, ಅವರನ್ನು ರೈಲಿನಿಂದಲೇ ಎಳೆದು ಹೊರಗೆ ಹಾಕಲಾಯಿತು. ಈ ಅವಮಾನದಿಂದ ಗಾಂಧೀಜಿ ನಡುಗಿದರು. ನಿಲ್ದಾಣದ ಕತ್ತಲೆಯಾದ ಕಾಯುವ ಕೋಣೆಯಲ್ಲಿ ಕುಳಿತ ಗಾಂಧೀಜಿ ಯೋಚನೆಯಲ್ಲಿ ಮುಳುಗಿದರು. ಭಾರತೀಯರನ್ನು ಅವಹೇಳ ಮಾಡುತ್ತಿರುವ ಈ ದೇಶವನ್ನೇ ತಾನು ತೊರೆದು ಹೋಗಬೇಕೆ? ಅಥವಾ ತನ್ನ ಹಕ್ಕುಗಳಿಗಾಗಿ ಹೋರಾಡಲೆ? ಅವರ ದೇಶದ ಗೌರವದ ಪ್ರಶ್ನೆಯಾಗಿತ್ತದು. ಅಲ್ಲೇ ಇದ್ದು ಹೋರಾಡಲು ಗಾಂಧೀಜಿ ನಿರ್ಧರಿಸಿದರು. ಆ ನಿಗೂಢ ರಾತ್ರಿ ಗಾಂಧೀಜಿಯ ಮುಂದಿನ ಕಾರ್ಯದ ದಿಕ್ಕನ್ನು ನಿರ್ಧರಿಸಿಬಿಟ್ಟಿತು. ತನ್ನ ಪ್ರಯಾಣದ ಮುಂದಿನ ಭಾಗವನ್ನು ಗಾಂಧೀಜಿ ಕುದುರೆ ಗಾಡಿಯೊಂದರಲ್ಲಿ ಮಾಡಬೇಕಾಗಿತ್ತು. ಗಾಡಿಯೊಳಗಡೆ ಅವರಿಗೆ ಸ್ಥಳ ದೊರೆಯಲಿಲ್ಲ. ಗಾಡಿ ಹೊಡೆಯುವ ಕೋಚ್‌ಮ್ಯಾನ್ ಪಕ್ಕದಲ್ಲೇ

ಕುಳಿತರು. ಸ್ವಲ್ಪ ಸಮಯದಲ್ಲೇ ಅಲ್ಲಿಂದಲೂ ಏಳಲು ಅಪ್ಪಣೆಯಾಯಿತು. ಗಾಡಿಯ ಮೆಟ್ಟಿಲಿನ ಮೇಲೆ ಹಾಸಿದ ಗೋಣಿಚೀಲದ ಮೇಲೆ ಕುಳಿತುಕೊಳ್ಳುವಂತೆ ಹೇಳಲಾಯಿತು. ಗಾಂಧೀಜಿ ಸ್ಥಳ ಬಿಟ್ಟು ಏಳಲು ನಿರಾಕರಿಸಿದರು. ಪರಿಣಾಮವಾಗಿ ಅವರನ್ನು ಯದ್ವಾತದ್ವಾ ಹೊಡೆಯಲಾಯಿತು. ಪಟ್ಟಣಕ್ಕೆ ತಲುಪಿದ ಬಳಿಕ ಹೋಟೆಲ್‌ವೊಂದರಲ್ಲಿ ರೂಮನ್ನು ಬಾಡಿಗೆಗೆ ಕೇಳಿದಾಗಲೂ ಗಾಂಧೀಜಿಗೆ ನಿರಾಕರಣೆಯ ಉತ್ತರವೇ ದೊರೆಯಿತು. ಒಬ್ಬ ಭಾರತೀಯ ಮಿತ್ರನ ಅಂಗಡಿಯಲ್ಲೇ ಗಾಂಧೀಜಿ ಆ ರಾತ್ರಿಯನ್ನು ಕಳೆದರು. ಗಾಂಧೀಜಿಯ ಅನುಭವಗಳನ್ನು ಕೇಳಿ ಆ ಮಿತ್ರ ಸಹಾನುಭೂತಿ ಸೂಚಿಸಿದರಾದರೂ ಅದರಲ್ಲೇನೂ ವಿಶೇಷವೆನಿಸಲಿಲ್ಲ ಅವರಿಗೆ. ಆ ದೇಶದಲ್ಲಿ ಅಂಥ ಘಟನೆಗಳು ಪ್ರತಿನಿತ್ಯವೆಂಬಂತೆ ನಡೆಯುತ್ತಿದ್ದವು ಭಾರತೀಯರೂ ಅದಕ್ಕೆ ಒಗ್ಗಿಹೋಗಿದ್ದರು. ಅವರುಗಳು ದ. ಆಫ್ರಿಕಾಕ್ಕೆ ಹೋಗಿದ್ದುದು ಹಣ ಸಂಪಾದನೆಗೆ. ಅದನ್ನು ಆತ್ಮಗೌರವದ ಬೆಲೆ ತೆತ್ತಾದರೂ ಅವರು ಮಾಡುತ್ತಿದ್ದರು. ಅವರ ದಾಸ್ಯಮನೋಭಾವವನ್ನು ಕಂಡು ಗಾಂಧೀಜಿ ದಿಗ್ಭ್ರಾಂತರಾದರು. ತಮಗಾದ ಅನ್ಯಾಯಗಳನ್ನು ಪ್ರತಿಭಟಿಸಿ, ವೃತ್ತಪತ್ರಿಕೆಗಳಿಗೆ, ರೈಲ್ವೆ ಮತ್ತು ಕೋಚ್ ಸರ್ವಿಸ್ ಅಧಿಕಾರಿಗಳಿಗೆ ದೂರಿತ್ತರು.

ಭಾರತೀಯರಿಗೆ, ರಸ್ತೆ ಬದಿಯ ಕಾಲ್ದಾರಿಯಲ್ಲಿ ನಡೆಯಲು, ರಾತ್ರಿ 9 ಗಂಟೆಯ ಮೇಲೆ ಅಡ್ಡಾಡಲು ಅಥವಾ ಟ್ರಾಮ್ ಗಾಡಿಗಳಲ್ಲಿ ಮೊದಲ ಸಾಲಿನಲ್ಲಿ ಪ್ರಯಾಣಿಸಲು ಅನುಮತಿ ಇಲ್ಲವೆಂದು ಸ್ವಲ್ಪ ಸಮಯದಲ್ಲೇ ಗಾಂಧೀಜಿಗೆ ತಿಳಿದುಬಂತು. ಭಾರತೀಯರು ವಾಸಿಸಲೆಂದೇ ಪ್ರತ್ಯೇಕ "ಕೂಲಿ" ಪ್ರದೇಶಗಳೇ ಇದ್ದವು. ಗಾಂಧೀಜಿಯನ್ನೆ ಒಮ್ಮೆ ಒಬ್ಬ ಕಾವಲು ಪೊಲೀಸ್ ಕಾಲ್ದಾರಿಯಿಂದ ಒದ್ದು ಬೀಳಿಸಿ "ಕೂಲಿ ಬ್ಯಾರಿಸ್ಟರ್" ಎಂದು ನಾಮಕರಣ ಮಾಡಿದ. ಗಾಂಧೀಜಿಯವರು ಕೆಲವರು ಆಂಗ್ಲ ಸ್ನೇಹಿತರು ಅವರಿಗೆ ವಿಶೇಷ ಸವಲತ್ತುಗಳನ್ನು ಒದಗಿಸಲು ಬಯಸಿದರು. ಆದರೆ ಅಂತಹ ವಿಶೇಷ ಸವಲತ್ತುಗಳನ್ನು ಪಡೆಯಲು ಗಾಂಧೀಜಿ ವಿನಯಪೂರ್ವಕವಾಗಿ ನಿರಾಕರಿಸಿದರು. ಕೆಲವು ವೈಯಕ್ತಿಕ ಸವಲತ್ತುಗಳನ್ನು ಪಡೆಯುವಲ್ಲಿ ಅವರಿಗೆ ಯಾವ ಆಸಕ್ತಿಯೂ ಇರಲಿಲ್ಲ.

ವರ್ಣಭೇದದ ಇಡೀ ವ್ಯವಸ್ಥೆಯನ್ನೇ ತೊಡೆದುಹಾಕಲು ಗಾಂಧೀಜಿ ಬಯಸಿದ್ದರು. ತನಗೆ ಅವಮಾನ ಆಯಿತೆಂದು ಗಾಂಧೀಜಿ ನೊಂದುಕೊಳ್ಳಲಿಲ್ಲ. ತನಗೆ ಅನ್ಯಾಯವೆಸಗಿದವರಿಗೆ ಶಿಕ್ಷೆಯಾಗುವಂತೆಯೂ ಪ್ರಯತ್ನಿಸಲಿಲ್ಲ.

ಭಾರತೀಯ ವಲಸೆಗಾರರು ಮತ್ತು ಆ ಪಟ್ಟಣದಲ್ಲಿ ನೆಲೆಸಿದ ಪ್ರತಿ ಭಾರತೀಯನೂ ಅನುಭವಿಸುತ್ತಿರುವ ಕಷ್ಟಕಾರ್ಪಣ್ಯಗಳನ್ನು ಕುರಿತು ಗಾಂಧೀಜಿ ಮಾಹಿತಿ ಸಂಗ್ರಹಿಸಿದರು. ಒಂದೇ ವಾರದೊಳಗೆ, ಬಹಿರಂಗ ಸಭೆಯೊಂದನ್ನು ಕರೆದು, ಭಾರತೀಯರು ತಮ್ಮ ಜೀವನ ವಿಧಾನವನ್ನು ಬದಲಾಯಿಸಿ, ಪ್ರಾಮಾಣಿಕರಾಗಿರಲು ಸ್ವಚ್ಛ ಅಭ್ಯಾಸಗಳನ್ನು ಹೊಂದಲು ಹಾಗೂ ಜಾತಿ ಕೋಮು ಮತ್ತು ಪ್ರಾಂತೀಯತೆಗಳ ವ್ಯತ್ಯಾಸವನ್ನು ಮರೆತುಬಿಡಲು ಹೇಳಿದರು. ಬಿಳಿಯರನ್ನು ನಿಂದಿಸುವ ಒಂದೇ ಒಂದು ಮಾತೂ ಅವರ ಬಾಯಿಂದ ಬರಲಿಲ್ಲ. ತಮ್ಮ ನಡತೆ ಸರಿಯಾದಾಗಲೇ ತಮಗೆ ಮಾನವೀಯ ಹಕ್ಕುಗಳನ್ನು ಬೇಡಲು ಸಾಧ್ಯ ಎಂದು ತನ್ನ ದೇಶಬಾಂಧವರು ತಿಳಿದುಕೊಳ್ಳಬೇಕೆಂದು ಗಾಂಧೀಜಿ ಬಯಸಿದರು. ಅವರೊಡನೆ ಸಂಪರ್ಕವಿರಿಸಿಕೊಂಡು ಗಾಂಧೀಜಿ ಅವರ ದುಃಖದ ಕತೆಗಳನ್ನು ಸಹನೆಯಿಂದ ಕೇಳಿದರು.

ಒಂದು ವರ್ಷದ ಮೇಲೆ ಭಾರತೀಯರಿಗಿದ್ದ ಮತದಾನದ ಏಕೈಕ ಸಣ್ಣ ಹಕ್ಕನ್ನೂ ಕಸಿದುಕೊಳ್ಳುವ ಮಸೂದೆಯನ್ನು ತರಲಾಯಿತು. ಗಾಂಧೀಜಿ ಅದನ್ನು ವಿರೋಧಿಸಲು ಸಲಹೆ ನೀಡಿದರು. ಸ್ವಯಂಸೇವಕರನ್ನು ಸಂಘಟಿಸಿ, ಕ್ರಿಶ್ಚಿಯನ್ ಯುವಕರು ತಮ್ಮೆಲ್ಲರ ಸಾಮಾನ್ಯ ಕ್ಷೇಮಾಭಿವೃದ್ಧಿಗಾಗಿ ಕೆಲಸ ಮಾಡುವಂತೆ ಮಾಡಿದರು. ಹಲವರು ಅವರು ತಯಾರಿಸಿದ ಪ್ರತಿಭಟನಾ ಪತ್ರದ ಕರಡಿನ ನಕಲು ತೆಗೆದರು. ಕೆಲವರು ಹಣ ದೇಣಿಗೆ ನೀಡಿದರು. ಇತರರು ಈ ಹೊಸ ಎಚ್ಚರಿಕೆಯ ಸಂದೇಶವನ್ನು ದೂರದೂರದಲ್ಲಿ ವಾಸಿಸುವ ನೂರಾರು ಮಂದಿಗೆ ಮುಟ್ಟಿಸಿದರು.

ತಿಂಗಳ ಅವಧಿಯಲ್ಲಿ ನಿಧಿ ಸಂಗ್ರಹಿಸಲಾಯಿತು, ಮತ್ತು 10,000 ಪ್ರತಿಭಟನಾ ಸಹಿಗಳನ್ನು ಸಂಗ್ರಹಿಸಲಾಯಿತು. ಪ್ರತಿಭಟನಾ ಪತ್ರದ ಪ್ರತಿಗಳನ್ನು ನೇಟಾಲ್ ಪ್ರಧಾನಿ ಮತ್ತು ಗವರ್ನರರು ಭಾರತದ ವೈಸರಾಯ್ ಮತ್ತು ನೇಟಾಲ್ ಭಾರತ ಮತ್ತು ಇಂಗ್ಲೆಂಡ್‌ಗಳ ವೃತ್ತ ಪತ್ರಿಕೆಗಳಿಗೆ ಕಳುಹಿಸಿಕೊಡಲಾಯಿತು. ದಕ್ಷಿಣ ಆಫ್ರಿಕಾದ ಭಾರತೀಯರಿಗೆ ಮಾಡಲಾದ ಅನ್ಯಾಯಕ್ಕೆ ವಿಸ್ತೃತ ಪ್ರಚಾರ ದೊರೆಯಿತು. ಮಸೂದೆ ಮಂಜೂರಾಯಿತು. ಭಾರತೀಯರಿಗೆ ಯಾವ ಹಕ್ಕುಗಳೂ ದೊರೆಯಲಿಲ್ಲ. ಆದರೆ ಅವರು ತಮ್ಮ ದೈನ್ಯಭಾವ ಮತ್ತು ಅಸಡ್ಡೆಯ ಪ್ರವೃತ್ತಿಗಳನ್ನು ತೊರೆಯಲು ಕಲಿತರು. ಅನ್ಯಾಯದ ಕಾನೂನುಗಳನ್ನು ಮಾಡುವ ಪ್ರಭುತ್ವದ ಅಧಿಕಾರಕ್ಕೆ ಸವಾಲೆಸೆಯಲು ಕಲಿತರು.

ಶೀಘ್ರದಲ್ಲೇ ಗಾಂಧೀಜಿ ಭಾರತೀಯರಿಗಾಗಿ ನೇಟಾಲ್ ಇಂಡಿಯನ್ ಕಾಂಗ್ರೆಸ್ ಸಂಸ್ಥೆಯನ್ನು ಹುಟ್ಟು ಹಾಕಿದರು. ಅದರ ಕಾರ್ಯ ಸುಗಮವಾಗಿ ಸಾಗಲು ಸೂಕ್ತ ವಿಧಿ ನಿಬಂಧನೆ ನಿಷೇಧಗಳನ್ನು ವ್ಯವಸ್ಥೆ ಮಾಡಿದರು. ಸದಸ್ಯರಿಂದ ತಾವೇ ದೇಣಿಗೆ ಸಂಗ್ರಹಿಸಿದರು. ದಕ್ಷಿಣ ಆಫ್ರಿಕಾದಲ್ಲಿದ್ದ 20 ವರ್ಷಗಳ ಅವಧಿಯಲ್ಲಿ ಗಾಂಧೀಜಿ ಅಂತಹ ಅನೇಕ ಕರಾಳ ಶಾಸನಗಳನ್ನು ವಿರೋಧಿಸುವಲ್ಲಿ ಜನರ ಮುಂದಾಳಾಗಿ ನಿಂತರು. ಒಂದು ಕಾನೂನು ಅನ್ಯಾಯವಾಗಿ ಪ್ರತಿ ವಯಸ್ಕ ಭಾರತೀಯನಿಂದ ವರ್ಷವೊಂದಕ್ಕೆ ರೂ. 40ರಂತೆ ಕೀಳುತ್ತಿತ್ತು. ಇನ್ನೊಂದು, ಭಾರತೀಯರ ವಿವಾಹವನ್ನು ಮಾನ್ಯ ಮಾಡುತ್ತಿರಲಿಲ್ಲ. ಮೂರನೆಯ ಕಾನೂನು ಪ್ರತಿ ಭಾರತೀಯನೂ ತನ್ನ ಹತ್ತೂ ಬೆರಳುಗಳ ಪಡಿಯಚ್ಚನ್ನು ಸಾಮಾನ್ಯವಾಗಿ ಅಪರಾಧಿಗಳಿಂದ ತೆಗೆಯಲಾಗುತ್ತದೆ. ಪ್ರತಿಭಟನೆಯ ರೂಪದಲ್ಲಿ ಗಾಂಧೀಜಿ ನೂರಾರು ಪತ್ರಗಳನ್ನು, ವಿನಂತಿಗಳನ್ನು ಅಧಿಕಾರ ಸ್ಥಾನದಲ್ಲಿರುವವರಿಗೆ ಬರೆದರು. ಪ್ರಮುಖ ಅಧಿಕಾರಿಗಳನ್ನು ತಾವೇ ಖುದ್ದಾಗಿ ಭೇಟಿಮಾಡಿದರು. ಪತ್ರಿಕೆಗಳು ಮತ್ತು ವೇದಿಕೆಗಳ ಮೂಲಕ ನಡೆಸಿದ ಹೋರಾಟ ವಿಫಲಗೊಂಡಾಗ ಗಾಂಧೀಜಿ ಸತ್ಯಾಗ್ರಹದ ನೂತನ ಅಸ್ತ್ರದ ಆವಿಷ್ಕಾರ ಮಾಡಿದರು. ಅಹಿಂಸೆಯಿಂದ ದುಷ್ಟಶಕ್ತಿಯನ್ನು ಎದುರಿಸುವುದೇ ಈ ಅಸ್ತ್ರವಾಗಿತ್ತು. ಗಾಂಧೀಜಿ ಬೆರಳುಗಳ ಪಡೆಯಚ್ಚುಗಳನ್ನು ನೋಂದಾಯಿಸಿಕೊಳ್ಳಬೇಕೆನ್ನುವ ಕಾನೂನನ್ನು ಬಹಿಷ್ಕರಿಸಲು ಭಾರತೀಯರಿಗೆ ಹೇಳಿದರು. ದೀರ್ಘಕಾಲದ ಅಹಿಂಸಾತ್ಮಕ ಹೋರಾಟಕ್ಕೆ ಅಣಿಯಾಗಲು, ಸೆರೆಮನೆಗೆ ತೆರಳಲು, ಅಗತ್ಯ ಬಿದ್ದರೆ ಪ್ರಾಣವನ್ನೇ ಬಲಿಕೊಡಲು, ಆದರೆ ಎಂದೆಂದೂ ದುಷ್ಟ ಕಾನೂನಿಗೆ ತಲೆಬಾಗದಿರಲು ಹೇಳಿದರು. "ನೀವು ಮರಣಭಯದಿಂದ ಮುಕ್ತರಾಗಬೇಡಿ ಅನ್ಯಾಯಗಳನ್ನು ಹೋಗಲಾಡಿಸಲು, ಸ್ವಯಂಪ್ರೇರಣೆಯಿಂದ ಕಷ್ಟಗಳನ್ನು ಸಹಿಸುವುದೇ ಅತ್ಯುತ್ತಮ ಪರಿಹಾರ" ಎಂದರು. ಕೇವಲ ಗಾಂಧೀಯನ್ನೇ ನೆಚ್ಚಿಕೊಂಡರೆ ಭಾರತೀಯರು ಗುರಿ ಮುಟ್ಟುವುದು ಸಾಧ್ಯವಿಲ್ಲ. ತಾನು ಸೂಚಿಸಿದ ಕಾರ್ಯಕ್ರಮಗಳನ್ನು ಸರಿಯಾಗಿ ಅರಿತುಕೊಂಡು ಅದರಂತೆ ನಡೆದರೆ ಮಾತ್ರ ಸಾಧ್ಯ ಎಂದು ಎಚ್ಚರಿಸಿದರು. ಗಾಂಧೀಜಿಯ ಪಡೆ ಹೋರಾಟವನ್ನು ಸಂಪೂರ್ಣ ಅಹಿಂಸಾತ್ಮಕವಾಗಿ ನಡೆಸುವ ಪಣತೊಟ್ಟಿತು. ರಸ್ತೆ ಬದಿಯ ನಿರಕ್ಷರಕುಕ್ಷಿ ಜನರು, ಕರಕುಶಲ ಕೆಲಸಗಾರರು, ಚಿಕ್ಕಪುಟ್ಟ ಅಂಗಡಿಯವರು, ಗಣಿ ಕೆಲಸಗಾರರು, ವ್ಯಾಪಾರಿಗಳು ಮತ್ತು ಮಹಿಳೆಯರು ಗಾಂಧೀಜಿಯ ಸತ್ಯಾಗ್ರಹಿಗಳ ಸೈನ್ಯಕ್ಕೆ ಭರ್ತಿಯಾದರು. ಗಾಂಧೀಜಿ, ನಿಶ್ಶಸ್ತ್ರ, ಶಾಂತ, ಶಿಸ್ತುಬದ್ಧ 5000 ಸತ್ಯಾಗ್ರಹಿಗಳ ಸೈನ್ಯವನ್ನು ಕಾಲ್ನಡಿಗೆಯಲ್ಲಿ

ಮುನ್ನಡೆಸಿದರು. ಈ ಪಡೆಯೊಂದಿಗೆ ಗಾಂಧೀಜಿಯೂ ನಡೆದರು. ಆಕಾಶವೇ ಛಾವಣಿಯಾಗಿ ಅವರೊಂದಿಗೆ ಮಲಗಿದರು. ನೀರು ನೀರಾದ ಬೇಳೆಸಾರು ಮತ್ತು ಅರೆಬೆಂದ ಅನ್ನವನ್ನು ಅವರಂತೆಯೇ ಉಂಡರು. ಕಾಯಿಲೆ ಬಿದ್ದವರನ್ನು ಉಪಚರಿಸಿದರು. ಬಳಲಿ ಬೆಂಡಾದವರನ್ನು ಹುರಿದುಂಬಿಸಿದರು. ಅವರೆಲ್ಲರಿಗೂ ಸ್ವತಃ ಅಡುಗೆ ಮಾಡಿ ಬಡಿಸಿದರು. ಅವರಲ್ಲಿ ಸುಮಾರು 2500 ಮಂದಿಗೆ ಕಠಿಣ ಪರಿಶ್ರಮದ ಶಿಕ್ಷೆಯಾಯಿತು. 1000 ಜನ ತಮ್ಮದೆಲ್ಲವನ್ನು ಕಳೆದುಕೊಂಡರು. ಐಷಾರಾಮದ ಬದುಕಿಗೆ ಒಗ್ಗಿಹೋಗಿದ್ದ ಅನೇಕ ವರ್ತಕರು ಗಾಂಧೀಜಿಯ ಮುಂದಾಳುತನವನ್ನು ಸ್ವೀಕರಿಸಿ, ಸೆರೆಮನೆಯಲ್ಲಿ ಕಲ್ಲುಗಳನ್ನು ಒಡೆಯುವ ಪಾಯಿಖಾನೆಗಳನ್ನು ತೊಳೆಯುವ ಕೆಲಸ ಮಾಡಿದರು. ಕಸ್ತೂರ್‌ಬಾ ಅವರೂ ಸತ್ಯಾಗ್ರಹ ಸೈನ್ಯವನ್ನು ಸೇರಿ ಸೆರೆವಾಸ ಅನುಭವಿಸಿದರು.

ಇಂಗ್ಲೆಂಡಿನಲ್ಲಿ ಗಾಂಧೀಜಿಯ ಚಳುವಳಿಗೆ ಸಹಾನುಭೂತಿ ಪ್ರಕಟವಾಯಿತು. ಭಾರತದಲ್ಲಿ ಕಾಂಗ್ರೆಸ್ ಅಧಿವೇಶನಗಳಲ್ಲಿ ದಕ್ಷಿಣ ಆಫ್ರಿಕಾದ ಸಮಸ್ಯೆ ಚರ್ಚಿಸಲ್ಪಟ್ಟಿತು. ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದ ಇಂಗ್ಲಿಷ್ ಗೃಹಸ್ಥ ಸರ್ ವೆಡರ್‌ಬರ್ನ್ "ದಕ್ಷಿಣ ಆಫ್ರಿಕಾದ ಇತ್ತೀಚಿನ ಸುದ್ದಿಯಿಂದ, ಹಿಂದೂಗಳು ಮತ್ತು ಮುಸ್ಲಿಮರು ಒಟ್ಟಾರೆ ಭಾರತಕ್ಕೆ ಎಂತಹ ಸೇವೆ ಸಲ್ಲಿಸಬಹುದೆಂಬದಕ್ಕೆ ಒಳ್ಳೆಯ ಒಂದು ಉದಾಹರಣೆ ದೊರೆತಿದೆ. ಗಾಂಧೀಜಿಯ ಅದ್ಭುತ ಸೇನಾಧಿಪತ್ಯದಲ್ಲಿ ತೆಗೆದುಕೊಂಡ ನಿರ್ಧಾರಾತ್ಮಕ ನಿಲುಮೆಗಾಗಿ ಅಲ್ಲಿನ ಭಾರತೀಯರಿಗೆ ನನ್ನ ಧನ್ಯವಾದಗಳು" ಎಂದರು. ಆ ಚಾರಿತ್ರಿಕ ದಂಡಯಾತ್ರೆ ಸಾಗುತ್ತಿದ್ದಾಗ ದಿನಕ್ಕೆ ರೂ. 3,200 ವೆಚ್ಚವಾಗುತ್ತಿತ್ತು. ಈ ಖರ್ಚಿಗಾಗಿ ಭಾರತದಲ್ಲೂ ನೆರವನ್ನು ಯಾಚಿಸಲಾಯಿತು. ಮಹಿಳೆಯರು ತಮ್ಮ ಆಭರಣಗಳನ್ನು ಕಳಚಿಕೊಟ್ಟರು. ರಾಜರು ಶ್ರೀಮಂತ ವರ್ತಕರು ಸಾವಿರಾರು ರೂ.ಗಳನ್ನು ದಾನವಾಗಿತ್ತರು. ಟಾಗೋರರೂ ನಿಧಿ ಸಂಗ್ರಹಿಸಿ ಕಳುಹಿಸಿದರು. ಕೊನೆಗೆ ದೀರ್ಘಕಾಲದ ಭಾರತೀಯರ ಹೋರಾಟ, ಅವರಿಗೆ ಅನುಕೂಲಕರವಾದ ಪಂಚಾಯಿತಿಯಲ್ಲಿ ಪರ್ಯವಸಾನಗೊಂಡಿತು. ತಮ್ಮ ಆತ್ಮಗೌರವಕ್ಕೆ ಕುಂದುಬಾರದಿದ್ದರೆ ಗಾಂಧೀಜಿ ಯಾವಾಗಲೂ ರಾಜಿಗೆ ಸಿದ್ಧವಾಗಿಯೇ ಇದ್ದರು.

ಭಾರತದಲ್ಲಿ ಬಹಳ ಮಂದಿ ನಾಯಕರುಗಳಿದ್ದರು. ಆದರೆ ಗಾಂಧೀಜಿ ಭಾರತಕ್ಕೆ ಮರಳಿದಾಗ, ದೌರ್ಜನ್ಯ ಕಿರುಕುಳಗಳಿಗೆ ತುತ್ತಾದ ರೈತರು ಮತ್ತು ಶ್ರಮ ಜೀವಿಗಳು ಗಾಂಧೀಜಿಯ ನೆರವನ್ನೇ ಕೋರಿದರು. ಅವರ ಪ್ರಯತ್ನಗಳಿಂದಾಗಿ

ಶತಮಾನಗಳಿಂದ ಬಡಜನರನ್ನು ಕಾಡಿದ್ದ ಚಂಪಾರಣ್ಯದ ನೀಲಿ ತೋಟಗಾರಿಕೆ ಪದ್ಧತಿ ಅಂತ್ಯಗೊಂಡಿತು. ಕೆಲಸಗಾರರನ್ನು ಗುತ್ತಿಗೆಗೆ ಪಡೆಯುವ ಕ್ರಮವನ್ನು ಬಿಟ್ಟುಕೊಡಲಾಯಿತು. ಸ್ಥಳೀಯ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುವಂತೆ ಗಾಂಧೀಜಿ ಜನರನ್ನು ಪ್ರೋತ್ಸಾಹಿಸುತ್ತಿದ್ದರು. ಗಾಂಧೀಜಿ ನಡೆಸಿದ ಹೋರಾಟಗಳು ಸಾಕಷ್ಟು ಪ್ರಚಾರ ಪಡೆದು ಸಮಸ್ತ ಭಾರತದ ಗಮನವನ್ನೇ ಸೆಳೆದವು.

ತಾವು ದೇಶದಲ್ಲಿ ಸಾಮೂಹಿಕ ಚಳುವಳಿಗಳನ್ನು ಹೂಡಿದಾಗಲೆಲ್ಲ, ತಮ್ಮ ಎಂದಿನ ತಂತ್ರಗಳನ್ನೇ ಬಳಸಿದರು. ಚಂಪಾರಣ್ಯ, ಖೇಡಾ ಮತ್ತು ಬಾರ್ಡೋಲಿಗಳ ರೈತರನ್ನು ಮುನ್ನಡೆಸಿದುದಲ್ಲದೆ, ಭಾರತದ ತನ್ನ 30 ವರ್ಷಗಳ ಸೇನಾಧಿಪತ್ಯದ ಅವಧಿಯಲ್ಲಿ ಗಾಂಧೀಜಿ ನಾಲ್ಕು ಸಾರ್ವತ್ರಿಕ ಹೋರಾಟಗಳನ್ನು ಸಂಘಟಿಸಿದರು. ಗಾಂಧೀಜಿ ಭಾರತದಾದ್ಯಂತ ಸಂಚರಿಸಿದರು. ತಮಗೆದುರಾದ ಸಮಸ್ಯೆಗಳ ಸೂಕ್ತ ವಿವರಗಳನ್ನು ಅಧ್ಯಯನ ಮಾಡುತ್ತಿದ್ದರು.

ಸಾವಿರಾರು ರೈತರನ್ನು ಭೇಟಿಯಾಗಿ ಚರ್ಚಿಸುತ್ತಿದ್ದರು. ಹೋರಾಟದಲ್ಲಿ ತೊಡಗಿದ ಜನರಿಂದ ವಿವರಗಳನ್ನು ಪಡೆಯಲು ದಿನಕ್ಕೆ 18ರಿಂದ 20 ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದರು. ಸಾವಿರಾರು ಬಹಿರಂಗ ಸಭೆಗಳಲ್ಲಿ ಮಾತಾಡಿದರು. ಶಿಸ್ತು ವಿಧಿ, ನಿಷೇಧಗಳನ್ನು ಜನತೆಗೆ ವಿವರಿಸಿದರು. ಅಹಿಂಸಾ ತತ್ತ್ವವನ್ನು ಸಮರ್ಥಿಸುತ್ತಾ "ದೇಶದ ಮುಂದಿರುವ ಇನ್ನೊಂದು ಮಾರ್ಗವೆಂದರೆ, ಕತ್ತಿಯನ್ನೆತ್ತುವುದು. ಅದು ಸಾಧ್ಯವಾಗಿದ್ದರೆ ಭಾರತ ಅಹಿಂಸೆಯ ಸಂದೇಶಕ್ಕೆ ಕಿವಿಗೊಡುತ್ತಿರಲಿಲ್ಲ. ಭಾಷಣ ಮತ್ತು ಮೆರವಣಿಗೆಗಳಿಂದ ನೀವು ಸ್ವರಾಜ್ಯ ಪಡೆಯಲಾರಿರಿ. ಕೆಲಸ ಮಾಡುವ ಸಂಕಲ್ಪದ ಕೊರತೆಯಾಗಬಾರದು. ಹೋರಾಟದಲ್ಲಿ ಪಲಾಯನ ಮಾಡದ ಧೀರ ಯೋಧರು ನಾವಾಗಬೇಕು. ನಿಮ್ಮ ಜೀವಗಳನ್ನೇ ತ್ಯಾಗ ಮಾಡಲು ನೀವು ಸಿದ್ಧರಾಗಬೇಕಾಗಿದೆ. ಈ ಮಟ್ಟವನ್ನು ಸಾಧಿಸಲು ತುಂಬ ಶಕ್ತಿ ಬೇಕು. ಕೊಲ್ಲುವ ಬದಲು ಅಗತ್ಯಬಿದ್ದರೆ ನಮ್ಮನ್ನೇ ಕೊಲೆಗಾರನ ಕತ್ತಿಗೆ ಒಡ್ಡಿಕೊಳ್ಳುವುದು. ಒಬ್ಬನನ್ನು ಕೊಲ್ಲುವ ಯತ್ನದಲ್ಲಿ ನಮ್ಮ ಪ್ರಾಣವನ್ನು ಅಪಾಯಕೊಡ್ಡುವುದು ತುಂಬ ಸುಲಭ ಮತ್ತು ಒಂದು ಪ್ರಾಣವನ್ನು ಉಳಿಸುವ ಯತ್ನದಲ್ಲಿ ಪ್ರಾಣವನ್ನು ಪಣಕ್ಕೊಡ್ಡುವುದು ಅತಿಮಾನುಷವಾದ ಒಂದು ಕಾರ್ಯ. ಇದೇಕೆ ಹೀಗೆ? ಏಕೆಂದರೆ ಇನ್ನೊಬ್ಬನನ್ನು ಕೊಲ್ಲುವುದು ಒಂದು ಧೈರ್ಯದ ಕೆಲಸವಲ್ಲ. ನಿಮ್ಮ ಗೌರವ ಮತ್ತು ಸ್ವಾತಂತ್ರ್ಯಕ್ಕೋಸ್ಕರ ನೀವು ಸಾಯಲು ಸಿದ್ಧರಾಗಿರಿ" ಎಂದರು ಗಾಂಧೀಜಿ.

ಅವರ ಅಹಿಂಸಾದಳಕ್ಕೆ ಮಹಿಳೆಯರು, ಮಕ್ಕಳು ಮತ್ತು ವಯಸ್ಸಾದವರೂ ಸೇರಬಹುದಾಗಿತ್ತು. ಮಕ್ಕಳ ದಳವನ್ನು ವಾನರ ಸೇನೆಯಿಂದಲೇ ಕರೆಯಲಾಗುತ್ತಿತ್ತು. ಹೋರಾಟದ ವೇಳೆ ಎಲ್ಲಾದರೂ ಹಿಂಸೆ ಪ್ರಕಟಗೊಂಡರೆ ಗಾಂಧೀಜಿ ಸತ್ಯಾಗ್ರಹವನ್ನೇ ನಿಲ್ಲಿಸಿಬಿಡುತ್ತಿದ್ದರು. ಗುಟ್ಟು ಗೌಪ್ಯವನ್ನು ಅವರು ಮೆಚ್ಚಲಿಲ್ಲ. ತನ್ನ ಮುಂದಿನ ಕಾರ್ಯಕ್ರಮಗಳನ್ನು ಬಹಿರಂಗವಾಗಿ ಹೇಳಿಬಿಡುತ್ತಿದ್ದರು. ಜನರು ಕೋಪ ದ್ವೇಷ ಮತ್ತು ಹಗೆ ಸಾಧನೆಯ ಪ್ರವೃತ್ತಿಗಳನ್ನು ಹೃದಯಗಳಿಂದ ಕಿತ್ತೊಗೆಯಬೇಕೆಂದು ಬೋಧಿಸುತ್ತಿದ್ದರು.

ಈ ಕಟ್ಟುನಿಟ್ಟಿನ ಗುರಿಕಾರ, ತನ್ನ ಜನರಲ್ಲಿ ಸುಳ್ಳು ಆಸೆ ನಿರೀಕ್ಷೆಗಳನ್ನು ಹುಟ್ಟಿಸಲಿಲ್ಲ. ಬದಲು, ಅವರು ಹೇಗೆ ಲಾಠೀ ಪೆಟ್ಟು, ಗುಂಡೇಟುಗಳನ್ನು ಎದುರಿಸಬೇಕಾಗುವುದೆಂದೂ, ಪ್ರತಿಭಟನೆ ತೋರದೆ ಮನೆಗೆ ತೆರಳಬೇಕೆಂದೂ, ಗಲ್ಲಿಗೇರಲೂ ಸಿದ್ಧರಿರಬೇಕೆಂದೂ ಬೋಧಿಸುತ್ತಿದ್ದರು. ಅವರ ಆಸ್ತಿಪಾಸ್ತಿಗಳೆಲ್ಲವೂ ಮುಟ್ಟುಗೋಲಾಗುವುದನ್ನು ನೋಡಲು ಸಿದ್ಧರಿರಬೇಕೆಂದೂ ಹೇಳುತ್ತಿದ್ದರು. ಅವರ "ಮಾಡು ಅಥವಾ ಮಡಿ" ಮಂತ್ರಕ್ಕೆ, ಕಷ್ಟ ಸಹನೆ, ಮತ್ತಷ್ಟು ಕಷ್ಟ ಸಹನೆ, ಇದೇ ವ್ಯಾಖ್ಯಾನ. ಈ ಮಂತ್ರದ ಅನುಷ್ಠಾನ ಎದುರಾಳಿಯ ಹೃದಯವನ್ನು ಕರಗಿಸಬಲ್ಲದೆಂದು ಗಾಂಧೀಜಿಗೆ ಮನವರಿಕೆಯಾಗಿತ್ತು.

ಜನರಿಗೆ, ವಿದೇಶೀ ವಸ್ತ್ರದಹನ, ಕರನಿರಾಕರಣೆ ಕಾನೂನು ಮುರಿದು ಉಪ್ಪು ತಯಾರಿಸುವುದು ಮತ್ತು ಸರಕಾರೀ ಶಾಲೆ, ಕಾಲೇಜು ಮತ್ತು ನ್ಯಾಯಾಲಯಗಳ ಬಹಿಷ್ಕಾರ ಮಾಡಲು ಕರೆ ನೀಡುವ ಜತೆಯಲ್ಲೇ ಗಾಂಧೀಜಿ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಲು ಹೇಳಿದರು. ಜನರು ನೂತು, ನೇಯಲು, ಗ್ರಾಮ ಪಂಚಾಯತುಗಳನ್ನು ಮರಳಿ ಸುವ್ಯವಸ್ಥೆಗೊಳಿಸಲು ಮತ್ತು ರಾಷ್ಟ್ರೀಯ ಶಾಲೆಗಳನ್ನು, ವಿದ್ಯಾಲಯಗಳನ್ನು ಪ್ರಾರಂಭಿಸಬೇಕೆಂದು ಗಾಂಧೀಜಿಯ ಬಯಕೆಯಾಗಿತ್ತು. ಒಂದೇ ವರ್ಷದಲ್ಲಿ ಸ್ವರಾಜ್ಯ ಸ್ಥಾಪಿಸುವ ಗಾಂಧೀಜಿಯ ಉದ್ದೇಶ ಈಡೇರಲಿಲ್ಲವಾದರೂ, ಬಂಧನದಲ್ಲಿದ್ದ ಭಾರತೀಯರ ಮನಸ್ಸುಗಳು ಬಿಡುಗಡೆಗೊಂಡವು. ಜನರಲ್ಲಿ ಉಂಟುಮಾಡಿದ ಜಾಗೃತಿಯೇ ಒಂದು ದೊಡ್ಡ ಲಾಭವಾಯಿತು. ಗಾಂಧೀಜಿಯ ದಂಡೀಯಾತ್ರೆ ದೇಶದ ತುಂಬ ಒಂದು ಸಮ್ಮೋಹಿನಿಯಂತೆ ಕೆಲಸ ಮಾಡಿತು. ಪರದೆಗಳನ್ನು ಕಿತ್ತೊಗೆದು ನೂರಾರು ಮಹಿಳೆಯರು ಹೊರಗೆ ಬಂದು ಉಪ್ಪನ್ನು ಸಂಗ್ರಹಿಸಿದರು ಮತ್ತು ದೇಶಸೇವೆಯಲ್ಲಿ ತಾವು ಗಂಡಸರಿಗಿಂತ ಕಡಿಮೆಯಿಲ್ಲವೆಂದು ಸಾಬೀತುಪಡಿಸಿದರು. ವಿದೇಶೀ

ವಸ್ತ್ರಗಳ ಮತ್ತು ಮದ್ಯದ ಅಂಗಡಿಗಳ ಮುಂದೆ ಮಹಿಳೆಯರು ಪಿಕೆಟಿಂಗ್ ಕೂಡ ನಡೆಸಿದರು. ಭಾರತದ ರಾಜಕೀಯ ಇತಿಹಾಸದಲ್ಲೇ ಪ್ರಥಮ ಬಾರಿಗೆ ಗಾಂಧೀಜಿ ಅಹಿಂಸಾತ್ಮಕ ಅಸಹಕಾರವನ್ನು ಸಾರ್ವತ್ರಿಕ ಕ್ಷೇತ್ರದಲ್ಲಿ ಪ್ರಯೋಗಿಸಿದರು.

ತನ್ನ ಅಹಿಂಸಾತ್ಮಕ ಹೋರಾಟಗಳನ್ನು ಅನೇಕ ವೇಳೆ ಗಾಂಧಿ ಸಮರತಂತ್ರದ ಪಾರಿಭಾಷಿಕ ಶಬ್ದಗಳಲ್ಲೇ ವಿವರಿಸುತ್ತಿದ್ದರು. "ನಾನು ಸಮರ ಸಾರಿದ್ದೇನೆ. ಒಬ್ಬ ಸೈನಿಕನಿಗೆ ಅವನ ಬಂದೂಕವಿಲ್ಲದೆ ಏನೂ ಮಾಡಲಾಗುವುದಿಲ್ಲ. ಹಾಗೆಯೇ ನಿಮ್ಮಲ್ಲಿ ಪ್ರತಿಯೊಬ್ಬ ಅಹಿಂಸಕ ಸಿಪಾಯಿಗೂ ನೂಲುವುದರ ಹೊರತು ಏನೂ ಸಾಧ್ಯವಿಲ್ಲವೆಂದಾಗಬೇಕು. ಹತ್ತಿಯ ಉಂಡೆಗಳೇ ನಿಮ್ಮ ಸೀಸದ ಗುಂಡು, ಚರಕವೇ ನಿಮ್ಮ ಕೋವಿ. ಸ್ವಾತಂತ್ರ್ಯವನ್ನು ನಾವು ಬಂದೂಕಗಳಿಂದ ಪಡೆಯುವುದಿಲ್ಲ. ಕೈಯಿಂದ ತಯಾರಿಸಲ್ಪಟ್ಟ ನೂಲಿನ ಲಡಿಗಳೆಂಬ ಗುಂಡುಗಳಿಂದ ನಾವದನ್ನು ಪಡೆಯುವೆವು. ನೀವು ದರಶನಾದ ಉಪ್ಪಿನ ಗಣಿಗಳನ್ನು ಆಕ್ರಮಿಸಿರಿ. ಈ ಹೋರಾಟ ದರಶನಾದ ಸಮರವೆಂದು ಖ್ಯಾತವಾಗುವುದು." ಹೀಗೆ ಗಾಂಧೀಜಿ ತಮ್ಮ ಹೋರಾಟದ ಬಗ್ಗೆ ಹೇಳುತ್ತಿದ್ದರು. ಹಿಂಸಾತ್ಮಕ ಹೋರಾಟದ ಎಲ್ಲ ರೀತಿಯ ವಿನಾಶಕಾರೀ ಅಸ್ತ್ರಗಳನ್ನು ದೂರವಿರಿಸಲಾಗಿತ್ತು. ಆದರೆ ಧೈರ್ಯ, ಪೌರುಷ, ದೇಶಭಕ್ತಿ, ಸಹಿಷ್ಣುತೆ ಮತ್ತು ಆತ್ಮತ್ಯಾಗಗಳ ಎಲ್ಲ ಸೈನಿಕ ಗುಣಗಳೂ ಗಾಂಧೀಜಿಯವರ ಅಹಿಂಸಾ ಯೋಧರಲ್ಲಿದ್ದವು.

ಹೇಡಿತನಕ್ಕಿಂತ ಹಿಂಸೆಯೇ ವಾಸಿಯೆಂದರು ಗಾಂಧೀಜಿ. ಆದರೆ ಪಾಶವಿ ಶಕ್ತಿಗಿಂತ ಆತ್ಮಶಕ್ತಿಗೆ ಪ್ರಾಧಾನ್ಯತೆ ನೀಡಿದರು. "ನಿಮ್ಮ ಅಹಿಂಸೆಯ ಮೇಲಣ ನಂಬಿಕೆಯನ್ನು ಆಟಂಬಾಬು ಸಡಿಲಗೊಳಿಸಲಿಲ್ಲವೇ?" ಎಂದು ಪ್ರಶ್ನಿಸಿದಾಗ ಗಾಂಧೀಜಿ "ಆಟಂ ಬಾಂಬ್ ನನ್ನ ನಂಬಿಕೆಯನ್ನು ಕದಲಿಸಿಲ್ಲ. ಅಷ್ಟೇ ಅಲ್ಲ, ಸತ್ಯ ಮತ್ತು ಅಹಿಂಸೆಗಳೇ ಪ್ರಪಂಚದ ಅತಿ ಬಲಿಷ್ಠ ಶಕ್ತಿಗಳೆನ್ನುವುದನ್ನು ಅದು ನನಗೆ ಇನ್ನಷ್ಟು ಖಚಿತಗೊಳಿಸಿದೆ. ಆ ಶಕ್ತಿಗಳ ಮುಂದೆ ಸ್ವಾತಂತ್ರ್ಯವು ಶೋಷಣೆಗೊಳಗಾದ ಎಲ್ಲ ಜನಾಂಗಗಳ ಸ್ವಾತಂತ್ರ್ಯವೂ ಸನಿಹದಲ್ಲೇ ಇದೆ ಎನ್ನುವುದನ್ನು ತೋರಿಸಿಕೊಟ್ಟಿದೆ ಎಂದು ಗಾಂಧೀಜಿ ಸಾರಿದರು.

ಬನಿಯಾ

"ನಾನೊಬ್ಬ ಬನಿಯಾ, ನನ್ನ ಆಸೆಗೆ ಮಿತಿಯೇ ಇಲ್ಲ" ಎಂದು ಗಾಂಧೀಜಿ ಒಮ್ಮೆ ನುಡಿದರು. ಜಾತಿಯಿಂದ ಅವರು ಬನಿಯಾ ಆಗಿದ್ದರು. ತಮ್ಮ ತಂದೆ ಹೊಂದಿದ್ದ ದಿವಾನ್ ಪದವಿಗೆ ಅವರನ್ನು ಸಿದ್ಧಗೊಳಿಸಲಾಗಿತ್ತು. ಆದರೆ ಅವರು ದಿವಾನರಾಗದೆ ಒಬ್ಬ ವಿರಾಗಿಯ ಬಾಳನ್ನು ತನ್ನದಾಗಿಸಿಕೊಂಡರು. ಆದರೆ ಬನಿಯಾತನ ಅವರ ರಕ್ತಗತವಾಗಿ ಇದ್ದೇ ಇತ್ತು.

ಗಾಂಧೀಜಿ ಹಣದ ವಿಚಾರದಲ್ಲಿ ತುಂಬಾ ಚೌಕಾಸಿ ಮನೋಭಾವದವರು. ಬಟ್ಟೆಗಳನ್ನಾರಿಸುವಾಗ ಅವರು ಅದರ ಬಾಳಿಕೆಯ ಗುಣ, ಬೆಲೆ, ಕಲಾತ್ಮಕತೆಗಳ ಮೇಲೆ ನಿಗಾ ಇಡುತ್ತಿದ್ದರು. ಐಷಾರಾಮದ ಮತ್ತು ಬೆಳೆಬಾಳುವ ವಸ್ತುಗಳ ಉಪಯೋಗವನ್ನು ಅವರು ತ್ಯಜಿಸಿದ್ದರು. ಸ್ವಂತ ತಯಾರಿಯ ಖಾದಿ ವಸ್ತುವನ್ನು, ದೊರಗು ಕಂಬಳಿಯನ್ನು ಮತ್ತು ಕೈಯಿಂದ ತಯಾರಿಸಲ್ಪಟ್ಟ ಗಟ್ಟಿ ಚಪ್ಪಲಿಗಳನ್ನು ಉಪಯೋಗಿಸತೊಡಗಿದರು. ಹಲವು ಬಗೆಯ ತಿನಿಸುಗಳ ವಿವಿಧ ವ್ಯಂಜನಗಳ ಭೋಜನವನ್ನು ಅವರು ಉಣಲಿಲ್ಲ. ಒಂದೆರಡು ಚೂರು ಒಣ ಬ್ರೆಡ್ಡು, ಅನ್ನ, ಬೇಯಿಸಿದ ತರಕಾರಿ, ಹಸಿ ಸೊಪ್ಪುಗಳು, ಆಡಿನ ಹಾಲು, ಬೆಲ್ಲ, ಜೇನು ಮತ್ತು ಹಣ್ಣುಗಳು ಇವೇ ಅವರ ಆಹಾರ. ಒಂದು ದಿನದಲ್ಲಿ ಐದಕ್ಕಿಂತ ಹೆಚ್ಚು ಬಗೆಯ ಆಹಾರವನ್ನವರು ಸೇವಿಸುತ್ತಿರಲಿಲ್ಲ. ಒಬ್ಬ ಶ್ರೀಮಂತ ಜಮೀನ್ದಾರ ಒಮ್ಮೆ ಬಂಗಾರದ ತಟ್ಟೆಯಲ್ಲಿ ಊಟ ಬಡಿಸಿದಾಗ ಗಾಂಧೀಜಿ ತುಂಬಾ ನೊಂದುಕೊಂಡರು.

ಭಾರತದ ಒಬ್ಬ ಬಡ ವ್ಯಕ್ತಿ ದಿನವೊಂದಕ್ಕೆ ಒಂದಾಣೆ ಸಂಪಾದಿಸುವಾಗ, ರಾಶಿ ರಾಶಿ ಹಣ ಆಭರಣಗಳ ಮತ್ತು ಅಲಂಕಾರ ವಸ್ತುಗಳ ರೂಪದಲ್ಲಿ ನಿರುಪಯೋಗಿಯಾಗಿ ಬಿದ್ದಿರುವುದು. ಒಂದು ಅಪರಾಧವೆಂದೇ ಅವರ ಭಾವನೆ. ಅವರ ಪತ್ನಿ ಕಸ್ತೂರ್‌ಬಾ ಯಾವ ಆಭರಣವನ್ನೂ ಧರಿಸುತ್ತಿರಲಿಲ್ಲ.

ಭಾರತದ ಕೋಟಿಗಟ್ಟಲೆ ಬಡಜನರಿಗೆ ಎಟಕಲಾರದ ದುಬಾರಿ ಶಿಕ್ಷಣದ ಶಾಲೆ ಕಾಲೇಜುಗಳಿಗೆ ಗಾಂಧೀಜಿ ತನ್ನ ಮಕ್ಕಳನ್ನು ಎಂದೂ ಕಳುಹಿಸಲಿಲ್ಲ. ತಾವೇ ತನ್ನ ಮಕ್ಕಳ ಶಿಕ್ಷಕರಾದರು. ಅವರು ಮನೆಗೆಲಸದಲ್ಲಿ ಮತ್ತು ಭಂಗಿ ಕೆಲಸದಲ್ಲಿ ಪಾಲ್ಗೊಳ್ಳಬೇಕಾಗಿತ್ತು. ಗಾಂಧೀಜಿ ಮನೆಗೆಲಸಕ್ಕೆ ಆಳನ್ನು

ಇಟ್ಟುಕೊಳ್ಳಲಿಲ್ಲ. ತಾವೇ ಎಲ್ಲ ತರದ ಶರೀರಶ್ರಮದ ಕೆಲಸ ಮಾಡುತ್ತಿದ್ದು. ಗುಡಿಸಲುಗಳಲ್ಲೇ ವಾಸಿಸಬಯಸಿದರು. ಭಾರತದಾದ್ಯಂತ ಅನೇಕ ಬಾರಿ ಪ್ರವಾಸ ಮಾಡಿದರು. ಅದೂ ಮೂರನೆ ತರಗತಿಯ ಪ್ರಯಾಣಿಕನಾಗಿ ರೈಲು ಪ್ರವಾಸದಲ್ಲಿ ಅವರಲ್ಲಿದ್ದ ಬಟ್ಟೆ ಬರೆ ಅಥವಾ ಕಾಗದದ ಕಟ್ಟುಗಳೇ ತಲೆದಿಂಬಾಗಿ ಉಪಯೋಗವಾಗುತ್ತಿದ್ದವು. ಸ್ವದೇಶೀ ರಗ್ಗುಗಳು ಮತ್ತು ಖಾದಿ ವಸ್ತ್ರದ ಹಾಳೆಗಳೇ ಅವರ ಹಾಸಿಗೆ. ಸೊಳ್ಳೆ ಪರದೆಯಿಲ್ಲದೆಯೇ ಮಲಗುವ ಅಭ್ಯಾಸ ಮಾಡಿದರು. ಆಗ ಮೈಗೆಲ್ಲ ಬಟ್ಟೆ ಹೊದ್ದುಕೊಂಡು ಮುಖಕ್ಕೆ ಸೀಮೆಎಣ್ಣೆ ಲೇಪಿಸಿಕೊಂಡರು. (ಸೊಳ್ಳೆಗಳನ್ನು ನಿವಾರಿಸಲು) ಸೊಳ್ಳೆ ಪರದೆಗಳನ್ನು ಕೊಳ್ಳುವ ವೆಚ್ಚದಿಂದ ಪಾರಾಗಲು ಬಡ ಹಳ್ಳಿಗರು ಈ ಉಪಾಯ ಮಾಡುತ್ತಿದ್ದರೆಂದು ಯಾರೋ ಗಾಂಧೀಜಿಗೆ ಹೇಳಿದ್ದರು. ಬ್ರಿಟಿಷರಿಗೆ ಭಾರತಕ್ಕೆ ಸ್ವಾತಂತ್ರ್ಯ ನೀಡುವ ಪ್ರಾಮಾಣಿಕ ಇಚ್ಛೆ ಇದೆಯೇ ಎಂದು ನಿರ್ಧಾರ ಮಾಡಿಕೊಳ್ಳುವ ಸಲುವಾಗಿ ನಾಲ್ಕನೇ ಬಾರಿಗೆ ಇಂಗ್ಲೆಂಡಿಗೆ ಹೋದಾಗ ಗಾಂಧೀಜಿ ಹಡಗಿನಲ್ಲಿ ಥಕ್ಕೆ ಪ್ರಯಾಣಿಕನಾಗಿಯೇ (ಕಡೆಯ ದರ್ಜೆ) ಪ್ರಯಾಣಿಸಿದರು. ಪೆಟ್ಟಿಗೆ ತುಂಬ ಪೋಷಾಕುಗಳನ್ನು ಒಯ್ಯದಂತೆ ತಮ್ಮ ಸಂಗಾತಿಗಳನ್ನೂ ಕಾರ್ಯದರ್ಶಿಗಳನ್ನೂ ತಡೆದು, ಇಂಗ್ಲೆಂಡಿನಲ್ಲೂ ಭಾರತೀಯ ಉಡುಗೆಯಾದ ಧೋತಿ ಕುರ್ತಾ ಮತ್ತು ಚಪ್ಪಲಿಗಳನ್ನು ಧರಿಸುವಂತೆ ಮಾಡಿದರು. ಪ್ರಯಾಣದ ವೇಳೆ ಒಬ್ಬ ಮಿತ್ರ ಗಾಂಧೀಜಿಗೆ ರೂ.700 ಬೆಲೆಬಾಳುವ ಶಾಲೊಂದನ್ನು ಉಡುಗೊರೆಯಾಗಿತ್ತರು. ಅದನ್ನು ಹಡಗಿನಲ್ಲೆ ರೂ.7000ಕ್ಕೆ ಮಾರಿದ ಗಾಂಧೀಜಿ "ಬಡಜನಗಳ ಏಕಮಾತ್ರ ಪ್ರತಿನಿಧಿಯೊಬ್ಬ ಮಾಡಬಹುದಾದದ್ದು ಅಷ್ಟೇ" ಎಂದರು. ತನಗೆ ಒಂದು ಅಂಗಡಿ ಇಡಹುದಾದಷ್ಟು ಶಾಲುಗಲು ಬಹುಮಾನವಾಗಿ ದೊರೆತಿದ್ದವೆಂದು ಅವರೆನ್ನುತ್ತಿದ್ದರು. ಅವುಗಳ ಮಾರಾಟದಿಂದ ಬಂದ ಹಣವನ್ನೆಲ್ಲ ಅವರು ಹರಿಜನ ಸೇವಾಕಾರ್ಯಕ್ಕೆ ಉಪಯೋಗಿಸಿದರು.

ಗಾಂಧೀಜಿ ಫ್ರಾನ್ಸ್‌ನಲ್ಲಿ ಬಂದಿಳಿದಾಗ ಅವರನ್ನು ಮಂಡಿ ಮಟ್ಟದ ಪಂಚೆಯಲ್ಲಿ ಕಂಡ ಫ್ರೆಂಚ್‌ರು ಬೆರಗಾದರು.

ಗಾಂಧೀಜಿ ಇಂಗ್ಲೆಂಡಿನ ರಾಜರನ್ನು ಭೇಟಿ ಮಾಡುವಾಗ, ಆ ಶೀತ ದೇಶದಲ್ಲಿ ಓಡಾಡುವಾಗ ಅಥವಾ ಶಿಸ್ತಾಗಿ ವೇಷಭೂಷಣ ತೊಟ್ಟ ಜನರ ನಡುವೆ ಜೆರಿತಾಗ ತಮ್ಮ ಕನಿಷ್ಠ ಉಡುಪಿನಲ್ಲೇ ಹೋಗುವರೇ ಹೇಗೆ ಎಂದು ಕೆಲವರು

ಆಶ್ಚರ್ಯ ವ್ಯಕ್ತಪಡಿಸಿದರು. ಕಣ್ಣಿನಲ್ಲಿ ಹೊಳಪನ್ನು ಮಿಂಚಿಸುತ್ತಾ ಗಾಂಧೀಜಿ "ಇಂಗ್ಲೆಂಡಿನ ರಾಜನ ಮೈಮೇಲೆ ನಮ್ಮಿಬ್ಬರಿಗೂ ಸಾಕಾಗುವಷ್ಟು ಬಟ್ಟೆ ಇದೆ" ಎಂದು ಸಮಾಧಾನ ಹೇಳಿದರು. ತಮ್ಮ ತುಂಡು ಪಂಚೆ, ತೇಪೆ ಹಾಕಿದ ಶಾಲು ಮತ್ತು ಚಪ್ಪಲಿಗಳಲ್ಲೇ ಗಾಂಧೀಜಿ ದುಂಡು ಮೇಜಿನ ಪರಿಷತ್ತಿನಲ್ಲಿ ಪಾಲ್ಗೊಂಡರು. ಅಲ್ಲದೆ ಆಕ್ಸ್‌ಫರ್ಡ್, ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳಿಗೆ ಮತ್ತು ಬಕಿಂಗ್‌ಹಾಮ್ ಅರಮನೆಗೆ ಸಹ ಹೋದರು. ಕೋಪದಿಂದ ಇಂಗ್ಲೆಂಡಿನ ಪ್ರಧಾನಿ ಚರ್ಚಿಲ್ ಗಾಂಧೀಜಿಯನ್ನು "ಅರೆ ಬೆತ್ತಲೆ ಪಕೀರ" ಎಂದು ಕರೆದರು. ಗಾಂಧೀಜಿ ಆ ಮಾತಿನಿಂದ ಅಭಿಮಾನಪಟ್ಟುಕೊಂಡರು.

ಯಾವುದೇ ರೀತಿಯ ದುಬಾರಿ ವೆಚ್ಚದಿಂದ ಗಾಂಧೀಜಿ ಉದ್ವಿಗ್ನರಾಗುತ್ತಿದ್ದರು. ದಿನದ 24 ಗಂಟೆಯೂ ಗಾಂಧೀಜಿ ಒಂದಲ್ಲ ಒಂದು ಕೆಲಸದಲ್ಲಿ ನಿರತರಾಗಿರುತ್ತಿದ್ದರು. ಯಾವುದೇ ಕೆಲಸವನ್ನು ಗಾಂಧೀಜಿ ತಡಮಾಡದೆ ಕ್ಲುಪ್ತ ಸಮಯಕ್ಕೆ ಮಾಡುತ್ತಿದ್ದರು. ಹೀಗಿದ್ದರೂ ಅವರು ಯಾವ ಕೆಲಸದಲ್ಲೂ ಎಂದೂ ಅವಸರಪಡುತ್ತಿರಲಿಲ್ಲ. ಶಬ್ದಗಳ ಮಿತವಾದ ಬಳಕೆಯಲ್ಲಿ ಗಾಂಧೀಜಿಗೆ ನಂಬಿಕೆ; ಅವರು ಅನೇಕ ಭಾಷಣಗಳನ್ನು ಮಾಡಿದರು. ಲೇಖನಗಳನ್ನು ಬರೆದರು. ಆದರೆ ಅನಾವಶ್ಯಕ ಅರ್ಥಹೀನ ಪದ ಒಂದನ್ನೂ ಎಂದೂ ಬಳಸಲಿಲ್ಲ. ಒಂದು ಕಡೆ ಖಾಲಿಯಿದ್ದ ಉಪಯೋಗಿಸಲ್ಪಟ್ಟ ಪತ್ರಗಳನ್ನೂ, ಕವರುಗಳನ್ನೂ ಗಾಂಧೀಜಿ ಸಂಗ್ರಹಿಸಿ ಅವುಗಳನ್ನು ಅಳತೆಗೆ ಸರಿಯಾಗಿ ಕತ್ತರಿಸಿ, ಜೋಡಿಸಿ, ತಮ್ಮ ಬಳಿ ಇರಿಸಿಕೊಂಡು ಪತ್ರಲೇಖನಕ್ಕೆ ಬಳಸುತ್ತಿದ್ದರು. ಅವರ ಕೆಲವು ಪ್ರಮುಖ ಹೇಳಿಕೆಗಳು, ಕರಡುಗಳು ಮತ್ತು ವೈಸ್‌ರಾಯರಿಗೆ, ಭಾರತದ ರಾಜರುಗಳಿಗೆ ಮತ್ತು ಇಂಗ್ಲೆಂಡಿನ ಪ್ರಧಾನಿಗೆ ಅವರು ಬರೆದ ಕೆಲವು ಮಾರೋಲೆಗಳನ್ನು ಇಂತಹ ಕಾಗದಗಳಲ್ಲಿ ಬರೆಯಲಾಗಿತ್ತು. ಸಣ್ಣ ಹುಡುಗನೊಬ್ಬ ಕಾಣಿಕೆಯಾಗಿ ಕೊಟ್ಟ ಪೆನ್ಸಿಲಿನ ತುಂಡು, ಇಲ್ಲವೆ ಮೈ ಉಜ್ಜಿಕೊಳ್ಳಲು ಬಳಸುವ ಕಲ್ಲಿನ ಚೂರು ಕಾಣೆಯಾದಾಗ ಬಹಳ ಹೊತ್ತು ಹುಡುಕಿದ ನಂತರ ಅದು ದೊರೆಯುವ ತನಕವೂ ಅವರಿಗೆ ನೆಮ್ಮದಿ ಇದ್ದಿಲ್ಲ. ಸ್ವಾತಂತ್ರ್ಯಾನಂತರ ಬೆಲೆಬಾಳುವ ಮುದ್ರಾಂಕಿತ ಪತ್ರ (ಲೆಟರ್‌ಹೆಡ್)ಗಳನ್ನು ಖಾಸಗಿ ಪತ್ರವ್ಯವಹಾರಗಳಿಗೆ ಬಳಸಿದ್ದಕ್ಕಾಗಿ ಗಾಂಧೀಜಿ ಸಚಿವರುಗಳನ್ನು, ಶಾಸಕರನ್ನು ತರಾಟೆಗೆ ತೆಗೆದುಕೊಂಡರು. ಬ್ರಿಟಿಷರ ಜೀವನಶೈಲಿ, ಅಭ್ಯಾಸಗಳನ್ನು ಅನುಕರಿಸಿದರೆ ನಾವು ನಾಶವಾಗುವುದಷ್ಟೇ ಅಲ್ಲದೆ ದೇಶವನ್ನೂ ನಾಶಮಾಡುತ್ತೇವೆಂದು ಗಾಂಧೀಜಿ ಎಚ್ಚರಿಸಿದರು.

ಇಂಗ್ಲಿಷರು ತಮ್ಮ ವೈಭವ ಪ್ರದರ್ಶನ ಮೂಲಕ ತಮ್ಮ ಅಧೀನ ರಾಷ್ಟ್ರದ ಜನರ ಮನಸ್ಸಿನಲ್ಲಿ ಭಯ ಹುಟ್ಟಿಸುತ್ತಿದ್ದರು. ಅಂತಹ ಎಲ್ಲ ದುಬಾರಿ ಅಭ್ಯಾಸಗಳನ್ನು ಬಿಟ್ಟುಬಿಡಬೇಕು. ದೇವನಾಗರಿ ಮತ್ತು ಉರ್ದು ಭಾಷೆಗಳಲ್ಲಿ ಸಾಮಾನ್ಯ ರೀತಿಯಲ್ಲಿ ಮುದ್ರಾಂಕಿತಗೊಳಿಸಲ್ಪಟ್ಟ, ಕೈಯಿಂದ ತಯಾರಿಸಿದ ಕಾಗದಗಳನ್ನೇ ಉಪಯೋಗಿಸಬೇಕು. ಸಚಿವರುಗಳು ಬೆಲೆಬಾಳುವ ಮಾನಪತ್ರಗಳನ್ನೂ, ಪುಷ್ಪಹಾರಗಳನ್ನೂ ಸ್ವೀಕರಿಸಕೂಡದು ಎಂದರು ಗಾಂಧೀಜಿ.

ಬಡವರಿಗಾಗಿ ಸಂಗ್ರಹಿಸಿದ ಪತ್ರಿ ಕಾಸನ್ನೂ ಉಳಿಸಲು ಗಾಂಧೀಜಿಗೆ ತುಂಬ ಆಸಕ್ತಿ. ಸಾರ್ವಜನಿಕ ನಿಧಿಗಳಿಗಾಗಿ ತಮಗೆ ಬಂದ ಮನಿಆರ್ಡರುಗಳು, ಚೆಕ್ಕುಗಳು ಮತ್ತು ಡ್ರಾಫ್ಟ್‌ಗಳ ಮೇಲಿನ ಕಮಿಷನ್ ಹಣವನ್ನು ಉಳಿಸಲು ಸಹ ಯತ್ನಿಸುತ್ತಿದ್ದರು. ಸ್ವಯಂಸೇವಕರಾಗಲೀ, ಸಂಘಟಕರಾಗಲೀ, ಸಾರ್ವಜನಿಕ ಹಣವನ್ನು ನಿರ್ಲಕ್ಷ್ಯವಾಗಿ ಬಳಸಿದಾಗ, ಗಾಂಧೀಜಿ ಅವರಿಗೆ ಛೀಮಾರಿ ಹಾಕುತ್ತಿದ್ದರು. ದಕ್ಷಿಣ ಆಫ್ರಿಕಾದಿಂದ 1896ರಲ್ಲಿ ಭಾರತಕ್ಕೆ ಮರಳಿದಾಗ ಅಲ್ಲಿನ ಭಾರತೀಯ ಸಮಾಜದವರು ಗಾಂಧೀಜಿಗೆ ರೂ. 1000/– ಕಾಣಿಕೆಯಾಗಿತ್ತರು. ಗಾಂಧೀಜಿ ತನ್ನ ಖರ್ಚು, ವೆಚ್ಚಗಳ ವಿವರವಾದ ಲೆಕ್ಕ ನೀಡಿದರು. ಟ್ರಾಮ್ 1 ಆಣೆ, ನೀರು 6 ಪೈ. ಗಾಡಿಯವನಿಗೆ 6 ಪೈ, ಜಾದೂಗಾರನಿಗೆ 8 ಆಣೆ, ನಾಟಕ ಗೃಹ 8 ಆಣೆ ಇತ್ಯಾದಿ ಸ್ವಾರಸ್ಯಕರ ಅಂಶಗಳನ್ನು ತಮ್ಮ ಲೆಕ್ಕದಲ್ಲಿ ನಮೂದಿಸಿದ್ದರು. ನಮ್ಮ ಚಳುವಳಿಗಳಲ್ಲಿ ದುಂದು ವೆಚ್ಚಕ್ಕೆ ಅವಕಾಶವಿಲ್ಲ ಎನ್ನುತ್ತಿದ್ದರು ಗಾಂಧೀಜಿ. ಸ್ಥಳೀಯ ಕಾರ್ಯಕರ್ತರು ನನಗೋಸ್ಕರ ಉತ್ತಮವಾದ ಕಿತ್ತಲೆ, ದ್ರಾಕ್ಷಿಗಳನ್ನು ಆಯ್ದು ತಂದರೆ ಅಥವಾ ನನಗೆ ಹನ್ನೆರಡೇ ಬೇಕಿದ್ದಾಗ 120 ತಂದರೆ ಅದು ದುಂದು ವೆಚ್ಚವಲ್ಲದೆ ಮತ್ತಿನ್ನೇನು? ನಾವು ಮಿಲಿಯಗಟ್ಟಲೆ ಮೂಕ ಬಡ ಜನತೆಯ ನಿಜವಾದ ಧರ್ಮದರ್ಶಿಗಳಾಗಬೇಕು. ನಿಮಗೆ ತಡೆಯಲು ಸಾಧ್ಯವಾದರೆ, ಇನ್ನೊಬ್ಬರ ಮೇಲೆ ಸವಾರಿ ಮಾಡಬೇಡಿ ಎನ್ನುವುದೇ ಗಾಂಧೀಜಿಯ ಬೋಧನೆ ಆಗಿತ್ತು. ತನ್ನ ಬಾಲ್ಯದ ದಿನಗಳಲ್ಲಿ ಅವರಿದನ್ನು ಸಾಧಿಸಿದರು ಕೂಡ. ದಕ್ಷಿಣ ಆಫ್ರಿಕಾದಲ್ಲಿ ಸಮೀಪದ ಪೇಟೆಯಿಂದ ಸಾಮಾನುಗಳನ್ನು ಕೊಳ್ಳುವುದಕ್ಕಾಗಿ, ಅದೂ ಕೆಲವು ರೂಪಾಯಿಗಳನ್ನು ಉಳಿಸುವುದಕ್ಕಾಗಿ, ನಡೆದೇ ಹೋಗುತ್ತಿದ್ದರು. ತಮ್ಮ ಕಛೇರಿಗೂ ನ್ಯಾಯಾಲಯಕ್ಕೂ ದಿನವೂ ನಡೆದೇ ಹೋಗಿ ಬರುತ್ತಿದ್ದರು.

ಒಮ್ಮೆ ಗಾಂಧೀಜಿಯ "ರಾಷ್ಟ್ರೀಯತೆಗೆ ಜನಾಂಗದ್ವೇಷ ಅವಶ್ಯವೇ" ಎನ್ನುವ ವಿಷಯದ ಉಪನ್ಯಾಸಕ್ಕೆ ಪ್ರವೇಶ ಶುಲ್ಕ ನಿಗದಿಯಾಗಿತ್ತು. ಸಂಗ್ರಹವಾದ ಹಣವನ್ನು ದೇಶಬಂಧು ಸ್ಮಾರಕ ನಿಧಿಗೆ ಸಮರ್ಪಿಸಲಾಯಿತು. ಧ್ವನಿಮುದ್ರಿಕೆ ಕಂಪನಿಯೊಂದರಲ್ಲಿ ಗಾಂಧೀಜಿ ತಮ್ಮ "ಸತ್ಯವೇ ದೇವರು" ಭಾಷಣವನ್ನು ಪ್ರಥಮ ಬಾರಿಗೆ ಧ್ವನಿಮುದ್ರಣ ಮಾಡಿಸಿದರು. ಅರ್ಧಗಂಟೆಯೊಳಗೆ ಗಾಂಧೀಜಿ ರೂ. 65,000 ಸಂಪಾದಿಸಿ ಅದನ್ನು ಹರಿಜನ ನಿಧಿಗೆ ದಾನಿವಿತ್ತರು. ಹಣವನ್ನು ಉಳಿಸುವಷ್ಟೇ ಗಾಂಧೀಜಿ ಅದನ್ನು ಸಂಪಾದಿಸುವುದರಲ್ಲೂ ಚತುರರಾಗಿದ್ದರು. ಸರ್ಕಾರ ಅವರ ಪುಸ್ತಕಗಳನ್ನು ಮುಟ್ಟುಗೋಲು ಹಾಕಿದಾಗ, ಗಾಂಧೀಜಿ ತಾವೇ ಪುಸ್ತಕಗಳನ್ನು ಹೊತ್ತು ಬಹಿರಂಗವಾಗಿ ಮಾರಿದರು. ತಮ್ಮ "ಹಿಂದ್ ಸ್ವರಾಜ್ಯ" ಕೃತಿಯ ಪ್ರತಿಗಳನ್ನು 5, 10, 50 ರೂ.ಗಳಿಗೆ ಮಾರಿದರು. (ಅದರ ಮೂಲ ಬೆಲೆ ಕೇವಲ ನಾಲ್ಕಾಣೆ ಮಾತ್ರ) ದಾಂಡೀಯಾತ್ರೆಯ ವೇಳೆ ಗಾಂಧೀಜಿ ಸಂಗ್ರಹಿಸಿದ ಅರ್ಧತೊಲೆ ಉಪ್ಪನ್ನು ಅಭಿಮಾನಿಯೊಬ್ಬರು ರೂ. 525ಕ್ಕೆ ಕೊಂಡುಕೊಂಡರು. ಅರ್ಧ ತೊಲೆ ಬಂಗಾರದ ಬೆಲೆ ಆ ಕಾಲದಲ್ಲಿ ರೂ. 40 ಮಾತ್ರ ಇತ್ತು. ಜಗತ್ತಿನಲ್ಲೆಲ್ಲೂ ಒಬ್ಬ ಬನಿಯಾ ಅಂತಹ ಅಸಾಧ್ಯ ಬೆಲೆಗೆ ಉಪ್ಪನ್ನು ಮಾರಿರಲಿಲ್ಲ.

ಜನ ತಮ್ಮ ಹಸ್ತಾಕ್ಷರ ಸಂಗ್ರಹಿಸಲು ಆಸಕ್ತರಾಗಿದ್ದಾರೆಂದು ಗಾಂಧೀಜಿ ಗೊತ್ತು. ಪ್ರತಿ ಹಸ್ತಾಕ್ಷರಕ್ಕೂ ರೂ. 5 ನಿಗದಿ ಮಾಡಿದರು. ಸಾವಿರಾರು ರೂ. ದಾನವಿತ್ತವರಿಗೂ ಈ ರೂ. 5ರ ಶುಲ್ಕದಿಂದ ವಿನಾಯಿತಿ ಇರಲಿಲ್ಲ. ಖಾದಿ ಮಾರಾಟವನ್ನು ಹೆಚ್ಚಿಸುವ ಸಲುವಾಗಿ ಗಾಂಧೀಜಿ ಒಮ್ಮೆ ಸೇಲ್ಸ್‌ಮ್ಯಾನ್ ಆಗಿ ಕೆಲಸ ಮಾಡಿದರು. ಬಲಗೈಯಲ್ಲಿ ಗಜಕಡ್ಡಿ ಎಡಗೈಯಲ್ಲಿ ಖಾದಿ ಬಟ್ಟೆಯ ಗಂಟನ್ನು ಹಿಡಿದು ಗಾಂಧೀಜಿ ಖಾದಿ ಮಾರಾಟದ ಆರ್ಡರುಗಳಿಗೆ ಸಹಿ ಹಾಕುತ್ತಾ ನಡೆದರು. ಬಿರುಸಿನ ವ್ಯಾಪಾರ ಮಾಡಿದರು. ಕೇವಲ 50 ನಿಮಿಷಗಳಲ್ಲಿ ರೂ. 500 ಬೆಲೆ ಖಾದಿ ಮಾರಿದರು. ಇನ್ನೊಮ್ಮೆ ಪ್ರಯಾಣಿಸುತ್ತಿದ್ದಾಗ ದಾರಿಯಲ್ಲಿ ಪ್ರತಿ ರೈಲು ನಿಲ್ದಾಣದಲ್ಲೂ ಖಾದಿ ಮಾರಾಟ ಮಾಡಿದರು. ಅವರು ಉದ್ಘಾಟನೆ ಮಾಡಿದ ಖಾದಿ ಪ್ರದರ್ಶನವೊಂದರಲ್ಲಿ, ಒಂದೇ ವಾರದಲ್ಲಿ ರೂ. 4000 ಬೆಲೆಯ ಖಾದಿ ಮಾರಾಟವಾಯಿತು. ಸಾಮಾನ್ಯವಾಗಿ ಅಲ್ಲಿನ ವಾರ್ಷಿಕ ಖಾದಿ ಮಾರಾಟ ರೂ. 6000ಕ್ಕೆ ಮೀರಿರಲೇ ಇಲ್ಲ. ಅವರ ವಿನಂತಿಯಿಂದಾಗಿ ಒಂದು ಖಾದಿ ಭಂಡಾರದ ಮಾರಾಟ ವರ್ಷವೊಂದರ ರೂ. 48 ರಿಂದ ರೂ. 62,312ಕ್ಕೆ ಏರಿತು. ಕಾಂಗ್ರೆಸ್ ಅಧಿವೇಶನದಲ್ಲಿನ ಕರಕುಶಲ ಕೈಗಾರಿಕಾ ವಸ್ತುಗಳ ಪ್ರದರ್ಶನಕ್ಕೆ

ಭೇಟಿ ನೀಡಿದವರೆಲ್ಲರಿಗೂ ಗಾಂಧೀಜಿ ಪ್ರದರ್ಶಿತ ವಸ್ತುಗಳ ಪ್ರಚಾರ ಮಾಡಲು ವಿನಂತಿಸಿದರು.

ವಿದೇಶಿ ವಸ್ತ್ರವನ್ನು ಬಹಿಷ್ಕರಿಸಲು ಗಾಂಧೀಜಿ ನೀಡಿದ ಕರೆಯಿಂದಾಗಿ ಬಂಗಾಲದಲ್ಲಿ, ವಿದೇಶೀ ವಸ್ತ್ರದ ಆಯಾತದಲ್ಲಿ ಶೇ. 50ರಷ್ಟು ಕಡಿತವಾಯಿತು. ಇತರ ಪ್ರಾಂತ್ಯಗಳೂ ಬಂಗಾಲವನ್ನನುಸರಿಸಿದವು. ವಿದೇಶಿ ವಸ್ತ್ರದ ವ್ಯಾಪಾರ ಕುಸಿಯಿತು. ಭಾರತದ ತನ್ನ ಏರುತ್ತಿರುವ ಬೇಡಿಕೆಗಳನ್ನು ಪೂರೈಸಲು, ಹೊರಗಿನಿಂದ ಆಮದಾಗುತ್ತಿರುವ ವಸ್ತುಗಳನ್ನು ತಾವೇ ಬೆಳೆಯಬೇಕೆಂದು ಗಾಂಧೀಜಿಗೆ ಅನಿಸಿತು. ಭಾರತಕ್ಕೆ ತೊಂದರೆಯಾಗದಿದ್ದಲ್ಲಿ ಮಾತ್ರ ಬ್ರಿಟಿಷ್ ವಾಣಿಜ್ಯ ವ್ಯವಹಾರವನ್ನು ಬೆಂಬಲಿಸತಕ್ಕದ್ದೆಂದೂ ಗಾಂಧೀಜಿ ನುಡಿದರು. ಬರೇ ಖಾದಿ ಉಟ್ಟುಕೊಂಡು, ಸುತ್ತಮುತ್ತ ವಿದೇಶೀ ವಸ್ತುಗಳನ್ನೇ ತುಂಬಿಕೊಂಡಿರುವುದರಿಂದ ಏನನ್ನೂ ಸಾಧಿಸಿದಂತಾಗಲಿಲ್ಲ ಎಂದು ಗಾಂಧೀಜಿಗೆ ಅನಿಸಿತು. ದೊಡ್ಡ ದೊಡ್ಡ ವ್ಯಾಪಾರಿಗಳು ಉದ್ಯಮಪತಿಗಳು ಬ್ರಿಟಿಷರೊಂದಿಗೆ ಶಾಮೀಲಾಗಿ ದೇಶವನ್ನು ಕೊಳ್ಳೆ ಹೊಡೆಯಲು ನೆರವಾಗುತ್ತಿದ್ದರು. ಗಾಂಧೀಜಿ ಇಡಿಯ ದೇಶಕ್ಕೆ ಖಾದಿ ತೊಡಿಸಿ, ಸಾಯುತ್ತಿರುವ ಗ್ರಾಮ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಬಯಸಿದರು.

ವಿರೋಧೀ ಸರ್ಕಾರದಿಂದ ಅವರಿಗಾವ ಪ್ರೋತ್ಸಾಹನವೂ ದೊರೆಯಲಿಲ್ಲ. ಜನರ ಅಸಡ್ಡೆ, ಅಸಹಕಾರ, ಜಿಗುಪ್ಸೆ ಬರಿಸುವಂತಹುದು. ಹೀಗಿದ್ದೂ ಜನತೆಗೆ ಸ್ವಸಹಾಯ, ಸ್ವಂತ ಶ್ರಮದ ಅವಲಂಬನೆ ಮತ್ತು ಆಹಾರ ಪದಾರ್ಥಗಳು, ಬಟ್ಟೆ ಮತ್ತಿತರ ಮೂಲಭೂತ ಅವಶ್ಯಕತೆಗಳ ಉತ್ಪಾದನಾ ಕಲೆಗಳನ್ನು ಕಲಿಸಲು ಗಾಂಧೀಜಿ ಸಂಕಲ್ಪಿಸಿದ್ದರು. ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಮತ್ತು ಅಖಿಲ ಭಾರತ ಚರಕ ಸಂಘಗಳು ಸ್ಥಾಪಿಸಲ್ಪಟ್ಟು ಅವುಗಳ ಶಾಖೆಗಳು ದೇಶಾದ್ಯಂತ ತೆರೆಯಲ್ಪಟ್ಟವು. ವಾರ್ಧಾದ ಮಗನ್‌ವಾಡಿಯು ನೂಲುವಿಕೆ, ನೇಯ್ಗೆ ಕಾಗದ ತಯಾರಿ, ಚರ್ಮೋದ್ಯೋಗ, ಎಣ್ಣೆ ಗಾಣ, ಕೊಟ್ಟಣದ ಅಕ್ಕಿ ತಯಾರಿಕೆ, ಸಾಬೂನು ತಯಾರಿ, ಜೇನು ಸಾಕಣೆ, ಮರಗೆಲಸ ಮತ್ತು ಕಮ್ಮಾರ ವೃತ್ತಿ ಇತ್ಯಾದಿ ಚಟುವಟಿಕೆಗಳ ಕೇಂದ್ರವೇ ಆಯಿತು. ಮನೆಯಲ್ಲೇ ತಯಾರಾದ ಧಾನ್ಯದಿಂದ ಮನೆಯಲ್ಲೇ ತಯಾರಿಸಿದ ರೊಟ್ಟಿ ಹೇಗೆ ಅತಿ ಅಗ್ಗವಾದುದೋ, ಹಾಗೆಯೇ ಮನೆಯಲ್ಲೇ ತಯಾರಿಸಿದ ರೊಟ್ಟಿ ಹೇಗೆ ಅತಿ ಅಗ್ಗವಾದುದೋ,

ಹಾಗೆಯೇ ಮನೆಯಲ್ಲೇ ತಯಾರಾದ ನೂಲಿನಿಂದ ಮನೆಯಲ್ಲೇ ನೇಯ್ದ ಬಟ್ಟೆಯೂ ಉಳಿದೆಲ್ಲಕ್ಕಿಂತಲೂ ಅಗ್ಗವಾದುದು ಎಂದು ಗಾಂಧೀಜಿ ಒತ್ತಿಹೇಳಿದರು. ಗಾಂಧೀಜಿಯ ವಿಚಾರದಲ್ಲಿ ಜೀವನ ಹಣಕ್ಕಿಂತಲೂ ಹೆಚ್ಚಿನದು. ದೀರ್ಘಕಾಲದ ನಿರುದ್ಯೋಗದಿಂದ ಉಂಟಾದ ಸೋಮಾರಿತನವನ್ನು ಕಂಡು ಅವರು ವ್ಯಗ್ರರಾಗುತ್ತಿದ್ದರು. ರಾಷ್ಟ್ರೀಯ ಸ್ವಾಸ್ಥ್ಯದ ಈ ದೃಷ್ಟಿಕೋನದಿಂದ ವಿಚಾರಿಸಿದಾಗ ಗಾಂಧೀಜಿ ತಮ್ಮ ಅರ್ಥಶಾಸ್ತ್ರದ ಕಲ್ಪನೆಯನ್ನೇ ಪುನರ್ವಿಮರ್ಶಿಸಿದರು. ಅವರ ವಾದ ಈ ರೀತಿಯದಾಗಿತ್ತು. ಧಾರಾಳವಾಗಿ ಆಹಾರ ಧಾನ್ಯಗಳನ್ನು ನಾವು ಬೆಳೆದರೂ ಹೊರದೇಶಗಳಿಂದ ಗೋಧಿಯನ್ನು ಆಮದುಮಾಡುತ್ತೇವೆ ಎನ್ನುವುದು ನಿಮಗೆ ಗೊತ್ತೆ? ಅಕ್ಕಿಯ ಗುಣಾಂಶಗಳೆಲ್ಲವೂ ಕಳೆಯುವಂತೆ ಗಿರಣಿಗಳಲ್ಲಿ ತಯಾರಾದ ಅಕ್ಕಿಯ ಅನ್ನವನ್ನು ನಾವು ಉಣ್ಣುತ್ತೇವೆ ಮತ್ತು ಬೆಲ್ಲಕ್ಕಿಂತ ಕಡಿಮೆ ಪೌಷ್ಟಿಕವಾದ ಸಕ್ಕರೆಯನ್ನು ಸೇವಿಸುತ್ತೇವೆ. ಮಿಲ್ಲಿನಲ್ಲಿ ಬೀಸಿದ ಪೌಷ್ಟಿಕಾಂಶಗಳನ್ನು ಕಳೆದುಕೊಂಡ ಆಹಾರ ಪದಾರ್ಥಗಳನ್ನು ಕೊಳ್ಳುತ್ತೇವೆ. ಈ ವ್ಯವಹಾರದಲ್ಲಿ ಅನಾರೋಗ್ಯವನ್ನು ಕ್ರಯ ಕೊಟ್ಟು ಪಡೆದುಕೊಳ್ಳುತ್ತೇವೆ. ಹಳ್ಳಿಯ ಗಾಣಿಗನನ್ನು ನಾಶಮಾಡಿದ್ದೇವೆ. ಐವತ್ತು ವರ್ಷಗಳ ಹಿಂದಿನ ಹಳ್ಳಿಗನಷ್ಟು ಇಂದಿನ ಹಳ್ಳಿಗ ಬುದ್ಧಿವಂತನಾಗಲೀ, ಸಮರ್ಥನಾಗಲಿ ಆಗಿಲ್ಲ. ಇಂದಿನ ಹಳ್ಳಿಗ ಕೊಡುತ್ತಲೇ ಹೋಗುವನೇ ಹೊರತು ಪಡೆಯುವುದು ಕಡಿಮೆ. ನನ್ನ ಯೋಜನೆಯಲ್ಲಿ, ಪಟ್ಟಣಗಳಲ್ಲಿ ಉತ್ಪಾದಿಸುವಷ್ಟೇ ಸಮರ್ಥವಾಗಿ ಹಳ್ಳಿಗಳಲ್ಲಿ ಉತ್ಪಾದಿಸಲಾಗುವಂತಹ ಯಾವ ವಸ್ತುವನ್ನೂ ಪಟ್ಟಣಗಳಲ್ಲಿ ಉತ್ಪಾದಿಸಲು ಬಿಡಲಾಗುವುದಿಲ್ಲ. ತಮ್ಮ ಅಕ್ಕಿಯನ್ನು ತಾವೇ ಕುಟ್ಟಲು, ತಮ್ಮ ಗೋಧಿಯನ್ನು ತಾವೇ ಬೀಸಲು, ಸಕ್ಕರೆಯ ಬದಲು ಬೆಲ್ಲವನ್ನು ಬಳಸಲು ಮತ್ತು ನೂತ ಬಟ್ಟೆ ನೇಯುವ ಜನರಿಗೆ ತಿಳಿಹೇಳಿದರು. ವಿದೇಶೀ ಸಂದರ್ಶಕರು ಬಂದಾಗ, ಕಂದುಬಣ್ಣದ ಬೆಲ್ಲದ ತುಂಡುಗಳನ್ನು ಮಾದರಿಗಾಗಿ ತೋರಿಸುತ್ತಿದ್ದರು.

ಖಾದಿ, ಗಿರಣಿಬಟ್ಟೆಯೊಂದಿಗೆ ಪೈಪೋಟಿ ಮಾಡಬೇಕಾಗಿದೆ ಎನ್ನುವುದನ್ನು ಮರೆತುಬಿಡುವಂತೆ ತನ್ನ ದೇಶವಾಸಿಗಳಿಗೆ ಗಾಂಧೀಜಿ ಹೇಳಿದರು. "ಗಿರಣಿ ಮೂಲಕ ಸದಾಕಾಲವೂ ತನ್ನ ಬಟ್ಟೆಯ ದರವನ್ನು ಕಡಿಮೆಗೊಳಿಸಲು ಹೆಣಗಾಡುತ್ತಲೇ ಇರುವೆ. ಆದರೆ ನಾವು ನ್ಯಾಯದತ್ತ ಮತ್ತು ಜೀವನಾವಶ್ಯಕ ನ್ಯಾಯಸಮ್ಮತ ವೇತನ ಕೊಡುವ ಬಗ್ಗೆ ನಮ್ಮ ಗಮನವಿಡಬೇಕು. ಇಲ್ಲವಾದರೆ ಅದೊಂದು ಪ್ರಜ್ಞಾರಹಿತ ಶೋಷಣೆಯಾದೀತು". ಒಬ್ಬ ಕಾಗದ ಉತ್ಪಾದಕ

ತನ್ನ ಕೆಲಸಗಾರರಿಗೆ ದಿನಕ್ಕೆ ಆರು ಪೈಗಳನ್ನು ಕೊಡುತ್ತಿದ್ದ. ಇದರಿಂದ ಕೈಯಿಂದ ತಯಾರಿಸಿದ ಕಾಗದ ಇನ್ನೂ ಅಗ್ಗವಾದೀತೆಂದು ಅವನ ಆಸೆ. ಅವನಿಂದ ಅಗ್ಗದ ದರದಲ್ಲಿ ಕೊಳ್ಳಲು ಗಾಂಧೀಜಿ ನಿರಾಕರಿಸಿದರು. ಕೆಲಸಗಾರರಿಗೆ ಜೀವನಾವಶ್ಯಕ ಮೂಲವೇತನ ನೀಡಲು ಒತ್ತಾಯಿಸಿದರು.

ರೈತರನ್ನೂ, ಕುಶಲ ಕೆಲಸಗಾರರನ್ನೂ ಹೀರುವ ಮಧ್ಯವರ್ತಿಗಳನ್ನು ನಿವಾರಿಸಲು ಗಾಂಧೀಜಿ ಬಯಸಿದರು. ಉಳುವ ರೈತರಿಗೆ ತಮ್ಮ ಉತ್ಪನ್ನಕ್ಕೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲವೆಂದು ಗಾಂಧೀಜಿಗೆ ತಿಳಿಯಿತು. ಗ್ರಾಹಕರು ನೀಡುವ ಬೆಲೆಯ ಒಂದು ಅಂಶವಷ್ಟೇ ಅವರಿಗೆ ದೊರೆಯುತ್ತಿತ್ತು. ಅವರ ತೊಂದರೆ ಕಡಿಮೆ ಬೆಲೆಯದ್ದಾಗಿರಲಿಲ್ಲ. ಮಧ್ಯವರ್ತಿ, ದಲ್ಲಾಳಿಗಳೇ ಆ ತೊಂದರೆ, ಆಹಾರ ವಸ್ತುಗಳು ಮತ್ತು ಬಟ್ಟೆಯ ಮೇಲಿನ ನಿಯಂತ್ರಣವನ್ನು ಗಾಂಧೀಜಿ ವಿರೋಧಿಸಿದರು. ಬನಿಯಾಗಳು ಕಳ್ಳಸಾಗಾಣಿಕೆ ಮತ್ತು ಲಾಭಕೋರತನಗಳಲ್ಲಿ ತೊಡಗುವುದನ್ನು ಖಂಡಿಸಿದರು. ವ್ಯಾಪಾರಿಗಳು ವಂಚನೆಯಿಂದ ಅಪಾರ ಸಂಪತ್ತು ಕೂಡಿಹಾಕಿ, ತಾವು ದುರ್ಮಾರ್ಗದಿಂದ ಗಳಿಸಿದ ಹಣವನ್ನು ದಾನಧರ್ಮಗಳಿಗಾಗಿ ಬಳಸುವ ಮೂಲಕ ಪಾಪಮುಕ್ತರಾಗುವೆವೆಂದು ತಿಳಿದು ತಮ್ಮನ್ನೇ ತಾವು ವಂಚಿಸಿಕೊಳ್ಳುತ್ತಿರುವರೆಂದು ಆಪಾದಿಸಿದರು. "ದೊಡ್ಡ ವ್ಯಾಪಾರಿಗಳು ಮತ್ತು ಬಂಡವಾಳಗಾರರು ಮಾತಿನಲ್ಲಿ ಬ್ರಿಟಿಷ್ ಸರಕಾರವನ್ನು ವಿರೋಧಿಸುತ್ತಾರೆ. ಆದರೆ ಕಾರ್ಯದಲ್ಲಿ ಅವರ ಇಚ್ಛೆಯಂತೆ ವ್ಯವಹರಿಸಿ ಆ ಮೂಲಕ ಲಾಭಗಳಿಸುತ್ತಾರೆ. ಅವರಿಗೆ ದೊರೆಯುವ ಲಾಭವೇನೋ ಕೇವಲ ಶೇ. 5 ಉಳಿದ ಶೇ. 95 ಬ್ರಿಟಿಷ್ ಸರ್ಕಾರಕ್ಕೆ ಭಾರತೀಯ ವ್ಯಾಪಾರಿಗಳು ವಿದೇಶಿ ಮಾಲುಗಳನ್ನು ಭಾರತೀಯ ಮಾಲುಗಳೇಂದೇ ಸುಳ್ಳು ಹೇಳಿ ಮಾರಿದುದರಿಂದಲೇ ಸ್ವದೇಶಿ ಚಳುವಳಿ ತಣ್ಣಗಾಯಿತೆಂದು ನನಗೆ ತಿಳಿದುಬಂದಿದೆ. ವ್ಯಾಪಾರಿಗಳಿಂದಾಗಿಯೇ ಭಾರತ ಪರದಾಸ್ಯಕ್ಕೊಳಗಾಯಿತು ಎಂಬುದು ನನಗೆ ಗೊತ್ತು. ವ್ಯಾಪಾರಿಗಳ ಮೂಲಕವೇ ಭಾರತ ತನ್ನ ಸ್ವಾತಂತ್ರ್ಯವನ್ನು ಮರಳಿ ಪಡೆಯುವುದೆಂದೂ ನನಗೆ ಖಂಡಿತ ನಂಬಿಕೆ ಇದೆ" ಎಂದು ಗಾಂಧೀಜಿ ಬನಿಯಾಗಳನ್ನುದ್ದೇಶಿಸಿ ಹೇಳಿದರು.

ಲೇಖಕ-ಸಂಪಾದಕ

ಗಾಂಧೀಜಿ ಇಂಡಿಯನ್ ಒಪಿನಿಯನ್, ಯಂಗ್ ಇಂಡಿಯಾ, ನವಜೀವನ ಮತ್ತು ಹರಿಜನ ಪತ್ರಿಕೆಗಳ ಸಂಪಾದಕರಾಗಿದ್ದರು. ತಮ್ಮದೇ ಮುದ್ರಣಾಲಯದಲ್ಲಿ ಅವುಗಳನ್ನು ಮುದ್ರಿಸಿ ಪ್ರಕಟಿಸಿದರು. ಇತರರ ಸ್ವಾಮ್ಯಕ್ಕೊಳಪಟ್ಟ ಮುದ್ರಣಾಲಯದಲ್ಲಿ ತಮ್ಮ ಪತ್ರಿಕೆಗಳನ್ನು ಮುದ್ರಿಸಿದರೆ ತಮ್ಮ ಅಭಿಪ್ರಾಯಗಳನ್ನು ಸ್ವತಂತ್ರವಾಗಿ ವ್ಯಕ್ತಪಡಿಸುವುದು ಸಾಧ್ಯವಾಗಲಾರದೆಂದು ಅವರ ಅನಿಸಿಕೆಯಾಗಿತ್ತು. ಇಂಡಿಯನ್ ಒಪಿನಿಯನ್ ಪತ್ರಿಕೆಯ ಹೊಣೆಯನ್ನು ಗಾಂಧೀಜಿ ಹೊತ್ತುಕೊಂಡಾಗ ಅದು ನಷ್ಟದಲ್ಲಿ ನಡೆಯುತ್ತಿತ್ತು. ಮುದ್ರಣಾಲಯವನ್ನು ನಗರ ಮಧ್ಯದಿಂದ ದೂರವಾದ ಫೀನಿಕ್ಸ್ ಆಶ್ರಮಕ್ಕೆ ಒಯ್ಯಲು ಗಾಂಧೀಜಿ ನಿರ್ಧರಿಸಿದರು. ಅದೊಂದು ವಿಫಲ ಯತ್ನವಾದೀತೆಂದು ಅವರ ಗೆಳೆಯರ ಅನಿಸಿಕೆಯಾಗಿತ್ತು. ಗಾಂಧೀಜಿ ಮುದ್ರಣ ಯಂತ್ರಗಳನ್ನೂ, ಸಲಕರಣೆಗಳನ್ನೂ ಮತ್ತು ಪೀಠೋಪಕರಣಗಳನ್ನೂ ಚೊಕ್ಕವಾಗಿ ಒಂದು ಶೆಡ್ಡಿನಲ್ಲಿ ಹೊಂದಿಸಿದರು. ಪೆಟ್ರೋಲ್‌ನಿಂದ ನಡೆಯುವ ಹಳೆಯಂತ್ರ ಒಂದನ್ನು ಮುದ್ರಣ ಯಂತ್ರ ನಡೆಸಲು ಉಪಯೋಗಿಸಲಾಯಿತು. ಪ್ರತ್ಯೇಕ ಕೋಣೆಯೊಂದರಲ್ಲಿ ಗಾಂಧೀಜಿಯ ಕಛೇರಿ ಇತ್ತು. ಸಂಬಳದ ಕೆಲಸಗಾರನಾಗಲೀ, ಚಪರಾಸಿಯಾಗಲಿ ಇದ್ದಿಲ್ಲ. ಇಂಡಿಯನ್ ಒಪಿನಿಯನ್ ಪ್ರತಿ ಶನಿವಾರ ಪ್ರಕಟವಾಗುತ್ತಿತ್ತು. ಶುಕ್ರವಾರ ಮಧ್ಯಾಹ್ನದೊಳಗೆ ಲೇಖನಗಳು ಮೊಳೆ ಜೋಡಿಸುವ ಕೆಲಸ ಮುಗಿಯುತ್ತಿತ್ತು. ಆಶ್ರಮದ ಎಳೆಯ-ಹಿರಿಯ ಸದಸ್ಯರೆಲ್ಲ ಮೊಳೆ ಜೋಡಿಸುವ, ಮುದ್ರಿಸುವ, ಕಾಗದಗಳನ್ನು ಕತ್ತರಿಸುವ ಮತ್ತು ಹಾಳೆಗಳನ್ನು ಮಡಿಸುವ, ವಿಳಾಸಗಳನ್ನು ಅಂಟಿಸುವ ಮತ್ತು ಪತ್ರಿಕೆಗಳನ್ನು ಕಟ್ಟುಗಳನ್ನಾಗಿ ಮಾಡುವ ವಿವಿಧ ಕೆಲಸಗಳಲ್ಲಿ ನೆರವಾಗುತ್ತಿದ್ದರು. ಸಕಾಲದಲ್ಲಿ ಪತ್ರಿಕೆಗಳ ಕಟ್ಟುಗಳನ್ನು ರೈಲ್ವೆ ನಿಲ್ದಾಣಕ್ಕೂ ಅವರೇ ತಲುಪಿಸಬೇಕಾಗಿತ್ತು. ಸಾಮಾನ್ಯವಾಗಿ ಅವರೆಲ್ಲ ಮಧ್ಯರಾತ್ರಿಯವರೆಗೂ ಕೆಲಸ ಮಾಡುತ್ತಿದ್ದರು. ಕೆಲಸದ ವಿಪರೀತ ಒತ್ತಡವಿದ್ದಾಗ ಇತರರೊಂದಿಗೆ ಗಾಂಧೀಜಿಯೂ ಶುಕ್ರವಾರ ರಾತ್ರಿ ಇಡೀ ಎಚ್ಚರವಾಗಿರುತ್ತಿದ್ದರು. ಕೆಲವೊಮ್ಮೆ ಕಸ್ತೂರ್‌ಬಾ ಮತ್ತು ಇತರ ಮಹಿಳೆಯರೂ ನೆರವಾಗುತ್ತಿದ್ದರು.

ಫೀನಿಕ್ಸ್ ಆಶ್ರಮದಲ್ಲಿ ಇಂಡಿಯನ್ ಒಪಿನಿಯನ್ ಪತ್ರಿಕೆ ಮುದ್ರಣವಾಗುವ ಮೊದಲ ರಾತ್ರಿಯೇ ಪೆಟ್ರೋಲ್‌ಯಂತ್ರ ಕೈಕೊಟ್ಟಿತು. ಕೈಯಲ್ಲಿ ತಿರುಗಿಸುವ ಚಕ್ರದ ನೆರವಿನಿಂದ ಗಾಂಧೀಜಿ ಮತ್ತು ಇತರ ದೃಢಕಾಯರಾದ ಆಶ್ರಮವಾಸಿಗಳು ಮುದ್ರಣಯಂತ್ರವನ್ನು ನಡೆಸಿ ಸಕಾಲದಲ್ಲಿ ಪತ್ರಿಕೆಯನ್ನು ಹೊರತಂದರು. ಈ ವ್ಯವಸ್ಥೆಗಳು ಗಾಂಧೀಜಿಗೆ ಮುದ್ರಣ ಕೆಲಸದ ವಿವರಗಳನ್ನು ತಿಳಿದುಕೊಳ್ಳಲು ನೆರವಾಯಿತು. ಅವರು ಲೇಖನಗಳನ್ನು ಬರೆದರು, ಮೊಳೆಗಳನ್ನು ಜೋಡಿಸಿದರು. ಮುದ್ರಣ ಕೆಲಸದಲ್ಲೂ ನೆರವಾದರು ಮತ್ತು ಕರಡಚ್ಚು ತಿದ್ದಿದರು. ಅನೇಕ ಎಳೆಯರೂ ಅವರೊಂದಿಗೆ ದುಡಿದರು.

ಒಮ್ಮೆ, ಇಂಡಿಯನ್ ಒಪಿನಿಯನ್ ಪತ್ರಿಕೆಯ ಒಂದು ಆವೃತ್ತಿಯ ಮುದ್ರಣ ಪ್ರಕಾಶನಗಳೆರಡನ್ನೂ ಯುವಕರೇ ನಿರ್ವಹಿಸಿದರು. ಇಂಡಿಯನ್ ಒಪಿನಿಯನ್ ಇಂಗ್ಲಿಷ್, ಹಿಂದಿ, ಗುಜರಾತಿ ಮತ್ತು ತಮಿಳು ಈ ನಾಲ್ಕು ಭಾಷೆಗಳಲ್ಲಿ ಪ್ರಕಟವಾಗುತ್ತಿತ್ತು. ಸಂಪಾದಕರು ಮತ್ತು ಮೊಳೆ ಜೋಡಿಸುವವರ ಪ್ರಭಾವದಿಂದಾಗಿ ಆಮೇಲೆ ಇಂಗ್ಲಿಷ್ ಮತ್ತು ಗುಜರಾತಿಗಳಲ್ಲಿ ಮಾತ್ರ ಪ್ರಕಟವಾಯಿತು. ಭಾರತಕ್ಕೆ ಭೇಟಿ ನೀಡಿದ ವೇಳೆ ಮದರಾಸಿನ ಬಳಿ ಆಡ್ಯಾರ್‌ಗೆ ಸಂದರ್ಶಿಸಿದಾಗ ಅಲ್ಲಿನ ಮುದ್ರಣ ಕಾರ್ಯಗಳನ್ನು ಗಾಂಧೀಜಿ ಹೇಗೆ ಒಬ್ಬ ತಜ್ಞನ ದೃಷ್ಟಿಯಿಂದ ಪರಿಶೀಲಿಸಿದರೆನ್ನುವುದನ್ನು ಶ್ರೀಮತಿ ಆನೀಬೆಸೆಂಟರು ಗಮನಿಸಿದರು.

ವಾರಪತ್ರಿಕೆಗಳಲ್ಲದೆ ಫೀನಿಕ್ಸ್ ಮತ್ತು ನವಜೀವನ ಮುದ್ರಣಾಲಯಗಳಲ್ಲಿ ಇಂಗ್ಲಿಷ್, ಹಿಂದಿ ಮತ್ತು ಇತರ ಅನೇಕ ಭಾಷೆಗಳ ಪುಸ್ತಕಗಳೂ ಮುದ್ರಿತವಾಗುತ್ತಿದ್ದವು. ಗಾಂಧೀಜಿ ಯಾವತ್ತೂ ಸರಕಾರದ ಬಳಿ ಭದ್ರತಾ ಹಣವನ್ನು ಒತ್ತೆ ಇಡುತ್ತಿರಲಿಲ್ಲ. ಅವರ ಸ್ವಂತ ಬರಹಗಳಿಂದ ಬಂದ ಲಾಭಾಂಶವೆಲ್ಲ ಖಾದಿಯ ಕೆಲಸಕ್ಕೆ ವಿನಿಯೋಗವಾಗುತ್ತಿತ್ತು. ಒಂದು ಲಕ್ಷ ರೂ. ಬೆಲೆಯ ನವಜೀವನ ಮುದ್ರಣಾಲಯವನ್ನು ಗಾಂಧೀಜಿ ಒಂದು ವಿಶ್ವಸ್ತ ಮಂಡಳಿಯಾಗಿ ಮಾಡಿದರು.

ಕೆಟ್ಟದಾಗಿ ಮುದ್ರಿಸುವುದನ್ನು ಒಂದು ಹಿಂಸೆಯೆಂದೇ ಗಾಂಧೀಜಿ ಪರಿಗಣಿಸುತ್ತಿದ್ದರು. ಒಳ್ಳೆಯ ಮೊಳೆಗಳು, ಬಾಳಿಕೆ ಬರುವ ಕಾಗದ ಮತ್ತು ಸರಳ ಸುಂದರವಾದ ಹೊದಿಕೆಗಳನ್ನು ಗಾಂಧೀಜಿ ಮೆಚ್ಚುತ್ತಿದ್ದರು. ಭಾರತದಂತಹ ಬಡದೇಶದ ಜನತೆಗೆ ಆಕರ್ಷಕ ಹೊದಿಕೆಯ ಬೆಲೆಬಾಳುವ ಪುಸ್ತಕಗಳು ಎಟುಕಲಾರವೆಂದು ಅವರಿಗೆ ತಿಳಿದಿತ್ತು. ಗಾಂಧೀಜಿಯ ಜೀವಿತ ಕಾಲದಲ್ಲಿ

ನವಜೀವನ ಮುದ್ರಣಾಲಯ ಕಡಿಮೆ ಬೆಲೆಯ ಅನೇಕ ಪುಸ್ತಕಗಳನ್ನು ಹೊರತಂದಿತು. ಗುಜರಾತಿ ಭಾಷೆಯ ಅವರ ಆತ್ಮಕತೆಗೆ ಕೇವಲ 12 ಆಣೆಗಳ ಬೆಲೆ ನಿಗದಿಯಾಗಿತ್ತು. ದೇವನಾಗರಿಯಲ್ಲಿ ಅದರದೊಂದು ಅಗ್ಗದ ಆವೃತ್ತಿಯನ್ನೂ ಹೊರಡಿಸಲಾಗಿತ್ತು.

ಭಾರತಾದ್ಯಂತ ಒಂದೇ ಲಿಪಿಯನ್ನು ಬಳಸುವುದರ ಲಾಭ ಮತ್ತು ಅವಶ್ಯಕತೆಗಳನ್ನು ಗಾಂಧೀಜಿ ಪ್ರತಿಪಾದಿಸಿದರು. ಅದರಿಂದ ಓದುಗರು ಮತ್ತು ಮುದ್ರಕರಿಗೆ ಸಮಯ ಮತ್ತು ಶ್ರಮಗಳ ಉಳಿತಾಯವಾಗುತ್ತದೆ ಎಂದು ಗಾಂಧೀಜಿ ಹೇಳುತ್ತಿದ್ದರು. ಸಾಮಾನ್ಯವಾಗಿ ಭಾರತದ ಎಲ್ಲ ಭಾಷೆಗಳೂ ಸಂಸ್ಕೃತದಿಂದಲೇ ಬಂದುದುವಾದ್ದರಿಂದ ಅವರು ದೇವನಾಗರಿ ಲಿಪಿಯನ್ನೇ ಈ ಉದ್ದೇಶಕ್ಕೆ ಸೂಕ್ತವೆಂದು ಭಾವಿಸಿದ್ದರು. ಇಂಡಿಯನ್ ಒಪಿನಿಯನ್‌ನಲ್ಲಿ ಒಂದು ಪುಟದಲ್ಲಿ ತುಲಸೀ ರಾಮಾಯಣದ ಹಿಂದೀ ಲಿಪಿಯಲ್ಲಿ ನೀಡಿದ ವಿವರಣೆಗೆಂದೇ ಮೀಸಲಿಡಲಾಗಿತ್ತು. ತಮ್ಮ ಕೃತಿಗಳ ಸ್ವಾಮ್ಯದ ಬಗ್ಗೆ ಗಾಂಧೀಜಿ ತಲೆಕೆಡಿಸಿಕೊಳ್ಳಲಿಲ್ಲ. ಅವರು ಸಂಪಾದಿಸಿದ ಪತ್ರಿಕೆಗಳಲ್ಲಿನ ಬರಹಗಳು ಎಲ್ಲರ ಸ್ವತ್ತಾಗಿದ್ದವು. ಅವರ ಬರಹಗಳನ್ನು ವಿಕೃತಗೊಳಿಸಿ ಬರೆದ ಪ್ರಸಂಗಗಳು ಬಂದಾಗಷ್ಟೇ ಗಾಂಧೀಜಿ ಕೃತಿಸ್ವಾಮ್ಯದ ಹಕ್ಕುಗಳನ್ನು ಚಲಾಯಿಸಲು ಒಪ್ಪಿದರು.

ಮಕ್ಕಳ ಪುಸ್ತಕಗಳನ್ನು ಒಳ್ಳೆಯ ಕಾಗದದಲ್ಲಿ ದೊಡ್ಡ ಅಕ್ಷರಗಳಲ್ಲಿ ಮುದ್ರಿಸಬೇಕು ಮತ್ತು ಪ್ರತಿ ಸಂಗತಿಯನ್ನೂ ಚಿತ್ರಗಳಿಂದ ವಿವರಿಸಬೇಕು ಎಂದು ಗಾಂಧೀಜಿಯ ಇಚ್ಛೆಯಾಗಿತ್ತು. ಮಕ್ಕಳ ಪುಸ್ತಕಗಳು ಬಹಳ ದಪ್ಪವಾಗಿರಬಾರದು ಎನ್ನುತ್ತಿದ್ದರು ಗಾಂಧೀಜಿ.

ಒಮ್ಮೆ, ರಾಷ್ಟ್ರೀಯ ಶಿಕ್ಷಣದ ಉಸ್ತುವಾರಿಯಲ್ಲಿದ್ದ ಆಶ್ರಮವಾಸಿಯೊಬ್ಬರು ಮಕ್ಕಳಿಗೆಂದು ಬಾಲಬೋಧೆಯೊಂದನ್ನು ಹೊರತಂದರು. ಅದರ ಪ್ರತಿ ಪುಟದಲ್ಲೂ ಚಿತ್ರಗಳಿದ್ದವು ಮತ್ತು ಅದನ್ನು ಬಣ್ಣ ಬಣ್ಣದ ಆರ್ಟ್ ಕಾಗದದಲ್ಲಿ ಮುದ್ರಿಸಲಾಗಿತ್ತು. ಹೆಮ್ಮೆಯಿಂದ ಅದನ್ನು ರಚಿಸಿದವರು "ಬಾಪೂಜಿ, ಬಾಲಬೋಧೆ ಪುಸ್ತಕವನ್ನು ನೋಡಿದಿರಾ? ಆ ಪುಸ್ತಕದ ಇಡೀ ಕಲ್ಪನೆಯೇ ನನ್ನದು" ಎಂದರು. ಗಾಂಧೀಜಿ "ಹೌದು, ಅದು ಸುಂದರವಾಗಿದೆ. ಆದರೆ ನೀವು ಅದನ್ನು ಯಾರಿಗೋಸ್ಕರ ಮುದ್ರಿಸಿದ್ದೀರಿ? ಐದು ಆಣೆ ಬೆಲೆಯ ಈ ಪುಸ್ತಕವನ್ನು ಎಷ್ಟು ಮಂದಿ ಓದುಗರು ಕೊಂಡುಕೊಳ್ಳಲು ಸಾಧ್ಯ? ಭಾರತದ ಹಸಿದ ಕೋಟಿ ಕೋಟಿ ಜನಗಳ ಮಕ್ಕಳ

ಶಿಕ್ಷಣದ ಹೊಣೆಗಾರಿಕೆ ನಿಮ್ಮ ಮೇಲಿದೆ. ಬೇರೆ ಪುಸ್ತಕಗಳಿಗೆ ಒಂದು ಆಣೆ ಬೆಲೆಯಾದರೆ, ನಿಮ್ಮದಕ್ಕೆ ಎರಡೇ ಪೈಗಳಿರಬೇಕು" ಎಂದರು. ಒಮ್ಮೆ ಗಾಂಧೀಜಿ ಎರಡಾಣೆ ಬೆಲೆಯ ವಾರಪತ್ರಿಕೆಯೊಂದರ ಹೊಣೆ ಹೊತ್ತು ಅದರ ಬೆಲೆಯನ್ನು ಪ್ರತಿಗೆ ಒಂದಾಣೆಗೆ ಇಳಿಸಿದರು. ಮುದ್ರಣದಲ್ಲಿ ಗಾಂಧೀಜಿಗೆ ಹಣ ಉಳಿಸುವುದೇ ಅಂತಿಮ ಗುರಿಯಾಗಿರಲಿಲ್ಲ.

ಒಮ್ಮೆ ನವಜೀವನ ಮುದ್ರಣಾಲಯವು ಗೋಖಲೆಯವರ ಬರಹಗಳ ಮತ್ತು ಭಾಷಣಗಳ ಗುಜರಾತಿ ಅನುವಾದವನ್ನು ಪ್ರಕಟಿಸುವ ಯೋಜನೆಯನ್ನು ಕೈಗೆತ್ತಿಕೊಂಡಿತು. ಪುಸ್ತಕ ಮುದ್ರಣಗೊಂಡಾಗ ಮುನ್ನುಡಿ ಬರೆಯಲು ಗಾಂಧೀಜಿಯನ್ನು ಕೇಳಿಕೊಳ್ಳಲಾಯಿತು. ಗಾಂಧೀಜಿ ಭಾಷಾಂತರ ತುಂಬ ಕೀಳ್ಮಟ್ಟದ್ದೆಂದೂ, ಅದನ್ನು ನಾಶಮಾಡಿ ಬೇರೆಯೇ ಅನುವಾದ ತಯಾರಿಸಬೇಕೆಂದೂ ಸಲಹೆ ನೀಡಿದರು. ಈಗಾಗಲೇ ಅದರ ಮುದ್ರಣ ಕಾರ್ಯಕ್ಕೆ 700 ರೂ. ವೆಚ್ಚ ತಗುಲಿದೆ ಎಂದು ತಿಳಿಸಿದಾಗ ಗಾಂಧೀಜಿ ರೇಗಿ "ಈಗ ಮಾಡಿದ ವೆಚ್ಚ ಸಾಲದೇ? ಹೊದಿಕೆಗಳಿಗೆ ಹೊತ್ತು ಬೈಂಡಿಗ್‌ಗೆ ಇನ್ನಷ್ಟು ಸುರಿದು ಈ ಪ್ರಯೋಜನಕ್ಕೆ ಬಾರದ ಕಸವನ್ನು ಸಾರ್ವಜನಿಕರಿಗೆ ಕೊಡುವುದು ಸೂಕ್ತವೆಂದು ನಿಮ್ಮೆಣಿಕೆಯೇನು? ಕೆಟ್ಟ ಸಾಹಿತ್ಯವನ್ನು ವಿತರಣೆ ಮಾಡಿ ಜನರ ಅಭಿರುಚಿಯನ್ನು ಕೆಡಿಸುವುದು ನನಗೆ ಇಷ್ಟವಿಲ್ಲ" ಎಂದು ನುಡಿದರು. ಇಡಿಯ ಮುದ್ರಿತ ಹಾಳೆಗಳನ್ನು ಸುಟ್ಟುಬಿಡಲಾಯಿತು. ರದ್ದಿ ಅಂಗಡಿಗೂ ಕಳುಹಿಸಲಿಲ್ಲ.

ಗಾಂಧೀಜಿ ಪತ್ರಿಕಾಸ್ವಾತಂತ್ರ್ಯವನ್ನು ಸದಾ ಸಮರ್ಥಿಸುತ್ತಿದ್ದರು. ಪ್ರಮುಖ ವಿಚಾರಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಸರ್ಕಾರ ನಿಯಂತ್ರಿಸಿದಾಗಲೆಲ್ಲಾ ಗಾಂಧೀಜಿ ತಮ್ಮ ಪತ್ರಿಕೆಗಳ ಪ್ರಕಟಣೆಯನ್ನೇ ನಿಲ್ಲಿಸಿಬಿಡುತ್ತಿದ್ದರು. ಗಾಂಧೀಜಿಯ ಲೇಖನಸ್ವಾತಂತ್ರ್ಯದ ಅರಿವಿದ್ದ ಸರ್ಕಾರ ಅವರ ಮುದ್ರಣಾಲಯವನ್ನು ಮುಟ್ಟುಗೋಲು ಹಾಕಿಕೊಂಡಿತು. ಅವರ ಕಾಗದ ಪತ್ರಗಳನ್ನು ನಾಶಮಾಡಲಾಯಿತು. ಗಾಂಧೀಜಿ ಮತ್ತವರ ಕಾರ್ಯಕರ್ತರು ಜೈಲುವಾಸ ಅನುಭವಿಸಿದರು. ಆದರೆ ಎಂದೂ ಗಾಂಧೀಜಿ ನಿರುತ್ಸಾಹಗೊಳ್ಳಲಿಲ್ಲ. "ಯಂತ್ರ ಮತ್ತು ಸೀಸದ ಮೊಳೆಗಳನ್ನು ನಾಶಮಾಡಬಹುದು. ಲೇಖನಿಯೇ ನಮ್ಮ ಕಾರ್ಯಾಗಾರವಾಗಲಿ. ಲೇಖನಗಳ ಪ್ರತಿ ತೆಗೆಯುವವರೇ ನಮ್ಮ ಮುದ್ರಣಯಂತ್ರವಾಗಲಿ. ಪ್ರತಿಯೊಬ್ಬನೂ ತಾನೇ ಒಂದು ನಡೆದಾಡುವ ಪತ್ರಿಕೆಯಾಗಲಿ ಮತ್ತು ಬಾಯಿಂದ ಬಾಯಿಗೆ ಸುದ್ದಿಯನ್ನು ಮುಟ್ಟಿಸಲಿ. ಈ ಪತ್ರಿಕೆಯನ್ನು ಯಾವ ಸರ್ಕಾರವೂ ಬಗ್ಗುಬಡಿಯಲಾರದು ಎಂದರು ಗಾಂಧೀಜಿ.

ಜೈಲು ಹಕ್ಕಿ

ಗಾಂಧೀಜಿ ದಂಗೆಯನ್ನು ಬೋಧಿಸಿದರು. ಸಾರ್ವತ್ರಿಕ ಕಾಯ್ದೆಭಂಗ ಚಳುವಳಿಗಳನ್ನು ಸಂಘಟಿಸಿದರು. ಮತ್ತು ಮತ್ತೆ ಮತ್ತೆ ಜೈಲುವಾಸಕ್ಕೊಳಗಾದರು. ಬಂಧನಕ್ಕೊಳಗಾದಾಗ ತಪ್ಪನ್ನು ಒಪ್ಪಿಕೊಂಡು ತಮಗೆ ಕಠಿಣ ಶಿಕ್ಷೆಯನ್ನೇ ವಿಧಿಸುವಂತೆ ಕೇಳಿಕೊಂಡರು. ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿಯವರೇ ಒದಗಿಸಿದ ಸಾಕ್ಷಿಗಳಿಂದ ಅವರ ಮತ್ತು ಅವರ ಸಂಗಡಿಗರ ಮೇಲಿನ ಆಪಾದನೆ ರುಜುವಾತಾದುವು. ಮೂಲತಃ ಅಪರಾಧಿಗಳಿಗೆ ನೀಡಲಾಗುತ್ತಿದ್ದ, ಜೈಲುವಾಸದ ಭಯಾನಕ, ಅಪಮಾನಕಾರಿ ಕಷ್ಟ ಕಾರ್ಪಣ್ಯಗಳಿಂದ ಭಾರತೀಯರು ಭಯಗ್ರಸ್ತರಾಗುತ್ತಿದ್ದರು. ಆದರೆ ಗಾಂಧೀಜಿ ಅವರ ಹೃದಯಗಳಿಂದ ಈ ಭಯವನ್ನು ದೂರಮಾಡಿದರು.

ಗಾಂಧೀಜಿ ಹನ್ನೊಂದು ಬಾರಿ ಜೈಲುವಾಸ ಅನುಭವಿಸಿದರು. ಒಮ್ಮೆ ನಾಲ್ಕು ದಿನಗಳಲ್ಲಿ ಮೂರು ಬಾರಿ ಬಂಧಿತರಾದರು. ಅವರಿಗೆ ವಿಧಿಸಲಾದ ಎಲ್ಲ ಜೈಲು ಶಿಕ್ಷೆಯನ್ನು ಪೂರ್ಣವಾಗಿ ಅನುಭವಿಸಬೇಕಾಗಿದ್ದರೆ ಗಾಂಧೀಜಿ 11 ವರ್ಷ 19 ದಿನಗಳ ಕಾಲ ಸೆರೆಮನೆಯಲ್ಲಿರಬೇಕಾಗಿತ್ತು. ಕೆಲವೊಮ್ಮೆ ಅವರ ಶಿಕ್ಷೆಯ ಅವಧಿಯಲ್ಲಿ ಕಡಿತ ಮಾಡಲಾಯಿತು. ಹೀಗೆ ಗಾಂಧೀಜಿ ಒಟ್ಟು 6 ವರ್ಷ 10 ತಿಂಗಳು ಸೆರೆಮನೆಯಲ್ಲಿ ಕಳೆದರು. ಮೊಟ್ಟಮೊದಲ ಬಾರಿ ಸೆರಮನೆಗೆ ಪ್ರವೇಶಿಸಿದಾಗ ಗಾಂಧೀಜಿಗೆ 39 ವರ್ಷ ಪ್ರಾಯ. ಕೊನೆಯ ಬಾರಿಗೆ ಜೈಲನ್ನು ತ್ಯಜಿಸಿ ಹೊರಬಂದಾಗ ಅವರಿಗೆ 75 ವರ್ಷ.

ಮೊದಲಿಗೆ ದಕ್ಷಿಣ ಆಫ್ರಿಕಾದ ಜೈಲನ್ನು ಗಾಂಧೀಜಿ ಐವರು ಸತ್ಯಾಗ್ರಹಿಗಳೊಂದಿಗೆ ಪ್ರವೇಶಿಸಿದರು. ಜೈಲಿನ ಜೀವನದ ಬಗ್ಗೆ ಭಯಂಕರ ಕತೆಗಳನ್ನು ಕೇಳಿದ್ದ ಗಾಂಧೀಜಿ ಪ್ರಾರಂಭದಲ್ಲಿ ಸ್ವಲ್ಪ ಅಧೀರರಾಗಿದ್ದರು. ತಮಗೆ ರಾಜಕೀಯ ಖೈದಿಯಾಗಿ ವಿಶೇಷ ಸೌಕರ್ಯಗಳನ್ನು ಒದಗಿಸಲಾಗುವುದೇ, ಅಥವಾ ತಮ್ಮನ್ನು ತಮ್ಮ ಸಂಗಡಿಗರಿಂದ ಬೇರ್ಪಡಿಸಲಾಗುವುದೇ ಎಂದೆಲ್ಲ ಯೋಚನೆಗೊಳಗಾದರು. ತಾನು ನ್ಯಾಯವಾದಿಯಾಗಿ ವಾದಿಸಿದ ನ್ಯಾಯಾಲಯದಲ್ಲೇ ಆರೋಪಿಯಾಗಿ ನಿಂತಾಗ ಒಮ್ಮೆ ಸ್ವಲ್ಪ ಕಸಿವಿಸಿಯಾಯಿತು. ಅವರಿಗೆ ಎರಡು ತಿಂಗಳು ಸಾದಾ ಶಿಕ್ಷೆ

ವಿಧಿಸಲ್ಪಟ್ಟಿತು. ನ್ಯಾಯಾಲಯದ ಹೊರಗೆ ಕಾದಿದ್ದ ದೊಡ್ಡ ಗುಂಪನ್ನು ತಪ್ಪಿಸಿ, ಹಿಂಬಾಗಿಲಿನಿಂದ ಗಾಂಧೀಜಿಯನ್ನು ಕಾರಿನಲ್ಲಿ ಸೆರೆಮನೆಗೆ ಒಯ್ಯಲಾಯಿತು.

ಜೈಲಿಗೆ ತಲುಪಿದ ಬಳಿಕ ಅವರು ಬೆರಳುಗಳ ಅಚ್ಚನ್ನು ಅಧಿಕಾರಿಗಳಿಗೆ ಕೊಡಬೇಕಾಯಿತು. ಅವರ ತೂಕವನ್ನು ಬರೆದುಕೊಂಡು, ಉಡುಪುಗಳನ್ನೆಲ್ಲ ತೆಗೆದು, ಕೊಳಕಾದ ಜೈಲು ಉಡುಪುಗಳನ್ನಿತ್ತರು. ಪ್ರತಿ ಎರಡು ಮೂರು ದಿನಕ್ಕೊಮ್ಮೆ ಇನ್ನಷ್ಟು ಸಂಗಾತಿಗಳು ಜೈಲಿಗೆ ಬರುತ್ತಿದ್ದರು. ಹದಿನೈದು ದಿನಗಳೊಳಗೆ ಸಂಖ್ಯೆ 150ಕ್ಕೇರಿತು ಅವರನ್ನೆಲ್ಲ ಕೇವಲ 50 ಮಂದಿಗೆ ಸಾಲುವಂತಹ ಚಿಕ್ಕ ಕೊಠಡಿಯಲ್ಲಿ ಕೂಡಿಹಾಕಲಾಯಿತು. ರಾತ್ರಿ ಕೆಲವು ಖೈದಿಗಳ ವಾಸ್ತವ್ಯಕ್ಕೆಂದೇ ಡೇರೆಗಳನ್ನು ಹಾಕಿದರು.

ಜೈಲು ಇನ್‌ಸ್ಪೆಕ್ಟರ್, ಗವರ್ನರ್ ಮತ್ತು ಚೀಫ್ ವಾರ್ಡರ್ ದಿನಕ್ಕೆ ನಾಲ್ಕು ಅಥವಾ ಐದು ಸಾರಿ ಜೈಲಿಗೆ ಭೇಟಿ ನೀಡುತ್ತಿದ್ದರು. ಆಗ ಗಾಂಧೀಜಿ ಮತ್ತು ಇತರ ಖೈದಿಗಳು ತಮ್ಮ ಟೊಪ್ಪಿಗೆಗಳನ್ನು ಕೈಯಲ್ಲಿ ಹಿಡಿದುಕೊಂಡು ಸಾಲಾಗಿ ನಿಲ್ಲಬೇಕಿತ್ತು. ಜೈಲಿನಲ್ಲಿ ಗಾಂಧೀಜಿ ಶರೀರಶ್ರಮದ ಕೆಲಸ ಮಾಡಲು ಮುಂದೆ ಬಂದರಾದರೂ, ಅವರಿಗೆ ಆ ಕೆಲಸ ದೊರೆಯಲಿಲ್ಲ. ಭಾರತೀಯರಿಗೆ ಜೈಲಿನ ಆಹಾರ ತುಂಬ ತ್ರಾಸದಾಯಕವಾಗಿತ್ತು. ಬೆಳಿಗ್ಗೆ ಸಂಜೆಗಳಲ್ಲಿ ಅವರಿಗೆ ಜೋಳದ ಗಂಜಿ ಕೊಡುತ್ತಿದ್ದರು. ಅದಕ್ಕೆ ಉಪ್ಪು, ಸಕ್ಕರೆ, ಹಾಲು ಅಥವಾ ತುಪ್ಪ ಏನನ್ನೂ ಹಾಕುತ್ತಿರಲಿಲ್ಲ. ಭಾರತೀಯರಿಗೆ ಅದನ್ನು ತಿನ್ನಲು ಸಾಧ್ಯವಾಗಲಿಲ್ಲ. ಕೆಲವು ದಿನ ಸಂಜೆ ಮಾತ್ರ ಬೇಯಿಸಿದ ಬೀನ್ಸ್ ದೊರೆಯುತ್ತಿತ್ತು. ಅದಕ್ಕೂ ಸಕ್ಕರೆ ಅಥವಾ ಸಾಂಬಾರವೇನೂ ಹಾಕದೆ ಕೇವಲ ಉಪ್ಪನ್ನಷ್ಟೇ ಹಾಕಲಾಗುತ್ತಿತ್ತು. ಯೂರೋಪಿಯನ್ ಕೈದಿಗಳಿಗೆ ಮಾಂಸ, ಬ್ರೆಡ್ಡು ಮತ್ತು ತರಕಾರಿಗಳನ್ನು ಕೊಡಲಾಗುತ್ತಿತ್ತು. ಆ ತರಕಾರಿಗಳ ಸಿಪ್ಪೆಯನ್ನು, ಇತರ ತರಕಾರಿಗಳೊಂದಿಗೆ ಸೇರಿಸಿ, ಬೇಯಿಸಿ, ವರ್ಣೀಯ ಖೈದಿಗಳಿಗೆ ಬಡಿಸಲಾಗುತ್ತಿತ್ತು. ಜೈಲಿನ ಅಧಿಕಾರಿಗಳಿಗೆ 100 ಮಂದಿ ಭಾರತೀಯ ಖೈದಿಗಳ ಸಹಿಯುಳ್ಳ ದೂರನ್ನು ಗಾಂಧೀಜಿ ಸಲ್ಲಿಸಿದರು. ಅದಕ್ಕೆ "ಇದು ಭಾರತ ಅಲ್ಲ. ಇದೊಂದು ಸೆರೆಮನೆ, ರುಚಿ ರುಚಿಯಾದ ಆಹಾರವನ್ನು ಬಡಿಸಲು ಸಾಧ್ಯವಿಲ್ಲ" ಎಂದು ಗಾಂಧೀಜಿಗೆ ಉತ್ತರ ಬಂತು. ಆದರೂ ಹದಿನೈದು ದಿನಗಳಲ್ಲಿ ಭಾರತೀಯ ಖೈದಿಗಳಿಗೂ ಅನ್ನ, ಬ್ರೆಡ್ಡು, ತರಕಾರಿಗಳು ಮತ್ತು ತುಪ್ಪ ದೊರಕಿಸುವುದರಲ್ಲಿ ಗಾಂಧೀಜಿ

ಸಫಲರಾದರು. ತಮ್ಮ ಆಹಾರವನ್ನು ತಾವೇ ತಯಾರಿಸಲೂ ಅನುಮತಿ ದೊರೆಯಿತು. ಗಾಂಧೀಜಿ ಅಡುಗೆಯಲ್ಲಿ ನೆರವಾದರು. ದಿನಕ್ಕೆರಡು ಬಾರಿ ಬಡಿಸುವ ಕೆಲಸವನ್ನೂ ಮಾಡಿದರು. ಇನ್ನೂ ಒಳ್ಳೆಯ ಮತ್ತು ಹೆಚ್ಚು ಆಹಾರಕ್ಕೆ ಒತ್ತಾಯಿಸದೆ ಗಾಂಧೀಜಿ ಅಣ್ಣಿನ ಅನುಯಾಯಿಗಳು ಅರೆಬೆಂದ ಗಂಜಿಯನ್ನೇ ಉಂಡರು. ತಮ್ಮ ಮೂರನೇ ಜೈಲುವಾಸದ ಅವಧಿಯಲ್ಲಿ ಅವರಿಗೆ ಆಹಾರದ ಸಮಸ್ಯೆ ಇರಲಿಲ್ಲ. ಆಗ ಅವರು ಕೇವಲ ಹಣ್ಣಿನ ಮೇಲೆ ಬದುಕುತ್ತಿದ್ದರು ಮತ್ತು ಬೇಕಾದಷ್ಟು ಬಾಳೆಹಣ್ಣು, ಟಮೊಟೋ ಮುಂತಾದವು ಅವರಿಗೆ ದೊರೆಯುತ್ತಿದ್ದವು. ಜೈಲಿನ ಕೆಲವು ಶಿಸ್ತುಗಳನ್ನು ಗಾಂಧೀಜಿ ಮೆಚ್ಚಿದರು. ಬಿಡುಗಡೆಯಾದ ಮೇಲೆ ಗಾಂಧೀಜಿ ಟೀ ಸೇವನೆ ಬಿಟ್ಟುಬಿಟ್ಟರು ಮತ್ತು ಸೂರ್ಯಾಸ್ತದ ಮೊದಲೇ ಆಹಾರ ಸೇವಿಸುವ ಪರಿಪಾಠವಿಟ್ಟುಕೊಂಡರು.

ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಮುಂದಿನ ಎರಡೂ ಅವಧಿಗಳ ಜೈಲುವಾಸದಲ್ಲಿ ಗಾಂಧೀಜಿ ತುಂಬ ಕಷ್ಟಗಳನ್ನನುಭವಿಸಿದರು. ಅವರಿಗೆ ಕಠಿಣ ಪರಿಶ್ರಮದ ಕೆಲಸ ವಿಧಿಸಲಾಯಿತು ಮತ್ತು ಯಾವ ನ್ಯಾಯಾಲಯದಲ್ಲಿ ಅವರು ಹತ್ತು ವರ್ಷಗಳ ಕಾಲ ನ್ಯಾಯವಾದಿಯಾಗಿದ್ದರೋ ಅದೇ ನ್ಯಾಯಾಲಯದಿಂದ ಅವರನ್ನು ಕೈಕೋಳಗಳನ್ನು ಹಾಕಿ ಸೆರೆಮನೆಗೆ ಒಯ್ಯಲಾಯಿತು. ಒಬ್ಬ ಶಿಕ್ಷೆಗೊಳಗಾದ ಸ್ಥಳೀಯ ಅಪರಾಧಿಯ ಉಡುಪನ್ನೇ ಗಾಂಧೀಜಿಗೆ ಹಾಕಲಾಯಿತು. ಸಣ್ಣದೊಂದು ಮಿಲಿಟರಿ ಟೊಪ್ಪಿಗೆ, ಖೈದಿಯ ಕ್ರಮಸಂಖ್ಯೆ ಮತ್ತು ಬಾಣದ ಗುರುತುಗಳನ್ನು ಹಾಕಿದ ದೊರಗಾದ, ದೊಗಳೆ ಅಂಗಿ, ಅದೇ ಗುರುತುಗಳಿರುವ ಚಿಕ್ಕ ಇಜಾರ ಮತ್ತು ಚರ್ಮದ ಚಪ್ಪಲಿಗಳು, ಇವೇ ಖೈದಿಗಳ ಉಡುಪು. ಸುರಿಯುತ್ತಿರುವ ಮಳೆಯಲ್ಲಿ ತಲೆ ಮೇಲೆ ತಮ್ಮ ಹಾಸಿಗೆಯನ್ನು ಹೊತ್ತುಕೊಂಡು ಗಾಂಧೀಜಿ ಆರು ಫರ್ಲಾಂಗುಗಳಷ್ಟು ದೂರ ದಿನವೂ ನಡೆಯಬೇಕಾಯಿತು. ನಿಕೃಷ್ಟ ನೀಗ್ರೋ ಮತ್ತು ಚೀನೀ ಖೈದಿಗಳ ಜತೆ ಗಾಂಧೀಜಿಯನ್ನಿರಿಸಿದರು. ಕೆಲವು ಜೈಲು ಖೈದಿಗಳು ಗಾಂಧೀಜಿಯನ್ನು ಬೈದು ಹೊಡೆದು ಮಾಡಿದರು. ಖಾಸಗಿ ಶೌಚಗೃಹಗಳಿರಲಿಲ್ಲ ಎಲ್ಲವನ್ನೂ ಬಯಲಲ್ಲೇ ಮಾಡಬೇಕಾಗಿತ್ತು. ಆ ಖೈದಿಗಳ ಒರಟು ಅನಾಗರಿಕ ವರ್ತನೆಯಿಂದ ಗಾಂಧೀಜಿ ಹೌಹಾರಿದರು. ಅವರ ಭಾಷೆ ಗಾಂಧೀಜಿಗೆ ತಿಳಿಯುತ್ತಿರಲಿಲ್ಲ. ಕೆಲವೇ ಸಮಯದಲ್ಲಿ ಗಾಂಧೀಜಿಯನ್ನು 4 ಅಡಿ 6 ಅಡಿಗಳ ಕೋಣೆಯಲ್ಲಿ ಪ್ರತ್ಯೇಕಿಸಿಟ್ಟರು. ಮಾಡಿನ ಸಮೀಪದಲ್ಲಿ ಗಾಳಿ ಸಂಚರಿಸಲಷ್ಟೇ ಸಾಕಾಗುವ ಒಂದು ಕಿಂಡಿ ಮಾತ್ರ ಆ ಕೋಣೆಯಲ್ಲಿತ್ತು.

ಬೀಗ ಹಾಕಿದ ಬಾಗಿಲ ಹಿಂದೆ ನಿಂತುಕೊಂಡೇ ಅವರು ತನ್ನ ಊಟ ಸೇವಿಸಬೇಕಾಯಿತು. ಪ್ರತಿ ದಿನವೂ ಗಾಂಧೀಜಿಯನ್ನು ವ್ಯಾಯಾಮಕ್ಕೆಂದು ಎರಡು ಬಾರಿ ಹೊರಗೆ ಕರೆದೊಯ್ಯುತ್ತಿದ್ದರು. ಅನ್ನದೊಂದಿಗೆ ತುಪ್ಪ ಕೊಡದಿದ್ದುದನ್ನು ಪ್ರತಿಭಟಿಸಿ, ಗಾಂಧೀಜಿ ಹದಿನೈದು ದಿನಗಳ ಕಾಲ ಅನ್ನವನ್ನೇ ಸೇವಿಸಲಿಲ್ಲ. ಬರೀ ಗಂಜಿಯನ್ನು ಒಂದು ಹೊತ್ತು ಮಾತ್ರ ಸೇವಿಸಿ ಬದುಕಿದರು. ಆ ನಂತರ ತುಪ್ಪ ಮತ್ತು ಬ್ರೆಡ್ಡುಗಳನ್ನು ಅವರಿಗೆ ನೀಡಲಾಯಿತು. ಗಾಂಧೀಜಿಗೆ ಒಂದು ಮರದ ತಲೆದಿಂಬು, ತೆಂಗಿನ ನಾರಿನ ಚಾಪೆ, ಎರಡು ರಗ್ಗುಗಳು ಮತ್ತು ಕೆಲವು ಪುಸ್ತಕಗಳನ್ನು ಒದಗಿಸಲಾಗಿತ್ತು. ದಿನವೂ ಒಂದು ಬಕೇಟು ನೀರು ದೊರೆಯುತ್ತಿತ್ತು. ದೊಡ್ಡ ಬಚ್ಚಲ ಮೇಲಿರಿಸಿದ ಇನ್ನೊಂದು ಬಕೇಟು ಕೋಣೆಯೊಳಗಿನ ಕಕ್ಕಸಾಗಿ ಬಳಸಲ್ಪಡುತ್ತಿತ್ತು. ಖೈದಿಯ ಮೇಲೆ ನಿಗಾ ಇಡಲು ಕತ್ತಲಾದ ಮೇಲೆ ವಿದ್ಯುತ್ ದೀಪವೊಂದು ಬೆಳಗುತ್ತಲೇ ಇತ್ತಾದರೂ ಅದು ಓದಲು ಸಾಕಾಗುವಷ್ಟು ಬೆಳಕು ಬೀರುತ್ತಿರಲಿಲ್ಲ. ಬದಲಾವಣೆಗೆಂದು ಗಾಂಧೀಜಿ ಎಂದಾದರೊಮ್ಮೆ ಕೋಣೆಯಲ್ಲೇ ಅತ್ತಿಂದಿತ್ತ ಶತಪಥ ಹಾಕಲು ತೊಡಗಿದರೆ, ವಾರ್ಡರ್ "ಹಾಗೆ ಸುತ್ತಾಡಬೇಡ, ನೆಲ ಹಾಳಾಗುತ್ತದೆ" ಎಂದು ಬೊಬ್ಬೆ ಹಾಕುತ್ತಿದ್ದ. ಆ ಅಮೂಲ್ಯ ನೆಲವಾದರೋ ಡಾಮರ್‌ನಿಂದ ಮಾಡಿದ್ದಾಗಿತ್ತು.

ಗಾಂಧೀಜಿ ಸ್ನಾನ ಮಾಡಬೇಕೆಂದು ಅಪೇಕ್ಷಿಪಟ್ಟರೆ, ವಾರ್ಡರ್ ಅವರು ಬತ್ತಲೆಯಾಗಿಯೇ ಸ್ನಾನಗೃಹಕ್ಕೆ ಹೋಗಬೇಕೆಂದು ತಾಕೀತು ಮಾಡುತ್ತಿದ್ದ. ಸುಮಾರು 125 ಅಡಿಗಳಷ್ಟು ದೂರ ನಗ್ನರಾಗಿ ನಡೆಯಲು ಗಾಂಧೀಜಿಯವರಿಂದಾಗುತ್ತಿರಲಿಲ್ಲ. ಕೊನೆಗೆ ಸ್ನಾನಗೃಹದಲ್ಲಿ ತನ್ನ ಬಟ್ಟೆಗಳನ್ನು ನೇತುಹಾಕಲು ಬಿಡಬೇಕೆನ್ನುವ ಗಾಂಧೀಜಿಯ ವಿನಂತಿಯನ್ನು ಮನ್ನಿಸಲಾಯಿತು. ಇನ್ನೂ ಸ್ನಾನ ಮುಗಿಯುವ ಮೊದಲೇ ತಕ್ಷಣ ಹೊರಗೆ ಬರಲು ಅಪ್ಪಣೆಯಾಗುತ್ತಿತ್ತು. ಹೊರಗೆ ಬರದಿದ್ದರೆ ಒಬ್ಬ ನೀಗ್ರೋ ಅವರನ್ನು ಬಲಾತ್ಕಾರವಾಗಿ ಹೊರಗೆಳೆಯುತ್ತಿದ್ದ.

ದಿನಕ್ಕೆ ಒಂಭತ್ತು ತಾಸುಗಳು ಅವರು ಅಂಗಿಗಳ ಕಿಸೆಗಳನ್ನು ತಯಾರಿಸುವುದು, ಹರಿದ ಬ್ಲಾಂಕೆಟುಗಳಿಗೆ ತೇಪೆ ಹಚ್ಚುವುದು ಅಥವಾ ವಾರ್ನಿಸು ಹಾಕಿದ ಕಬ್ಬಿಣದ ಬಾಗಿಲುಗಳಿಗೆ ಪಾಲಿಷು ಹಚ್ಚುವುದು ಇಂತಹ ಕೆಲಸಗಳನ್ನು ಮಾಡುತ್ತಿದ್ದರು. ಮೂರು ಗಂಟೆಗಳ ಕಾಲ ಬಾಗಿಲುಗಳನ್ನೂ, ನೆಲವನ್ನು ಉಜ್ಜಿದರೂ ಅವುಗಳ ಬಣ್ಣ ಮೊದಲಿನಂತೆಯೇ ಇರುತ್ತಿತ್ತು. ಪಾಯಖಾನೆ ತೊಳೆಯುವ ಕೆಲಸವೂ

ಅವರಿಗೆ ದೊರೆಯಿತು. ಈ ಎಲ್ಲ ಕಷ್ಟಗಳನ್ನು ಗಾಂಧೀಜಿ ನಗುನಗುತ್ತಾ ಅನುಭವಿಸಿದರು. ಆದರೆ ತನ್ನ ಸಂಗಾತಿಗಳ ಅವಸ್ಥೆಯನ್ನು ನೋಡಿ ಮರುಗಿದರು. ಅವರಲ್ಲಿ ಕೆಲವರು ಶ್ರಮವನ್ನು ಸಹಿಸಲಾರದೆ ಅತ್ತರು. ಇನ್ನೂ ಕೆಲವರು ಮೂರ್ಛೆ ಹೋದರು. ಅವರೆಲ್ಲರನ್ನೂ ಈ ಕಷ್ಟಕರವಾದ ಅಪಮಾನಕರ ಜೀವನಕ್ಕೆ ಎಳೆದುತರಲು ಗಾಂಧೀಜಿಯೇ ಕಾರಣರಾಗಿದ್ದರು. ಅವರ ಗುಲಾಮಗಿರಿಯನ್ನು ಹೋಗಲಾಡಿಸಲು, ಆತ್ಮತ್ಯಾಗ ಮತ್ತು ಕಷ್ಟಾನುಭವಗಳೇ ದಾರಿ ಎಂದು ಗಾಂಧೀಜಿಯ ನಂಬಿಕೆಯಾಗಿತ್ತು. ಈ ನಂಬಿಕೆಯೇ ಗಾಂಧೀಜಿಗೆ ಮನಶ್ಶಾಂತಿಯನ್ನು ಉಳಿಸಿಕೊಳ್ಳಲು ಸಹಾಯಮಾಡಿತು.

ಬೆಳಿಗ್ಗೆ 6 ಗಂಟೆಗೆ ಮೊದಲೇ ಖೈದಿಗಳು ಸ್ನಾನ, ಶೌಚಗಳನ್ನು ಮುಗಿಸಿರಬೇಕು. ಏಳಕ್ಕೆ ಶ್ರಮ ದುಡಿತ ಪ್ರಾರಂಭ. ಅವರೆಲ್ಲ ದಿನಕ್ಕೆ ಒಂಭತ್ತು ಗಂಟೆಗಳ ಕಾಲ ಕಠಿಣ ಪರಿಶ್ರಮ ಮಾಡಬೇಕಾಗಿತ್ತು. ಅವರೆಲ್ಲರೊಡನೆ ಗಾಂಧೀಜಿ ಒಂದು ಮೈಲಿ ನಡೆದು ಒಣಗಿದ ಗಟ್ಟಿ ಭೂಮಿಯನ್ನು ಅಗೆದರು. ಅವರ ಬೆನ್ನು ನೋಯುತ್ತಿತ್ತು. ಅಂಗೈಯಲ್ಲಿ ಗುಳ್ಳೆಗಳಿಂದ ನೀರು ಒಸರುತ್ತಿತ್ತು. ಬಹಳ ಕಷ್ಟದಿಂದ ಗುದ್ದಲಿಯನ್ನು ಎತ್ತುತ್ತಿದ್ದರು. ಸ್ವಲ್ಪ ವಿಶ್ರಮಿಸಿದರೂ ಕಾವಲುಗಾರ ಜೋರಾಗಿ 'ಮುಂದುವರಿಸಿ, ಮುಂದುವರಿಸಿ' ಎನ್ನುತ್ತಿದ್ದ. ಅವನ ವರ್ತನೆ ಸುಧಾರಿಸದಿದ್ದರೆ, ತಾವು ಕೆಲಸವನ್ನೇ ಮಾಡಲಾರೆವೆಂದು ಗಾಂಧೀಜಿಯೂ ಅವನಿಗೆ ಎಚ್ಚರಿಕೆ ನೀಡುತ್ತಿದ್ದರು. ಈ ಮಾತಿಗೆ ಕಾವಲುಗಾರನೂ ಸ್ವಲ್ಪ ಮೆತ್ತಗಾದ. ತನಗೆ ನಿಗದಿ ಮಾಡಲಾದ ಕೆಲಸವನ್ನು ಮಾಡಿ ಮುಗಿಸಲು ಬೇಕಾದ ಶಕ್ತಿಯನ್ನಿತ್ತು ತನ್ನ ಗೌರವವನ್ನು ಕಾಪಾಡುವಂತೆ ಗಾಂಧೀಜಿ ಭಗವಂತನಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದರು.

ಗಾಂಧೀಜಿ ಭಾರತದಲ್ಲಿ "His Majesty Hotel" ನಲ್ಲಿ ತಂಗಿದ್ದಾಗ ಅವರ ವೆಚ್ಚಗಳನ್ನು ಸರ್ಕಾರವೇ ಭರಿಸುತ್ತಿತ್ತು. ಆದರೂ ತನ್ನ ಸಲುವಾಗಿ ಅಧಿಕಾಧಿಕ ವೆಚ್ಚಮಾಡುವುದು ಗಾಂಧೀಜಿಗೆ ಸಹನವಾಗಲಿಲ್ಲ. ಒಮ್ಮೆ ಅವರು ಜೈಲು ಅಧಿಕಾರಿಗೆ, ತನ್ನ ಕೋಣೆಯಲ್ಲಿರುವ ಎಲ್ಲ ಹೆಚ್ಚಿನ ಪೀಠೋಪಕರಣಗಳನ್ನೂ ಪಾತ್ರೆ ಪಡಗಗಳನ್ನೂ ಒಯ್ಯುವಂತೆ ಕೇಳಿಕೊಂಡರು. ಅವರು ಒಂದು ಕಬ್ಬಿಣದ ಮಂಚ ಮತ್ತು ಕೆಲವೇ ಪಾತ್ರೆಗಳನ್ನಷ್ಟೇ ಬಳಸಿದರು. ಈ ಎಲ್ಲಾ ಖರ್ಚು ವೆಚ್ಚಗಳಿಗೆ ಬೇಕಾಗುವ ಹಣ ಭಾರತದ ಬಡ ಮೂಲ ಜನಕೋಟಿಯಿಂದ ವಸೂಲಾದ ತೆರಿಗೆಯಿಂದಲೇ ಬಂದುದು ಎನ್ನುವುದನ್ನು ಅವರಿಗೆಂದೂ ಮರೆಯಲು

ಸಾಧ್ಯವಾಗಲಿಲ್ಲ. ಕೊನೆಯ ಬಾರಿಗೆ ಅವರನ್ನು ನಿರ್ಬಂಧದಲ್ಲಿರಿಸಿದ್ದ ಆಗಾಖಾನ್ ಅರಮನೆಯ ಬಗ್ಗೆ ಗಾಂಧೀಜಿ "ಸುತ್ತಮುತ್ತ ಕಾವಲು ಭಟರನ್ನಿಟ್ಟು ನನ್ನನ್ನು ನಿರ್ಬಂಧದಲ್ಲಿರಿಸಿರುವ ಈ ವಿಶಾಲ ಅರಮನೆಯನ್ನು ನಾನು, ಸಾರ್ವಜನಿಕ ಹಣದ ದುರುಪಯೋಗವೆಂದೇ ತಿಳಿಯುತ್ತೇನೆ. ಜನ ಹಸಿವೆಯಿಂದ ಸಾಯುತ್ತಿರುವಾಗ ಇಂತಹ ಅರಮನೆಗಳು ವಾಸ್ತವವಾಗಿ ಮಾನವತೆಗೆಸಗಿದ ಅಪಚಾರ" ಎಂದರು.

ಭಾರತದಲ್ಲಿ ಗಾಂಧೀಜಿ ವಿಚಾರಣೆಯ ಪ್ರಥಮ ದೃಶ್ಯ ಸ್ಮರಣೀಯ, ಕಟಕಟೆಯಲ್ಲಿ ನಿಂತಿದ್ದ ಗಾಂಧೀಜಿಗೆ, ಇಂಗ್ಲಿಷ್ ಸೆಶನ್ಸ್ ನ್ಯಾಯಾಧೀಶ ತನ್ನ ಆಸನ ಸ್ವೀಕರಿಸುವ ಮುನ್ನ, ಗೌರವ ಸೂಚಕವಾಗಿ ತಲೆಬಾಗಿದರು. ಗಾಂಧೀಜಿಯ ವಿದ್ರೋಹೀ ಚಟುವಟಿಕೆಗಳಿಂದಾಗಿ ನ್ಯಾಯಾಧೀಶರು ಆರು ವರ್ಷಗಳ ಸಾದಾ ಶಿಕ್ಷೆಯನ್ನು ವಿಧಿಸಿದರು. ತಮ್ಮ ತೀರ್ಪಿನಲ್ಲಿ ಈ ಮಾತುಗಳನ್ನು ಬರೆದರು. "ರಾಜಕೀಯದಲ್ಲಿ ನಿಮ್ಮೊಡನೆ ವ್ಯತ್ಯಾಸವಿರುವವರೂ ನೀವೊಬ್ಬ ಉದಾತ್ತ, ಉನ್ನತ ಆದರ್ಶಗಳಿರುವ ಮಾತ್ರವಲ್ಲ ಒಬ್ಬ ಸಂತನ ಬಾಳನ್ನು ಬಾಳುತ್ತಿರುವ ವ್ಯಕ್ತಿಯೆಂದು ಒಪ್ಪುತ್ತಾರೆ." ಗಾಂಧೀಜಿಯವರು ತನಗಾದ ದ್ರೋಹದ ಕಾನೂನಿನ ಶಿಕ್ಷೆಯನ್ನು ಕುರಿತು "ಭಾರತದ ಅತ್ಯಂತ ಜನಪ್ರಿಯ ದೇಶಪ್ರೇಮಿಗಳಲ್ಲಿ ಕೆಲವರಿಗೆ ಈ ಶಿಕ್ಷೆಯಾಗಿದೆ ಎನ್ನುವುದು ನನಗೆ ಗೊತ್ತು. ಆ ಕಾನೂನಿನನ್ವಯ ಶಿಕ್ಷೆ ಪಡೆಯುವುದು ನನಗೊಂದು ಗೌರವವೆಂದೇ ತಿಳಿಯುತ್ತೇನೆ. ಬೆಂಕಿಯೊಡನೆ ಸರಸವಾಡುತ್ತಿದ್ದೇನೆಂದು ನನಗೆ ತಿಳಿದಿತ್ತು. ಆದರೂ ನಾನು ಹಾಗೆಯೇ ಮಾಡುವೆ" ಎಂದರು. ಗಾಂಧೀಜಿ ನ್ಯಾಯಾಲಯಕ್ಕೆ ಬಂದಾಗಲೂ, ಹೊರಗೆ ತೆರಳಿದಾಗಲೂ ಇಡಿಯ ನ್ಯಾಯಾಲಯವೇ ಎದ್ದು ನಿಂತು ಗೌರವ ಸೂಚಿಸಿತು. ಪೊಲೀಸರ ಗುಪ್ತತಂಗೀ ಸಂದೇಶಗಳಲ್ಲಿ ಗಾಂಧೀಜಿಯನ್ನು "ಬೊಂಬಾಯಿ ರಾಜಕೀಯ ಮನುಷ್ಯ ನಂ. 50" ಎಂದು ಸೂಚಿಸಲಾಗಿತ್ತು. ಬ್ಯಾರಿಸ್ಟರ್‌ಗಳ ಪಟ್ಟಿಯಿಂದ ಗಾಂಧೀಜಿಯ ಹೆಸರನ್ನು ಕಿತ್ತುಹಾಕಲಾಯಿತು. ಜೈಲಿನಲ್ಲಿ ಅವರ ಮತ್ತು ಗುರುತಿನ ಚಹರೆಗಳನ್ನು ಪಟ್ಟಿ ಮಾಡಲಾಯಿತು, ಏಕಾಂತವಾಸದಲ್ಲಿರಿಸಲಾಯಿತು. ಅವರಲ್ಲಿ ಸೊಂಟಕ್ಕೆ ಸುತ್ತಿದ ಪಂಚೆಯನ್ನುಳಿದು ಇನ್ನೇನೂ ಇರಲಿಲ್ಲ. ಆದರೂ ಅಧಿಕಾರಿಗಳು ಅವರ ಸೊಂಟವನ್ನು ಮುಟ್ಟಿ ಪರೀಕ್ಷಿಸಿದರು. ಅವರ ಕಂಬಳಿಗಳನ್ನೂ ಪರಿಶೋಧಿಸಲಾಯಿತು. ಗಾಂಧೀಜಿ ತನ್ನ ನೀರಿನ ಪಾತ್ರೆಯನ್ನು ಬೂಟುಗಾಲಿನಿಂದ ತುಳಿಯುವವರೆಗೂ ಎದುರಾಡಲಿಲ್ಲ. ಕೆಲವೊಮ್ಮೆ ಜಿಗುಪ್ಸೆಯಿಂದ ಸಂದರ್ಶಕರನ್ನು ನೋಡಲೂ ಬರೆಯುವ ಕಾಗದಗಳನ್ನು ಪಡೆಯಲೂ ನಿರಾಕರಿಸುತ್ತಿದ್ದರು.

ಕಷ್ಟಕಾಲದಲ್ಲಿ ಗಾಂಧೀಜಿ ಎಂದೂ ಮುಖ ಗಂಟಿಕ್ಕಿಕೊಳ್ಳಲಿಲ್ಲ. ಕಿರಿಕಿರಿ ಮಾಡಿಕೊಳ್ಳಲಿಲ್ಲ. ಪ್ರತಿ ಬಾರಿ ಸೆರೆಮನೆಯಿಂದ ಹೊರಗೆ ಬಂದಾಗಲೂ ಅವರ ಮನಸ್ಸು ಇನ್ನಷ್ಟು ಶ್ರೀಮಂತವಾಗಿ, ಮನಸ್ಸಿನ ಶಾಂತಿ ನೆಮ್ಮದಿ ಮತ್ತಷ್ಟು ಹೆಚ್ಚಾಗಿರುತ್ತಿತ್ತು. ಸೆರೆಮನೆ, ವ್ಯಕ್ತಿಗೆ ಅವನ ಅಭ್ಯಾಸಗಳನ್ನು ಇನ್ನಷ್ಟು ಕ್ರಮಬದ್ಧಗೊಳಿಸುವ ವಿರಾಮತಾಣವಾಗಿ ಗಾಂಧೀಜಿಗೆ ಅನುಭವವಾಯಿತು. ಒಳ್ಳೆಯ ಸಂಗಾತಿಗಳ ಗೈರುಹಾಜರಿಯಲ್ಲಿ, ಪುಸ್ತಕಗಳೇ ಸಂಗಾತಿಗಳಾಗಬಲ್ಲವು ಎನ್ನುವುದೂ ಗಾಂಧೀಜಿಗೆ ಸೆರೆಮನೆಯಲ್ಲಿ ಅನುಭವಕ್ಕೆ ಬಂತು. ಸೆರೆಮನೆಯಲ್ಲಿ ಗಾಂಧೀಜಿ ಹಕ್ಕಿಯಂತೆ ಸ್ವಚ್ಛಂದ ಸಂತೋಷ ಅನುಭವಿಸಿದರು. ಗಾಂಧೀಜಿಗೆ ಓದು ತುಂಬಾ ಇಷ್ಟವಾದರೂ, ಜೈಲಿನ ಹೊರಗಡೆ ಅನೇಕ ಕಾರ್ಯಚಟುವಟಿಕೆಗಳಲ್ಲಿ ಮುಳುಗಿದ್ದ ಅವರಿಗೆ ಅಧ್ಯಯನಕ್ಕೆ ಪುರುಸೊತ್ತೇ ಸಿಗುತ್ತಿರಲಿಲ್ಲ. ಸೆರೆಮನೆಯಲ್ಲಿ ಅಧ್ಯಯನಕ್ಕೆ ಕಟ್ಟುನಿಟ್ಟಾದ ಕ್ರಮವನ್ನವರು ಗೊತ್ತುಮಾಡಿದ್ದರು. ಅವರು ಉರ್ದು ಕಲಿತರು, ಸಂಸ್ಕೃತ, ತಮಿಳು, ಹಿಂದಿ, ಗುಜರಾತಿ ಮತ್ತು ಇಂಗ್ಲಿಷ್ ಭಾಷೆಗಳ ಪುಸ್ತಕಗಳನ್ನೋದಿದರು. ಒಮ್ಮೆ ಎರಡೇ ವರ್ಷಗಳಲ್ಲಿ ಗಾಂಧೀಜಿ ಧರ್ಮ, ಸಾಹಿತ್ಯ ಮತ್ತು ಸಮಾಜ ವಿಜ್ಞಾನಗಳಲ್ಲಿ ಪ್ರಸಿದ್ಧ ಗ್ರಂಥಕಾರರ 150 ಕೃತಿಗಳನ್ನೋದಿ ಮುಗಿಸಿದರು. ಗೀತೆ, ಕುರಾನ್, ಬೈಬಲ್‌ಗಳನ್ನೂ ಬೌದ್ಧಮತ, ಸಿಖ್ಖ, ಜೊರಾಷ್ಟ್ರಿಯನ್ ಮತಗಳ ಪುಸ್ತಕಗಳನ್ನು ಓದಿದರು. ಅವರು ರಾಮಾಯಣ, ಮಹಾಭಾರತ, ಉಪನಿಷತ್ತು, ಮನುಸ್ಮೃತಿ ಮತ್ತು ಪಾತಂಜಲಿಯ ಯೋಗಸೂತ್ರಗಳನ್ನೂ ಅಧ್ಯಯನ ಮಾಡಿದರು. ತಮ್ಮ 65ನೇ ವರ್ಷ ಪ್ರಾಯದಲ್ಲಿ ಸೆರೆಮನೆಯ ಸಂಗಾತಿಯೊಬ್ಬನಿಂದ ಜ್ಯೋತಿರ್ವಿಜ್ಞಾನ ಪಾಠಗಳನ್ನು ಹೇಳಿಸಿಕೊಳ್ಳುತ್ತಿದ್ದರು. ಜೈಲು ಅಧಿಕಾರಿಗಳಿಂದ ದುರ್ಬೀನೊಂದನ್ನು ಪಡೆದು ನಕ್ಷತ್ರಗಳ ಅಧ್ಯಯನ ನಡೆಸಿದರು.

ಸೆರೆಮನೆಯಲ್ಲಿ ಗಾಂಧೀಜಿ ದಿನವೂ ನಿಯಮಿತವಾಗಿ ಪ್ರಾರ್ಥನೆ ಸಲ್ಲಿಸಿ, ನಾಲ್ಕರಿಂದ ಆರು ಗಂಟೆಗಳ ಕಾಲ ನೂಲುವ ಹಾಗೂ ವೇಗವಾಗಿ ನಡೆಯುವ ಅಭ್ಯಾಸವಿರಿಸಿಕೊಂಡಿದ್ದರು. ಆಗಾಖಾನ್ ಅರಮನೆಯಲ್ಲಿ 75ರ ಗಾಂಧೀಜಿ, ಕಸ್ತೂರ್‌ಬಾಗೆ ಮತ್ತು ಮೊಮ್ಮಗಳಿಗೆ ಭೂಗೋಲ, ಜ್ಯಾಮಿತಿ, ಚರಿತ್ರೆ, ಗುಜರಾತಿ ವ್ಯಾಕರಣ ಮತ್ತು ಸಾಹಿತ್ಯಗಳ ಪಾಠ ಹೇಳುತ್ತಿದ್ದರು. ಅದಕ್ಕೆ ಮೊದಲು ಸೆರೆಮನೆಯ ಚೀನಿ ಸಂಗಾತಿಯೊಬ್ಬನಿಗೆ ಇಂಗ್ಲಿಷ್ ಪಾಠವನ್ನೂ, ಐರಿಷ್ ಜೈಲರ್ ಒಬ್ಬನಿಗೆ ಗುಜರಾತಿ ಪಾಠವನ್ನೂ ಮಾಡಿದ್ದರು. ಮಕ್ಕಳಿಗಾಗಿ ಪಠ್ಯಪುಸ್ತಕವನ್ನೂ ದಕ್ಷಿಣ

ಆಫ್ರಿಕಾದ ಸತ್ಯಾಗ್ರಹದ ಹೋರಾಟದ ಚರಿತ್ರೆಯನ್ನು ಕುರಿತು ಪುಸ್ತಕವನ್ನೂ ಗಾಂಧೀಜಿ ಸೆರೆಮನೆಯಲ್ಲಿ ಬರೆದರು. ಉಪನಿಷತ್ ಶ್ಲೋಕಗಳನ್ನೂ, ಭಾರತೀಯ ಸಂತಕವಿಗಳ ಹಾಡುಗಳನ್ನೂ ಇಂಗ್ಲೀಷ್‌ಗೆ ಭಾಷಾಂತರಿಸಿದರು. ಅವುಗಳ ಸಂಗ್ರಹವೇ "ಜೈಲಿನಿಂದ ಬರೆದ ಹಾಡುಗಳು" (Songs from the prison) ಎಂದು ಪ್ರಕಟವಾಯಿತು. ನೂರಾರು ಪತ್ರಗಳನ್ನು ಸೆರೆಮನೆಯಿಂದಲೇ ಗಾಂಧೀಜಿ ಆಶ್ರಮವಾಸಿಗಳಿಗೆ, ಸಹಕಾರ್ಯಕರ್ತರಿಗೆ, ಜೈಲು ಅಧಿಕಾರಿಗಳಿಗೆ ಗವರ್ನರರು, ವೈಸ್‌ರಾಯರುಗಳಿಗೆ ಮತ್ತು ಬ್ರಿಟಿಷ್ ಪ್ರಧಾನಿಗಳಿಗೆ ಬರೆದರು. ಪ್ರತಿ ವಾರವೂ ಆಶ್ರಮದ ಮಕ್ಕಳಿಗೆ ಸ್ವಾರಸ್ಯಕರ ಪತ್ರಗಳು ಗಾಂಧೀಜಿಯಿಂದ ಬರುತ್ತಿದ್ದವು. 'ರೆಕ್ಕೆಗಳಿಲ್ಲದೇ ನೀವು ಹಾರಲು ಕಲಿತರೆ ನಿಮ್ಮೆಲ್ಲ ತೊಂದರೆಗಳು ದೂರಾಗುವುವು. ನನಗೆ ರೆಕ್ಕೆಗಳಿಲ್ಲವಾದರೂ ಪ್ರತಿ ದಿನವೂ ನಿಮ್ಮೆಡೆಗೆ ಆಲೋಚನೆಗಳ ಮೂಲಕ ಹಾರಿಹಾರಿ ಬರುತ್ತೇನೆ. ನೋಡಿ ಇಲ್ಲಿ ವಿಮಲಾ ಇದ್ದಾಳೆ. ಇಲ್ಲಿ ಹರಿ ಇದ್ದಾನೆ' ಇದು ಎಂತಹ ಅದ್ಭುತ ಪತ್ರಗಳಲ್ಲೊಂದು.

ಸೆರೆಮನೆಯ ಶಿಸ್ತುಬದ್ಧ ಜೀವನದ ಲಾಭಗಳನ್ನೂ ಗಾಂಧೀಜಿ ಗುರುತಿಸಿದರು ಮತ್ತು ಒಬ್ಬ ಆದರ್ಶ ಖೈದಿ ಯಾವ ರೀತಿ ಇರಬೇಕೆಂದು ವರ್ಣಿಸಿದರು. ಯಾವುದೇ ಕೆಲಸ ಕೊಟ್ಟರೂ ಖೈದಿಗಳು ಗೊಣಗದೆ ಮಾಡಬೇಕು. ಅನೈತಿಕವಾದುವುಗಳನ್ನು ಬಿಟ್ಟು ಉಳಿದೆಲ್ಲ ಸೆರೆಮನೆಯ ನಿಬಂಧನೆಗಳನ್ನೂ ಪಾಲಿಸಬೇಕು. ತಮಗೆ ಅವಮಾನ ಆದ ಹೊರತು ಅಥವಾ ಅಶುಚಿಯಾದ ಆಹಾರ ನೀಡಿದ ಹೊರತು ನಿರಶನ ಸತ್ಯಾಗ್ರಹ ಹೂಡಬಾರದು.

ಸ್ವಾತಂತ್ರ್ಯಾನಂತರವೂ ಸೆರೆಮನೆಗಳು ಬೇಕಾಗುತ್ತವೆ ಎಂದು ಗಾಂಧೀಜಿ ಒಪ್ಪಿಕೊಂಡಿದ್ದರು. ಸೆರೆಮನೆಗಳನ್ನು, ಸುಧಾರಣಾ ಗೃಹಗಳನ್ನಾಗಿ, ತಾತ್ಕಾಲಿಕವಾಗಿ ದಾರಿ ತಪ್ಪಿರುವವರಿಗೆ ಯೋಗ್ಯ ಶಿಕ್ಷಣ ನೀಡಿ ಸರಿಪಡಿಸುವ ಶಾಲೆಗಳಾಗಿ ಪರಿವರ್ತಿಸಲು ಗಾಂಧೀಜಿ ಆಶಿಸಿದ್ದರು. ಸೆರೆಮನೆಯಲ್ಲಿದ್ದಾಗ ಒಮ್ಮೆ ಗಾಂಧೀಜಿ, ಖೈದಿಗಳನ್ನು ಉತ್ಪಾದನೆಯಲ್ಲಿ ತೊಡಗಿಸಿ, ಸೆರೆಮನೆಗಳು ಸ್ವಾವಲಂಬಿಗಳಾಗುವಂತೆ ಮಾಡಬಹುದೆಂದೂ ಸಲಹೆ ನೀಡಿದ್ದರು. ಆದರೆ ಜೈಲು ಅಧಿಕಾರಿಗಳು ಖೈದಿಯೊಬ್ಬನಿಂದ ಅಂತಹ ಯಾವ ಸಲಹೆಯನ್ನೂ ಸ್ವೀಕರಿಸಲು ಸಿದ್ಧರಿರಲಿಲ್ಲ.

ಕೆಲವೊಮ್ಮೆ ಈ ಆದರ್ಶ ಖೈದಿ ತುಂಬ ಕಟ್ಟುನಿಟ್ಟಿನವನಾಗಿ ಸೆರೆಮನೆಯ ಅಧಿಕಾರಿಗಳನ್ನೇ ಪೇಚಿಗೆ ಸಿಲುಕಿಸುತ್ತಿದ್ದರು. ಅವರಿಗೆ ಬ್ರೆಡ್ಡು ತಿನ್ನಲು ಅನುಮತಿ ದೊರೆತಾಗ, ಅದರ ಜತೆ ಬ್ರೆಡ್ಡು ಕತ್ತರಿಸಲು ಕತ್ತರಿ ಬೇಕೆನ್ನುತ್ತಿದ್ದರು. ಹೋಳು ಮಾಡದೆ ತನಗೆ ಬ್ರೆಡ್ಡು ತಿನ್ನಲಾಗುವುದಿಲ್ಲವೆಂದು ಅವರ ವಾದ. ತನಗೆ ನಡೆದಾಡಲು ಹೆಚ್ಚು ವಿಸ್ತಾರ ಪ್ರದೇಶ ಬೇಕೆಂದು ಹೇಳುತ್ತಿದ್ದರು. ತನ್ನ ಸೆರೆಮನೆಯ ಸಂಗಾತಿಗಳನ್ನು ತನ್ನ ವಿಶೇಷ ಆರೈಕೆಯಲ್ಲಿರುವ ಪ್ರಿಯಶಿಷ್ಯರೆಂದೇ ಪರಿಗಣಿಸುತ್ತಿದ್ದರು. ಯಾರಾದರೂ ಅಸ್ತಮದಿಂದ ನರಳುತ್ತಿದ್ದರೆ ಅಥವಾ ಯಾರಿಗಾದರೂ ಪ್ರಕೃತಿ ಚಿಕಿತ್ಸೆಯೋ, ಆಯುರ್ವೇದ ಔಷಧವೋ ಬೇಕಾದರೆ, ಅವರು ಅಧಿಕಾರಿಗಳೊಡನೆ ವಿಶೇಷ ಸೌಕರ್ಯಗಳನ್ನು ಕೊಡಲು ಒತ್ತಾಯಿಸುತ್ತಿದ್ದರು. ದೀರ್ಘಕಾಲ ಉಪವಾಸಗಳನ್ನು ಮಾಡಿ ತನ್ನ ಬೇಡಿಕೆಗಳನ್ನು ಈಡೇರಿಸುವಂತೆ ಜೈಲು ಅಧಿಕಾರಿಗಳ ಮೇಲೆ ನೇರ ಒತ್ತಡ ಹೇರುತ್ತಿದ್ದರು. ಗಾಂಧೀಜಿಯ ಸ್ಥಿತಿ ತೀರಾ ಗಂಭೀರವಾಗಿ ಅಧಿಕಾರಿಗಳು ಅವರನ್ನು ಬಿಡುಗಡೆ ಮಾಡುತ್ತಿದ್ದರು. ಮಹಾತ್ಮರಂತಹ, ಜಗತ್ಪ್ರಸಿದ್ಧ ವ್ಯಕ್ತಿಯ ಪ್ರಾಣಾಪಾಯದ ಹೊಣೆ ಹೊರಲು ಅವರು ಸಿದ್ಧರಿರಲಿಲ್ಲ. ಸೆರೆಮನೆಯಲ್ಲಿ ಗಾಂಧೀಜಿಗೆ ಅಪೆಂಡಿಸೈಟಿಸ್ ಆದಾಗ ಅಧಿಕಾರಿಗಳೇ ಶಸ್ತ್ರಚಿಕಿತ್ಸೆಗೆ ಬೇಕಾದ ಎಲ್ಲ ಏರ್ಪಾಡುಗಳನ್ನೂ ಮಾಡಿದರು. ಸೆರೆಮನೆಯಲ್ಲಿ ಎರಡು ಬಾರಿ ಗಾಂಧೀಜಿ ಅಸೌಖ್ಯಕ್ಕೊಳಗಾದರು.

ಸ್ವಾಭಾವಿಕವಾಗಿ ಗಾಂಧೀಜಿ ಮಿತ್ರರು ಮತ್ತು ಸಂಬಂಧಿಕರ ಪರಿವಾರದೊಂದಿಗೆ ಸೆರೆಮನೆ ಪ್ರವೇಶಿಸುತ್ತಿದ್ದರು. ಆಗಾಖಾನ್ ಅರಮನೆಯಲ್ಲಿ ಕಸ್ತೂರ್‌ಬಾ ಮತ್ತು ಮಹಾದೇವ ದೇಸಾಯಿ ಅವರ ಜೊತೆಗೆ ಇದ್ದರು. ಅವರಿಬ್ಬರೂ ಅಲ್ಲಿಯೇ ನಿಧನರಾದರು ಮತ್ತು ಅವರ ಅಂತ್ಯ ಸಂಸ್ಕಾರವನ್ನು ಸೆರೆಮನೆಯ ಆವರಣದಲ್ಲೇ ನಡೆಸಲಾಯಿತು. "ಅವರು ಮಾಡು ಅಥವಾ ಮಡಿ ಮಂತ್ರವನ್ನೇ ಬಾಳಿ ತೋರಿಸಿದರು. ಮತ್ತು ಸ್ವಾತಂತ್ರ್ಯ ದೇವಿಯ ಪದತಲದಲ್ಲಿ ತಮ್ಮ ಬಾಳನ್ನು ಸಮರ್ಪಿಸಿದರು. ಅವರು ಅಮರರಾಗಿದ್ದಾರೆ" ಎಂದರು ಗಾಂಧೀಜಿ.

ಹರಾಜುಗಾರ

ಗಾಂಧೀಜಿ ತಮ್ಮ ಜೀವನದ ಬಹುಭಾಗವನ್ನು ಸಾಮಾನ್ಯ ಜನರ ನಡುವೆಯೇ ಕಳೆದರು. ಜನಸಾಮಾನ್ಯರೊಡನೆ ಸಂಪರ್ಕವಿರಿಸಿಕೊಂಡಿದ್ದರು. ಗಾಂಧೀಜಿಗೆ ಎಲ್ಲೆಡೆ ಜನರು ತುಂಬು ಪ್ರೀತಿ ಗೌರವಗಳ ಸ್ವಾಗತ ನೀಡುತ್ತಿದ್ದರು. ಪುಷ್ಪಗುಚ್ಛಗಳು, ಹಾರಗಳು, ಬೆಳೆಬಾಳುವ ಚೌಕಟ್ಟುಗಳು ಮತ್ತು ಕರಂಡಕಗಳಲ್ಲಿ ಸನ್ಮಾನ ಪತ್ರಗಳು, ಹಣದ ಥೈಲಿಗಳು ಮತ್ತು ಆಭರಣಗಳು ಕಾಣಿಕೆಯಾಗಿ ದೊರೆಯುತ್ತಿದ್ದವು. ಗಾಂಧೀಜಿ ಜನತೆಯ ಪ್ರೇಮವನ್ನು ಮೆಚ್ಚಿಕೊಂಡರಾದರೂ, ಭಾರತೀಯರ ಸರಾಸರಿ ಆದಾಯ ತಲಾ ಮೂರು ಪೈಗಳಿರುವ ಈ ದೇಶದಲ್ಲಿ ಹಾರಗಳು, ಕಮಾನುಗಳು ಮತ್ತು ಮಾನಪತ್ರಗಳಿಗಾಗಿ ಹಣವನ್ನು ವೆಚ್ಚಮಾಡುವುದನ್ನು ಮೆಚ್ಚಲಿಲ್ಲ.

ಜನರನ್ನು ಈ ದುಂದುಗಾರಿಕೆಯಿಂದ ಹಿಮ್ಮೆಟ್ಟಿಸಲು ಗಾಂಧೀಜಿ ಪ್ರಯಾಸಪಟ್ಟರು. ಈ ವೆಚ್ಚವನ್ನೇ ಸಂಪತ್ತನ್ನಾಗಿ ಪರಿವರ್ತಿಸಲು ಅವರು ಬಯಸಿದರು. ಅವರಿಗೊಂದು ಯೋಚನೆ ಹೊಳೆಯಿತು. ಜನರಿಗೆ ಹಣ ಕೊಡಲು ಮನಸ್ಸಿದ್ದಾಗ ಅದನ್ನು ಬಹಿರಂಗವಾಗಿಯೇ ಕೊಡಲು ಅವರಿಗೊಂದು ಅವಕಾಶ ನೀಡಬಾರದೇಕೆ? ತಮಗೆ ದೊರೆತ ಹಾರ, ತುರಾಯಿ, ಕರಂಡಕ, ಮಾನಪತ್ರ ಮುಂತಾದವನ್ನು ಹರಾಜು ಹಾಕಲು ಗಾಂಧೀಜಿ ನಿರ್ಧರಿಸಿದರು. ವೇದಿಕೆಯ ಮೇಲೆ ನಿಂತು ಬಹಿರಂಗ ಸಭೆಗಳಲ್ಲಿ ಗಾಂಧೀಜಿ "ನನ್ನ ಪ್ರೀತಿಯ ಕನ್ಯೆಯರು ಇಲ್ಲಿಲ್ಲ, ಮತ್ತು ಈ ಪುಷ್ಪಹಾರಗಳನ್ನೇನು ಮಾಡುವುದೆಂದು ನಾನರಿಯೆ. ಯಾರಾದರೂ ಈ ಹಾರವನ್ನು ಕೊಳ್ಳುವಿರಾ?" ಎಂದು ಕೇಳತೊಡಗಿದರು. ಎರಡು ರೂಪಾಯಿ, ಮೂರು ರೂಪಾಯಿ, ಐದು ರೂಪಾಯಿಗಳು ಹೀಗೆ ಉಲ್ಲಸಿತರಾಗಿ ಗಾಂಧೀಜಿ ಹಾರಗಳನ್ನು ಹರಾಜು ಹಾಕುವರು. ಒಂದು ನಿಂಬೆಹಣ್ಣು ಅಥವಾ ಹೂವಿನ ಹಾರದಂತಹ ಯಃಕಶ್ಚಿತ್ ಪದಾರ್ಥಗಳಿಗೂ ಹರಾಜು ಬೆಲೆ ಏರುತ್ತಿತ್ತು. ಕೆಲವೊಮ್ಮೆ ಒಂದು ಹಾರಕ್ಕೆ ರೂ. 30 ಬಂದರೆ ಇನ್ನೊಮ್ಮೆ ಅದು ರೂ. 300 ಆಗುತ್ತಿತ್ತು. ಹರಾಜಾದ ವಸ್ತುಗಳಿಗೆ ಆಕರ್ಷಕ ಬೆಲೆಗಳನ್ನು ಕೊಡುವುದರಲ್ಲಿ ಹಳ್ಳಿಗರು ಹಿಂದೆ ಬೀಳಲಿಲ್ಲ.

ಕಲ್ಕತ್ತಾದ ನಾಗರಿಕರು ಗಾಂಧೀಜಿಗೆ ಮೂರು ಬಾರಿ ಸುಂದರ ಕರಂಡಕಗಳಲ್ಲಿ ಮಾನಪತ್ರವಿತ್ತು ಸನ್ಮಾನಿಸಿದರು. "ಜನರು ಪ್ರೀತಿಯಿಂದ ಕೊಟ್ಟ ಕೊಡುಗೆಗಳನ್ನು ನಾನು ಈ ರೀತಿ ಹರಾಜು ಹಾಕುವುದರಿಂದ ಆ ಪ್ರೀತಿಯ ಬೆಲೆಯನ್ನು ತಗ್ಗಿಸಿದಂತಾಯಿತೆಂದು ನಿಮಗನಿಸುವುದಿಲ್ಲವೇ? ಇವುಗಳನ್ನಿಡಲು ಆಶ್ರಮದಲ್ಲೂ ಯಾವ ವ್ಯವಸ್ಥೆಯೂ ಇಲ್ಲ. ಈ ಹರಾಜುಗಳಲ್ಲಿ ಯಾವ ತಪ್ಪೂ ಇಲ್ಲವೆಂದು ನನ್ನೆಣಿಕೆ. ಅವುಗಳಿಂದ ಒಂದು ಆರೋಗ್ಯಕರ ಸ್ಪರ್ಧೆ ಏರ್ಪಡುತ್ತದೆ ಮತ್ತು ಅವು ಜನರಲ್ಲಿ ಒಂದು ಒಳ್ಳೆಯ ಉದ್ಯೋಗಕ್ಕಾಗಿ ಉದಾರವಾಗಿ ದಾನ ನೀಡುವ ಪ್ರವೃತ್ತಿಯನ್ನು ಜಾಗೃತಗೊಳಿಸುವ ವಸ್ತುಗಳನ್ನು ಕೊಳ್ಳುವ ಜನರು, ಕೇವಲ ನನ್ನನ್ನು ಮೆಚ್ಚಿಸಲೆಂದೇ ಭಾರೀ ಮೊತ್ತದ ಹಣವನ್ನು ನೀಡುತ್ತಿಲ್ಲ ಎನ್ನುವುದನ್ನು ನೆನಪಿಡಿ" ಎಂದರು ಗಾಂಧೀಜಿ.

ಒಂದು ನಿಂಬೆ ಹಣ್ಣನ್ನು ಹತ್ತು ರೂಪಾಯಿಗಳಿಗೆ, ನೂಲಿನ ಮಾಲೆಯೊಂದನ್ನು ರೂ. 201ಕ್ಕೆ ಚಿನ್ನದ ತಕಲಿಯನ್ನು ರೂ. 5000ಕ್ಕೆ ಮತ್ತು ಕರಂಡಕವನ್ನು ರೂ. 1000ಕ್ಕೆ ಅವರು ಮಾರಿದರು. ಒಂದು ಸಂಸ್ಥೆಗೆ ಅಡಿಗಲ್ಲನ್ನಿಟ್ಟ ಬಳಿಕ ಗಾಂಧೀಜಿ ಗಾರೆ ಇರಿಸಿದ ತಟ್ಟೆ ಮತ್ತು ಗಾರೆ ಸೌಟನ್ನು ರೂ. 1000ಕ್ಕೆ ಹರಾಜು ಹಾಕಿದರು.

ಒಮ್ಮೆ ಗಾಂಧೀಜಿಗರ್ಪಿಸಿದ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳ ಸಂಗ್ರಹದಲ್ಲಿ ಒಂದು ಕವಡೆ ಕಂಡುಬಂತು. ಅದನ್ನು ಗಾಂಧೀಜಿ ಬಹುವಾಗಿ ಮೆಚ್ಚಿಕೊಂಡರು,. "ಆ ಬಡ ಮನುಷ್ಯನಲ್ಲಿ ಕೊಡಲು ಪ್ರಾಯಶಃ ಬೇರೇನೂ ಇದ್ದಿಲ್ಲ. ತನ್ನಲ್ಲಿದ್ದ ಎಲ್ಲವನ್ನೂ ಅವನು ಆ ಕವಡೆಯ ರೂಪದಲ್ಲಿ ಕೊಟ್ಟಿರಬೇಕು. ತ್ಯಾಗದ ಸಂಕೇತವಾಗಿ ಅದನ್ನು ಕಂಡಾಗ ಅದು ಬಂಗಾರಕ್ಕಿಂತಲೂ ಬೆಲೆ ಬಾಳುವಂತಹುದು" ಎಂದರು. ನಿಜಕ್ಕೂ ಆ ಕವಡೆ ಅಷ್ಟೇ ಪ್ರಮಾಣದ ಚಿನ್ನಕ್ಕಿಂತ ಹೆಚ್ಚು ಬೆಲೆ ಪಡೆಯಿತು. ಹರಾಜಿನಲ್ಲಿ ಓರ್ವ ಮಹನೀಯರು ಅದನ್ನು ರೂ. 111ಕ್ಕೆ ಪಡೆದರು.

ತನ್ನದೆನ್ನುವ ವಸ್ತುವಾಗಲೀ, ಹಣವಾಗಲೀ ಗಾಂಧೀಜಿಯವರ ಬಳಿ ಇರಲಿಲ್ಲ. ಸ್ವತಃ ಒಬ್ಬ ಬಡ ಆಶ್ರಮವಾಸಿಯಾದ ಅವರೊಮ್ಮೆ ಸಾರ್ವಜನಿಕ ನಿಧಿಯೊಂದಕ್ಕೆ ಒಂದು ತಾಮ್ರದ ಕಾಸು ದಾನವಿತ್ತರು. ಆ ಕಾಸನ್ನು ಸ್ಮೃತಿಗೆಂದು ಗಾಂಧೀಜಿಯ ಅಭಿಮಾನಿಯೊಬ್ಬರು ರೂ. 500ಗಳಿಗೆ ಕೊಂಡರು.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2–10–1869
ಕಸ್ತೂರ್‌ಬಾರೊಂದಿಗೆ ವಿವಾಹ	1881
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಭಾರತ ಸಂದರ್ಶನ	1896 ಮತ್ತು 1901
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	1901
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1903
ಫೀನಿಕ್ಸ್ ಆಶ್ರಮ ಸ್ಥಾಪನೆ	1904
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಬ್ರಹ್ಮಚರ್ಯ ವ್ರತ ಸ್ವೀಕಾರ	1906
ಇಂಗ್ಲೆಂಡಿಗೆ ಪ್ರಯಾಣ	1906 ಮತ್ತು 1909
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	1908
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	1913
ಭಾರತಕ್ಕೆ ಆಗಮನ	1915
ಸಾಬರಮತಿ ಆಶ್ರಮ ಸ್ಥಾಪನೆ	1915
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ, ನವಜೀವನ ಪತ್ರಿಕೆಗಳ ಆರಂಭ	1919

ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಯಾತ್ರೆ	1933
ಹರಿಜನ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಿಗೆ ಬಲಿ	30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

ಕ್ರಸಂ.	ಶೀರ್ಷಿಕೆ	ದರ
1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	8–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	25–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿಯವರ ಮೈಲಿಗಲ್ಲು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	30–00
24.	ಸ್ವಾತಂತ್ರ್ಯ	25–00
25.	ಅಸ್ಪೃಶ್ಯತೆ	30–00
26.	ಒಳ್ಳೆಯ ಜೀವನ	25–00
27.	ಪ್ರಾರ್ಥನೆ	25–00
28.	ಗಾಂಧೀ ಮತ್ತು ಕರ್ನಾಟಕ	200–00
29.	ಸತ್ಯ	30–00
30.	ವಿದ್ಯಾರ್ಥಿಗಳಿಗಾಗಿ	30–00

31.	ಸರ್ವೋದಯ	30-00
32.	ಖಾದಿ ಗ್ರಾಮೋದ್ಯೋಗ	30-00
33.	ನನ್ನ ಬಾಲ್ಯದ ನೆನಪುಗಳು	30-00
34.	ಗ್ರಾಮರಾಜ್ಯ ಆಡಳಿತ	5-00
35.	ನನ್ನ ಕನಸಿನ ಸ್ವರಾಜ್ಯ	5-00
36.	ಗಾಂಧೀ ಮತ್ತು ಹಾಸ್ಯ	20-00
37.	ನನ್ನ ಆದರ್ಶಗ್ರಾಮ	5-00
38.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ	48-00
39.	ಸತ್ಯಾಗ್ರಹಿ	40-00
40.	ಗ್ರಾಮದಾನ ಗ್ರಾಮ ಸ್ವರಾಜ್ಯ	25-00
41.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
42.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5-00
43.	ಸತ್ಯಾಗ್ರಹ	5-00
44.	ಹಿಂದ್ ಸ್ವರಾಜ್	5-00
45.	ಆರೋಗ್ಯ	5-00
46.	ಮಹಾತ್ಮ ಗಾಂಧಿ ಪ್ರಸ್ತುತತೆ	10-00
47.	ಬಹುರೂಪಿ ಗಾಂಧಿ	10-00
48.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30-00
49.	ಕೃತಯುಗಿ ವಿನೋಬಾ ಭಾವೆ	15-00
50.	ಮೋಹನ ತರಂಗ	40-00
51.	ನಮ್ಮ ಗಾಂಧಿ ತಾತ	5-00
52.	ಗೀತಾ ಪ್ರವಚನ	80-00
53.	ಜೆ.ಪಿ. ಜೀವನ ಹಾದಿ	45-00
54.	ಗಣ್ಯರು ಕಂಡಂತೆ ಗಾಂಧಿ	20.0
55.	ಗೀತಾಮಾತೆ	80.00
56.	Temple & Mosque	10-00
57.	Rastrapita Mahatma Gandhi	25-00
58.	Swarajya of Dreams	5-00
59.	Gandhi My Grand Father	5-00
60.	Grand Pa Gandhi	5-00
61.	Relevance of Gandhi	20-00
62.	Vinoba age of the sage	20.00

ಏಕಾದಶ ವ್ರತಗಳು

ಸತ್ಯ	Truth
ಅಹಿಂಸೆ	Ahimsa or Love
ಅಸ್ತೇಯ (ಕದಿಯದಿರುವುದು)	Non-Stealing
ಬ್ರಹ್ಮಚರ್ಯ	Brahmacharya or Chastity
ಅಸಂಗ್ರಹ (ಅಪರಿಗ್ರಹ)	Non-Possession
ಶರೀರ ಶ್ರಮ	Physical Labour
ಅಸ್ವಾದ (ನಾಲಿಗೆ ಚಪಲ)	Control on the Palate
ಸರ್ವತ್ರ ಭಯವರ್ಜನ (ಅಭಯ)	Fearlessness
ಸರ್ವಧರ್ಮ ಸಮಾನತ್ವ	Equality of Religion
ಸ್ವದೇಶಿ	Swadeshi
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	Removal of Untouchability

ಏಳು ಸಾಮಾಜಿಕ ಪಾತಕಗಳು — Seven Social Sins

ತತ್ವರಹಿತ ರಾಜಕಾರಣ	Politics without Principles
ದುಡಿಮೆ ಇಲ್ಲದ ಸಂಪತ್ತು	Wealth without Work
ಆತ್ಮಸಾಕ್ಷಿ ಇಲ್ಲದ ಸಂತೋಷ	Pleasure without Conscience
ಚಾರಿತ್ರ್ಯವಿಲ್ಲದ ಶಿಕ್ಷಣ	Education without Character
ನೀತಿ ಇಲ್ಲದ ವ್ಯಾಪಾರ	Commerce without Morality
ಮಾನವೀಯತೆ ಇಲ್ಲದ ವಿಜ್ಞಾನ	Science without Humanity
ತ್ಯಾಗ ಇಲ್ಲದ ಪೂಜೆ	Worship without Sacrifice

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗ	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳೋದ್ಧಾರ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತನೋದ್ಧಾರ	**Empowerment of Farmers**
ಕಾರ್ಮಿಕರ ಕಲ್ಯಾಣ	**Empowerment of Labours**
ಆದಿವಾಸಿ ಕಲ್ಯಾಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿ	**Students**

ಗಾಂಧೀಜಿ ಅನೇಕ ಸಂಗತಿಗಳಲ್ಲಿ ಆಸಕ್ತಿ ವಹಿಸಿದರು ಮತ್ತು ಆಸಕ್ತಿ ವಹಿಸಿದಾಗ ಪರಿಪೂರ್ಣ ತನ್ಮಯತೆಯಿಂದ ನಿರ್ವಹಿಸಿದರು ಎನ್ನುವುದು ಅಸಾಧಾರಣವಾದುದು. ಪ್ರಾಯಶಃ ಜೀವನದ ಕ್ಷುಲ್ಲಕ ಸಂಗತಿಗಳೆನಿಸಿಕೊಂಡ ವಿಚಾರಗಳಲ್ಲೇ ಅವರು ತೋರಿದ ಪರಿಪೂರ್ಣ ಆಸಕ್ತಿ ಅವರ ಮಾನವೀಯತೆಯನ್ನು ಬೊಟ್ಟುಮಾಡಿ ತೋರಿಸುತ್ತದೆ. ಅವರ ಚಾರಿತ್ರ್ಯದ ಅಡಿಗಲ್ಲೇ ಅದಾಗಿತ್ತು.

– ಜವಾಹರಲಾಲ್ ನೆಹರು

ಈ ಕೃತಿಯಲ್ಲಿ ಯಾವ ದುಡಿಮೆಯಿಂದ ಇತರರಿಗೆ ಜೀವನ ನಿರ್ವಹಣೆ ಸಾಧ್ಯವಿಲ್ಲವೋ, ಅಂಥಹ ಕೆಲಸದಲ್ಲಿ ಪ್ರೀತಿ ಇಲ್ಲದಿದ್ದರೂ ಅಂಥಹ ಹಲವು ಕೆಲಸಗಳನ್ನು ಇಚ್ಛೆಪಟ್ಟು ಹಂಚಿಕೊಂಡ ಗಾಂಧೀಜಿ ಅವರನ್ನು ಪ್ರಸ್ತುತ ಪಡಿಸಲಿಚ್ಛಿಸಿದ್ದೇನೆ.

– ಅನು ಬಂದೋಪಾಧ್ಯಾಯ

ಪ್ರಾಮಾಣಿಕತೆಯ ಮೂರ್ತ ಸ್ವರೂಪವಾಗಿರುವ ಗಾಂಧಿ ಅವರ ಭಾರತದ ಸಾಮಾಜಿಕ, ರಾಜಕೀಯ ನಾಯಕತ್ವ ಚಿರಸ್ಮರಣೀಯ ಹಾಗೂ ಅನುಕರಣೀಯವಾದುದಾಗಿದೆ. ನಿಸ್ವಾರ್ಥ ಬದುಕಿನ ತ್ಯಾಗ ಜೀವಿಯ ದೈನಂದಿನ ಬದುಕಿನ ಅನುಸಂಧಾನಗಳು ನಿರಂತರ ಆತ್ಮಾವಲೋಕನಗಳನ್ನು ಅನಾವರಣಗೊಳಿಸುವ ಕೃತಿ ಇದಾಗಿದೆ.

– ಡಾ. ವೂಡೇ ಪಿ. ಕೃಷ್ಣ

ಸ್ವತಂತ್ರ ಭಾರತದ ಧ್ಯೇಯದೊಂದಿಗೆ, ಆಶ್ರಮ ಜೀವಿ, ಪತ್ರಕಾರ, ಪ್ರತಿಭಟನಾಕಾರ, ಲೇಖಕ, ಸಂಪಾದಕ, ವೈದ್ಯ, ಅಸಹಕಾರಿ, ಸತ್ಯಾಗ್ರಹಿ ಹೀಗೆ ಬಹುಮುಖಿ ಆಯಾಮದ ಭಾರತ ಭಾಗ್ಯವಿಧಾತನ ಕಥಾನಕ ಇದಾಗಿದೆ.

– ಇಂದಿರಾ ಕೃಷ್ಣಪ್ಪ